ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ನಿಮಿತ್ತ 'ವಿಶ್ವವಾಣಿ' ಮತ್ತು 'ಪ್ರವಾಸಿ ಪ್ರಪಂಚ' ಪತ್ರಿಕೆ ಹೊರತಂದಿರುವ ವಿಶೇಷ ಪುರವಣಿಗಳನ್ನು ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಮತ್ತು ಸಚಿವ ಎನ್.ಎಸ್.ಬೋಸರಾಜು ಅವರು ಮಂತ್ರಾಲಯದಲ್ಲಿ ಬಿಡುಗಡೆ ಮಾಡಿದರು.

ಸೊಂಪಾದ ಪುಟಗಳು



ಸುನೀಲ್ ಕುಮಾರ್ ಎಂಟ್ರಿಯಾಗಿದ್ದು ಹೇಗೆ?

ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ 6

ಸುಭಾಷಿತ, ನಮ್ಮಲ್ಲಾಗಲಿ ಅಂತರ್ಗತ

ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಯಾರು ನಿಮಗೆ ಕೇಡನ್ನು ಬಗೆದಿದ್ದಾರೋ, ತೊಂದರೆಯನ್ನು ಕೊಟ್ಟಿದ್ದಾರೋ, ಅವರು ನಿಮ್ಮನ್ನು ಬಲಿಷ್ಠರನ್ನಾಗಿಯೂ ಮಾಡಿದ್ದಾರೆ ಎಂಬುದನ್ನು ಮರೆಯಬಾರದು. ಇದು ನಿಮಗೆ ಮಾಡಿದ ಉಪಕಾರ ಎಂದು ಭಾವಿಸಬೇಕು.

ವಕ್ರತುಂಡೋಕ್ತಿ

ಚೌಕಾಶಿ ಮಾಡುವುದು ತಪ್ಪೇನಲ್ಲ, ಆದರೆ ಪ್ಲಾಸ್ಟಿಕ್ ಸರ್ಜನ್ ಮುಂದೆ ಮಾತ್ರ ಮಾಡಬಾರದು

ಪಾಕ್‌ಗೆ ₹4.1 ಶತಕೋಟಿ ನಷ್ಟ

ಇಸ್ಲಾಮಾಬಾದ್: ಭಾರತೀಯ ವಿಮಾನಗಳಿಗೆ ವಾಯುಪ್ರದೇಶವನ್ನು ನಿರ್ಬಂಧಿಸಿದ ಪರಿಣಾಮ ಪಾಕಿಸ್ತಾನದ ವಿಮಾನ ನಿಲ್ದಾಣ ಪ್ರಾಧಿಕಾರ ಎರಡು ತಿಂಗಳಲ್ಲಿ ₹4.1 ಶತಕೋಟಿ ನಷ್ಟ ಅನುಭವಿಸಿದೆ. ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಉಗ್ರರು ದಾಳಿ ನಡೆಸಿದ ಬಳಿಕ ಭಾರತ– ಪಾಕಿಸ್ತಾನ ಉದ್ವಿಗ್ನತೆ ಹೆಚ್ಚಿತ್ತು. ಈ ಸಂದರ್ಭದಲ್ಲಿ ಎರಡು ದೇಶಗಳು ವಿಮಾನ ಹಾರಾಟಕ್ಕೆ ವಾಯುಪ್ರದೇಶವನ್ನು ನಿರ್ಬಂಧಿಸಿದ್ದವು. ಭಾರತ ಕೈಗೊಂಡ ಆಪರೇಷನ್ ಸಿಂದೂರ ಕಾರ್ಯಾಚರಣೆ ಬಳಿಕವೂ ವಾಯುಪ್ರದೇಶ ನಿರ್ಬಂಧವನ್ನು ಮುಂದುವರಿಸಲಾಗಿದೆ. ಪರಿಣಾಮ ಪಾಕಿಸ್ತಾನ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ₹4.1 ಶತಕೋಟಿ ನಷ್ಟವಾಗಿದೆ ಎಂದು ಸಂಸತ್ತಿಗೆ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ರಾಗಾಗೆ ನೋಟಿಸ್

ಬೆಂಗಳೂರು: ಮತಗಳ್ಳತನಕ್ಕೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗದ ಮೇಲೆ ಗಂಭೀರ ಆರೋಪ ಮಾಡಿದ್ದ ರಾಹುಲ್ ಗಾಂಧಿ ಅವರಿಗೆ ಕರ್ನಾಟಕ ಚುನಾವಣಾ ಆಯೋಗ ನೋಟಿಸ್ ಜಾರಿಗೊಳಿಸಿದೆ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಮತಕಳ್ಳತನ ನಡೆದಿದೆ ಎನ್ನುವ ಆರೋಪಕ್ಕೆ ದಾಖಲೆಗಳನ್ನು ಸಲ್ಲಿಸುವಂತೆ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ರಾಹುಲ್ ಗಾಂಧಿ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಮಹಿಳೆಯೊಬ್ಬರು ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂದು ಆರೋಪಿಸಿರುವ ಬಗ್ಗೆ ದಾಖಲೆಗಳನ್ನು ಹಂಚಿಕೊಳ್ಳುವಂತೆ ಕೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

1650 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರ ತೀರ್ಮಾನ

ಸುದ್ದಿ

ನಾವ್ ಆಡೋ ಕುದುರೆ ರೇಸ್, ಕಬಡ್ಡಿ, ಕುಸ್ತಿ, ರಮ್ಮಿ, ಬಾಕ್ಸಿಂಗ್, ಕುರ್ಚಿಯಾಟ ಎಲ್ಲಾ ಅಲ್ಲೇ ಆಡ್ಬೋದು ಇನ್ಮೇಲೆ...!

ವಂದೇ ಭಾರತ್ ರೈಲು, ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ | 3ನೇ ಹಂತದ ಮೆಟ್ರೋಗೆ ಶಂಕುಸ್ಥಾಪನೆ ನೆರವೇರಿಸಿದ ಪಿಎಂ
ರಸ್ತೆ ಇಕ್ಕೆಲಗಳಲ್ಲಿ ನಿಂತು ಮೋದಿಯನ್ನು ಸ್ವಾಗತಿಸಿ ಸಂಭ್ರಮಿಸಿದ ಜನ | ಮೆಟ್ರೋ ರೈಲಿನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ

ಬೆಂಗ್ಳೂರಿನೆಲ್ಲೆಡೆ ಮೋದಿ ಮೋಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನ ಬಹುನಿರೀಕ್ಷಿತ ಮೆಟ್ರೋ 'ಹಳದಿ ಮಾರ್ಗ', ವಂದೇ ಭಾರತ್ ರೈಲು ಉದ್ಘಾಟನೆ ಹಾಗೂ ಮೂರನೇ ಹಂತದ ಮೆಟ್ರೋ ಶಂಕು ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿ ಆಗಮನದಿಂದ ಭಾನುವಾರ ಗಾರ್ಡನ್ ಸಿಟಿ ಮೋದಿಮಯವಾಗಿತ್ತು.

ಮತಗಳ್ಳತನ ಹಾಗೂ ಅನುದಾನ ತಾರತಮ್ಯ ವಿಷಯಕ್ಕೆ ಸಂಬಂಧಿಸಿದಂತೆ ಕೆಲ ದಿನಗಳ ಹಿಂದಷ್ಟೇ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿಗಳನ್ನು ಸ್ವಾಗತಿಸುವುದರೊಂದಿಗೆ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅಲ್ಲದೆ, ಮೋದಿ ಅವರೊಂದಿಗೆ ಮೆಟ್ರೋ ಪ್ರಯಾಣದ ವೇಳೆ 'ಹಾಸ್ಯ ಚಟಾಕಿ' ಹಾರಿಸುವ ಮೂಲಕ ರಾಜಕೀಯ ಮೀರಿದ ಬಾಂಧವ್ಯಕ್ಕೆ ಸಾಕ್ಷಿಯಾದರು.

ಮೊದಲಿಗೆ ಕೆಂಪೇಗೌಡ ರೈಲು ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರು ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಿದರು. ಬಳಿಕ ಬೆಂಗಳೂರಿನಿಂದ ಬೆಳಗಾವಿಗೆ ಹೊರಟಿದ್ದ ವಂದೇ ಭಾರತ್ ರೈಲಿನಲ್ಲಿದ್ದ ವಿದ್ಯಾರ್ಥಿಗಳೊಂದಿಗೆ ಕೆಲ ಕಾಲ ಚರ್ಚಿಸಿ, ಅಲ್ಲಿಂದ ರಾಗಿಗುಡ್ಡ ಮೆಟ್ರೋ ನಿಲ್ದಾಣಕ್ಕೆ ಆಗಮಿಸಿದರು. ಹಳದಿ ಮಾರ್ಗವನ್ನು ಉದ್ಘಾಟಿಸಿದ ಬಳಿಕ ಸಿಎಂ, ಡಿಸಿಎಂ, ರಾಜ್ಯಪಾಲರೊಂದಿಗೆ ಮೆಟ್ರೋದಲ್ಲಿಯೇ ಎಲೆಕ್ಟ್ರಾನಿಕ್ ಸಿಟಿಗೆ ಪ್ರಯಾಣಿಸಿದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ಆಯೋಜಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಮೂರನೇ ಹಂತದ ಮೆಟ್ರೋಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಆಪರೇಷನ್ ಸಿಂದೂರದ ಯಶಸ್ಸು, ಬೆಂಗಳೂರು ದೇಶದ ಆರ್ಥಿಕತೆಗೆ ನೀಡುತ್ತಿರುವ ಕೊಡುಗೆ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದರು. ಬಳಿಕ ಅಲ್ಲಿಂದ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತೆರಳಿ ದೆಹಲಿಗೆ ನಿರ್ಗಮಿಸಿದರು.

ಮೆಟ್ರೋ ಹಳದಿ ಮಾರ್ಗ, ವಂದೇ ಭಾರತ್ ರೈಲು ಉದ್ಘಾಟನೆ ಹಾಗೂ ಮೂರನೇ ಹಮತದ ಮೆಟ್ರೋಗೆ ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಮತ್ತಿತರರು ಉಪಸ್ಥಿತರಿದ್ದರು.

> ಬೆಂಗಳೂರು ಹೊಸ ಭಾರತದ ಪ್ರಗತಿಯ ಸಂಕೇತವಾಗಿದೆ. ಈ ನಗರವು ಜಾಗತಿಕ ವಲಯದಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿದೆ. ಇದರ ಯಶಸ್ಸಿಗೆ ಇಲ್ಲಿನ ಜನರ ಶ್ರಮ ಮತ್ತು ಪ್ರತಿಭೆ ಕಾರಣ. ಇಂತಹ ನಗರಗಳನ್ನು ಭವಿಷ್ಯಕ್ಕಾಗಿ ರೂಪಿಸಬೇಕು. ಬೆಂಗಳೂರಿನ ಕಂಪನಿಗಳು ಜಾಗತಿಕವಾಗಿ ಸ್ಪರ್ಧಿಸುತ್ತಿವೆ. ಸ್ಪರ್ಧಿಸುವುದು ಮಾತ್ರ ಅಲ್ಲ, ನಾವು ಮುನ್ನಡೆಸುವ ಮಟ್ಟಕ್ಕೆ ಬೆಳೆಯಬೇಕು. ಮೇಕ್ ಇನ್ ಇಂಡಿಯಾದಲ್ಲಿ ಬೆಂಗಳೂರು, ಕರ್ನಾಟಕದ ಪಾಲು ಹೆಚ್ಚಿರಬೇಕು.
>
> **- ನರೇಂದ್ರ ಮೋದಿ,** ಪ್ರಧಾನ ಮಂತ್ರಿ

> ಕರ್ನಾಟಕ ಸರಕಾರ ಮತ್ತು ಕೇಂದ್ರ ಸರಕಾರಗಳು ಶೇ.50:50 ಅನುಪಾತದಲ್ಲಿ ಹೂಡಿಕೆ ಮಾಡಬೇಕೆಂದು ಒಪ್ಪಂದವಾಗಿದೆ. ಆದರೆ ಕೇಂದ್ರ ಸರಕಾರದಿಂದ ಈಕ್ವಿಟಿಯ ಹೊರತಾಗಿ ಸಾಲದ ರೂಪದಲ್ಲಿ ಬಂದ ಹಣವನ್ನು ಬಡ್ಡಿ ಸಮೇತ ರಾಜ್ಯ ಸರಕಾರ ಹಾಗೂ ಮೆಟ್ರೋ ಸಂಸ್ಥೆಗಳು ತೀರಿಸಬೇಕಾಗಿದೆ. ಇದರಿಂದ ರಾಜ್ಯದ ಮೇಲೆ, ನಮ್ಮ ಮೇಲೆ ಶೇ.87.37ರಷ್ಟು ಭಾರವಿದೆ. ಆದ್ದರಿಂದ ಮೆಟ್ರೋಗೆ ನೀಡುವ ಅನುದಾನ ಹೆಚ್ಚಿಸಬೇಕು.
>
> **- ಸಿದ್ದರಾಮಯ್ಯ,** ಮುಖ್ಯಮಂತ್ರಿ

- ವಂದೇ ಭಾರತ್ ರೈಲಿನಲ್ಲಿದ್ದ ವಿದ್ಯಾರ್ಥಿಗಳೊಂದಿಗೆ ಕಾಲ ಕಳೆದ ಮೋದಿ
- ಮೋದಿ ರಸ್ತೆ ಮಾರ್ಗವಾಗಿ ಹೋಗುವಾಗ ಬ್ಯಾರಿಕೇಡ್ ಹಾರಲು ಪ್ರಯತ್ನಿಸಿದ ಯುವಕ
- ಸಿದ್ದರಾಮಯ್ಯ ಭಾಷಣದ ವೇಳೆ ಮೋದಿ ಬಳಿ ಡಿಕೆ ಮನವಿ; ವಿಡಿಯೊ ಭಾರಿ ವೈರಲ್
- ಬೆಂಗಳೂರಿನ ಸಂಚಾರ ಸಮಸ್ಯೆ ಬಗ್ಗೆ 5 ವರ್ಷ ಬಾಲಕಿಯ ಪತ್ರ ವೈರಲ್

ಯಾವೆಲ್ಲ ವಂದೇ ಭಾರತ್ ರೈಲುಗಳಿಗೆ ಚಾಲನೆ?

- ಬೆಂಗಳೂರು-ಬೆಳಗಾವಿ
- ಅಮೃತಸರ-ಶ್ರೀ ಮಾತಾ ವೈಷ್ಣೋದೇವಿ ಕತ್ರಾ
- ನಾಗಪುರ-ಪುಣೆ

ಮೋದಿ ಸ್ವಾಗತಿಸಿದ ಬಿಜೆಪಿಗರು

ಪ್ರಧಾನಿ ಮೋದಿ ಅವರು ಯಾವುದೇ ರೋಡ್ ಶೋ ಹಮ್ಮಿಕೊಳ್ಳದ ಕಾರಣ ಬಿಜೆಪಿ ಕಾರ್ಯಕರ್ತರು ಮೋದಿ ಸಾಗುವ ದಾರಿಯಲ್ಲಿಯೇ ನಿಂತು ಮೋದಿ ಅವರನ್ನು ಸ್ವಾಗತಿಸಿದರು. ಮೋದಿ ಅವರನ್ನು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಸ್ವಾಗತಿಸಿದರು. ಬೀಳ್ಕೊಡುಗೆ ಸಮಯದಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಭೇಟಿಯಾದರು.

ಅನುದಾನಕ್ಕೆ ಸಿಎಂ ಬೇಡಿಕೆ

ವಂದೇ ಭಾರತ್ ರೈಲು ಉದ್ಘಾಟನೆ, ಮೆಟ್ರೋ ಹಳದಿ ಮಾರ್ಗದ ಉದ್ಘಾಟನೆ ಹಾಗೂ ಮೂರನೇ ಹಂತದ ಮೆಟ್ರೋ ಶಂಕುಸ್ಥಾಪನೆಯ ಬಳಿಕ ಎಲೆಕ್ಟ್ರಾನಿಕ್ ಸಿಟಿಯ ಐಐಐಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕರ್ನಾಟಕಕ್ಕೆ ಹೆಚ್ಚುವರಿ ಅನುದಾನ ನೀಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೇಡಿಕೆಯಿಟ್ಟರು. ಕರ್ನಾಟಕ ದೇಶದ ಐಟಿ ರಫ್ತಿನಲ್ಲಿ ಶೇ.35–40ರಷ್ಟು ಕೊಡುಗೆ ಕೊಡುತ್ತಿದೆ. ಇದರಲ್ಲಿ ಬೆಂಗಳೂರಿನ ಪಾಲು ದೊಡ್ಡದು. ಎಲೆಕ್ಟ್ರಾನಿಕ್ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿಯ ರಫ್ತಿನಲ್ಲಿ ಶೇ.40ಕ್ಕೂ ಹೆಚ್ಚಿನ ಪಾಲು ರಾಜ್ಯದ್ದಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸರಕಾರವು 1.35 ಲಕ್ಷ ಕೋಟಿಗಳಿಗೂ ಅಧಿಕ ಮೊತ್ತದ ಯೋಜನೆಗಳನ್ನು ರೂಪಿಸಿ ಸಂಪನ್ಮೂಲಗಳನ್ನು ವಿನಿಯೋಗಿಸಿ ಬೆಂಗಳೂರನ್ನು ಮಾದರಿ ನಗರವನ್ನಾಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ಮಹಾರಾಷ್ಟ್ರ, ಗುಜರಾತ್‌ಗೆ ನೀಡಿದಂತೆ ಕರ್ನಾಟಕಕ್ಕೂ ಹೆಚ್ಚುವರಿ ಅನುದಾನ ನೀಡಬೇಕು. ಈ ಮೂಲಕ ಬೆಂಗಳೂರಿನ ಅಭಿವೃದ್ಧಿಗೆ ಕೇಂದ್ರ ಸರಕಾರವೂ ಕೈಜೋಡಿಸಬೇಕು ಎನ್ನುವ ಮೂಲಕ ಅನುದಾನಕ್ಕೆ ಬೇಡಿಕೆಯಿಟ್ಟರು.

ಇದಕ್ಕೆ ತಮ್ಮ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಕೇಂದ್ರ ಸರಕಾರ ಇರಲಿ, ರಾಜ್ಯ ಸರಕಾರ ಇರಲಿ, ನಾವೆಲ್ಲರೂ ದೇಶದ ಜನರ ಸೇವೆಗೆ ಇದ್ದೇವೆ. ಒಟ್ಟಿಗೆ ದೇಶ, ದೇಶದ ಜನರ ಹಿತಕ್ಕೆ ಕೆಲಸ ಮಾಡಬೇಕು. ಕೇಂದ್ರ ಸರಕಾರವು ಬೆಂಗಳೂರಿಗೆ ಎಲ್ಲ ರೀತಿಯಲ್ಲೂ ಅನುದಾನವನ್ನು ನೀಡಿದೆ. ಇದರಲ್ಲಿ ತಾರತಮ್ಯ ಮಾಡಿಲ್ಲವೆಂದು ತಿರುಗೇಟು ನೀಡಿದರು.

ಎಲ್ಲ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ

ರಾಜ್ಯದಲ್ಲಿ ಮಳೆಯಾರ್ಭಟ

ಬೆಂಗಳೂರು: ರಾಜ್ಯಾದ್ಯಂತ ಭಾರೀ ಮಳೆಯಾಗುತ್ತಿದ್ದು, ಮುಂದಿನ 24 ಗಂಟೆಗಳಲ್ಲಿ ಬಿರುಸಿನ ಮಳೆಯಾಗುವುದರಿಂದ ಎಲ್ಲ ಜಿಲ್ಲೆಗಳಿಗೂ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಜಿಲ್ಲೆಗಳಲ್ಲಿ ಸಾಧಾರಣದಿಂದ ಭಾರೀ ಮಳೆಯಾಗಲಿದ್ದು, 17 ಜಿಲ್ಲೆಗಳಲ್ಲಿ ಅಬ್ಬರದ ಮಳೆ ಸುರಿಯಲಿದೆ. ರಾಜ್ಯದ ಒಳನಾಡು ಭಾಗದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಜೋರು ಮಳೆ ಆಗಲಿದೆ. ಬೆಳಗಾವಿ, ಬೀದರ್, ಕಲಬುರಗಿ, ಕೊಪ್ಪಳ, ವಿಜಯಪುರ, ಯಾದಗಿರಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಾಧಾರಣದಿಂದ ಭಾರಿ ಮಳೆ ಆಗಲಿದೆ. ಗರಿಷ್ಠ 115 ಮಿ.ಮೀ ಮಳೆ ನಿರೀಕ್ಷೆ ಇರುವುದರಿಂದ ಎಲ್ಲ ಜಿಲ್ಲೆಗಳಿಗೂ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಆಗಸ್ಟ್ 12ರಿಂದ ಮಳೆ ಮತ್ತೆ ಅಬ್ಬರ ಇಳಿಮುಖವಾಗಲಿದ್ದು, ಆಗಸ್ಟ್ 15ರಿಂದ ಮೂರು ದಿನ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಜಿಲ್ಲೆಗಳು ಮತ್ತೆ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಭಾರೀ ಮಳೆ ಆಗಬಹುದು ಎಂದು ಹವಾಮಾನ ತಜ್ಞರ ನಿರೀಕ್ಷೆಯಾಗಿದೆ. → 4

ಇಸ್ರೊ ಅಧ್ಯಕ್ಷ ವಿ.ನಾರಾಯಣನ್

ಶೀಘ್ರದಲ್ಲೇ ಅಮೆರಿಕ ಉಪಗ್ರಹ ಉಡಾವಣೆ

ಚೆನ್ನೈ: ಭಾರತೀಯ ಬಾಹ್ಯಾಕಾಶ ಸಂಸ್ಥೆಯು ಅಂದು ಅಮೆರಿಕ ನೀಡಿದ್ದ ಪುಟ್ಟ ರಾಕೆಟ್‌ನೊಂದಿಗೆ ಬಾಹ್ಯಾಕಾಶದಲ್ಲಿ ಯಶಸ್ವಿ ಆರಂಭದ ಹೆಜ್ಜೆ ಇಟ್ಟಿತ್ತು. ಇದೀಗ ಅಮೆರಿಕ ನಿರ್ಮಿಸಿರುವ 6,500 ಕೆ.ಜಿ. ತೂಕದ ಉಪಗ್ರಹವನ್ನು ಅದು ತನ್ನದೇ ಲಾಂಚರ್‌ನಲ್ಲಿ ಉಡಾವಣೆ ಮಾಡಲಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಭಾನುವಾರ ಹೇಳಿದರು.

> 50 ವರ್ಷಗಳ ಹಿಂದೆ ಭಾರತದಲ್ಲಿ ಉಪಗ್ರಹ ತಂತ್ರಜ್ಞಾನ ಇರಲಿಲ್ಲ. ಇದೀಗ 34 ದೇಶಗಳ ಒಟ್ಟು 433 ಉಪಗ್ರಹಗಳನ್ನು ತನ್ನದೇ ಲಾಂಚರ್‌ಗಳಿಂದ ಬಾಹ್ಯಾಕಾಶಕ್ಕೆ ಭಾರತ ಉಡಾವಣೆ ಮಾಡಿದೆ
>
> **-ವಿ.ನಾರಾಯಣನ್,** ಇಸ್ರೊ ಅಧ್ಯಕ್ಷ

ಕಟ್ಟಂಕುಳತ್ತೂರ್‌ನಲ್ಲಿರುವ ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ 21ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಇಸ್ರೊ ಹಾಗೂ ಅಮೆರಿಕದ ನಾಸಾದ ಸಿಂಥೆಟಿಕ್ ಅಪಾರ್ಚರ್ ರೇಡಾರ್ (ಎನ್‌ಐಎಸ್‌ಎಆರ್) ಎಂಬ ಜಂಟಿ ಕಾರ್ಯಕ್ರಮದಡಿ ಜುಲೈ 30ರಂದು ಜಿಎಸ್‌ಎಲ್‌ವಿ–ಎಫ್16 ರಾಕೆಟ್ ಅನ್ನು ಉಡಾವಣೆ ಮಾಡಲಾಯಿತು. ಇನ್ನು ಕೆಲವೇ ತಿಂಗಳಲ್ಲಿ ಅಮೆರಿಕದ ಮತ್ತೊಂದು ರಾಕೆಟ್ ಅನ್ನು ಇಸ್ರೊ ಉಡಾವಣೆ ಮಾಡಲಿದೆ ಎಂದರು. ಈಗ ನಾವು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳಿಗೆ ಸರಿಸಮನಾಗಿ ಕೆಲಸ ಮಾಡುತ್ತಿದ್ದೇವೆ. ಇದು ಗಮನಾರ್ಹ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಉದಯಗಿರಿ, ಹಿಮಗಿರಿ ನೌಕೆಗಳ ಸೇರ್ಪಡೆ 26ಕ್ಕೆ

ದೆಹಲಿ: ರಹಸ್ಯ ಕಾರ್ಯಾಚರಣೆ ಉದ್ದೇಶದ 'ಉದಯಗಿರಿ' ಹಾಗೂ 'ಹಿಮಗಿರಿ' ಯುದ್ಧನೌಕೆಗಳನ್ನು ವಿಶಾಖಪಟ್ಟಣದಲ್ಲಿ ಆಗಸ್ಟ್ 26ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಏಕಕಾಲಕ್ಕೆ ನೌಕಾಪಡೆಗೆ ಸೇರ್ಪಡೆ ಮಾಡಲಾಗುವುದು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. 'ಪ್ರಾಜೆಕ್ಟ್ 17ಎ' ಭಾಗವಾಗಿ ಈ ನೌಕೆಗಳನ್ನು ನಿರ್ಮಿಸಲಾಗಿದೆ. ಈ ಯೋಜನೆ ಭಾಗವಾಗಿ ನಿರ್ಮಿಸಿರುವ ಮೊದಲ ಯುದ್ಧನೌಕೆ 'ನೀಲಗಿರಿ'ಯನ್ನು ಜನವರಿಯಲ್ಲಿ ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಈ ಯುದ್ಧನೌಕೆಯನ್ನು ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದೆ. ಇದೇ ಶ್ರೇಣಿಯ ಎರಡನೇ ಯುದ್ಧನೌಕೆ 'ಉದಯಗಿರಿ'ಯನ್ನು ಎಂಡಿಎಲ್ ನಿರ್ಮಿಸಿದ್ದು, ಜುಲೈ 1ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು ಎಂದು ನೌಕಾಪಡೆಯ ವಕ್ತಾರ ತಿಳಿಸಿದ್ದಾರೆ. → 4

ಯುದ್ಧನೌಕೆ ಉದಯಗಿರಿ.

- ಉದಯಗಿರಿಯು ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯುರೊ ವಿನ್ಯಾಸ ಮಾಡಿರುವ 100ನೇ ಯುದ್ಧ ನೌಕೆಯಾಗಿದೆ
- ಈ ಮೊದಲಿನ ಯುದ್ಧ ನೌಕೆಗಳಿಗಿಂತ (ಶಿವಾಲಿಕ್ ಶ್ರೇಣಿಯ ಯುದ್ಧನೌಕೆಗಳು) ಈ ನೂತನ ಯುದ್ಧ ನೌಕೆಗಳು ಶೇ.5ರಷ್ಟು ದೊಡ್ಡದಾಗಿವೆ
- ನೆಲದಿಂದ ನೆಲಕ್ಕೆ ನೆಲದಿಂದ ಆಗಸಕ್ಕೆ ಚಿಮ್ಮುವ ಸೂಪರ್‌ಸಾನಿಕ್ ಕ್ಷಿಪಣಿಗಳು ಜಲಾಂತರ್ಗಾಮಿ ನಿರೋಧಕ ವ್ಯವಸ್ಥೆಗಳನ್ನು ಈ ಯುದ್ಧ ನೌಕೆಗಳಲ್ಲಿ ಅಳವಡಿಸಬಹುದು

ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಅಖಾಡ ಸಜ್ಜು

ಇಂದಿನಿಂದ ಅಧಿವೇಶನ

ಬೆಂಗಳೂರು: ಸೋಮವಾರದಿಂದ ಆರಂಭವಾಗಲಿರುವ ರಾಜ್ಯ ವಿಧಾನ ಮಂಡಲದ ಮಳೆಗಾಲದ ಅಧಿವೇಶನದಲ್ಲಿ ಪ್ರತಿಪಕ್ಷ ಹಾಗೂ ಆಡಳಿತ ಪಕ್ಷಗಳ ನಡುವೆ ವಾಕ್ಸಮರಕ್ಕೆ ಅಖಾಡ ಸಜ್ಜಾಗಿದ್ದು, ಸದನದ ಕಲಾಪಗಳು ಕಾವೇರುವುದು ನಿಶ್ಚಿತ.

ರಸಗೊಬ್ಬರ ಸಮಸ್ಯೆ, ಒಳ ಮೀಸಲು ಸೇರಿದಂತೆ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟ ನಡೆಸಲು ಬಿಜೆಪಿ–ಜೆಡಿಎಸ್ ಸಿದ್ಧತೆ ನಡೆಸಿದೆ. ಆದರೆ ಪ್ರತಿಪಕ್ಷಕ್ಕೆ ಠಕ್ಕರ್ ಕೊಡಲು ಕಾಂಗ್ರೆಸ್ ತನ್ನ ಶಾಸಕರಿಗೆ ಸೂಚನೆ ನೀಡಿದೆ. ಆದರೆ ರಾಹುಲ್ ಗಾಂಧಿ ಅವರು ಆರೋಪಿಸಿರುವ ಮತಗಳ್ಳತನವನ್ನು ಪ್ರಸ್ತಾಪಿಸಬೇಕೋ ಬೇಡವೋ ಎನ್ನುವ ಗೊಂದಲದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ.

ಮಳೆಗಾಲದ ಅಧಿವೇಶನದಲ್ಲಿ ಪ್ರಮುಖವಾಗಿ, ಶಾಸಕರ ಅನುದಾನ ಬಿಡುಗಡೆಯಲ್ಲಿನ ತಾರತಮ್ಯ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ, ಹಿಂದುಳಿದ ವರ್ಗಗಳ ಆಯೋಗದ ಜಾತಿಗಣತಿ ವರದಿಯನ್ನು ಅಂಗೀಕರಿಸದೇ ಹೊಸ ಜಾತಿಗಣತಿಗೆ ಮುಂದಾಗಿರುವುದು, ಬಿಜೆಪಿ ಶಾಸಕರನ್ನು ಗುರಿಯಾಗಿಸಿ ಎಫ್‌ಐಆರ್ ದಾಖಲಿಸುತ್ತಿರುವುದು, ಪರಿಶಿಷ್ಟ ಸಮುದಾಯಕ್ಕೆ ಮೀಸಲಾದ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಕೆ, ಕಾನೂನು ಸುವ್ಯವಸ್ಥೆ ಕುಸಿದಿರುವುದು ಸೇರಿ ಹತ್ತು ಹಲವು ವಿಚಾರಗಳನ್ನು ಇಟ್ಟುಕೊಂಡು ಸರಕಾರದ ವಿರುದ್ಧ ಮುಗಿಬೀಳಲು ಪ್ರತಿಪಕ್ಷಗಳಾದ ಬಿಜೆಪಿ–ಜೆಡಿಎಸ್ ತೀರ್ಮಾನಿಸಿವೆ. → 4

- ಒಳ ಮೀಸಲು, ರಸಗೊಬ್ಬರ ಕೊರತೆ ಮುಂದಿಟ್ಟುಕೊಂಡು ಹೋರಾಟಕ್ಕೆ ಬಿಜೆಪಿ–ಜೆಡಿಎಸ್ ತಯಾರಿ
- ಪ್ರತಿಪಕ್ಷಗಳ ಆರೋಪಗಳಿಗೆ ಠಕ್ಕರ್ ಕೊಡಲು ತನ್ನ ಶಾಸಕರಿಗೆ ಸೂಚನೆ ನೀಡಿರುವ ಕಾಂಗ್ರೆಸ್

ಕೃತಕ ಬುದ್ಧಿಮತ್ತೆಗೆ ಹೊಂದಿಕೊಳ್ಳಲು ಹೆಣಗಾಡುತ್ತಿದೆಯಾ ಭಾರತದ ಐಟಿ ಕ್ಷೇತ್ರ?

ಉದ್ಯೋಗವನ್ನೇ ಕಸಿದುಕೊಳ್ಳುತ್ತಿರುವ ಎಐ?

ದೆಹಲಿ: ಅಭಿಅಭಿವೃದ್ಧಿಶೀಲ ರಾಷ್ಟ್ರವಾದ ಭಾರತವು ಮಾಹಿತಿ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕ್ಷೇತ್ರದಲ್ಲಿ ಗಣನೀಯವಾಗಿ ಅಭಿವೃದ್ಧಿ ಹೊಂದುತ್ತಿದೆ. ವರ ಹಾಗೂ ಶಾಪ ಎರಡೂ ಇದೆ ಎಂಬತೆ, ಕೃತಕ ಬುದ್ಧಿಮತ್ತೆ (Artificial Intelligence) ಭಾರತದ ಉದ್ಯಮ ವಲಯಕ್ಕೆ ಭಾರೀ ಹೊಡೆತ ನೀಡುತ್ತಿದೆ. ಇದಕ್ಕೆ ತಾಜಾ ನಿದರ್ಶನ ಎಂಬಂತೆ ಇತ್ತೀಚೆಗಷ್ಟೇ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (TCS) ಏಕಾಏಕಿ ತನ್ನ ಅನೇಕ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿದೆ.

ಭಾರತದ ಅತಿದೊಡ್ಡ ಐಟಿ ಸೇವೆಗಳ ಪೂರೈಕೆದಾರ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ 2026ರ ಹಣಕಾಸು ವರ್ಷದಲ್ಲಿ ತನ್ನ ಉದ್ಯೋಗಿಗಳನ್ನು ಶೇ.2ರಷ್ಟು ಕಡಿಮೆ ಮಾಡಲಿದೆ ಎಂಬುದು ತಿಳಿದುಬಂದಿದೆ. ವರ್ಷಕ್ಕೆ 5.8 ಮಿಲಿಯನ್‌ಗಿಂತಲೂ ಹೆಚ್ಚು ಜನರನ್ನು ನೇಮಿಸಿಕೊಳ್ಳುವ ಭಾರತೀಯ ಐಟಿ ಉದ್ಯಮವು ಕವಲುದಾರಿಯಲ್ಲಿ ಬಂದು ನಿಂತಿದೆ.

ಎಐ ಮೇಲಿನ ಹೆಚ್ಚಿನ ಅವಲಂಬನೆ ಉದ್ಯೋಗಿಗಳನ್ನು ಆತಂಕಕ್ಕೀಡುಮಾಡಿದೆ. ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಐಟಿ ಸೇವೆ ಸೇರಿದಂತೆ ಹಲವು ವಿಭಾಗಗಳು ಈಗಾಗಲೇ ಕೃತಕ ಬುದ್ಧಿಮತ್ತೆಯ ಆಧಾರದ ಮೇಲೆ ನಡೆಯುತ್ತಿವೆ. ಕೋಡಿಂಗ್, ಮಾರ್ಕೆಟಿಂಗ್ ಅಷ್ಟೇ ಅಲ್ಲದೆ ದತ್ತಾಂಶಗಳ ನಮೂದು (ಡಾಟಾ ಎಂಟ್ರಿ), ಬ್ಯಾಂಕ್ ವಹಿವಾಟು ಸೇರಿದಂತೆ ಬಹುಪಾಲು ಕ್ಷೇತ್ರವನ್ನು ಎಐ ಆವರಿಸಿದೆ. → 4

ಹೊಸ ಅವಕಾಶಗಳು

ಇಂತಹ ತಂತ್ರಜ್ಞಾನದಿಂದ ಕೇವಲ ಕುತ್ತು ಮಾತ್ರ ಅಲ್ಲ, ಸಾವಿರಾರು ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಆರೋಗ್ಯ, ಶಿಕ್ಷಣ, ಸೇವಾ ವಲಯ ಸೇರಿದಂತೆ ಸಾಕಷ್ಟು ಉದ್ಯೋಗಗಳು ಎಐ ಮೂಲಕ ಸೃಷ್ಟಿಯಾಗುತ್ತವೆ. ಹೊಸದಾಗಿ ಉದ್ಯಮ ಪ್ರಾರಂಭಿಸುವವರಿಗೆ ಈ ತಂತ್ರಜ್ಞಾನ ವರವಾಗಿ ಪರಿಣಮಿಸಲಿದೆ.

- ಕವಲುದಾರಿಯಲ್ಲಿ ಬಂದು ನಿಂತಿರುವ ಭಾರತೀಯ ಐಟಿ ಉದ್ಯಮ
- ಉದ್ಯೋಗಿಗಳನ್ನು ಆತಂಕಕ್ಕೆ ತಳ್ಳುತ್ತಿರುವ ಎಐ ಮೇಲಿನ ಅವಲಂಬನೆ
- ಎಐ ತಂತ್ರಜ್ಞರಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಹಲವಾರು ಕಂಪನಿಗಳು

ಎಐ ತಂತ್ರಜ್ಞರಿಗೆ ಡಿಮಾಂಡ್

ಹಲವಾರು ಕಂಪನಿಗಳು ಎಐ ತಂತ್ರಜ್ಞರಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿವೆ. ಕೆಲಸ ಕಳೆದುಕೊಳ್ಳುವುದನ್ನು ತಪ್ಪಿಸಲು ಉದ್ಯೋಗಿಗಳಿಗೆ ಕಂಪನಿ ಮಾರ್ಗಸೂಚಿಗಳನ್ನು ನೀಡಿದೆ ಎಂದು ಹೊಸ ವರದಿಗಳು ತಿಳಿಸಿವೆ. ಉದ್ಯೋಗಿಗಳು ಎಐ ಕ್ಷೇತ್ರದಲ್ಲಿ ಪರಿಣತಿ ಹೊಂದಿರಬೇಕು, ಎಐ ಪರಿಣತಿಯನ್ನು ಇನ್ನು ಮುಂದೆ ಹೆಚ್ಚುವರಿ ಕೌಶಲ್ಯವೆಂದು ಪರಿಗಣಿಸದೆ, ಕಡ್ಡಾಯ ಎಂದು ಸೂಚನೆಯನ್ನು ನೀಡಿದೆ.

ಸಮಾಚಾರ ಸಣ್ಣದಲ್ಲ

ಶೀಘ್ರದಲ್ಲೇ ಉಪನ್ಯಾಸಕ ಹುದ್ದೆಗಳು ನೇಮಕ

ಕೆರೂರ: ಶೀಘ್ರದಲ್ಲೇ ಕಾಲೇಜು ಉಪನ್ಯಾಸಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ ಹೇಳುದರು. ಅವರು ಎಂಎಚ್ ಮೇಣಸಗಿ ಪದವಿ ಪೂರ್ವ ಕಾಲೇಜಿನಲ್ಲಿ ಸನ್ಮಾನ ಸ್ವಿಕರಿಸಿ ಮಾತನಾಡಿ,ರಾಜ್ಯದ ಬಹುತೇಕ ಕಾಲೇಜುಗಳಲ್ಲಿ ವಿಷಯವಾರು ಹುದ್ದೆಗಳು ಖಾಲಿಯಾದ ಪರಿಣಾಮ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆ ಎದುರುರಾಗಿದ್ದನ್ನು ಸರಕಾರದ ಗಮನಕ್ಕೆ ತಂದಿದ್ದು ಇನ್ನೂ ಎರಡಮೂರು ತಿಂಗಳಲ್ಲಿ ಅರ್ಜಿ ಕರೆಯುವ ಸಂಭವವಿದೆ ಎಂದರು. ಮಾಜಿ ರಾಷ್ಟ್ರಪತಿ ಅಬ್ದುಲ್‌ಕಲಾಂ ವಿದ್ಯಾರ್ಥಿಗಳ ಪಾಲಿಗೆ ಭವಿಷ್ಯ ಬೆಳಗುವ ಸ್ಫೂರ್ತಿಯ ಸೆಲೆಯಾಗಿದ್ದರು, ಕಲಾಂರ ವಿದ್ಯಾರ್ಥಿಗಳ ಮೇಲಿನ ಅಭಿರುಚಿ ನಾಡು ಮೆಚ್ಚುವಂತದ್ದು ಎಂದರು. ಪ್ರಾಚಾರ್ಯ ಕೆ.ಎನ್ ನೀಲಪ್ಪನವರ ಅಧ್ಯಕ್ಷತೆ ವಹಿಸಿದ್ದರು. ಪ್ರಕಾಶ ಬೇವೂರ, ಬಿ.ವೈ ಗೌಡರ, ವಾಸನದ, ಗೌಡರ, ಸುನೀಲ ಮುತ್ತಲಗೇರಿ, ಅಂಗಡಿ,ಕಟ್ಟಿಮನಿ ಕಾಲೇಜು ಮತ್ತು ಪ್ರೌಢ ಶಾಲೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗ ಹಾಜರಿದ್ದರು. ಕಾರ್ಯಕ್ರಮವನ್ನು ಆರ್ ಬಿ.ಚಿನಿವಾಲರ ನಿರೂಪಿಸಿದರು.

ಸಾಧನೆಗೆ ಬಡತನ ಅಡ್ಡಿಯಾಗದು: ಶಾಸಕ

ರಬಕವಿ-ಬನಹಟ್ಟಿ: ಸಾಧನೆಗೆ ಬಡತನ ಅಡ್ಡಿಯಾಗದು. ಗುರಿ ಸಾಧನೆಯ ಹಸಿವು ಇದ್ದರೆ ಮಾತ್ರ ಉತ್ತಮ ಸಾಧಕ ರೂಪುಗೊಳ್ಳುತ್ತಾನೆಂದು ಶಾಸಕ ಸಿದ್ದು ಸವದಿ ಹೇಳಿದರು. ಬನಹಟ್ಟಿಯ ಕೆ.ಎಂ. ಸೆಂಟರ್‌ನಲ್ಲಿ ಜರುಗಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಶ್ರದ್ಧೆ ಹಾಗು ಸತತ ಪರಿಶ್ರಮದಿಂದ ಗುರಿ ಸಾಧಿಸಲು ಸಾಧ್ಯವಾಗುತ್ತದೆಯೆಂದು ಸವದಿ ತಿಳಿಸಿದರು. ಇದೇ ಸಂದರ್ಭ ನಿವೃತ್ತಿ ಹೊಂದಿದ ಚಿತ್ರಕಲಾ ಶಿಕ್ಷಕ ಸಲೀಂ ಡಾಂಗೆ ಸನ್ಮಾನ ಸ್ವೀಕರಿಸಿ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಉನ್ನತ ಆಲೋಚನೆ, ದೃಷ್ಟಿಕೋನ, ಉನ್ನತ ಗುರಿಗಳನ್ನು ಅಳವಡಿಸಿಕೊಂಡು, ಶಿಸ್ತು ಬದ್ಧ ಜೀವನದೊಂದಿಗೆ ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಬೇಕೆಂದರು. ಕಾರ್ಯಕ್ರಮದಲ್ಲಿ ಮೈನುದ್ದೀನ ಡಾಂಗೆ, ನೂರ ಡಾಂಗೆ, ಬಂದೇನವಾಜ್, ಸರ್ದಾರ, ಇಯಾಸ, ಯೂನಸ್ ಚೌಗಲಾ, ಅಲ್ಲಾವುದ್ದೀನ ತಾಂಬೋಳಿ, ಇರ್ಷಾದ ಮೋಮಿನ, ಬುಡನ್ ಜಮಾದಾರ, ಹಾರೂನ್ ಬೇವೂರ, ಯುನಸ್ ನಿಪ್ಪಾಣಿ ಸೇರಿದಂತೆ ಅನೇಕರಿದ್ದರು.

ಸಹೋದರತ್ವದ ಬಂಧವೇ ರಕ್ಷಾ ಬಂಧನ

ಇಳಕಲ್ಲ: ಸಹೋದರತ್ವದ ಭಾವವನ್ನು ಗಟ್ಟಿಗೊಳಿಸುವ ಹಬ್ಬವೇ ರಕ್ಷಾ ಬಂಧನ.ಮಹಿಳೆಯನ್ನು ಗೌರವಿಸುವ ಹಾಗೂ ಒಳ್ಳೆಯ ಭಾವನೆಯಿಂದ ನೋಡುವ ಮನಸ್ಥಿತಿಯನ್ನು ಉಂಟುಮಾಡುತ್ತದೆ ಎಂದು ಆಡಳಿತಾಧಿಕಾರಿ ಟಿ.ಎಂ.ರಾಮದುರ್ಗ ಹೇಳಿದರು. ನಗರದ ಗಾಯತ್ರಿ ಮಹಿಳಾ ಸಂಘ ಕನ್ನಡ ಶಿಶುವಿಹಾರ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ರಕ್ಷಾ ಬಂಧನದ ಆಚರಣೆಯ ಸಂದರ್ಭದಲ್ಲಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಘಟನೆಗಳು ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ. ಆಧುನಿಕ ಜೀವನ ಶೈಲಿಯಲ್ಲಿ ಸಹೋದರತ್ವ ಭಾವನೆಯು ಮರೀಚಿಕೆಯಾಗುತ್ತಿದೆ. ಸಂಸ್ಕೃತಿ, ಆಚರಣೆಗಳು ರಕ್ಷಾ ಬಂಧನದಂತ ಹಬ್ಬಗಳು ಅಂತಹ ಭಾವನೆಗಳನ್ನು ಗಟ್ಟಿಗೊಳಿಸುತ್ತವೆ. ಪ್ರತಿ ವರ್ಷ ಆಚರಿಸಿಕೊಂಡು ಬರುತ್ತಿರುವ ರಕ್ಷಾ ಬಂಧನವು ಮಕ್ಕಳಲ್ಲಿ ಆ ಭಾವನೆ ಮೂಡಿಸಲಿ ಶುಭ ಹಾರೈಸಿದರು. ಈ ಕಾರ್ಯಾಕ್ರಮದಲ್ಲಿ ಶಿಕ್ಷಕರಾದ ಎಂ.ಎಸ್. ಕನ್ನೂರ,ಅಂಬಣ್ಣ ಯರಗೇರಿ, ಲಕ್ಷ್ಮಿ ಪುರೋಹಿತ, ವೇದಾವತಿ ದಟ್ಟಿ, ಶಿವಲೀಲಾ ಪಾಟೀಲ, ಮಾಲಾ ಕೊಳದೂರ, ಸುನಿತಾ ಮಸ್ಕಿ, ಚೌಡಮ್ಮ ಮೆದಿಕೇರಿ, ಸಿದ್ದಮ್ಮ ಎಸ್, ಶೃತಿ ಪರದೇಶಿ,ಜಮುನಾ ಜಲದುರ್ಗ, ಸವಿತಾ ಚವ್ಹಾಣ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಯಜ್ಞೋಪವೀತ ಪವಿತ್ರವಾದದ್ದು

ಇಂಡಿ: ನಗರದ ಶಾಂತಿನಗರದಲ್ಲಿರುವ ಶ್ರೀಲಕ್ಷ್ಮೀ ಸತ್ಯನಾರಾಯಣ ದೇವಸ್ಥಾನದಲ್ಲಿ ನೂತನ ಉಪಕರ್ಮ ಯಜ್ಞೋಪವಿತ ಧಾರಣೆ ಹೋಮ ಹವನ ಕಾರ್ಯಕ್ರಮ ವಿಪ್ರಕುಲಬಾಂಧವರಿಂದ ಪೂಜ್ಯ ಸುಜಯ ,ಕೃಷ್ಣಾಚಾರ್ಯ ಸಂಸ್ಕೃತಿ ವಿಧ್ಯಾಪೀಠ ಹಿರೇಮಣ್ಣೂರ ಅಮೃತ ಹಸ್ತದಿಂದ ನೆರವೇರಿತು. ಈ ಸಂದರ್ಭದಲ್ಲಿ ಹಿರೇಮಣ್ಣೂರಿನ ಸಂಸ್ಕೃತ ವಿಧ್ಯಾಪೀಠದ ಪೂಜ್ಯ ಶ್ರೀ ಸುಜಯ, ಕೃಷ್ಣಾಚಾರ್ಯ ಆರ್ಶೀವಚನ ನೀಡಿ ಯಜೋಪವಿತಂ ಪರಮಂ ಪವಿತ್ರ ಯಜ್ಞೋಪವಿತವು ಅತ್ಯಂತ ಪವಿತ್ರವಾದುದ್ದು ಅಥವಾ ಶ್ರೇಷ್ಠವಾದುದ್ದು ಇದು ಹಿಂದು ಧರ್ಮದಲ್ಲಿ ಉಪನಯನ ಸಂಸ್ಕಾರದ ಸಮಯದಲ್ಲಿ ಧರಿಸುವ ಒಂದು ಪವಿತ್ರ ದಾರವಾಗಿದೆ ಎಂದು ಶ್ರೀಗಳು ನುಡಿದರು. ದೇವಸ್ಥಾನ ಕಮೀಟಿಯ ಕಾರ್ಯದರ್ಶಿ ಮುಕುಂದ ಆದ್ಯ ಹಾಗೂ ಅರ್ಚಕ ಅಪ್ಪಣ್ಣಾ ಚಾರ್ಯ ,ಯುವ ಸಾಹಿತಿ ರಾಘವೇಂದ್ರ ಕುಲಕರ್ಣಿ, ದತ್ತಾ ಕುಲಕರ್ಣಿ ಸೇರಿಂದತೆ ಅನೇಕ ವಿಪ್ರಕುಲಬಾಂಧವರು ಇದ್ದರು.

VISHWAVANI TV SPECIAL ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಕಳೆದ ಲೋಕಸಭಾ ಚುನಾವಣೆಯಲ್ಲಿ ನಾವು ಹದಿನಾರು ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಆಂತರಿಕ ಸಮೀಕ್ಷೆ ತಿಳಿಸಿತ್ತು. ಆದರೆ ನಾವು ಗೆದ್ದದ್ದು 9 ಸ್ಥಾನಗಳನ್ನು ಮಾತ್ರ. ಇದೆಲ್ಲವನ್ನು ಗಮನಿಸಿದಾಗ ಬಿಜೆಪಿಯಿಂದ ಮತಗಳ್ಳತನ ಆಗಿರುವುದು ದೃಢವಾಗುತ್ತದೆ.

ಬಾಪೂಜಿ ಮಲ್ಟಿಸ್ಟೇಟ್ ಬ್ಯಾಂಕ್ ಉದ್ಘಾಟನೆ | ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಭಿಮತ

ಸಕ್ಕರೆ ಉದ್ಯಮ ಬೆಳೆಸಿದ ಸಹಕಾರಿ ಬ್ಯಾಂಕುಗಳು

ಬಾಗಲಕೋಟೆ: ರಾಷ್ಟ್ರೀಕೃತ ಬ್ಯಾಂಕಗಳಿಂದ ಸಾಧ್ಯವಾಗದ ಕೆಲಸಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಮಾಡಿವೆ. ಕೃಷಿ ಆಧಾರಿತ ಉದ್ಯಮಗಳು ಸದೃಢಗೊಂಡಿರುವುದು ಸಹಕಾರಿ ಬ್ಯಾಂಕುಗಳಿಂದ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಹುರಾಜ್ಯ ಬ್ಯಾಂಕ್ ಆಗಿ ಮೇಲ್ದರ್ಜೆಗೇರಿರುವ ಮಾಜಿ ಸಚಿವ ಎಸ್.ಆರ್.ಪಾಟೀಲ ನೇತೃತ್ವದ ಬಾಪೂಜಿ ಮಲ್ಟಿಸ್ಟೇಟ್ ಬ್ಯಾಂಕ್ ಉದ್ಘಾಟಿಸಿ ಅವರು ಮಾತನಾಡಿದರು. ಸಕ್ಕರೆ ಕಾರ್ಖಾನೆಗಳು ಈ ಮಟ್ಟಕ್ಕೆ ಬೆಳವಣಿಗೆ ಸಾಧಿಸಿದ್ದರೆ ಅದು ಸಹಕಾರಿ ಬ್ಯಾಂಕ್‌ಗಳಿಂದ ಮಾತ್ರ. ಇದರಿಂದಾಗಿ ರೈತರೂ ಆರ್ಥಿಕವಾಗಿ ಸಬಲರಾಗುವಂತೆ ಆಗಿದೆ. ಇತ್ತೀಚೆಗೆ ಸಾಲ ನೀಡುವಾಗ ಸಿಬಿಲ್(ಕ್ರೆಡಿಟ್ ಸ್ಕೋರ್) ನೋಡಿ ಕೊಡುತ್ತಾರೆ. ಆರ್ಥಿಕವಾಗಿ ಅವಶ್ಯಕತೆ ಇದ್ದವರೇ ಸಾಲ ಕೇಳಿಕೊಂಡು ಬಂದಿರುತ್ತಾರೆ. ಅಂಥವರಿಗೆ ನೆರವಾಗುವುದು ಬ್ಯಾಂಕ್‌ಗಳ ಕೆಲಸವಾಗಬೇಕು ಎಂದರು.

ವಿಜಯಪುರ ಖ್ಯಾತ ಗುತ್ತಿಗೆದಾರರೊಬ್ಬರು ಹೊಸ ಕಾಮಗಾರಿ ಆರಂಭಕ್ಕೆ 450 ಕೋಟಿ ರು.ಗಳ ಇಎಂಐ ಪಾವತಿಸಬೇಕಿತ್ತು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಸಿಗುವುದು ಕಷ್ಟ. ನಮ್ಮ ಬ್ಯಾಂಕ್ ಮೂಲಕ ಶೀಘ್ರದಲ್ಲಿ ಸಾಲ ನೀಡಿದ್ದೆ, ನಾನು ಒಂದೇ ದಿನದಲ್ಲಿ 2 ಕೋಟಿ ಸಾಲ ನೀಡಿದ್ದೆ. ಇಂದು ಅದು ಯಶಸ್ವಿಯಾಗಿ ನಡೆಯುತ್ತಿದೆ. ಸಹಕಾರಿ ಕ್ಷೇತ್ರ ಇಲ್ಲದೇ ಹೋಗಿದ್ದರೆ ಅನೇಕರು ಆರ್ಥಿಕವಾಗಿ ಕಷ್ಟಕ್ಕೆ ಸಿಲುಕುತ್ತಿದ್ದರು ಎಂದು ಹೇಳಿದರು.

ಬಾಗಲಕೋಟೆಯ ನವನಗರದಲ್ಲಿ ಬಾಪೂಜಿ ಮಲ್ಟಿಸ್ಟೇಟ್ ಬ್ಯಾಂಕ್‌ನ್ನು ಶಾಸಕ ಬಸನಗೌಡ ಪಾಟೀಲ ಯತ್ನಾಳ ಉದ್ಘಾಟಿಸಿದರು. ಮಾಜಿ ಸಚಿವರಾದ ಎಸ್.ಆರ್.ಪಾಟೀಲ ಹಾಗೂ ಅಜಯಕುಮಾರ ಸರನಾಯಕ ಇದ್ದರು.

ವಧು-ವರರ ಕೇಂದ್ರ: ನಮ್ಮ ಮಗಗ ಕನ್ಯಾ ಸಿಗ್ತಿಲ್ಲ ನಿಮ್ಮ ಬ್ಯಾಂಕ್‌ನಾಗ ನೌಕರಿ ಕೊಡ್ರಿ, ಅಂಥ ದಿನಾ ಹತ್ತಾರು ಜನ ಬರ್ತಾರ ಸಹಕಾರಿ ಬ್ಯಾಂಕ್‌ಗಳು ಒಂದು ಅರ್ಥದಲ್ಲಿ ವಧು-ವರರ ಕೇಂದ್ರವಾಗಿವೆ. ಅನೇಕರ ಮದುವೆ ಮಾಡಿಸುವುದರ ಮೂಲಕ ಕಲ್ಯಾಣದ ಕೆಲಸ ಮಾಡಿದೆ ಇದು ವಾಸ್ತವವೂ ಹೌದು. ಮಗ ಬ್ಯಾಂಕಿನಲ್ಲಿ ಮ್ಯಾನೇಜರ್ ಇದ್ದಾನೆ ಎಂದರೆ ಕನ್ಯಾ ಸಿಗುತ್ತದೆ. ಕೊಟ್ಟ ಮೇಲೆ ಅವರ ಕಲ್ಯಾಣವೂ ಆಗಿದೆ. ಇದು ಸಹಕಾರಿ ಬ್ಯಾಂಕ್‌ಗಳ ಕೊಡುಗೆಗಳಲ್ಲಿ ಒಂದು ಎಂದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ ಮಾತನಾಡಿ, ಸಕ್ಕರೆ ಕಾರ್ಖಾನೆಗಳು ಇಂದು ಯಶಸ್ವಿಯಾಗಿ ಮುನ್ನಡೆಯುತ್ತಿದ್ದರೆ ಅದಕ್ಕೆ ಸಹಕಾರಿ ಬ್ಯಾಂಕ್‌ಗಳು ಕಾರಣ. ನಮ್ಮ ಬ್ಯಾಂಕ್‌ಗಳಿಂದ ಮಾತ್ರವೇ ಸಾಲ ಲಭಿಸುತ್ತದೆ ಎಂದರು.

ಬ್ಯಾಂಕ್ ಉಪಾಧ್ಯಕ್ಷ ಜಿ.ಎನ್.ಪಾಟೀಲ, ಸತ್ಯಪ್ಪ ಮೇಲ್ನಾಡ, ನಿರ್ದೇಕರಾದ ಎ.ಎಂ.ಶೆಟ್ಟರ, ಎಸ್. ಕೆ.ಯಡಹಳ್ಳಿ, ಎಲ್.ಕೆ.ಬಳಗಾನೂರ, ಎಂ.ಎಸ್ .ಪಾಟೀಲ, ಸಿ.ಎಂ,ನ್ಯಾಮಗೌಡ, ಅಶೋಕ ಲಾಗಲೋಟಿ, ಆರ್.ಪಿ.ಕಲಬುರ್ಗಿ, ಎಸ್.ಬಿ.ಬೆಳಗಲಿ, ಎಸ್.ಎಸ್.ರಂಗನಗೌಡರ, ಎಸ್.ಸಿ.ಬಂಡಿವಡ್ಡರ, ಎಸ್.ಕೆ.ತಳವಾರ, ಎಂ.ಟಿ.ಅರಳಿಕಟ್ಟಿ, ವಿ.ಎಲ್. ಕುರ್ತಕೋಟಿ, ಎಸ್.ಎಸ್.ಪಾತ್ರೋಟ, ಪ್ರಧಾನ ವ್ಯವಸ್ಥಾಪಕ ವಿ.ಎಸ್.ಭಟ್, ಸಿಇಒ ಎಸ್.ಸಿ.ಮೋಟಗಿ ಮತ್ತಿತರರು ಇದ್ದರು.

ನಾನೂ, ಎಸ್.ಆರ್.ಪಾಟೀಲ ಸಮಾನ ಮನಸ್ಕರರು

ತಾವು ಅಧ್ಯಕ್ಷರಾಗಿರುವ ವಿಜಯಪುರದ ಸಿದ್ದಸಿರಿ ಬ್ಯಾಂಕ್ 4,350 ಕೋಟಿ ರು.ಗಳ ಠೇವಣಿ ಸಂಗ್ರಹಿಸಿದೆ ಕೆಲವೇ ದಿನಗಳಲ್ಲಿ ನಮ್ಮ ಬ್ಯಾಂಕಿಗೂ ಮಲ್ಟಿಸ್ಟೇಟ್ ಸ್ಥಾನಮಾನ ಲಭಿಸಲಿದೆ. ಆರ್‌ಬಿಐಗೆ ಸಹಕಾರಿ ಬ್ಯಾಂಕ್‌ಗಳನ್ನು ಕಂಡರೆ ಅಲರ್ಜಿ ಅನಿಸುತ್ತದೆ. ದಿನಕ್ಕೊಂದು ಕಾಯ್ದೆ ರೂಪಿಸಿ ಹಣಿಯುವ ಕೆಲಸ ಮಾಡುತ್ತಿದೆ. ರಾಜ್ಯದಲ್ಲೂ ರಾಜಕಾರಣ ನೋಡಿಕೊಂಡು ಕಿರಿಕಿರಿ ಮಾಡುತ್ತಾರೆ. ನನಗೆ ಬಿಜೆಪಿಯಲ್ಲಿ ಯಡಿಯೂರಪ್ಪ ಕಾಟ, ನಿಮ್ಮ ಪಕ್ಷ ಬಂದಾಗ ನಮ್ಮ ಜಿಲ್ಲೆಯೊಲ್ಲಬ್ಬ ಇದ್ದಾನೆ ಅವನ ಕಾಟ ಇರುತ್ತದೆ. ಈಗ ಯಾವುದರ ಗೋಜು ಬೇಡ ಎಂದು ಮಲ್ಟಿಸ್ಟೇಟ್ ಬ್ಯಾಂಕ್ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ನಾನೂ ಹಾಗೂ ಎಸ್.ಆರ್.ಪಾಟೀಲರು ಸಮಾನ ಮನಸ್ಕರು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

> ಮಾಜಿ ಸಚಿವ ಎಸ್.ಆರ್.ಪಾಟೀಲ ಅವರು ಸಹಕಾರಿ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸುವುದಲ್ಲದೇ ಗ್ರಾಮೀಣ ಭಾಗದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಿ ತೋರಿಸಿದ್ದಾರೆ. ಅವರ ಶ್ರಮದಿಂದಾಗಿ ಈ ಭಾಗದ ಸಾಕಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ.
> -ಎಚ್.ವೈ.ಮೇಟಿ, ಬಾಗಲಕೋಟೆ ಶಾಸಕರು

> ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಕೇಳಿದರೆ ಲೋಡ್‌ಗಟ್ಟಲೇ ದಾಖಲೆಗಳನ್ನು ಕೇಳುತ್ತಾರೆ. ಸಾಮಾನ್ಯ ಜನರಿಗೆ ಸುಲಭದಲ್ಲಿ ಸಾಲ ನೀಡಿ ನೆರವಾಗುತ್ತ ಬಂದಿರುವುದು ಸಹಕಾರಿ ಬ್ಯಾಂಕ್‌ಗಳು ಮಾತ್ರ. ಬೀಳಗಿ ಸಕ್ಕರೆ ಕಾರ್ಖಾನೆ ರೈತರ ಬಾಕಿ ಪಾವತಿಸುವಾಗ ಯತ್ನಾಳರು ತಮ್ಮ ಬ್ಯಾಂಕ್ ಮೂಲಕ ತಕ್ಷಣ 75 ಕೋಟಿ ರು. ಸಾಲ ನೀಡಿದರು. ಬಾಪೂಜಿ ಬ್ಯಾಂಕ್ ಬಹುರಾಜ್ಯದಲ್ಲಿ ಕಾರ್ಯಾರಂಭ ಮಾಡಲಿದ್ದು, ಆ ಸಾಲಿಗೆ ಸಿದ್ದಸಿರಿ ಬ್ಯಾಂಕ್ ಕೂಡ ಸದ್ಯದಲ್ಲೇ ಸೇರ್ಪಡೆ ಆಗಲಿದೆ.
> - ಎಸ್.ಆರ್.ಪಾಟೀಲ, ಮಾಜಿ ಸಚಿವರು

ಶಾಲಾ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ

ವಿಜಯಪುರ: ಮಮದಾಪುರ ಬಳಿ ನಿರ್ಮಿಸಲಾಗಿರುವ ಅರಣ್ಯದ ಪ್ರಕೃತಿಯಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ನೆಲೆಸಿದ್ದು, ಶ್ರೀಗಳ ಆಶಯದಂತೆ ವ್ಯಸನಮುಕ್ತ, ಜಗಳರಹಿತವಾಗಿ ಬದುಕಿ ಆದರ್ಶ ಗ್ರಾಮವನ್ನಾಗಿ ಮಾಡಲು ಈ ಭಾಗದ ಗ್ರಾಮಸ್ಥರು ಕೈ ಜೋಡಿಸಬೇಕು ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಜಿಲ್ಲೆಯ ಬಬಲೇಶ್ವರ ತಾಲೂಕಿನ ಮಮದಾಪುರ ಗ್ರಾಮದಲ್ಲಿ ಅಂದಾಜು ರು. 120 ಲಕ್ಷ ವೆಚ್ಚದಲ್ಲಿ ಹೆಸ್ಕಾಂ ನೂತನ ಶಾಖಾಧಿಕಾರಿಗಳ ಕಚೇರಿ ಕಟ್ಟಡ ಮತ್ತು ಟೊಯೊಟಾ ಕಿರ್ಲೋಸ್ಕರ್ ಸಿ.ಎಸ್.ಆರ್ ಅನುದಾನಡಿ ಕರ್ನಾಟಕ ಪಬ್ಲಿಕ್ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಅವರು, ಬಳಿಕ ಖಾಜಾ ಬಾಪುಸಾಹೇಬರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಮದಾಪುರದಲ್ಲಿ ಸಮಗ್ರ ಅಭಿವೃದ್ಧಿ ಮಾಡಲಾಗಿದೆ. ಕೆರೆ ತುಂಬಿಸಿ, ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಶಾಲೆ ಮತ್ತು ಕಾಲೇಜುಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗೌರವಾರ್ಥ ನಿರ್ಮಿಸಲಾಗಿರುವ ಅರಣ್ಯದಲ್ಲಿ ಸಾಯಿನ್ಸ್ ಮ್ಯೂಜಿಯಂ ಪ್ರಾರಂಭಿಸಲಾಗುವುದು. ಈ ಮೂಲಕ ಪ್ರಕೃತಿಯಲ್ಲಿ ಶ್ರೀಗಳನ್ನು ಕಾಣೋಣ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಮದಾಪುರ ವಿರಕ್ತಮಠದ ಶ್ರೀ ಅಭಿನವ ಮುರುಘೇಂದ್ರ ಮಹಾಸ್ವಾಮಿಗಳು, ಶಿವಾನಂದ ಸ್ವಾಮಿ, ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಮುಖಂಡರಾದ ಬಸವರಾಜ ದೇಸಾಯಿ, ಕುಮಾರ ದೇಸಾಯಿ, ಮಲ್ಲಿಕಾರ್ಜುನ ಗಂಗೂರ, ಕೃಷ್ಣಾಜಿ ಕುಲಕರ್ಣಿ, ವೆಂಕಣ್ಣ ಬಿದರಿ, ಈರನಗೌಡ ಬಿರಾದಾರ, ಬಿ. ಡಿ. ಪಾಟೀಲ, ರಫೀಕ್ ಖಾನೆ, ಶಿವಪ್ಪ ನಾಯಕ, ರಮೇಶ ನಾಯಕ, ಸುಖದೇವ ಕಟ್ಟಿಮನಿ, ಮುನ್ನಾಸಾಬ ಗಣಿ, ಎಚ್. ಬಿ. ಹರನಟ್ಟಿ, ಹುಸೇನಸಾಬ ಕಿಜಿ, ಕೌಸರ ಅತ್ತಾರ, ಆರೀಫ್ ಕಿಜಿ, ಬಸಪ್ಪ ಗಲಗಲಿ, ಮುತ್ತೆಶ ಗಡ್ಡದಮಠ, ಮಲ್ಲಿಕಾರ್ಜುನ ರಾಜಂಗಳ, ಬಸವರಾಜ ಪಾಟೀಲ, ಸದಾಶಿವ ನಾಯಕರ, ಹೆಸ್ಕಾಂ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ, ಕಾರ್ಯನಿರ್ವಾಹಕ ಅಭಿಯಂತರ ಮಹಾಂತೇಶ ಚನಗೊಂಡ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಹಾದೇವ ತಳವಾರ ಮುಂತಾದವರು ಉಪಸ್ಥಿತರಿದ್ದರು.

ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಮಮದಾಪುರದಲ್ಲಿ ಟೊಯೊಟಾ ಕಿರ್ಲೋಸ್ಕರ್ ಸಿ.ಎಸ್.ಆರ್ ಅನುದಾನಡಿ ಕರ್ನಾಟಕ ಪಬ್ಲಿಕ್ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಚಿವ ಎಂ. ಬಿ. ಪಾಟೀಲ ಭೂಮಿಪೂಜೆ ನೆರವೇರಿಸಿದರು.

ವಿದ್ಯಾರ್ಥಿಗಳು ಶಿಕ್ಷಣದ ಜತೆ ಸಂಸ್ಕಾರ, ಪರಂಪರೆ ಅರಿಯಬೇಕು

ಎಕ್ಸ್‌ಲೆಂಟ್ ಕಾಲೇಜಿನಲ್ಲಿ ರಕ್ಷಾ ಬಂಧನ

ವಿಜಯಪುರ: ಯುವ ಜನತೆಯು ಕೇವಲ ಶಿಕ್ಷಣವನ್ನು ಕಲಿತ ಮಾತ್ರಕ್ಕೆ ಜ್ಞಾನಿಗಳಾಗುವುದಿಲ್ಲ. ಶಿಕ್ಷಣದ ಜತೆಯಲ್ಲಿ ನಮ್ಮ ದೇಶದ ಸಂಸ್ಕಾರ ಹಾಗೂ ಪರಂಪರೆಗಳನ್ನು ತಿಳಿದುಕೊಂಡು ಅವುಗಳ ಆದರ್ಶಗಳ ಅಡಿಯಲ್ಲಿ ಬದುಕು ಕಟ್ಟಿಕೊಂಡಾಗ ಮಾತ್ರ ಬದುಕಿಗೆ ಮೌಲ್ಯ ಬರುತ್ತದೆ ಎಂದು ಎಕ್ಸ್‌ಲೆಂಟ್‌ವಿಜ್ಞಾನ ಪದವಿ ಪೂರ್ವ ಕಾಲೇಜಿನ ಆಂಗ್ಲ ಉಪನ್ಯಾಸಕ ಮುಸ್ತಾಕ ಮಲಘಾಣ ಹೇಳಿದರು.

ನಗರದ ಎಕ್‌ಲೆಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ರಕ್ಷಾ ಬಂಧನದ ಪ್ರಯುಕ್ತ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು ನಮ್ಮ ಮನಸ್ಸುಗಳನ್ನು ಬೆಸೆಯುವುದಕ್ಕೆಂದೆ ನಮ್ಮ ಪೂರ್ವಜರು ಹಬ್ಬಗಳನ್ನು ಆರಂಭಿಸಿದರು. ಒಂದೊಂದು ಹಬ್ಬವೂ ಕೂಡ ಒಂದೊಂದು ಮೌಲ್ಯಗಳನ್ನು ಒಳಗೊಂಡಿವೆ, ರಕ್ಷಾ ಬಂಧನ ವಿಶಿಷ್ಟ ಹಬ್ಬವಾಗಿದೆ ಇಲ್ಲಿ ರಾಖಿಯ ನೂಲನ್ನು ಕಟ್ಟುವುದು ಸಂಪ್ರದಾಯವಾದರೂ ಸಹ ಅದರ ನಂತರದಲ್ಲಿ ಆಗುವ ಬಾಂಧವ್ಯದ ಬೆಸುಗೆ ಮಾತ್ರ ಅಭೂತಪೂರ್ವವಾದುದ್ದು. ಸಹೋದರಿ ಕಟ್ಟುವ ನೂಲು ಎರಡು ಮನಸ್ಸುಗಳನ್ನು ಬೆಸೆಯುವುದರ ಜತೆಗೆ ಅವಳ ರಕ್ಷಣೆಯ ಹೊಣೆ ಸಹೋದರನ ಹೆಗಲೇರಿಸುತ್ತದೆ,

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ, ಪ್ರಾಚಾರ್ಯ ಶ್ರೀಕಾಂತ್ ಕೆ.ಎಸ್ ವಿಜ್ಞಾನ ಕಾಲೇಜು ಎಂದು ಬರೀ ಮಕ್ಕಳಿಗೆ ಪಠ್ಯ ಬೋಧನೆ ಮಾಡಿದರೆ ಅವರನ್ನು ಕೇವಲ ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಾಗುತ್ತದೆಯೇ ವಿನಃ ಸಂಸ್ಕಾರವಂತರನ್ನಾಗಿ ಹಾಗೂ ಜ್ಞಾನಿಗಳನ್ನಾಗಿ ತಯಾರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರ್ಯವಾಗಬೇಕಾದಲ್ಲಿ ಇಂಥ ಕಾರ್ಯಕ್ರಮಗಳು ಅತ್ಯಂತ ಮಹತ್ವ ಪಡೆದುಕೊಳ್ಳುತ್ತವೆ ಎಂದರು.

ನಗರದ ಎಕ್ಸಲೆಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ರಕ್ಷಾ ಬಂಧನದ ಪ್ರಯುಕ್ತ ವಿದ್ಯಾರ್ಥಿನಿಯರು ವಿದ್ಯಾರ್ಥಿಗಳಿಗೆ ರಾಖಿ ಕಟ್ಟಿದರು.

> ಸಹೋದರನ ಬೆಳವಣಿಗೆಯ ಭಾವ ಸಹೋದರಿಯ ಮನಸೇರುತ್ತದೆ. ಹೀಗಾಗಿ ಇಂತಹ ಹಬ್ಬಗಳು ಕೇವಲ ಹಬ್ಬವಾಗಿ ಇರದೇ ಭಾರತೀಯ ಪರಂಪರೆ ಬಿತ್ತಿ ಬೆಳೆಸುವಂತಾಗಬೇಕು.
> - ಮುಸ್ತಾಕ ಮಲಘಾಣ, ಉಪನ್ಯಾಸಕರು

ಇದೇ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಎಲ್ಲ ವಿದ್ಯಾರ್ಥಿಗಳು ರಾಖಿ ಕಟ್ಟುವ ಮೂಲಕ ಸಹೋದರತ್ವದ ಕಲ್ಪನೆಯನ್ನು ಸಾಕ್ಷಿಕರಿಸಿದರು.

ಉಪ ಪ್ರಾಚಾರ್ಯ ಮಂಜುನಾಥ ಮ. ಜುನಗೊಂಡ ಮಾತನಾಡಿದರು. ಭೌತಶಾಸ್ತ್ರ ಉಪನ್ಯಾಸಕ ರವಿ ಕಲ್ಲೂರ ಮಠ, ನಿರೂಪಿಸಿ ವಂದಿಸಿದರು. ಕಾಲೇಜಿನ ಎಲ್ಲ ಸಿಬ್ಬಂದಿವರ್ಗ ಹಾಗೂ ಎಲ್ಲ ವಿದ್ಯಾರ್ಥಿ ನಿಲಯದ ನಿಲಯ ಪಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರಾವಣ ಮಾಸದ ವಿಠಲ-ರುಕ್ಮಿಣಿ ನಾಮಸ್ಮರಣೆ ಸಂಪನ್ನ

ಕೆರೂರ: ಸಮೀಪದ ಕುಳಗೇರಿ ಕ್ರಾಸ್‌ನಲ್ಲಿ ಪಾಮಡುರಂಗ-ರುಕ್ಮೀಣಿ ದೇವಾಲಯದಲ್ಲಿ ಶ್ರಾವಣ ಮಾಸದ ಅಂಗವಾಗಿ ಮೂರು ದಿನಗಳ ಕಾಲ ಸಂತರು ಹಮ್ಮಿಕೊಂಡಿದ್ದ ವಿಠಲ-ರುಕ್ಮಿಣಿ ನಾಮಸ್ಮರಣೆ ಹಾಗೂ ಕೀರ್ತಣೆ ಭಜನೆ ಬುಧವಾರ ಮುಕ್ತಾಯಗೊಂಡಿತು.

ಪಾಂಡುರಂಗ-ರುಕ್ಮೀಣಿ ದೇವರಿಗೆ ಅಭಿಷೇಕ ಮಾಡಿ ಪುಷ್ಪಾಲಂಕಾರಗಳಿಂದ ಸಿಂಗರಿಸಿ ಪೂಜೆ ಸಲ್ಲಿಸಲಾಯಿತು.

ನಂತರ ಭಾವಚಿತ್ರ ಪಾಲಕಿಯಲ್ಲಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ದಿಂಡಿ ಪ್ರದಕ್ಷೀಣೆ, ಬಾರೂಢ ಕಾರ್ಯಕ್ರಮ ನಡೆಸಲಾಯಿತು. ಮೂರು ದಿನಗಳ ಕಾಲ ನಾಮಸಂಕೀರ್ತಣೆ, ಹರಿನಾಮ ಜಪ, ಕೀರ್ತನೆ-ಭಜನೆ, ಕಲಾ ಕೀರ್ತನೆ, ಗಡಿಗೆ ಒಡೆಯುವುದು ಹೀಗೆ ಹತ್ತು ಹಲವು ಕಾರ್ಯಕ್ರಮಗಳು ನಡೆದವು.

ಗ್ರಾಮದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸೇರಿದ್ದ ನೂರಾರು ಸಂತರು ರಾಮಾಯಣ, ಮಹಾಭಾರತ, ಶ್ರೀಕೃಷ್ಣನ ಕಥೆಗಳನ್ನ ಅಭಿನಯ ರೂಪದಲ್ಲಿ ಭಕ್ತರಿಗೆ ತಿಳಿಸುತ್ತ ಮನರಂಜಿಸಿದರು.

ನೂರಾರು ಸಂತರು ಗ್ರಾಮದ ರಾಜ ಬೀದಿಗಳಲ್ಲಿ ಪಾಂಡುರಂಗ-ರುಕ್ಮೀಣಿ ಭಾವಚಿತ್ರ ದಿಂಡಿ ಪ್ರದಕ್ಷೀಣೆ ಮೆರವಣಿಗೆ ನಡೆಸಿದರು.

ದೇವಾಲಯಕ್ಕೆ ಬಂದ ಭಕ್ತರು ಹಣ್ಣು-ಕಾಯಿ ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಿದರು. ಪಾಂಡುರಂಗ-ರುಕ್ಮಿಣಿ ಭಜನೆ ಮೂಲಕ ಹಾಡಿ ಸಂಭ್ರಮಿಸಿದರು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಚೈತನ್ಯ ಸದ್ಗುರು ಕೃಷ್ಣ ಮಹಾರಾಜ ಲಾಖೆ ಹಾಗೂ ಮಾಮಾ ಮಹಾರಾಜ ಲಾಖೆ ಇವರ ಸಾನ್ನಿಧ್ಯ ವಹಿಸಿದ್ದರು. ಲಚ್ಚಪ್ಪ ಪೂಜಾರ, ರಮೇಶ ಬಾಗಲೆ, ಹನಮಂತ ತುಳಸಿಗೇರಿ ಕೀರ್ತನೆ ನಡೆಸಿಕೊಟ್ಟರು. ಮೃದಂಗಕಾರ ಶಾಂತವೀರ ಬಬಲೇಶ್ವರ ಸೇರಿದಂತೆ ನೂರಾರು ಭಕ್ತರು ಇದ್ದರು.

ಮನೆಮನೆಗಳಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ

ಇಳಕಲ್ಲ: ಆ.15 ರಂದು ಮನೆಮನೆಗಳಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ರಾಷ್ಟ್ರಾಭಿಮಾನ ಬೆಳೆಸೋಣ ಎಂದು ಹುನಗುಂದ ಮತಕ್ಷೇತ್ರ ಮಾಜಿ ಶಾಸಕ ದೊಡ್ಡನಗೌಡ ಜಿ. ಪಾಟೀಲ ಹೇಳಿದರು. ತಮ್ಮ ನಿವಾಸದ ಪಕ್ಷದ ಕಚೇರಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. 2014ಕ್ಕೂ ಪೂರ್ವದಲ್ಲಿ ರಾಷ್ಟ್ರಧ್ವಜಾರೋಣವನ್ನು ಕೇವಲ ಸರಕಾರಿ ಕಚೇರಿಗಳಲ್ಲಿ ಮತ್ತು ಶಾಲಾ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿತ್ತು. 2014 ನಂತರ ನಮ್ಮ ದೇಶದ ಪ್ರಧಾನಿಗಳಾದ ನರೇಂದ್ರ ಮೋದಿ ಅವರು ಧ್ವಜಾರೋಹಣವನ್ನು ಪ್ರತಿಯೊಬ್ಬರು ನಿಮ್ಮ ಮನೆಗಳ ಮೇಲೆ ಆಚರಿಸಿ ರಾಷ್ಟ್ರಾಭಿಮಾನ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಆ.13ರಂದು ಬೆಳಗಿನಿಂದ ನಿಮ್ಮ ನಿಮ್ಮ ಮನೆಗಳ ಮೇಲೆ ತ್ರೀವರ್ಣ ಧ್ವಜ ಏರಿಸಿ ಅ. 15 ಸಾಯಂಕಾಲ ಧ್ವಜವನ್ನು ಗೌರವಯುತವಾಗಿ ಕೆಳಗಿಸಿ ಮನೆಯಲ್ಲಿ ಎಲ್ಲಂದರಲ್ಲಿ ಬೀಸಾಕದೇ ಸುರಕ್ಷಿತ ಸ್ಥಳದಲ್ಲಿ ತೆಗೆದಿರಿಸವುದು ನಮ್ಮ ಜವಬ್ದಾರಿಯಾಗಿದೆ ಎಂದು ಅವರು ಹೇಳಿದರು. ನಂತರ ನಗರದ ಪತ್ರಕರ್ತರಿಗೆ ತ್ರೀವರ್ಣ ಧ್ವಜ ನೀಡಿ ಮನೆಮನೆಗಳಲ್ಲಿ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾಲೇಜಿನಲ್ಲಿ ರ‍್ಯಾಗಿಂಗ್ ನಡೆದಿಲ್ಲ

ಸುದ್ದಿಗೋಷ್ಠಿಯಲ್ಲಿ ಪಿಇಟಿ ಗೌರವಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ ಮಾತನಾಡಿದರು.

ಗುಳೇದಗುಡ್ಡ: ನಮ್ಮ ಭಂಡಾರಿ ಮತ್ತು ರಾಠಿ ಮಹಾವಿದ್ಯಾಲಯದಲ್ಲಿ ಬಿ.ಎ ಅಂತಿಮ ವರ್ಗದಲ್ಲಿ ಅಧ್ಯಯನ ಮಾಡುತ್ತಿದ್ದ ಅಂಜಲಿ ಮುಂಡಾಸದ ಎಂಬ ವಿದ್ಯಾರ್ಥಿನಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡ ವಿಷಯ ತಡರಾತ್ರಿ ಗಮನಕ್ಕೆ ಬಂದಿದೆ ಎಂದು ಪಿ.ಟಿ.ಟ್ರಸ್ಟ್‌ನ ಗೌರವಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ವಿದ್ಯಾರ್ಥಿನಿ ಶುಕ್ರವಾರ ಬೆಳಗ್ಗೆ ಎರಡನೇ ಹಾಗೂ ಮೂರನೇ ಅವಧಿಯ ವರ್ಗಗಳಿಗೆ ಹಾಜರಾಗಿದ್ದಾಳೆ. ಬೆಳಿಗ್ಗೆ 11 ಗಂಟೆಯಿಂದ 11. 20 ಗಂಟೆಯ ವಿಶ್ರಾಂತಿಯ ಅವಧಿಯಲ್ಲಿ ಅವಳ ವರ್ಗದ ಸಹಪಾಠಿಗಳೊಂದಿಗೆ ವರ್ಗದ ಕೊಠಡಿಯಲ್ಲಿ ಮಾತನಾಡುತ್ತಾ ಕುಳಿತಿದ್ದು ತಿಳಿದುಬಂದಿದೆ, ಈ ಬಗ್ಗೆ ವಿದ್ಯಾರ್ಥಿನಿಯಿಂದ ಹಾಗೂ ಸಹಪಾಠಿಗಳಿಂದ ಪ್ರಾಚಾರ್ಯರಿಗಾಗಲಿ, ಆಡಳಿತಮಂಡಳಿಗಾಗಲಿ ದೂರು ಬಂದಿಲ್ಲ. ನಮ್ಮ ಮಹಾವಿದ್ಯಾಲಯದಲ್ಲಿ ಇದುವರೆಗೂ ರ‍್ಯಾಗಿಂಗ್ ನಡೆದ ಘಟನೆಗಳು ಇಲ್ಲ ಎಂದು ಹೇಳಿದರು.

ನಿರ್ದೇಶಕ, ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಘಟನೆಯಬಗ್ಗೆ ಪೊಲೀಸರೊಂದಿಗೆ ನಾವು ಸಂಪೂರ್ಣ ಸಹಕಾರ ನೀಡುತ್ತೇವೆ. ತಪ್ಪಿತಸ್ಥರ ಮೇಲೆ ಆಡಳಿತ ಮಂಡಳಿ ಕಠೀಣ ಕ್ರಮಕ್ಕೆ ಗೊಳ್ಳಲಿದೆ. ಸೋಮವಾರ ಮೃತ ವಿದ್ಯಾರ್ಥಿನಿಗೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದು ಹೇಳಿದರು. ಬಳಿಕ ಕಾಲೇಜು ಆಡಳಿತ ಸದಸ್ಯರು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ ಅಂಜಲಿ ಮನೆಗೆ ತೆರೆಳಿ ವಿದ್ಯಾರ್ಥಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಸದಸ್ಯರಾದ ವಿಠ್ಠಲಸಾ ಕಾವಡೆ, ಬಾಲಮುಕುಂದ ತಾಪಡಿಯಾ, ವಿಶ್ವನಾಥ ಅಂಗಡಿ, ಅಶೋಕ ಹೆಗಡೆ, ಎಸ್. ಎಸ್. ನಾಯನೇಗಲಿ,ಪ್ರಾಚಾರ್ಯ ಎನ್. ವೈ. ಬಡನ್ನವರ ಇದ್ದರು.

ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ತಾಳಿಕೋಟಿ: ಕಳೆದ 89 ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಸಮುದಾಯದ ಪ್ರತಿಷ್ಠಿತ ಈ ಬ್ಯಾಂಕು ಪ್ರಸಕ್ತ ಆರ್ಥಿಕ ವರ್ಷದಲ್ಲಿ ರು.42.45 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ ಇದಕ್ಕೆ ಆಡಳಿತ ಮಂಡಳಿ ನಿರ್ದೇಶಕರ ಕಳಕಳಿ ಗ್ರಾಹಕರ ಸಹಕಾರ ಮತ್ತು ಬ್ಯಾಂಕ್ ಸಿಬ್ಬಂದಿಗಳ ಪ್ರಾಮಾಣಿಕ ಸೇವೆ ಪ್ರಮುಖ ಕಾರಣವಾಗಿದೆ ಎಂದು ಬ್ಯಾಂಕ್ ಅಧ್ಯಕ್ಷ ಚಂದಾಹುಸೇನ ಖಾಂಜಾದೆ ಹೇಳಿದರು. ಪಟ್ಟಣದ ಈದ್ಗಾ ಶಾದಿ ಮಹಲ್ ದಲ್ಲಿ ಹಮ್ಮಿಕೊಂಡ ಬ್ಯಾಂಕ್ ನ 89ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಬ್ಯಾಂಕು ಕೇವಲ ಒಂದು ಹಣಕಾಸಿನ ಸಂಸ್ಥೆಯಾಗಿರದೆ ಸಮುದಾಯದ ಆಧಾರ ಸ್ತಂಭವಾಗಿದೆ. ಇಬ್ರಾಹಿಂ ಮನ್ಸೂರ್ ಹಾಗೂ ಮುನ್ನಾ ಅರ್ಜುಣಗಿ ಮಾತನಾಡಿ 89 ವರ್ಷಗಳಿಂದ ಮುನ್ನಡೆಯುತ್ತಿರುವ ಸಮುದಾಯದ ಈ ಪ್ರತಿಷ್ಠಿತ ಬ್ಯಾಂಕು ಇಂದು ಹೆಮ್ಮರವಾಗಿ ಬೆಳೆಯಲು ಇದರ ಸಂಸ್ಥಾಪಕ ಸದಸ್ಯರೇ ಕಾರಣ ಅವರ ಪರಿಶ್ರಮ ತ್ಯಾಗದ ಫಲವಾಗಿ ಇಂದು ಈ ಬ್ಯಾಂಕು ಹೆಮ್ಮರವಾಗಿ ಬೆಳೆಯಲು ಕಾರಣವಾಗಿದೆ. ಮೊಹಮ್ಮದ್ ಶಫೀಕ ಇನಾಮದಾರ, ಎಂ.ಎ.ಅರ್ಜುಣಗಿ, ಮಹಮ್ಮದ್ ಆದಮ ಅತ್ತಾರ,ಸಕೀನಾಬಿ ಲಾಹೋರಿ, ಮಾಜಾನಬಿ ಚೆನ್ನೂರ, ಸಿಬ್ಬಂದಿಗಳಾದ ಎಚ್.ಎಮ್. ಹಂಡೆಬಾಗ,ಟಿ.ಎ.ನಮಾಜಕಟ್ಟಿ, ಆರ್.ಕೆ. ನಡುವಿನಮನಿ,ಎಸ್.ಡಿ.ರಂಜಣಗಿ, ಎಸ್. ಎಮ್ .ನಮಾಜಕಟ್ಟಿ,ಎಂ.ಜೆ.ಪಟೇಲ,ಬಿ.ಎ.ಬೀಳಗಿ, ಶಮ್ಮು ಮಕಾಂದಾರ ಎಂ.ಎ.ಮುಲ್ಲಾ, ಹಾಗೂ ಶೇರುದಾರರು ಇದ್ದರು.

ಪವಿತ್ರ ಶ್ರಾವಣ ಮಾಸದಲ್ಲಿ ಐದು ದಿನಗಳ ಕಾಲ ವಿಜೃಂಭಣೆಯಿಂದ ಜರಗುವ ಜಾತ್ರೆ

ಇಂದಿನಿಂದ ಐತಿಹಾಸಿಕ ಮೂಲ ನಂದೀಶ್ವರ ಜಾತ್ರೆಗೆ ಚಾಲನೆ

ಮಂಜು ಕಲಾಲ, ಬಸವನಬಾಗೇವಾಡಿ

ಪಟ್ಟಣದ ಆರಾಧ್ಯ ದೈವ ಮೂಲನಂದೀಶ್ವರ (ಬಸವೇಶ್ವರ) ಜಾತ್ರೆಯು ಇಂದಿನಿಂದ ಐದು ದಿನಗಳವರೆಗೆ ವಿಜೃಂಭಣೆಯಿಂದ ಜರುಗಲಿದ್ದು ಐತಿಹಾಸಿಕ ಜಾತ್ರೆಗೆ ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ, ಶ್ರೀ ಬಸವೇಶ್ವರ ಸೇವಾ ಸಮಿತಿ, ಜಾತ್ರಾ ಉತ್ಸವ ಸಮಿತಿ, ರಾಷ್ಟ್ರೀಯ ಬಸವ ಸೈನ್ಯ ಸಕಲ ಸಿದ್ದತೆಯನ್ನ ಮಾಡಿಕೊಂಡಿದೆ.

ಪ್ರತಿ ವರ್ಷ ಪವಿತ್ರ ಶ್ರಾವಣ ಮಾಸದಲ್ಲಿ ಜರುಗುವ ಮೂಲ ನಂದೀಶ್ವರ ಜಾತ್ರೆಯು ಸಾಕಷ್ಟು ವಿಶೇಷತೆಗಳಿಂದ ಕೂಡಿದೆ. ಒಂದು ತಿಂಗಳ ಕಾಲ ಶ್ರಾವಣ ಮಾಸದಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ಪ್ರತಿದಿನ ನಸುಕಿನ ಜಾವ ಭಕ್ತರು ದೇವರಿಗೆ ಅಭಿಷೇಕ ಮಾಡಿಸಿ ದೇವರ ದರ್ಶನ ಪಡೆಯುತ್ತಾರೆ ನಂಬಿದ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ನಂದೀಶ್ವರನಿಗೆ ಅಪಾರ ಸಂಖ್ಯೆಯ ಭಕ್ತಗಣವಿದೆ.

ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯ, ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯ ಭಕ್ತರು ಜಾತ್ರೆಗೆ ಆಗಮಿಸುವುದು ವಿಶೇಷ.

ಈ ವರ್ಷ ಜಾತ್ರೆಗೆ ಹೆಚ್ಚು ಜನರು ಬರುವ ನಿರೀಕ್ಷೆಯಿದೆ, ಜಾತ್ರೆಯಲ್ಲಿ ಟ್ರಾಫಿಕ್ ಸಮಸ್ಯೆಯಾಗದಂತೆ ಬೈಕ್ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸುವ ಮೂಲಕ ಪೊಲೀಸ್ ಇಲಾಖೆ ಸಕಲ ಸಿದ್ದತೆಯನ್ನ ಮಾಡಿಕೊಂಡಿದೆ.

> ಮೂಲನಂದೀಶ್ವರ (ಬಸವೇಶ್ವರ) ಐತಿಹಾಸಿಕ ಜಾತ್ರಾಮಹೋತ್ಸವವು ಕಳೆದ ಮೂರು ವರ್ಷಗಳಿಂದ ಐದು ದಿನಗಳ ಕಾಲ ನಡೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಎಲ್ಲರ ಸಹಕಾರದಿಂದ ಐತಿಹಾಸಿಕ ಜಾತ್ರೆಗೆ ಮೆರಗು ಬರುತ್ತಿರುವುದು ಹರ್ಷದಾಯಕ ಸಂಗತಿ. ಈ ವರ್ಷದ ಜಾತ್ರಾಮಹೋತ್ಸವದ ಯಶಸ್ವಿಗೆ ವಿವಿಧ ಇಲಾಖೆಯ ಸಹಕಾರ ಸೇರಿದಂತೆ ಎಲ್ಲ ಜನರ ಸಹಕಾರ ಅಗತ್ಯವಾಗಿದೆ.
> -ಈರಣ್ಣ ಪಟ್ಟಣಶೆಟ್ಟಿ, ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ

ಜಾತ್ರೆಯ ಕಾರ್ಯಕ್ರಮಗಳು

ಆ, 11 ರಂದು ಬೆಳಗ್ಗೆ 9.30ಕ್ಕೆ ವಿವಿಧ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿಯವರನ್ನು ದೇವಸ್ಥಾನಕ್ಕೆ ಬರಮಾಡಿಕೊಳ್ಳುವುದು ಬೆಳಿಗ್ಗೆ 10ಕ್ಕೆ ನಂದಿ ಮೂರ್ತಿ ಹೊತ್ತ ಬೆಳ್ಳಿ ಪಲ್ಲಕ್ಕಿ ಉತ್ಸವದ ಭವ್ಯ ಮೆರವಣಿಗೆ ಮೂಲಕ ಪುರಾಣ ಪ್ರಸಿದ್ದ ಹೋರಿಮಟ್ಟಿ ಗುಡ್ಡಕ್ಕೆ ತೆರಳುವುದು ಗುಡ್ಡದ ದೇವಸ್ಥಾದಲ್ಲಿ ವರ್ಷದ ಮಳೆ ಬೆಳೆ ಕುರಿತು ಹೇಳಿಕೆ ನಡೆಯುವುದು. ಸಂಜೆ 7ಕ್ಕೆ ಪಟ್ಟಣದ ಕಂಬಿ ಕಟ್ಟೆಗೆ ಆಗಮಿಸುವ ಪಲ್ಲಕ್ಕಿಯನ್ನು ವಿವಿಧ ವಾದ್ಯ ಆನೆ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಳ್ಳುವುದು. ಇದೇ ಸಂದರ್ಭದಲ್ಲಿ ಸಿ.ಬಿ.ಎಸ್.ಇ ಶಾಲೆಯ ಆವರಣದಲ್ಲಿ ಮದ್ದು ಸುಡುವ ಕಾರ್ಯಕ್ರಮ ಜರುಗುವುದು. ರಾತ್ರಿ 10ಕ್ಕೆ ಬಸವೇಶ್ವರ ದೇವಸ್ಥಾನದಲ್ಲಿ ಪಲ್ಲಕ್ಕಿ ಉತ್ಸವ ಜರುಗುವುದು. ಆ.12 ರಂದು ಬೆಳಗ್ಗೆ 9ಕ್ಕೆ ಗೀಗೀ ಪದ ಚೌಡಕಿ ಡೊಳ್ಳು ಭಾಜನಾ ಪದಗಳು ಜರುಗುವವು ಮಧ್ಯಾಹ್ನ 3ಕ್ಕೆ ಶ್ರೀ ಗುರುಕೃಪಾ ಶಾಲಾ ಆವರಣದಲ್ಲಿ ಜಂಗೀ ಕುಸ್ತಿ ರಾತ್ರಿ 10ಕ್ಕೆ ಶ್ರೀ ಕೃಷ್ಣ ಪಾರಿಜಾತ ನಾಟಕ ಪ್ರದರ್ಶನಗೊಳ್ಳುವುದು. ಶ್ರೀ ಜಗಜ್ಯೋತಿ ಬಸವೇಶ್ವರ ಭಕ್ತಿ ಪ್ರಧಾನ ನಾಟಕ ಪ್ರದರ್ಶನ, 14 ರಂದು ಸಂಜೆ ಖ್ಯಾತ ಟಿವಿ ಕಲಾವಿದರಿಂದ ಹಾಸ್ಯ ಮತ್ತು ರಸಮಂಜರಿ ಕಾರ್ಯಕ್ರಮ, 15 ರಂದು ಸಂಜೆ 6 ಘಂಟೆಗೆ ಝಿ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿಗಳು ಗೋಪಾಲ ಹೂಗಾರ, ಗೋಪಾಲ ಇಂಚಗೇರಿ ನೇತೃತ್ವದಲ್ಲಿ ಜಾನಪದ ಸಂಜೆ ಜರುಗಲಿದೆ.

ಸಮಾಚಾರ ಸಣ್ಣದಲ್ಲ

ನುಲಿಯ ಚಂದಯ್ಯ ಜಯಂತಿ ಆಚರಣೆ

ಯರಗಟ್ಟಿ: ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ನುಲಿಯ ಚಂದಯ್ಯ ಜಯಂತಿ ಆಚರಣೆ ಮಾಡಲಾಯಿತು. ಈ ವೇಳೆ ಪ. ಪಂ. ಸದಸ್ಯರಾದ ನಿಖಿಲ ಪಾಟೀಲ, ಹನುಮಂತ ಹಾರೂಗೊಪ್ಪ, ಪ. ಪಂ. ಅಧಿಕಾರಿಗಳಾದ ಆನಂದ ಬೆಳವಿ, ಮಹಾದೇವ ಬಡಿಗೇರ, ರಾಜು ಹಿರೇಮಠ, ಭಜಂತ್ರಿ ಸಮಾಜದ ಸುರೇಶ ಭಜಂತ್ರಿ, ರಾಜು ಭಜಂತ್ರಿ, ರುದ್ರಪ್ಪ ಭಜಂತ್ರಿ, ಅಭಿಷೇಕ ಭಜಂತ್ರಿ, ಹನುಮಂತ ಭಜಂತ್ರಿ, ಕಿರಣ ಭಜಂತ್ರಿ, ಶಿವಾನಂದ ಭಜಂತ್ರಿ, ಶಿವಾಜಿ ಭಜಂತ್ರಿ ಸೇರಿದಂತೆ ಪಟ್ಟಣ ಪಂಚಾಯಿತಿ ಸಿಬ್ಬಂದಿ ವರ್ಗದವರು ಇದ್ದರು.

ಮರಕ್ಕೆ ಕಾರು ಡಿಕ್ಕಿ: ಇಬ್ಬರ ಸಾವು

ಬೈಲಹೊಂಗಲ: ತಾಲೂಕಿನ ಬೆಳಗಾವಿ-ಬಾಗಲಕೋಟ ಮುಖ್ಯ ರಸ್ತೆಯ ಸೋಮನಟ್ಟಿ ಗ್ರಾಮದ ಬಳಿ ಮರಕ್ಕೆ ಕಾರು ಡಿಕ್ಕಿಯಾಗಿ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿ ಒಬ್ಬನು ಗಂಭೀರವಾಗಿ ಗಾಯಗೊಂಡ ಘಟನೆ ಭಾನುವಾರ ನಡೆದಿದೆ. ಬೆಳಗಾವಿ ತಾಲೂಕಿನ ಕರಿಕಟ್ಟಿ ಗ್ರಾಮದ ಕಾರು ಚಾಲನೆ ಮಾಡುತ್ತಿದ್ದ ಯುವಕ ಸಚಿನ ಯಲ್ಲಪ್ಪ ಬೋರಿಮರದ (21) ಮತ್ತು ಬಾಲಕೃಷ್ಣ ಬಸಪ್ಪ ಸುಲದಾಳ (19) ಮೃತರು. ಲಕ್ಕಪ್ಪ ಯಲ್ಲಪ್ಪ ಬೋರಿಮರದ (23) ಗಾಯಗೊಂಡು ಬೆಳಗಾವಿ ಖಾಸಗಿ ಆಸ್ಪತ್ರೆ ಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಸ್ವಿಫ್ಟ್ ಡಿಸೈರ ಕಾರು ಯರಗಟ್ಟಿ ಕಡೆಯಿಂದ ಬೆಳಗಾವಿ ಕಡೆ ತೆರಳುವಾಗ ಸೋಮನಟ್ಟಿ ಗ್ರಾಮದ ಬಳಿ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಯಾಗಿ ಈ ದುರ್ಘಟನೆ ಸಂಭವಿಸಿದೆ. ಘಟನಾ ಸ್ಥಳಕ್ಕೆ ಡಿ ವೈ ಎಸ್ ಪಿ ಡಾ. ವೀರಯ್ಯ ಹಿರೇಮಠ, ಪಿ ಐ ಗಜಾನನ ನಾಯ್ಕ, ಪಿ ಎಸ್ ಐ ಈರಪ್ಪ ರಿತ್ತಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿದರು. ಗಾಯಳುಗಳನ್ನು ಆಸ್ಪತ್ರೆ ಗೆ ಸಾಗಿಸುವಲ್ಲಿ ಪೊಲೀಸರು ಹಾಗೂ ಗ್ರಾಮಸ್ಥರು ನೇರವಾದರು. ನೇಸರಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎರಡು ಪ್ರೌಢಶಾಲೆ ಉನ್ನತೀಕರಣ

ಕಾಗವಾಡ: ಗ್ರಾಮೀಣ ಭಾಗದ ರೈತರ ಮಕ್ಕಳಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕಾಗವಾಡ ವಿಧಾನಸಭಾ ಮತಕ್ಷೇತ್ರದ ಎರಡು ಶಾಲೆಗಳನ್ನು ಪ್ರಾಥಣಿಕ ಶಾಲೆಗಳನ್ನು ಉನ್ನತಿಕರಿಸಿ ಪ್ರಾಢಶಾಲೆಗಳನ್ನಾಗಿ ಮಾರ್ಪಾಡಿಸಲಾಗಿದೆ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದರು. ಅವರು ಇಂದು ಸುದ್ದಿಗಾರೊಂದಿಗೆ ಮಾತನಾಡುವಾಗ ಈ ವಿಷಯ ತಿಳಿಸಿದರು.ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿ ಭಾಗವಾಡ ಬೇವನೂರ ಹಾಗೂ ಉಗಾರದ ಲಕ್ಷ್ಮೀ ಗುಡಿಯಲ್ಲಿ ಎರಡು ಪ್ರೌಢಶಾಲೆಗಳನ್ನು ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರು ಮಂಜೂರುಗೊಳಿಸಿರುದಾಗಿ ತಿಳಿಸಿದರು. ರಾಜ್ಯದಲ್ಲಿ ಒಟ್ಟು 147 ಪ್ರಾಥಮಿಕ ಶಾಲೆಗಳನ್ನು ಉನ್ನತಿಕರಿಸಿ ಪ್ರಾಢಶಾಲೆಗಳನ್ನಾಗಿ ಮಂಜೂರು ಮಾಡಲಾಗಿದೆ. ಅದರಲ್ಲಿ ಕಾಗವಾಡ ವಿಧಾನಸಭಾ ಮತಕ್ಷೇತ್ರದ ಎರಡು ಶಾಲೆಗಳನ್ನು ಬೇವನೂರ, ಮತ್ತು ಉಗಾರದ ಲಕ್ಷ್ಮೀ ಗುಡಿಯಲ್ಲಿ ಮಂಜೂರಾಗಿವೆ ಎಂದರು. ಕಳೆದ ಹಲವು ವರ್ಷಗಳಿಂದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷರನ್ನು ನೇಮಕಾತಿಯಾಗಿಲ್ಲ. ಈ ಕುರಿತು ಮಾತನಾಡಿದ ಶಾಸಕ ರಾಜು ಕಾಗೆ ಶಿಕ್ಷಕರ ನೇಮಕಾತಿಯ ಬಗ್ಗೆ ಸರಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ ಶಿಘ್ರವೇ ಶಿಕ್ಷಕರ ನೇಮಕಾತಿಯಾಗಲಿದೆ ಎಂದರು. ಈ ವೇಳೆ ಮುಖಂಡರಾದ ವಿನಾಯಕ ಬಾಗಡಿ, ಘೂಳಪ್ಪ ಜತ್ತಿ, ಶಿವಾನಂದ ಗೊಲಭಾಂವಿ, ಮಲ್ಲಿಕಾರ್ಜುನ ದಳವಾಯಿ, ಬಾಹುಸಾಹೇಬ ಪತ್ತಾರ, ಓಂಪ್ರಾಶ ಡೊಳ್ಳಿ, ರಾಜು ಮದಭಾವಿ, ಸೇರಿದಂತೆ ಅನೇಕರು ಇದ್ದರು.

ಕಲ್ಯಾಣ ಮಂಟಪ ಉದ್ಘಾಟನೆ ಇಂದು

ಗೋಕಾಕ: ತಾಲೂಕಿನ ಮರಡಿ ಶಿವಾಪೂರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ದಿ.ನೀಲಮ್ಮ ಮತ್ತು ದಿ.ಸಿದ್ದಪ್ಪ ಮಲ್ಲಪ್ಪ ಶೀಗಿಹಳ್ಳಿ ಇವರ ಸ್ಮರಣಾರ್ಥ ಈಶ್ವರ ಶೀಗಿಹಳ್ಳಿ ಹಾಗೂ ಸಹೋದರರು ನಿರ್ಮಿಸಿದ ಶ್ರೀ ಮಲ್ಲಿಕಾರ್ಜುನ ಕಲ್ಯಾಣ ಮಂಟಪದ ಉದ್ಘಾಟನೆಯನ್ನು ದಿ.11 ರಂದು ಮುಂಜಾನೆ 10.30ಗಂಟೆಗೆ ಜರುಗಲಿದೆ. ಸಮಾರಂಭದ ಸಾನಿಧ್ಯವನ್ನು ಅರಳಕಟ್ಟಿಯ ಶ್ರೀ ನೀಜಗುಣ ಮಹಾಸ್ವಾಮಿಗಳು, ಮಮದಾಪೂರದ ಶ್ರೀ ಚರಮೂರ್ತೇಶ್ವರ ಮಹಾಸ್ವಾಮಿಗಳು, ಮರಡಿ ಶಿವಾಪೂರದ ಶ್ರೀ ಗಂಗಯ್ಯ ಹಿರೇಮಠ ಸ್ವಾಮಿಗಳು ವಹಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕ ರಮೇಶ ಜಾರಕಿಹೊಳಿ, ಉದ್ಘಾಟನೆಯನ್ನು ಲೋಕೋಪ ಯೋಗಿ ಸಚಿವ ಹಾಗೂ ಬೆಳಗಾವಿ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಲಿದ್ದಾರೆ. ಅತಿಥಿಗ ಳಾಗಿ ವಿಧಾನ ಪರಿಷತ ಸದಸ್ಯ ಲಖನ ಜಾರಕಿಹೊಳಿ, ನಿವೃತ್ತ ಕುಲಸಚಿವ ಡಾ.ಎಸ್ ಎಸ್ ಪಟಗುಂದಿ, ಚಂದ್ರಶೇಖರ ಕೊಣ್ಣೂರ, ಲಕ್ಷ್ಮಣ ತಪಶಿ, ಮಲ್ಲಪ್ಪ ಖಡಕಭಾಂವಿ ಆಗಮಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ನ್ಯಾಯವಾದಿ ಈಶ್ವರ ಶೀಗಿಹಳ್ಳಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

{ ಡಿ.ಕೆ.ಶಿವಕುಮಾರ್ } ಉಪ ಮುಖ್ಯಮಂತ್ರಿ

ಮಹಾತ್ಮ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿವೆ. ಇಂದು ಆ ಸ್ಥಾನದಲ್ಲಿ ನಮ್ಮವರೇ ಆದ ಮಲ್ಲಿಕಾರ್ಜುನ ಖರ್ಗೆ ಅವರು ಕುಳಿತಿದ್ದಾರೆ. ಇದರ ನೆನಪಿನಲ್ಲಿ ರಾಜ್ಯದ 100 ಕಡೆ ಕಾಂಗ್ರೆಸ್ ಕಚೇರಿ ನಿರ್ಮಿಸುವ ಗುರಿಯಿದೆ. ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಈ ಹುಟ್ಟು ಸಾವಿನ ಮಧ್ಯೆ, ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ.

ಶ್ರೀನುಲಿಯ ಚಂದಯ್ಯನವರ ಜಯಂತಿ | ಪ್ರಾಚಾರ್ಯ ಎಂ.ಕೆ.ಭಜಂತ್ರಿ ಹೇಳಿಕೆ

ಸಮಾಜ ಸುಧಾರಣೆಯಲ್ಲಿ ನುಲಿಯ ಚಂದಯ್ಯನವರ ಪಾತ್ರ ದೊಡ್ಡದು

ಬೆಳಗಾವಿ: ವಚನಕಾರ ಬಸವಣ್ಣನವರ ಮಾತನ್ನು ಚಾಚುತಪ್ಪದೆ ಪಾಲಿಸಿ ಅವರ ತೋರಿದ ದಾರಿಯಲ್ಲಿ ನಡೆದು ಸಮಾಜ ಸುಧಾರಣೆಗೆ ತಮ್ಮ ಜೀವನವನ್ನು ತ್ಯಾಗ ಮಾಡಿದವರು ನೂಲಿ ಚಂದಯ್ಯನವರು ಎಂದು ನಂದಗಡ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಎಂ. ಕೆ.ಭಜಂತ್ರಿ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಹಯೋಗದಲ್ಲಿ ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಜರುಗಿದ ಶ್ರೀನುಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನುಭವದ ಮುಂದೆ ಯಾವ ಪದವಿಯು ದೊಡ್ಡದಲ್ಲ ಎಂಬ ಅವರ ಸಂದೇಶ ಮುಂದೆ ಬರುವ ಪೀಳಿಗೆಗಳಿಗೆ ತಮ್ಮ ಜೀವನದಲ್ಲಿ ಒಂದು ಪಾಠ. ಸಾಮಾಜದಲ್ಲಿ ನಾವು ಹೇಗೆ ಬದುಕುತ್ತೇವೆ, ಹೇಗೆ ನಡೆದುಕೊಳ್ಳುತೇವೆ ಎಂಬುದನ್ನು ನಮ್ಮ ಮಕ್ಕಳು ಅನುಕರಣೆ ಮಾಡುತ್ತಾರೆ.

ನಾವು ಬದಕುವ ದಾರಿ, ಜೀವನ ಶೈಲಿ, ಸಂಸ್ಕೃತಿ, ವಿನಯತೆಯನ್ನು ಅಳವಡಿಸಿಕೊಂಡು ನಡೆಯುತ್ತಾರೆ. ಸಮಾಜ ಬದಲಾಗಬೇಕು ಎಂದರೆ ಮೊದಲು ನಾವು ಬದಲಾಗಬೇಕು ಎಂಬ ಭಾವನೆಯನ್ನು ಪ್ರಾಚಾರ್ಯರಾದ ಎಮ್. ಕೆ. ಭಜಂತ್ರಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಸವಣ್ಣನವರ 12 ನೇ ಶತಮಾನದಲ್ಲಿ ಜಾತಿ-ಭೇದ ತೊರೆದರು ದೇಶಕ್ಕೆ ಮಾದರಿ ಸಂದೇಶ ನೀಡಿದರು. ಸಮಾಜದಲ್ಲಿ ಯಾವ ರೀತಿಯಾಗಿ ಬದುಕಿ, ಇನೊಬ್ಬರಿಗೆ ಮಾದರಿಯಾಗಬೇಕು.

ಶ್ರೀನುಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮವನ್ನು ಎಂ.ಕೆ.ಭಜಂತ್ರಿ ಅವರು ಉದ್ಘಾಟಿಸಿದರು.

> **ನಾವು ಬದಕುವ ದಾರಿ, ಜೀವನ ಶೈಲಿ, ಸಂಸ್ಕೃತಿ, ವಿನಯತೆಯನ್ನು ಅಳವಡಿಸಿಕೊಂಡು ನಡೆಯುತ್ತಾರೆ. ಸಮಾಜ ಬದಲಾಗಬೇಕು ಎಂದರೆ ಮೊದಲು ನಾವು ಬದಲಾಗಬೇಕು.**
> -ಎಂ.ಕೆ.ಭಜಂತ್ರಿ, ಪ್ರಾಚಾರ್ಯ, ಪದವಿ ಪೂರ್ವ ಕಾಲೇಜು

ಶ್ರೀನುಲಿಯ ಚಂದಯ್ಯನವರ ಜೀವನ ಸಾಧನೆಗಳ ಕುರಿತು ಮಾತನಾಡುತ್ತಾ ಮನದಲಿ ಕಪಟ, ಮೋಸ ವಂಚನೆಯನ್ನು ತೊರೆದು ಪ್ರಾಮಾಣಿಕತೆಯಿಂದ ಸತ್ಯ, ನ್ಯಾಯ, ನಿಷ್ಠೆಯಿಂದ ಸರಳ ಜೀವನವನ್ನು ನಡೆಸಿದವರು ಎಂದು ಹಿರಿಯ ಸಾಹಿತಿ ಡಾ ವಾಯ್. ಎಂ. ಯಾಕೊಳ್ಳಿ ಅವರು ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ನುಲಿಯ ಚಂಡಯ್ಯ ಸಮಿತಿ ಜಿಲ್ಲಾ ಅಧ್ಯಕ್ಷ ಶಂಕರ ಭಜಂತ್ರಿ, ಸಂಚಾಲಕ ಯಲ್ಲಪ್ಪಾ ಭಜಂತ್ರಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ಬಸಪ್ಪ.ಎಚ್. ಭಜಂತ್ರಿ ಸೇರಿದಂತೆ ಸಮಾಜದ ಮುಖಂಡರು ಸಮಾಜದಲ್ಲಿ ಉಪಸ್ಥಿತರಿದ್ದರು.

ರಾಯರ ಮಠದ ಅಭಿವೃದ್ಧಿಗೆ ಬದ್ಧ

ಅಥಣಿ ಶ್ರೀ ರಾಘವೇಂದ್ರ ಸ್ವಾಮೀಜಿ ಮಠದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರನ್ನು ಸನ್ಮಾನಿಸಲಾಯಿತು.

ಅಥಣಿ: ಶ್ರೀ ಗುರು ರಾಘವೇಂದ್ರ ಸ್ವಾಮೀಜಿ ಕಲಿಯುಗದ ಕಲ್ಪವೃಕ್ಷರಾಗಿ ತಮ್ಮ ಭಕ್ತರನ್ನು ಉದ್ಧರಿಸುತ್ತಿದ್ದಾರೆ ಎಂದು ಮಾಜಿ ಉಪ ಮುಖ್ಯಮಂತ್ರಿ, ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ರವಿವಾರ ಅಭಿನವ ಮಂತ್ರಾಲಯ ಎಂದೇ ಪ್ರಖ್ಯಾತಿ ಪಡೆದ ಅಥಣಿ ಶ್ರೀ ರಾಘವೇಂದ್ರ ಸ್ವಾಮೀಜಿ ಮಠದಲ್ಲಿ ಗೌರವ ಸತ್ಕಾರ ಸ್ವೀಕರಿಸಿ ಮಾತನಾಡುತ್ತಿದ್ದರು. ರಾಜಕೀಯ ಜೀವನ ಪ್ರವೇಶಿಸುವ ಮೊದಲಿನಿಂದಲೂ ನಾನು ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತನಾದ ನಾನು ವರ್ಷಕ್ಕೆ ಎರಡು ಬಾರಿಯಾದರೂ ಮಂತ್ರಾಲಯಕ್ಕೆ ಹೋಗಿ ರಾಯರ ವೃಂದಾವನದ ದರ್ಶನ ಪಡೆಯುತ್ತೇನೆ ಮತ್ತು ನನ್ನ ರಾಜಕೀಯ ಜೀವನ ಯಶಸ್ವಿಯಾಗುವಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಅನುಗ್ರಹ ಕೂಡ ಇದೆ ಎಂದ ಅವರು ಅಥಣಿ ಶ್ರೀ ರಾಘವೇಂದ್ರ ಮಠದ ಅಭಿವೃದ್ಧಿಗಾಗಿ ನಾನು ಸದಾ ಬದ್ಧನಾಗಿರುವೆ ಎಂದರು.

ಶ್ರೀ ರಾಘವೇಂದ್ರ ಸ್ವಾಮಿ ಮಠದ ವಿಶ್ವಸ್ಥ ಮಂಡಳಿಯ ಅನೀಲರಾವ ದೇಶಪಾಂಡೆ (ಸರಾಫ), ಅನೀಲ ದೇಶಪಾಂಡೆ (ಹಿಡಕಲ್), ಎಲ್.ವ್ಹಿ.ಕುಲಕರ್ಣಿ, ರಾಜು ಪಾಟೀಲ, ಶ್ರೀನಿವಾಸಾಚಾರ್ಯ ಜೋಶಿ ಶಾಸಕ ಲಕ್ಷ್ಮಣ ಸವದಿ ಇವರನ್ನು ಗೌರವಿಸಿದರು.

ಈ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ ರಾಜಶೇಖರ ಗುಡೋಡಗಿ, ಮಲ್ಲಿಕಾರ್ಜುನ ಬುಟಾಳಿ ಇವರನ್ನೂ ಸಹ ಶ್ರೀ ಮಠದಿಂದ ಸತ್ಕರಿಸಲಾಯಿತು. ಧುರೀಣರಾದ ಶ್ರೀರಾಮ ಕಟ್ಟಿ, ಅಜಿತ ಇನಾಮದಾರ, ಸುಧೀಂದ್ರ ಬಾದರಾಯಣಿ, ವಾಸುದೇವ ಕುಲಕರ್ಣಿ, ಸೌರಭ ಮಾಶ್ಯಾಳ, ವೆಂಕಟೇಶ ದೇಶಪಾಂಡೆ, ಅನೀಲ ಕುಲಕರ್ಣಿ, ದೀಪಕ್ ಟಿಕಾರೆ, ವೆಂಕಟೇಶ ಕುಲಕರ್ಣಿ, ಅಥರ್ವ ದೇಶಪಾಂಡೆ, ಶ್ರೀಹರಿ ಕುಲಕರ್ಣಿ, ಅಜಯ ದೇಶಪಾಂಡೆ, ಭಾರ್ಗವ ಕೊಕಟನೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶ್ರೀರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆ ನಿಮಿತ್ಯ ಸಾವಿರಾರು ಭಕ್ತರು ಅನ್ನ, ಪ್ರಸಾದ ಸ್ವೀಕರಿಸಿದರು. ಸಂಜೆ ಬೆಂಗಳೂರಿನ ಅನುರಾಧಾ .ಎ. ಇವರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ಎಚ್ಚರೇಶ್ವರ ದೇವರ ರಥೋತ್ಸವ

ಶ್ರೀಎಚ್ಚರೇಶ್ವರ ದೇವರ ರಥೋತ್ಸವ ಭಕ್ತರ ಹರ್ಷೋದ್ಗಾರದ ಮಧ್ಯೆ ವಿಜೃಂಭಣೆಯಿಂದ ಜರುಗಿತು.

ರಾಮದುರ್ಗ: ಪಟ್ಟಣದ ಕುದರೆ ಬಯಲು ಮೈದಾನದಲ್ಲಿರುವ ಶ್ರೀಎಚ್ಚರೇಶ್ವರ ದೇವರ ರಥೋತ್ಸವ ಭಕ್ತರ ಹರ್ಷೋದ್ಗಾರದ ಮಧ್ಯೆ ಶನಿವಾರ ವಿಜೃಂಭಣೆಯಿಂದ ಜರುಗಿತು.

ಹಿಂದೂ ಮುಸ್ಲಿಂ ಸಮುದಾಯದ ಸೌಹಾರ್ಧತೆ ಪ್ರತೀಕವಾದ ಶ್ರೀಎಚ್ಚರೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಪ್ರತಿ ವರ್ಷ ಶ್ರಾವಣಮಾಸದ ನೂಲು ಹುಣ್ಣಿಮೆ ದಿವಸ ಜರುಗುತ್ತದೆ. ಭಕ್ತರು ಎಚ್ಚರೇಶ್ವರ ದೇವರ ದರ್ಶನ ಪಡೆದು ಭಕ್ತಿ ಭಾವ ಮೆರೆದರು. ರಥಕ್ಕೆ ಉತ್ತತ್ತಿ, ಬಾಳೆಹಣ್ಣು ಸಮರ್ಪಿಸಿದ ಭಕ್ತರು ಇಷ್ಟಾರ್ಥ ಪ್ರಾಪ್ತಿಗೆ ಪ್ರಾರ್ಥಿಇಸಿದರು. ಕರಡಿ ಮಜಲು ಹಾಗೂ ವಾದ್ಯಮೇಳಗಳು ರಥೋತ್ಸವದ ಕಳೆ ಹೆಚ್ಚಿಸಿದವು.

ಮತ್ತೆ ಜೊಲ್ಲೆ ಮನೆ ಕದ ತಟ್ಟಿದ ಹಿರಾಶುಗರ ನಿರ್ದೇಶಕರು

ಸಂಕೇಶ್ವರ: ಕಳೆದ ಕೆಲವು ತಿಂಗಳುಗಳಿಂದ ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಡೆಯುತ್ತಿರುವ ನಾಟಕೀಯ ಬೆಳವಣಿಗೆಗಳು ಮತ್ತೆ ಮುಂದೆವರೆದಿದ್ದು, ರವಿವಾರ ನಡೆದ ಬೆಳವಣಿಗೆಯಲ್ಲಿ ಎ.ಬಿ.ಪಾಟೀಲ ಹಾಗೂ ಕತ್ತಿ ಕುಟುಂಬದ ಸಂಪರ್ಕ ಕೈಬಿಟ್ಟ ಕಾರಖಾನೆ ನಿರ್ದೇಶಕರು ಮತ್ತೆ ಅಣ್ಣಾಸಾಹೇಬ ಜೊಲ್ಲೆ ಅವರ ಮನೆ ಕದ ತಟ್ಟಿದ್ದಾರೆ. ಇದರಿಂದ ಕತ್ತಿ ಹಾಗೂ ಎ.ಬಿ.ಪಾಟೀಲ ಅವರಿಗೆ ಹಿರಶುಗರದಲ್ಲಿ ಹಿನ್ನಡೆ ಉಂಟಾಗಿದೆ.

ಕಳೆದ ಕೆಲವು ದಿನಗಳಿಂದ ಸದಾ ಸುದ್ದಿಯಲ್ಲಿ ಇರುವ ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರಖಾನೆಯ ನಿರ್ದೇಕರು ಕಳೆದ 30 ವರ್ಷಗಳಿಂದ ಕತ್ತಿ ಕುಟುಂಬದ ಹಿಡಿತದಲ್ಲಿದ್ದ ಕಾರ್ಖಾನೆಯನ್ನು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರ ತೆಕ್ಕೆಗೆ ನೀಡಿದ್ದರು.

ಕೆಲವು ದಿನಗಳ ಬಳಿಕ ಮತ್ತೆ ಬಾಲಚಂದ್ರ ಜಾರಕಿಹೊಳಿ ಹಾಗೂ ಜೊಲ್ಲೆ ಅವರನ್ನು ಕಡೆಗಣಿಸಿ ಮಾಜಿ ರಾಜ್ಯಸಭೆ ಸದಸ್ಯ ಪ್ರಭಾಕರ ಕೋರೆ ಅವರ ಬಳಿ ಹೋಗಿ ಹಿರಣ್ಯಕೇಶಿ ಕಾರಖಾನೆಯನ್ನು ನೀವೆ ಮುನ್ನಡಿಸಿ ಎಂದು ವಿನಂತಿಸಿಕೊಂಡಿದ್ದರು. ಇದಕ್ಕೆ ಕೋರೆ ಅವರು ಸರಿಯಾಗಿ ಪ್ರತ್ಯುತ್ತರ ನೀಡದ ಹಿನ್ನಲೆಯಲ್ಲಿ ಮತ್ತೆ ವಾಪಸಾಗಿದ್ದರು.

ಅದರ ಬಳಿಕ ಮೊನ್ನೆ ಸಂಕೇಶ್ವರದಲ್ಲಿ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಮಾಜಿ ಸಚಿವ ಎ.ಬಿ.ಪಾಟೀಲ ಹಾಗೂ ಮಾಜಿ ಸಂಸದ ರಮೇಶ ಕತ್ತಿ ಅವರಿಬ್ಬರು ಒಂದಾಗಿದ್ದ ಹಿನ್ನಲೆಯಲ್ಲಿ ಮತ್ತೆ ಹಿರಣ್ಯಕೇಶಿ ಕಾರಖಾನೆಯನ್ನು ಕತ್ತಿ ಕುಟುಂಬಕ್ಕೆ ಹಾಗೂ ಎ.ಬಿ.ಪಾಟೀಲ ಅವರ ಜೊತೆ ಸೇರಿ ಮುನ್ನಡೆಸುವ ತೀರ್ಮಾನ ಮಾಡಿದ್ದರು.

ಆದರೆ ಹಿರಣ್ಯಕೇಶಿ ಸಕ್ಕರೆ ಕಾರಖಾನೆಯನ್ನು ಮುನ್ನಡೆಸುವಲ್ಲಿ ಎ.ಬಿ.ಪಾಟೀಲ ಹಾಗೂ ಕತ್ತಿ ಅವರು ಹಿನ್ನಡೆ ಉಂಟಾಗಿದ್ದು, ದುಡ್ಡು ಸಂಗ್ರಹ ಮಾಡುವಲ್ಲಿ ಹಿನ್ನಡೆ ಮಾಡಿದ್ದಾರೆಂಬ ಕಾರಣ ತಾವು ಮತ್ತೆ ಅಣ್ಣಾಸಾಹೇಬ ಜೊಲ್ಲೆ ಹಾಗೂ ಬಾಲಚಂದ್ರ ಜಾರಕಿಹೊಳಿ ಅವರ ಜೊತೆಗೆ ಹೋಗಿರುವದಾಗಿ ನಿರ್ದೇಶಕರು ತಿಳಿಸಿದ್ದಾರೆ.

ಈ ಬಗ್ಗೆ ರವಿವಾರ ಮಧ್ಯಾಹ್ನ ಅಣ್ಣಾಸಾಹೇಬ ಜೊಲ್ಲೆ ಅವರನ್ನು ಭಿವಂಶಿ ಗ್ರಾಮದಲ್ಲಿರುವ ಜೊಲ್ಲೆ ಫಾರ್ಮ ಹೌಸನಲ್ಲಿ ಭೇಟಿ ಮಾಡಿದ ಹಿರಾಶುಗರ ನಿರ್ದೇಶಕರು ಚರ್ಚೆ ನಡೆಸಿ ಬಾಲಚಂದ್ರ ಜಾರಕಿಹೊಳಿ ಹಾಗೂ ಜೊಲ್ಲೆ ಅವರ ಮುಂದಾಳತ್ವದಲ್ಲಿ ಕಾರಖಾನೆ ಮುನ್ನಡೆಸುವ ತೀರ್ಮಾನ ಕೈಗೊಂಡಿದ್ದಾರೆ.

ನಾನಾಸಾಹೇಬ ಪಾಟೀಲ ಅಭ್ಯರ್ಥಿಯಾಗಿ ಸ್ಪರ್ಧೆ: ಸಚಿವ

ಚನ್ನಮ್ಮನ ಕಿತ್ತೂರು: ಅಕ್ಟೋಬರ್ 19 ರಂದು ನಡೆಯುವ ಬಿಡಿಸಿಸಿ ಬ್ಯಾಂಕ್ ಚುನಾವಣೆಗೆ ನಾನಾಸಾಹೇಬ ಪಾಟೀಲ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತಾರೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಘೋಷಿಸಿದರು.

ಇಲ್ಲಿಯ ಚನ್ನಬಸಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷ ಹಾಗೂ ಆಡಳಿತ ಮಂಡಳಿಯ ಸದಸ್ಯರ ಸೌಹಾರ್ದ ಸಭೆಯಲ್ಲಿ ಮಾತನಾಡಿದ ಅವರು, ಸಭೆ ಆಗಮಿಸಿದ ಅದ್ಯಕ್ಷರು, ಉಪಾಧ್ಯಕ್ಷ, ಸದಸ್ಯರು ಹಾಗೂ ಕಾರ್ಯದರ್ಶಿ ಸೇರಿ ಒಟ್ಟಾರೆ ಶ್ರಮಿಸಿದರೆ ನಮ್ಮಅಭ್ಯರ್ಥಿ ನಾನಾಸಾಹೇಬ ಗೆಲುವು ಸುಲಭವಾಗಿರುತ್ತದೆ. 32 ಸೊಸೈಟಿಗಳಲ್ಲಿ 18 ರಿಂದ 20 ಸೊಸೈಟಿಯ ಮತದಾರರು ನಮ್ಮ ಅಭ್ಯರ್ಥಿಗೆ ಪರವಾಗಿ ಇದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಕಿತ್ತೂರು ಕ್ಷೇತ್ರದ ಅಭಿವೃದ್ಧಿಗೆ ಪ್ರತಿ ವರ್ಷ5 ಕೋಟಿ ಅನುದಾನ ನೀಡಲಾಗುತ್ತದೆ. ಈ ವರ್ಷ ಕೂಡಾ 5 ಕೋಟಿ ಅನುದಾನ ನೀಡಲಾಗುತ್ತದೆ ಎಂದರು. ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ, ಸೊಸೈಟಿಯ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರ ಒತ್ತಾಯದ ಮೇಲೆ ಸಹೋದರ ನಾನಾಸಾಹೇಬ ಬಿಡಿಸಿಸಿ ಬ್ಯಾಂಕ್ ಚುನಾವಣೆ ಸ್ಪರ್ಧಿಸಿದ್ದಾರೆ. ಸುಮಾರು 20 ಕ್ಕೂ ಹೆಚ್ಚು ಸೊಸೈಟಿ ಮತದಾರರು ಮತ ನೀಡಿ ಗೆಲ್ಲಿಸುವ ವಿಶ್ವಾಸವಿದೆ ಎಂದರು. ಡಿಸಿಸಿ ಬ್ಯಾಂಕ್ ಚುನಾವಣೆ ಅಭ್ಯರ್ಥಿ ನಾನಾಸಾಹೇಬ ಪಾಟೀಲ, ಬ್ಲಾಕ್ ಅಧ್ಯಕ್ಷ ಸಂಗನಗೌಡ ಪಾಟೀಲ, ಶಿವನಗೌಡ ಪಾಟೀಲ, ದೇವೇಂದ್ರ ಪಾಟೀಲ ಮಾತನಾಡಿದರು. ಪಟ್ಟಣ ಪಂಚಾಯತ ಅಧ್ಯಕ್ಷ ಜೈಸಿದ್ದರಾಮ ಮಾರಿಹಾಳ, ಸ್ಥಾಯಿ ಸಮಿತಿ ಅಧ್ಯಕ್ಷ ಎಂ ಎಫ್ ಜಕಾತಿ, ನಾನಾಸಾಹೇಬ ಪಾಟೀಲ, ಶಂಕರ ಹೊಳಿ, ಶೇಕಪ್ಪ ಯರಗೊಪ್ಪ, ಸಂಗನಗೌಡ ಪಾಟೀಲ, ಸಿ ಅರ್ ಪಾಟೀಲ, ರಾಜೇಂದ್ರ ಇನಾಮದಾರ, ಸಾವಂತ ಕಿರಬನವರ, ಬಸವರಾಜ ಹಳೆಮನಿ, ಸುನೀಲ ಘಿವಾರಿ ಸೇರಿದಂತೆ ಅನೇಕರು ಇದ್ದರು. ಅನಿಲ ಎಮ್ಮಿ ಕಾರ್ಯಕ್ರಮ ನಿರೂಪಿಸಿದರು.

ಆಡಳಿತ ಮಂಡಳಿಯ ಸದಸ್ಯರ ಸೌಹಾರ್ದ ಸಭೆಯನ್ನು ಸಚಿವ ಸತೀಶ ಜಾರಕಿಹೊಳಿ ಅವರು ಉದ್ಘಾಟಿಸಿದರು.

ಮಿನಿ ಕ್ಯಾಟಗರಿ ಜುಡೋ ಚಾಂಪಿಯನ್‌ಶಿಪ್ ಉದ್ಘಾಟನೆ

ರಾಮದುರ್ಗ: ಜುಡೋ ಕೇವಲ ಕ್ರೀಡೆಯಷ್ಟೆ ಅಲ್ಲ, ತಾಳ್ಮೆ, ಶಿಸ್ತು, ಆತ್ಮವಿಶ್ವಾಸ ಮತ್ತು ಸಂಘಟನೆಯನ್ನು ಕಲಿಸುವ ಕಲೆಯೂ ಕೂಡಾ ಆಗಿದೆ. ನಮ್ಮ ಶಾಲೆಯ ಹಲವು ವಿದ್ಯಾರ್ಥಿಗಳು ಈಗ ಜುಡೊನಲ್ಲಿ ತೀವ್ರ ಆಸಕ್ತಿ ತೋರಿಸುತ್ತಿದ್ದು, ಜಿಲ್ಲೆ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಭವಿಷ್ಯದಲ್ಲಿ ರಾಷ್ಟ್ರಮಟ್ಟದ ಸಾಧನೆಯ ನಿರೀಕ್ಷೆಯೂ ಇದೆ ಎಂದು ಸ್ಪೋಕೊ ಸಂಸ್ಥೆಯ ಅಧ್ಯಕ್ಷೆ ಮೃಣಾಲಿನಿ ಪಟ್ಟಣ ವಿಶ್ವಾಸ ವ್ಯಕ್ತಪಡಿಸಿದರು. ಕರ್ನಾಟಕ ಜುಡೋ ಸಂಸ್ಥೆ ಬೆಂಗಳೂರು ಹಾಗೂ ಸ್ಪೋಕೊ ಸಂಸ್ಥೆ ಚಂದರಗಿ ಸಹಯೋಗದಲ್ಲಿ ತಾಲೂಕಿನ ಚಂದರಗಿ ಕ್ರೀಡಾ ಶಾಲೆಯಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಹಮ್ಮಿಕೊಂಡ 42ನೇ ಕರ್ನಾಟಕ ರಾಜ್ಯ ಸಬ್ ಜ್ಯೂನಿಯರ್ ಮತ್ತು ಮಿನಿ ಕ್ಯಾಟಗರಿ ಜುಡೋ ಚಾಂಪಿಯನ್‌ಶಿಫ್-2025 ಉದ್ಘಾಟಿಸಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಸ್ಪೋಕೊ ಸಂಸ್ಥೆಯ ಸಂಸ್ಥಾಪಕ ಎಸ್.ಎಂ. ಕಲೂತಿ, ಉಪಾಧ್ಯಕ್ಷ ಮಹೇಶ ಭಾತೆ, ಜಿಲ್ಲಾ ಜುಡೋ ಸಂಸ್ಥೆಯ ಗೌರವ ಕಾರ್ಯದರ್ಶಿ ವಿಕ್ರಮ ಕದಂ ಪಾಟೀಲ, ಆರ್.ಎ. ಪಾಟೀಲ, ರಾಜೇಶ್ವರಿ ಯಾದವಾಡ, ಕೆ.ಎಸ್. ಉಮರಾಣಿ, ಎಸ್.ಜಿ. ಮಡಿವಾಳ, ಎಸ್.ಆರ್. ನವರಕ್ಕಿ, ಎಸ್.ಆರ್. ಮೇತ್ರಿ, ಪೃತ್ವಿರಾಜ ಜಾಧವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಯಜ್ಞೋಪವೀತ ಧಾರಣ ಕಾರ್ಯಕ್ರಮ

ಬೆಳಗಾವಿ: ಇಲ್ಲಿನ ಹವ್ಯಕ ಕ್ಷೇಮಾಭಿವೃದ್ಧಿ ಸಂಘದಿಂದ ಶನಿವಾರ ಸಂಘದಿಂದ ಯಜ್ಞೋಪವೀತ ಧಾರಣ ಕಾರ್ಯಕ್ರಮ ನಡೆಯಿತು.

ಕೃಷ್ಣ ದೇವರಾಯ ವೃತ್ತದ ಗೀತ ಗಂಗಾ ಕಟ್ಟಡದಲ್ಲಿ ನಡೆದ ಕಾರ್ಯಕ್ರಮವನ್ನು ಸಮಾಜದ ಹಿರಿಯರಾದ ವಿ.ಎನ್.ಹೆಗಡೆ ಉದ್ಘಾಟಿಸಿದರು. ಹವ್ಯಕ ಬ್ರಾಹ್ಮಣ ಸಮಾಜದ ಪುರುಷರು ಜನಿವಾರ ಧರಿಸಿದರು. ಇದೇ ವೇಳೆ ಮಹಿಳೆಯರಿಗೆ ರಂಗವಲ್ಲಿ ಸ್ಪರ್ಧೆ ಸಹ ನಡೆಯಿತು.

ನಂತರ ಸಂಘದ ವಾರ್ಷಿಕ ಸರ್ವಸಾಮಾನ್ಯ ಸಭೆ ನಡೆಸಲಾಯಿತು. ಹೊಸ ಸದಸ್ಯರನ್ನು ಪರಿಚಯಿಸಲಾಯಿತು. ಎ.ಕೆ.ಭಟ್ ಭಾರತ ಮಾತೆಗೆ ಪೂಜೆ ಸಲ್ಲಿಸಿದರು. ಸಾಮೂಹಿಕ ಪ್ರಾರ್ಥನಾ ಶ್ಲೋಕ ಪಠಿಸಲಾಯಿತು. ಸಂಘದ ಕಾರ್ಯಚಟು ವಟಿಕೆಗಳ ಕುರಿತು ಚರ್ಚಿಸಲಾಯಿತು. ಉಪಾಧ್ಯಕ್ಷ ಗಣೇಶ ಹೆಗಡೆ, ಕಾರ್ಯದರ್ಶಿ ಸಿ.ಜಿ. ಶಾಸ್ತ್ರಿ, ಖಜಾಂಚಿ ಸೀತಾರಾಮ ಭಾಗ್ವತ, ಕಾರ್ಯಕಾರಿಣಿ ಸದಸ್ಯರಾದ ಎಂ.ಕೆ.ಹೆಗಡೆ, ವಿದ್ಯಾ ಹೆಗಡೆ, ವಸುಮತಿ ಹೆಗಡೆ ಮೊದಲಾದವರು ಇದ್ದರು. ಪರಮೇಶ್ವರ ಹೆಗಡೆ ಸ್ವಾಗತಿಸಿದರು. ಸಂಘದ ಅಧ್ಯಕ್ಷೆ ಪೂರ್ಣಿಮಾ ಹೆಗಡೆ ಪ್ರಸ್ತಾವಿಕ ಮಾತನಾಡಿದರು. ಸುಬ್ರಹ್ಮಣ್ಯ ಭಟ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮವನ್ನು ಸಮಾಜದ ಹಿರಿಯರಾದ ವಿ.ಎನ್.ಹೆಗಡೆ ಅವರು ಉದ್ಘಾಟಿಸಿದರು.

ಸಾತಪ್ಪ ಟೋಪಣ್ಣವರ ಹೋರಾಟ ಅವಿಸ್ಮರಣೀಯ

ಯರಗಟ್ಟಿ: ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಶಿವಾಪುರದ ಸಾತಪ್ಪ ಟೋಪಣ್ಣವರ ಅವರ ಹೋರಾಟ ಅವಿಸ್ಮರಣೀಯವಾದುದು ಎಂದು ಧಾರವಾಡದ ಹಿರಿಯ ಮಕ್ಕಳ ಸಾಹಿತಿ ಆನಂದ ಪಾಟೀಲ ಅವರು ಹೇಳಿದರು.

ಸರಕಾರಿ ಪ್ರೌಢಶಾಲೆಯಲ್ಲಿ ಡಾ. ರಾಜಶೇಖರ ಬಿರಾದಾರ ಅವರು ರಚಿಸಿದ 'ಸಾತಪ್ಪ ಟೋಪಣ್ಣವರ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸ್ಥಳೀಯ ಹೋರಾಟಗಾರರ ಚರಿತ್ರೆಯನ್ನು ಕೆದಕಿ ಮರುಸೃಷ್ಟಿಸುವುದು ಅಗತ್ಯವಾಗಿದೆ ಎಂದರು. ಪುಸ್ತಕ ಪ್ರಕಟಿಸಿದ ಅಭಿನವ ಪ್ರಕಾಶನದ ರವಿಕುಮಾರ ಅವರು ಮಾತನಾಡಿ, ಮಕ್ಕಳು ಬಾಲ್ಯದಿಂದಲೇ ಪಠ್ಯದೊಂದಿಗೆ ನಮ್ಮ ಸುತ್ತಲಿನ ಹೋರಾಟಗಾರರ ಚರಿತ್ರೆಯನ್ನು ಓದಬೇಕು ಎಂದು ಹೇಳಿದರು. ಲೇಖಕ ಡಾ. ರಾಜಶೇಖರ ಬಿರಾದಾರ ಅವರು ಮಾತನಾಡಿ, ಪುಸ್ತಕ ರೂಪುಗೊಂಡ ಬಗೆಯನ್ನು ವಿವರಿಸಿದರು.

ಗ್ರಾಮ ಪಂಚಾಯತ ಅಧ್ಯಕ್ಷರಾದ ತವನಪ್ಪ ಟೋಪಣ್ಣವರ, ಪ್ರಗತಿಪರ ರೈತರಾದ ಮಹಾಂತೇಶ ತೋಟಗಿ, ಶಿವಲಿಂಗಯ್ಯ ಮಠಪತಿಯವರು ಮಾತನಾ ಡಿದರು. ಶಾಲೆಯ ಮುಖ್ಯೋಪಾಧ್ಯಾ ಯರಾದ ವಿಜಯ ಪಡಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ರಾಮದ ಪಾಯಪ್ಪ ಟೋಪಣ್ಣವರ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಾತಪ್ಪ ಟೋಪಣ್ಣವರ ಪುಸ್ತಕವನ್ನು ಆನಂದ ಪಾಟೀಲ ಅವರು ಬಿಡುಗಡೆ ಮಾಡಿದರು.

ಸಮಾಚಾರ ಸಣ್ಣದಲ್ಲ

ಪ್ರಭಾವತಿ ಕಡಲಾಸ್ಕರ ಇನ್ನಿಲ್ಲ

ಬೆಂಗಳೂರು: ವಿಶ್ವವಾಣಿ ಹುಬ್ಬಳ್ಳಿ ಆವೃತ್ತಿಯ ಪ್ರಸರಣ ವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಉದಯ್ ಕಡಲಾಸ್ಕರ ಅವರ ತಾಯಿ ಪ್ರಭಾವತಿ ಬಾಲಕೃಷ್ಣ ಆಚಾರ್ಯ ಕಡಲಾಸ್ಕರ ಅವರು ಭಾನುವಾರ ಮಧ್ಯಾಹ್ನ ಕೊನೆಯುಸಿರು ಎಳೆದಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಶಂಕರಹಟ್ಟಿ ಮೂಲದ ಪ್ರಭಾವತಿ ಅವರು ಪ್ರಸ್ತುತ ಬಾಗಲಕೋಟೆಯಲ್ಲಿ ವಾಸವಾಗಿದ್ದರು. 80 ವರ್ಷದ ಪ್ರಭಾವತಿ ಅವರಿಗೆ ಕೆಲ ತಿಂಗಳುಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ, ಫಲಕಾರಿಯಾಗದೇ ಭಾನುವಾರ ಕೊನೆಯುಸಿರು ಎಳೆದಿದ್ದಾರೆ. ಭಾನುವಾರ ಸಂಜೆ ಮೃತರ ಅಂತ್ಯ ಸಂಸ್ಕಾರ ನೆರವೇರಿವೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ವಿಶ್ವವಾಣಿ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಹೃದಯಾಘಾತದಿಂದ ಬಾಲಕ ಸಾವು

ಕೊಟ್ಟಿಗೆಹಾರ: 15 ವರ್ಷದ ಬಾಲಕ ಹೃದಯಾಘಾತದಿಂದ ಮೃತಪಟ್ಟ ಘಟನೆ ಮೂಡಿಗೆರೆ ತಾಲೂಕಿನ ಬಣಕಲ್ ಸಮೀಪದ ಬಾನಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಪ್ರೀತಮ್ (15) ಮೃತ ಬಾಲಕ ಎಂದು ಗುರುತಿಸಲಾಗಿದೆ. ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಏಕಾಏಕಿ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದ ಪ್ರೀತಮ್, ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ನಂತರ ಅವನನ್ನು ಚಿಕ್ಕಮಗಳೂರು ಸರಕಾರಿ ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ವೈದ್ಯರ ಪ್ರಕಾರ, ಸಾವಿಗೆ ಹೃದಯಾಘಾತವೇ ಕಾರಣವಾಗಿದೆ ಎನ್ನಲಾಗಿದೆ. ಈ ಪ್ರಕರಣ ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದೆ.

ಭೀಕರ ಅಪಘಾತ: ಇಬ್ಬರ ಸಾವು

ಕಲಬುರಗಿ: ಬಸ್ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ ಘಟನೆ ಜಿಲ್ಲೆಯ ಅಫಜಲಪುರ ತಾಲೂಕಿನ ಗೊಬ್ಬುರಕೆ ಗ್ರಾಮದ ಬಳಿ ಭಾನುವಾರ ನಡೆದಿದೆ. ಸೋಮಶೇಖರ್ (55), ಪ್ರಕಾಶ್ (28) ಮೃತ ದುರ್ದೈವಿಗಳಾಗಿದ್ದು, ಮೃತರು ಬಾಗಲಕೋಟೆ ಜಿಲ್ಲೆಯವರು ಎನ್ನಲಾಗಿದೆ. ಕಲಬುರಗಿ ಕಡೆಯಿಂದ ಬಾಗಲಕೋಟೆಯ ಬೀಳಗಿ ಕಡೆಗೆ ಕಾರಿನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ಎದುರಿಗೆ ಬಂದ ಎನ್‌ಇಕೆಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ತಂದೆ ಮತ್ತು ಮಗ ಸ್ಥಳದಲ್ಲೇ ಸಾವನ್ನಪ್ಪಿದಾರೆ.

ಕರ್ತವ್ಯಕ್ಕೆ ಅಡ್ಡಿ: ಆರು ಆರೋಪಿಗಳ ಬಂಧನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಬಳಿ ಯೂಟ್ಯೂಬರ್‌ಗಳ ಮೇಲೆ ಬುಧವಾರ ಹಲ್ಲೆ ನಡೆದ ಸಂದರ್ಭದಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ಸಂಬಂಧ ಆರು ಮಂದಿಯನ್ನು ಧರ್ಮಸ್ಥಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಧರ್ಮಸ್ಥಳದ ಪದ್ಮಪ್ರಸಾದ್ (32), ಸುಹಾಸ್ (22), ಶಶಿಧರ್(30), ಉಜಿರೆಯ ಕಲಂದರ್ ಪುತ್ತುಮೋನು (42), ಕಳೆಂಜದ ಚೇತನ್ (21), ಕಲ್ಮಂಜದ ಗುರುಪ್ರಸಾದ್ (19) ಬಂಧಿತರು. ಬಂಧಿತರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ. ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಬಳಿ ಬುಧವಾರ ಸಂಜೆ (ಆ.6) ಯೂಟ್ಯೂಬರ್‌ಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿ ಪರಾರಿಯಾಗಿತು. ಈ ಸಂಬಂಧ ಒಟ್ಟು 27 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಉದಯಗಿರಿ, ಹಿಮಗಿರಿ ನೌಕೆಗಳ ಸೇರ್ಪಡೆ 26ಕ್ಕೆ

← ಮೊದಲಪುಟದಿಂದ

'ಪ್ರಾಜೆಕ್ಟ್ 17ಎ' ಭಾಗವಾಗಿ ಮತ್ತೊಂದು ಯುದ್ಧನೌಕೆ 'ಹಿಮಗಿರಿ'ಯನ್ನು ಕೋಲ್ಕತ್ತದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್(ಜಿಆರ್‌ಎಸ್‌ಇ) ಕಂಪನಿಯು ನಿರ್ಮಿಸಿದೆ. ಈ ಎರಡು ಯುದ್ಧನೌಕೆಗಳು ಆಳ ಸಮುದ್ರದಲ್ಲಿ ಹಾಗೂ ದೀರ್ಘ ಕಾಲದವರೆಗೆ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಬೆಳೆ ನುಂಗಿದ ಭಾರೀ ಮಳೆ | ರಾಜ್ಯಾದ್ಯಂತ ಮುಂದಿನ 5 ದಿನ ವರುಣನ ಅಬ್ಬರ

ಕೊಕಟನೂರ ಯಲ್ಲಮ್ಮ ದೇವಿಗೆ ಜಲದಿಗ್ಬಂಧನ

ಬೆಂಗಳೂರು: ರಾಜ್ಯದಲ್ಲಿ ಕಳೆದ 2 ದಿನಗಳಿಂದ ವರುಣ ಅಬ್ಬರ ಶುರುವಾಗಿದೆ. ಉತ್ತರ ಕರ್ನಾಟಕದ ಬೆಳಗಾವಿ, ಗದಗ, ಧಾರವಾಡ, ಬಾಗಕೋಟೆ ಜಿಲ್ಲೆಗಳಲ್ಲಿ ಎಡೆಬಿಡದೇ ಮಳೆ ಸುರಿಯುತ್ತಿದೆ. ಪರಿಣಾಮ ಮನೆಗಳು ಕುಸಿದು ಬಿದ್ದಿದ್ದು, ಜಮೀನುಗಳ ಒಡ್ಡುಗಳು ಹೊಡೆದು ನೂರಾರು ಎಕರೆ ಬೆಳೆ ಜಲಾವೃತ ಆಗಿದೆ. ಇನ್ನು ಮುಂದಿನ 5 ದಿನಗಳ ಕಾಲ ರಾಜ್ಯಾದ್ಯಂತ ಭಾರೀ ಮಳೆ ಆಗುವ ಮುನ್ಸೂಚನೆ ನೀಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿದು ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ನಿರಂತರ ಮಳೆಯಿಂದ ಐತಿಹಾಸಿಕ ಕೊಕಟನೂರ ಯಲ್ಲಮ್ಮ ದೇವಸ್ಥಾನಕ್ಕೂ ನೀರು ನುಗ್ಗಿದ್ದು, ಗರ್ಭಗುಡಿಯಲ್ಲಿರುವ ಯಲ್ಲಮ್ಮ ದೇವಿ ವಿಗ್ರಹಕ್ಕೆ ಜಲದಿಗ್ಬಂಧನ ಆಗಿದೆ. ತಡರಾತ್ರಿ ಮಳೆಗೆ ಯಲ್ಲಮ್ಮವಾಡಿ ಕೆರೆ ತುಂಬಿ ಗರ್ಭಗುಡಿಗೂ ನೀರು ಒಕ್ಕಿದೆ. ಪವಿತ್ರ ಶ್ರಾವಣ ಮಾಸದ ಹಿನ್ನೆಲೆ

ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಿಂದ ಇಲ್ಲಿಗೆ ಹೆಚ್ಚಿನ ಭಕ್ತರು ಆಗಮಿಸುತ್ತಿದ್ದಾರೆ. ಆದರೆ ಭಾರೀ ಮಳೆ ದೇವಿಯ ದರ್ಶನಕ್ಕೆ ಭಕ್ತರಿಗೆ ಸಂಕಷ್ಟ ತಂದಿದೆ. ಅಳೆತ್ತರದ ನೀರಿನಲ್ಲೇ ನಿಂತು ಅರ್ಚಕರು ಪೂಜಾ ಕೈಂಕರ್ಯಗಳನ್ನು ಮುಂದುವರಿಸಿದ್ದಾರೆ.

ಗದಗ-ನರಗುಂದ ಹೆದ್ದಾರಿ ಸಂಚಾರ ಸ್ಥಗಿತ: ನವಲಗುಂದ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ 3 ದಿನಗಳಿಂದ ಬಿಟ್ಟು ಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಮುಂಗಾರು ಹಂಗಾಮಿನಲ್ಲಿ ರೈತರ ಕೈಸೇರಬೇಕಾದ ಹೆಸರು ಬೆಳೆಗಳು ಹಾಳಾಗುವ ಹಂತ ತಲುಪಿವೆ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ತಾಲೂಕಿನ ಹಲವು ಗ್ರಾಮಗಳಲ್ಲಿ ಮನೆಗಳು ಕುಸಿದು ಬಿದ್ದಿವೆ. ಹಲವಾರು ಗ್ರಾಮಗಳಲ್ಲಿ ಹೊಲಗಳಲ್ಲಿನ ಒಡ್ಡುಗಳು ಒಡೆದು ಹೊಲಗಳಲ್ಲಿ ಭಾರಿ ಪ್ರಮಾಣದ ನೀರು ಹರಿದ ಪರಿಣಾಮ ಬೆಳೆಗಳು ನೀರಲ್ಲಿ ನಿಂತಿವೆ. ಪಟ್ಟಣದಲ್ಲಿ ಮಳೆಯಿಂದಾಗಿ 8 ಮನೆಗಳು ಕುಸಿದು ಬಿದ್ದಿವೆ. ತಾಲೂಕಿನ ಚಿಲಕವಾಡದ ಎರಡು ಬೆಳಹಾರ ಗ್ರಾಮದ 2 ಶಾನವಾಡ ಗ್ರಾಮದಲ್ಲಿ 6 ಪಡೆಸೂರು ಕುಮಾರಗೊಪ್ಪ ಶಿರಕೋಳ ಗ್ರಾಮದಲ್ಲಿ ತಲಾ ಒಂದು ಗೊಬ್ಬರಗುಂಪಿ ನಾಗನೂರು ಹಾಗೂ ಅಮರಗೋಳ ಗ್ರಾಮದಲ್ಲಿ ತಲಾ 5 ಮನೆಗಳು ಸೇರಿ ಒಟ್ಟು 36 ಮನೆಗಳಿಗೆ ಹಾನಿಯಾಗಿವೆ.



ಬೆಳಗಾವಿ ಜಿಲ್ಲೆಯ ಕೊಕಟನೂರಿನ ಯಲ್ಲಮ್ಮ ದೇಗುಲದ ಗರ್ಭಗುಡಿಯಲ್ಲಿರುವ ಯಲ್ಲಮ್ಮ ದೇವಿ ವಿಗ್ರಹ ನೀರಿನಲ್ಲಿ ಅರ್ಧದಷ್ಟು ಮುಳುಗಿರುವುದು.

ನವಲಗುಂದ ಪಟ್ಟಣದ ಮಕ್ತುಂಬಿ ನರಗುಂದ ಅವರ ಮನೆ ಕುಸಿದಿರುವುದು.

ಸತತ ಮಳೆಗೆ ಬೆಳೆ ಫಸಲು ಹಾನಿ ಆತಂಕ

ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರ ಹಾಗೂ ತಾಲೂಕಿನ ಗ್ರಾಮೀಣ ಭಾಗದಲ್ಲಿ ಬಿರುಸಿನಿಂದ ಮಳೆ ಸುರಿದಿದ್ದು, ಹಿರೇಹಳ್ಳ, ಎರೀಹಳ್ಳ ಸೇರಿದಂತೆ ತಾಲೂಕಿನಾದ್ಯಂತ ಹಳ್ಳಗಳು ತುಂಬಿ ಹರಿಯುತ್ತಿವೆ. ಹೊಲದ ಒಡ್ಡುಗಳಲ್ಲಿ ನೀರು ತುಂಬಿ, ಬೆಳೆಗಳು ನಾಶ ಆಗಿದೆ.

ಕೋಲಾರದಲ್ಲಿ ಧರೆಗುರುಳಿದ ಮರಗಳು.

ಮಳೆ ಹೆಚ್ಚಾಗಿದ್ದರಿಂದ ಕೆಲವೆಡೆ ತೊಗರಿ ಬೆಳೆ ಹಳದಿಯಾಗುತ್ತಿವೆ. ಹೂ ಬಿಟ್ಟಿರುವ ಸೂರ್ಯಕಾಂತಿಯಲ್ಲಿ ಪರಾಗ ನಷ್ಟದಿಂದ ಕಾಳು ಸರಿಯಾಗಿ ಕಟ್ಟಲಿಕ್ಕಿಲ್ಲ ಎನ್ನುವ ಆತಂಕ ಉಂಟಾಗಿದೆ. ಹೆಸರು ಬೆಳೆಯ ಫಸಲು ಬಂದಿದ್ದು, ಬುಡ್ಡಿ ಬಿಡಿಸಿ, ರಾಶಿ ಮಾಡಲು ಮಳೆಯಿಂದಾಗಿ ಸಾಧ್ಯವಾಗುತ್ತಿಲ್ಲ. ಇಡೀ ದಿನ ಮೋಡ ಮುಸುಗಿದ ವಾತಾವರಣ ಇರುವುದರಿಂದ ಕೀಟಬಾಧೆ ಹೆಚ್ಚುವ ಆತಂಕ ಕಾಡುತ್ತಿದೆ ಎಂದು ರೈತರು ಹೇಳುತ್ತಾರೆ.

ಬಿದ್ದ ಮರಕ್ಕೆ ಬೈಕ್ ಡಿಕ್ಕಿ, ವ್ಯಕ್ತಿ ಸಾವು

ಕೋಲಾರ ಜಿಲ್ಲೆಯಲ್ಲಿ ಮಳೆ ಆರ್ಭಟಿಸಿದ್ದು, ಹಲವೆಡೆ ಮರಗಳು ಧರೆಗುರುಳಿವೆ. ನೀರು ಮನೆಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ರಸ್ತೆಯಲ್ಲಿ ಅಡ್ಡಲಾಗಿ ಬಿದ್ದಿದ್ದ ಮರಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿದ್ದು, ಸವಾರ ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯನ್ನು ವೇಮಗಲ್ ಬಳಿಯ ಕರೇನಹಳ್ಳಿ ಗ್ರಾಮದ ಸುಬ್ರಮಣಿ (34) ಎಂದು ಗುರುತಿಸಲಾಗಿದೆ. ಕೋಲಾರ ತಾಲೂಕಿನ ತಲಗುಂದ ಬಳಿ ಮುಂಜಾನೆ ಈ ಅವಘಡ ನಡೆದಿದೆ. ವೇಮಗಲ್ನಿಂದ ಕೋಲಾರ ಮೂಲಕ ಮುಳಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ದಂಪತಿ ಹಾಗೂ ಮಗು ಪಲ್ಸರ್ ಬೈಕ್‌ನಲ್ಲಿ ತೆರಳುತ್ತಿದ್ದರು. ಹುಣಸೆ ಮರವೊಂದು ರಸ್ತೆಗೆ ಅಡ್ಡಲಾಗಿ ಉರುಳಿ ಬಿದ್ದಿತ್ತು. ಈ ವೇಳೆ ಮರಕ್ಕೆ ದಂಪತಿ ಇದ್ದ ಬೈಕ್ ಡಿಕ್ಕಿ ಹೊಡೆದಿದೆ. ಸವಾರ ಸುಬ್ರಮಣಿ ಅವರ ತಲೆಗೆ ತೀವ್ರ ಏಟು ಬಿದ್ದಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ನಲ್ಲಿದ್ದ ಪತ್ನಿ ಹಾಗೂ ಮಗು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತುಸು ತಿರುವಿನಲ್ಲಿ ಮರವಿದ್ದ ಕಾರಣ ನಸುಕಿನಲ್ಲಿ ಸರಿಯಾಗಿ ಕಂಡಿಲ್ಲ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಘವೇಂದ್ರ ಸ್ವಾಮಿಗಳ 354 ನೇ ಆರಾಧನಾ ಮಹೋತ್ಸವದ ಪೂರ್ವಾರಾಧನೆ ಅಂಗವಾಗಿ ಮಂತ್ರಾಲಯ ರಾಯರ ಮಠದ ಆವರಣದಲ್ಲಿರುವ ಯೋಗೀಂದ್ರ ಸಭಾ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಶಿ ವಿಶ್ವನಾಥ ದೇವಸ್ಥಾನದ ವಿದ್ವಾಂಸ ರಾಜರಾಮ ಶುಕ್ಲ ಹಾಗೂ ಕಾಂಚಿಪುರಂನ ರಾಮೇಶ್ವರ ದೇವಸ್ಥಾನಕ್ಕೆ ಸ್ಥಳವನ್ನು ನೀಡಿದ ದಾನಿ ಪಿ.ಎ.ವಿಠ್ಠಲ್ ಅವರಿಗೆ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಶ್ರೀ ಗುರುರಾಘವೇಂದ್ರ ಅನುಗ್ರಹ ಪ್ರಶಸ್ತಿ ಪ್ರದಾನ ಮಾಡಿದರು.

ಮಂತ್ರಾಲಯದಲ್ಲಿ ರಾಯರ 354ನೇ ಆರಾಧನಾ ಉತ್ಸವ | ಪಲ್ಲಕ್ಕಿಯಲ್ಲಿಟ್ಟು ಪರಿಮಳ ಗ್ರಂಥ ಮೆರವಣಿಗೆ

ಮೊದಲ ದಿನ ಸಂಭ್ರಮದ ಪೂರ್ವಾರಾಧನೆ

ರಾಯಚೂರು: ಮಂತ್ರಾಲಯದಲ್ಲಿ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಕಲರವ ಮಂತ್ರಾಲಯದ ತುಂಬ ಅನುರಣಿಸುತ್ತಿದೆ. ಸಪ್ತರಾತ್ರೋತ್ಸವ ಸಂಭ್ರಮದ ಮೊದಲ ದಿನ ಪೂರ್ವಾರಾಧನೆ ಹಿನ್ನೆಲೆ ನಾನಾ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ರಾಯರ ಆರಾಧನೆ ಹೊಸ ಮೆರಗು ಪಡೆದಿದೆ.

ಕಲಿಯುಗ ಕಾಮಧೇನು ಮಂತ್ರಾಲಯ ಗುರು ರಾಘವೇಂದ್ರ ಸ್ವಾಮಿಗಳು ಸಶರೀರರಾಗಿ ವೃಂದಾವನಸ್ಥರಾಗಿ 354 ವರ್ಷಗಳಾಗಿದ್ದು, ಮಂತ್ರಾಲಯದಲ್ಲಿ ಭಾನುವಾರ ಪೂರ್ವಾರಾಧನೆ ಸಡಗರದಿಂದ ಜರುಗಿತು. ಬೆಳಗಿನ ಜಾವದಲ್ಲೇ ಮೂಲ ಬೃಂದಾವನದ ನೈರ್ಮಲ್ಯ ವಿಸರ್ಜನೆ, ಪಂಚಾಮೃತಾಭಿಷೇಕ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ಅಲಂಕಾರ ಸಂತರ್ಪಣ, ಹಸ್ತೋದಕ, ಮಹಾಮಂಗಳಾರತಿ, ತೀರ್ಥ ಪ್ರಸಾದ ನಡೆದವು. ಬಳಿಕ ಮಠದ ಪ್ರಾಕಾರದಲ್ಲಿ ರಜತ ಸಿಂಹ, ಗಜವಾಹನೋತ್ಸವ ಜರುಗಿತು. ಮುಖ್ಯವಾಗಿ ರಾಯರು ರಚಿಸಿದ ಪರಿಮಳ ಗ್ರಂಥವನ್ನು ಪಲ್ಲಕ್ಕಿಯಲ್ಲಿಟ್ಟು ಪಲ್ಲಕ್ಕಿ ಉತ್ಸವ ನಡೆಸಲಾಯಿತು.

ಸಚಿವ ಎನ್.ಎಸ್ ಬೋಸರಾಜು ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು ನಂತರ ಸುಬುಧೇಂದ್ರ ತೀರ್ಥರ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಶ್ರೀರಂಗಂನ ರಂಗನಾಥ ದೇವಸ್ಥಾನದ ಮೂಲ ಅರ್ಚಕ ಸುಂದರ ಭಟ್ಟಾಚಾರ್ಯ, ಶ್ರೀ ಮಠದ ಆಡಳಿತಾಧಿಕಾರಿ ಮಾಧವಶೆಟ್ಟಿ, ವ್ಯವಸ್ಥಾಪಕ ಎಸ್.ಕೆ ಶ್ರೀನಿವಾಸ ರಾವ್, ಐಪಿ ನರಸಿಂಹಮೂರ್ತಿ, ಗುರುಸಾರ್ವಭೌಮ ವಿದ್ಯಾಪೀಠದ ಪ್ರಾಚಾರ್ಯರಾದ ರಮಣರಾವ, ಶ್ರೀ ಮಠದ ಮಾಧ್ಯಮ ಉಸ್ತುವಾರಿ ಶ್ರೀನಿಧಿ ಸೇರಿದಂತೆ ಗುರುಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳು, ಶ್ರೀ ಮಠದ ಸಿಬ್ಬಂದಿ ಉಪಸ್ಥಿತರಿದ್ದರು.

ರಾಯರ 354ನೇ ಉತ್ಸವದ ಹಿನ್ನೆಲೆ ಶ್ರೀರಂಗಂನಿಂದ ಮಂತ್ರಾಲಯ ಮಠಕ್ಕೆ ಆಗಮಿಸಿದ ಶೇಷವಸ್ತ್ರವನ್ನು ಪೀಠಾಧೀಪತಿ ಸುಬುಧೇಂದ್ರ ತೀರ್ಥರು ಸ್ವೀಕರಿಸಿದರು.

ಮಂತ್ರಾಲಯದಲ್ಲಿ ನಡೆಯುತ್ತಿರುವ ರಾಯರ 354ನೇ ಆರಾಧನಾ ಉತ್ಸವದಲ್ಲಿ ಪಾಲ್ಗೊಂಡ ಭಕ್ತರು.

ಶ್ರೀರಂಗಂನಿಂದ ಶೇಷವಸ್ತ್ರ ಆಗಮನ

ಪೂರ್ವಾರಾಧನೆ ಅಂಗವಾಗಿ ತಮಿಳುನಾಡಿನ ಶ್ರೀ ಕ್ಷೇತ್ರ ಶ್ರೀರಂಗಂನ ಶ್ರೀರಂಗನಾಥ ದೇವಸ್ಥಾನ ಮಂತ್ರಾಲಯಕ್ಕೆ ಆಗಮಿಸಿದ ಶೇಷ ವಸ್ತ್ರವನ್ನು ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ವಾದ್ಯಮೇಳದೊಂದಿಗೆ ಸ್ವಾಗತಿಸಿಕೊಂಡರು. ನಂತರ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಶೇಷ ವಸ್ತ್ರವನ್ನು ತಲೆ ಮೇಲೆ ಹೊತ್ತುಕೊಂಡು ಶ್ರೀಮಠದ ದ್ವಾರ ಬಾಗಿಲ ಮೂಲಕ ಆಗಮಿಸಿ ರಾಯರಿಗೆ ಸಮರ್ಪಿಸಿದರು. ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ದೇಶದ 8 ಸ್ವಯಂ ಯಕ್ತ ಕ್ಷೇತ್ರದಲ್ಲಿ ಒಂದಾದ ತಮಿಳುನಾಡಿನ ಶ್ರೀರಂಗಂ ಕ್ಷೇತ್ರದಿಂದ ತಮಿಳುನಾಡು ಸರಕಾರದಿಂದ ಪ್ರತಿ ವರ್ಷದಂತೆ ಈ ವರ್ಷವೂ ಶೇಷ ವಸ್ತ್ರ ಕಳುಹಿಸಲಾಗಿದ್ದು, ಶ್ರೀ ರಂಗನಾಥನ ಶೇಷ ವಸ್ತ್ರವನ್ನು ಗುರುರಾಯರಿಗೆ ಸಮರ್ಪಣೆಯಾಗಿದೆ ಎಂದರು.

ಯೂರಿಯಾಗಾಗಿ ರೈತರ ಜಟಾಪಟಿ

ಕೊಪ್ಪಳ: ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರಕ್ಕೆ ಪರದಾಟ ಮುಂದುವರಿದಿದೆ. ಭಾನುವಾರವೂ ರೈತರು ವಿವಿಧಡೆ ಸೊಸೈಟಿಗಳ ಮುಂದೆ ನಿಂತು ಯೂರಿಯಾ ಪಡೆಯುತ್ತಿರುವ ದೃಶ್ಯಗಳು ಕಂಡು ಬಂದಿವೆ. ಒಬ್ಬ ರೈತನ ಪಹಣಿಗೆ ಕೇವಲ ಎರಡು ಚೀಲ ಮಾತ್ರ ಪೂರೈಕೆ ಮಾಡಲಾಗುತ್ತಿದೆ. ಆದರೆ ಇದಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ಪಹಣಿಗೆ ಎರಡೇ ಚೀಲ ಯೂರಿಯಾ ಕೊಟ್ಟರೆ ಹೇಗೆ? ಹತ್ತಾರು ಎಕರೆ ಜಮೀನು ಇರುವ ನಾವು ಏನು ಮಾಡಬೇಕು? ಈ ತಕ್ಷಣ ನಮ್ಮ ಮೆಕ್ಕೆಜೋಳಕ್ಕೆ ಯೂರಿಯಾ ಮೇಲು ಗೊಬ್ಬರ ಕೊಡಬೇಕು. ಎರಡು ಚೀಲ ಕೊಟ್ಟರೆ ನಮಗೆ ಯಾವುದಕ್ಕೂ ಸಾಲದು ಎನ್ನುತ್ತಿದ್ದಾರೆ. ನಮ್ಮ ಜಮೀನಿಗೆ ಅಗತ್ಯಕ್ಕೆ ತಕ್ಕಂತೆ ಯೂರಿಯಾ ಪೂರೈಕೆ ಮಾಡಲಿ. ಕಳೆದ ಒಂದು ತಿಂಗಳಿಂದ ಅಲೆದಾಟ ನಡೆಸಿದರೂ ಎಲ್ಲೂ ಸಿಗುತ್ತಿಲ್ಲ. ಕೂಡಲೇ ನಮಗೆ ಯೂರಿಯಾಗೆ ಪೂರೈಕೆ ಮಾಡುವಂತೆ ಜಿಲ್ಲೆಯ ರೈತರು ಒತ್ತಾಯಿಸುತ್ತಿದ್ದಾರೆ.

ಉದ್ಯೋಗವನ್ನೇ ಕಸಿದುಕೊಳ್ಳುತ್ತಿರುವ ಎಐ?

← ಮೊದಲಪುಟದಿಂದ

ವರದಿಗಳ ಪ್ರಕಾರ, ಎಐ ತಂತ್ರಜ್ಞಾನ ಮಾನವರಿಗಿಂತ ಶೇ.30ರಷ್ಟು ಬೇಗ ಕೆಲಸವನ್ನು ಮುಗಿಸುತ್ತದೆ. ಹೀಗಾಗಿ ಕಂಪನಿಗಳು ಉದ್ಯೋಗಿಗಳನ್ನು ಕೈ ಬಿಡುತ್ತಿವೆ.

ಎಐ ವೇಗ ಪಡೆಯುತ್ತಿರುವುದೇಕೆ?: ಹೊಸ ಹೊಸ ಕೃತಕ ಬುದ್ಧಿಮತ್ತೆ ಟೂಲ್‌ಗಳು ಬಂದಿದ್ದು, ಐಟಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಬರುತ್ತಿವೆ. ವರದಿಗಳ ಪ್ರಕಾರ, ಕೃತಕ ಬುದ್ಧಿಮತ್ತೆಯು ಗ್ರಾಹಕ ಸೇವಾ ವಲಯದ ಉದ್ಯೋಗಗಳನ್ನು ಸಂಪೂರ್ಣವಾಗಿ ತೆಗೆದುಹಾಕ ಲಿವೆ. ಅಲ್ಲದೆ, ವೈದ್ಯಕೀಯ ಕ್ಷೇತ್ರದಲ್ಲಿ ಎಐ ಮಾನವರಿಗಿಂತಲೂ (ವೈದ್ಯರಿಗಿಂತ) ಉತ್ತಮ ವಾಗಿ ರೋಗಗಳನ್ನು ಪತ್ತೆ ಮಾಡಬಲ್ಲದು. ವಿಶ್ವ ನಾಯಕರು ಎಐ ಸಲಹೆಗಳನ್ನು ಅನುಸರಿಸುತ್ತಿ ದ್ದಾರೆ ಎಂಬುದು ತಿಳಿದುಬಂದಿದೆ. ಬಹಳ ವೇಗ ವಾಗಿ ಕಾರ್ಯನಿರ್ವಹಿಸುವುದು ಮಾತ್ರವಲ್ಲದೇ ತಪ್ಪಿಲ್ಲದೇ ಕೆಲಸ ಮಾಡುತ್ತದೆ.

ಜಾಗತಿಕವಾಗಿ 80,000ಕ್ಕೂ ಅಧಿಕ ಟೆಕ್ ಉದ್ಯೋಗಿಗಳ ವಜಾ: ಜಾಗತಿಕ ತಂತ್ರಜ್ಞಾನ ವಲಯದ ಉದ್ಯೋಗ ಕಡಿತವನ್ನು ಮೇಲ್ವಿಚಾರಣೆ ಮಾಡುವ ★ಔಚಢಟ್ಟ್ಫಿ.ಢಜಿ ದತ್ತಾಂಶ ಒಂದನ್ನು ಹಂಚಿಕೊಂಡಿದ್ದು, 2025ರಲ್ಲಿ 169 ಕಂಪನಿಗಳಲ್ಲಿ 80,000ಕ್ಕೂ ಹೆಚ್ಚು ತಂತ್ರಜ್ಞಾನ ವೃತ್ತಿಪರರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ ಎಂಬ ಆಘಾತಕಾರಿ ವಿಷಯವನ್ನು ಹೊರಹಾಕಿದೆ. ಮೈಕ್ರೋಸಾಫ್ಟ್, 2025ರಲ್ಲಿ 15,000ಕ್ಕೂ ಹೆಚ್ಚು ಸಿಬ್ಬಂದಿಯನ್ನು ವಜಾಗೊಳಿಸಿದೆ. ಇಂಟೆಲ್ ಕಂಪನಿಯು 25,000, ಪ್ಯಾನಸೋನಿಕ್ 10,000, ಮೈಕ್ರೋಸಾಫ್ಟ್ 6500, ಮೆಟಾ 3600, ಅಮೆಜಾನ್ 14000, ಐಬಿಎಂ 8000, ಗೂಗಲ್ 500, ಎಚ್‌ಪಿ 6000, ನಿಸ್ಸಾನ್ 20000, ಸ್ಟಾರ್‌ಬಕ್ಸ್ 1100 ಸಿಬ್ಬಂದಿಯನ್ನು ವಜಾಗೊಳಿಸಿವೆ. ಇದರ ಜತೆಗೆ ವಾಲ್‌ಮಾರ್ಟ್, ಬಾಷ್‌ನಂತಹ ಕಂಪನಿಗಳು ಸಹ ಕಾಸ್ಟ್ ಕಟ್ಟಿಂಗ್‌ಗೆ ಮುಂದಾಗಿದ್ದು, ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡಲು ಯೋಚಿಸಿದೆ.

ಅಭಿಮನ್ಯು ಮುಂದಾಳತ್ವದಲ್ಲಿ ಗೋಧೂಳಿ ಲಗ್ನದಲ್ಲಿ ಅರಮನೆ ಪ್ರವೇಶಿಸಿದ ಗಜಪಡೆ

ಅರಮನೆ ಅಂಗಳದಲ್ಲಿ ಆನೆಗಳ ದಂಡು

ಮೈಸೂರು: ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಯಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿ ಅರಣ್ಯ ಭವನದಲ್ಲಿ ಬೀಡುಬಿಟ್ಟಿದ್ದ ದಸರಾ ಗಜಪಡೆ ಭಾನುವಾರ ಸಂಜೆ ಗೋಧೂಳಿ ಲಗ್ನದಲ್ಲಿ ಅರಮನೆ ಆವರಣ ಪ್ರವೇಶಿಸಿದವು.

ಹುಣಸೂರು ತಾಲೂಕಿನ ವೀರನಹೊಸಳ್ಳಿಯಿಂದ ಹೊರಟ ಗಜಪಡೆ ನಗರದ ಅಶೋಕ ಪುರಂನಲ್ಲಿರುವ ಅರಣ್ಯ ಭವನ ಆವರಣದಲ್ಲಿ ಆಗಮಿಸಿ ಬೀಡುಬಿಟ್ಟಿದ್ದವು. ಮೊದಲ ತಂಡದಲ್ಲಿ ಅಂಬಾರಿ ಆನೆ, ಮತ್ತಿಗೋಡು ಆನೆ ಶಿಬಿರದ ಅಭಿಮನ್ಯು ಮುಂದಾಳತ್ವದಲ್ಲಿ ಪ್ರಶಾಂತ, ಧನಂಜಯ, ಕಂಜನ್, ಕಾವೇರಿ, ಭೀಮ, ಮಹೇಂದ್ರ, ಏಕಲವ್ಯ, ಲಕ್ಷ್ಮೀ ಆನೆಗಳು ನಗರಕ್ಕೆ ಆಗಮಿಸಿವೆ. ಕೆಲವು ದಿನಗಳ ನಂತರ ಎರಡನೇ ತಂಡದ ಆನೆಗಳು ಸಹ ಆಗಮಿಸಲಿವೆ.

ಅಭಿಮನ್ಯು ನೇತೃತ್ವದ ಗಜಪಡೆಗೆ ಅರಮನೆ ಆವರಣದಲ್ಲಿ ಅರಮನೆ ಮಂಡಳಿಯಿಂದ ಆನೆಗಳಿಗೆ ಭವ್ಯವಾದ ಸ್ವಾಗತ ದೊರೆಯಿತು. ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಪುಷ್ಪಾರ್ಚನೆ ಹಾಗೂ ಪುಷ್ಪವೃಷ್ಟಿಯ ಮೂಲಕ ಆನೆಗಳನ್ನು ಅರಮನೆ ಆವರಣಕ್ಕೆ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭ ಪೊಲೀಸ್ ತಂಡದಿಂದ ಗಜಪಡೆಗೆ ಗೌರವ ವಂದನೆ ಸಲ್ಲಿಸಲಾಯಿತಲ್ಲದೆ, ಪೊಲೀಸ್ ವಾದ್ಯವೃಂದ, ಅಶ್ವರೋಹಿ ದಳ, ನಾದಸ್ವರ, ಪೂರ್ಣಕುಂಭ ಮೆರಗು ನೀಡಿದವು. ಶುಭ ಮುಹೂರ್ತದಲ್ಲಿ ಆನೆಗಳ ಪಾದ ತೊಳೆದು ಪಾದ ಪೂಜೆ ಮತ್ತು ಶೋಡಶೋಪಾಚಾರ ಪೂಜೆ ನೆರವೇರಿಸಿದ ನಂತರ ಆನೆಗಳಿಗೆ ಇಷ್ಟವಾದ ಪಂಚಫಲ ಇಟ್ಟು ಪೂಜೆ ಸಲ್ಲಿಸಲಾಯಿತು. ಆ ನಂತರ ಆನೆಗಳಿಗೆ ಬೆಲ್ಲ, ಕಬ್ಬು, ಹಣ್ಣು ಹಂಪಲುಗಳನ್ನು ನೀಡಲಾಯಿತು.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಯಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿ ಅರಣ್ಯ ಭವನದಲ್ಲಿ ಬೀಡುಬಿಟ್ಟಿದ್ದ ದಸರಾ ಗಜಪಡೆ ಭಾನುವಾರ ಸಂಜೆ ಗೋಧೂಳಿ ಲಗ್ನದಲ್ಲಿ ಅರಮನೆ ಆವರಣ ಪ್ರವೇಶಿಸಿದವು.

ಸೋಮವಾರದಿಂದ ತಾಲೀಮು

ಜಂಬೂಸವಾರಿ ಮೆರವಣಿಗೆ ಯಶಸ್ವಿಯಾಗಿ ನಡೆಯಲು ಆನೆಗಳಿಗೆ ತಾಲೀಮು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ಭಾನುವಾರ ಆನೆಗಳು ಅರಮನೆ ಆವರಣ ಪ್ರವೇಶಿಸಿದ ನಂತರ ಸೋಮವಾರದಿಂದಲೇ ತಾಲೀಮು ಪ್ರಾರಂಭಗೊಳ್ಳಲಿದೆ. ನಗರದ ಧನ್ವಂತ್ರಿ ರಸ್ತೆಯಲ್ಲಿರುವ ವೇ ಬ್ರಿಡ್ಜ್‌ಗೆ ಆನೆಗಳನ್ನು ತೂಕ ಪರೀಕ್ಷೆಗೆ ಕರೆದೊಯ್ಯುವ ಮೂಲಕ ಆನೆಗಳ ತಾಲೀಮು ಪ್ರಾರಂಭಗೊಳ್ಳಲಿದೆ. ಆನೆಗಳ ತೂಕವನ್ನು ಪರೀಕ್ಷೆಯ ಆಧಾರದ ಮೇಲೆ ಆನೆಗಳ ಆರೋಗ್ಯ ವೃದ್ಧಿಗೆ ಪೂರಕವಾದ ಆಹಾರವನ್ನು ನೀಡಲಾಗುವುದು.

ಅಪ್ರಾಪ್ತೆಗೆ ಮದುವೆ ಮಾಡಿಸಿ ತಗ್ಲಾಕೊಂಡ ಐಪಿಎಸ್ ಅಧಿಕಾರಿ

ಬೆಳಗಾವಿ: ಅಪ್ರಾಪ್ತ ಬಾಲಕಿಯ ಆಧಾರ್ ಕಾರ್ಡ್ ಅಕ್ರಮವಾಗಿ ತಿದ್ದುಪಡಿ ಮಾಡಿ ಮದುವೆ ಮಾಡಿಸಿದ್ದ ಆರೋಪದ ಮೇಲೆ ಐಪಿಎಸ್ ಅಧಿಕಾರಿ ರವೀಂದ್ರ ಗಡಾದಿ ದಂಪತಿ ಸೇರಿದಂತೆ ಒಟ್ಟು ಎಂಟು ಜನ ಆರೋಪಿಗಳ ವಿರುದ್ಧ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

ಅಪ್ರಾಪ್ತ ಬಾಲಕಿಗೆ ಮದುವೆ ಮಾಡಿಸಿದ್ದ ಆರೋಪದ ಮೇಲೆ ಅಥಣಿ ತಾಲೂಕಿನ ಐಗಳಿ ಪೊಲೀಸ್ ಠಾಣೆಯಲ್ಲಿ ಕಳೆದ ಮಾರ್ಚ್ ನಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತು ತನಿಖೆ ನಡೆಸಿದ್ದ ಪೊಲೀಸರು ಬೆಳಗಾವಿ ವಿಭಾಗದ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ವರಿಷ್ಠಾಧಿಕಾರಿ ರವೀಂದ್ರ ಗಡಾದಿ ಹಾಗೂ ಅವರ ಪತ್ನಿ ಸೇರಿ ಒಟ್ಟು ಎಂಟು ಜನರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಿದ್ದಾರೆ. 2023 ರ ಅಕ್ಟೋಬರ್ ನಲ್ಲಿ ಅಥಣಿ ತಾಲೂಕಿನ ಐಗಳಿ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಬಾಲಕಿ ಅಪ್ರಾಪ್ತೆ ಎಂದು ಗೊತ್ತಿದ್ದರು ಐಪಿಎಸ್ ಅಧಿಕಾರಿ ರವೀಂದ್ರ ಗಡಾದಿ ಹಾಗೂ ಏಳು ಜನ ಸಂಬಂಧಿಕರು ಸೇರಿಕೊಂಡು ಮದುವೆ ಮಾಡಿಸಿದ್ದಾರೆ. ಇನ್ನೂ ಅಪ್ರಾಪ್ತ ಬಾಲಕಿ ಪತಿ ರಾಜೇಂದ್ರ ಗಡಾದಿ ಒತ್ತಾಯಪೂರ್ವಕವಾಗಿ ದೈಹಿಕ ಸಂಪರ್ಕ ಮಾಡಿ ಗರ್ಭಿಣಿ ಮಾಡಿರುವುದಾಗಿ ಉಲ್ಲೇಖಿಸಲಾಗಿದೆ.

ಎಂಟು ಜನರ ವಿರುದ್ಧ ಕೇಸ್ ದಾಖಲು

2008 ರ ಜೂನ್ ಒಂದರಂದು ಬಾಲಕಿ ಜನಿಸಿದ್ದು ಕಳೆದ 2023 ರ ಅಕ್ಟೋಬರ್ 23 ರಂದು ಐಗಳಿ ಗ್ರಾಮದ ರಾಜೇಂದ್ರ ಸೈದಪ್ಪ ಗಡಾದಿ ಎಂಬಾತ ಮದುವೆ ಮಾಡಿಕೊಂಡಿದ್ದಾನೆ. ಆ ಸಂದರ್ಭದಲ್ಲಿ ಯುವತಿಗೆ ಕೇವಲ 16 ವರ್ಷ ವಯಸ್ಸಾಗಿತ್ತು. ಮನೆಯವರ ಒಪ್ಪಿಗೆ ಇಲ್ಲದಿದ್ದರು ರವೀಂದ್ರ ಗಡಾದಿ ಹಾಗೂ ವರ್ಷಾ ಗಡಾದಿ ನನ್ನ ಮಗಳ ಜನ್ಮದಿನಾಂಕ ತಿದ್ದಿ ಮದುವೆ ಮಾಡಿಸಿದ್ದರು ಎಂದು ಶೋಭಾ ಎಂಬುವವರು ದೂರು ದಾಖಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು ಎಂಟು ಜನರ ವಿರುದ್ಧ ಬಾಲ್ಯ ವಿವಾಹ ಕಾಯ್ದೆ, ಪೋಕ್ಸೊ ಪ್ರಕರಣ ಅಡಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ ಮಾಡಲಾಗಿದೆ.

ರಾಜ್ಯದಲ್ಲಿ ಮಳೆಯಾರ್ಭಟ

← ಮೊದಲಪುಟದಿಂದ

ಕಳೆದ ಒಂದು ವಾರದಿಂದ ಆಗಾಗ ಬೆಂಗಳೂರು ನಗರ ಜಿಲ್ಲೆ, ದಾವಣಗೆರೆ, ತುಮಕೂರು, ಕೊಡಗು,ಶಿವಮೊಗ್ಗ, ಚಿಕ್ಕಮಗಳೂರು, ವಿಜಯಪುರ, ಬಾಗಲಕೋಟೆ, ಧಾರವಾಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಉತ್ತಮ ಮಳೆ ಆಗಿದೆ. ದಿನವಿಡೀ ಜಿಟಿ ಜಿಟಿ ಮಳೆ ಅಬ್ಬರಿಸಿದೆ. ವಿಜಯಪುರ, ಬೆಳಗಾವಿ ಭಾಗದ ಕೆಲವು ಪ್ರದೇಶಗಳಲ್ಲಿ ಮಳೆ ಹಾನಿ ಸಂಭವಿಸಿದೆ. ರಸ್ತೆಗಳು ಜಲಾವೃತಗೊಂಡಿವೆ. ಈ ಭಾಗಗಳಲ್ಲಿ ಮಳೆ ಮುಂದುವರಿಯುವ ಲಕ್ಷಣಗಳು ಇವೆ.

ಬೆಂಗಳೂರಲ್ಲಿ ಆ.15ರವರೆಗೆ ಜೋರು ಮಳೆ: ಒಂದು ವಾರದಿಂದ ರಾಜಧಾನಿ ಬೆಂಗಳೂರಿನಲ್ಲಿ ಆಗಾಗ ಜೋರು ಮಳೆಯಾಗುತ್ತಿದ್ದು, ಈ ವ್ಯಾಪಕ ಮಳೆ ಮುಂದಿನ ನಾಲ್ಕರಿಂದ ಐದು ದಿನಗಳ ಕಾಲ ಮುಂದುವರಿಯಲಿದೆ. ತಾಪಮಾನದಲ್ಲಿ ಕೊಂಚ ಏರು ಪೇರಾಗಲಿದೆ. ಮಧ್ಯಾಹ್ನ ಹೊತ್ತಿಗೆ ಮಳೆ ಜಮಾಯಿಸಲಿದ್ದು, ಸಂಜೆ ಇಲ್ಲವೇ ರಾತ್ರಿ ಮತ್ತಷ್ಟು ಬಿರುಸಿನ ಮಳೆ ಆಗಲಿದೆ. ಚಳಿ ಹಾಗೂ ಮಬ್ಬು ವಾತಾವರಣ ಕಂಡು ಬರಲಿದೆ. ಈ ವೇಳೆ ಗರಿಷ್ಠ ತಾಪಮಾನ 28-29 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ಕಂಡು ಬರಲಿದೆ. ಭಾನುವಾರ ಬೆಂಗಳೂರಿಗೆ ಮಧ್ಯಮದಿಂದ ಭಾರೀ ಮಳೆಯಾಗಿದ್ದು, ರಸ್ತೆಗಳಲ್ಲೆಲ್ಲಾ ನೀರು ತುಂಬಿಕೊಂಡಿದೆ. ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಜಯನಗರ, ಮೆಜೆಸ್ಟಿಕ್, ಎಂ.ಜಿ.ರಸ್ತೆ, ವಿಜಯನಗರ, ಆರ್.ಟಿ.ನಗರ, ಇಂದಿರಾನಗರ ಮತ್ತು ಕೆ.ಆರ್.ಪುರದಲ್ಲಿ ಸಾಧಾರಣದಿಂದ ಭಾರೀ ಮಳೆಯಾಗಿದೆ. ಬೆಂಗಳೂರಿನಲ್ಲಿ ಕಳೆದ ಒಂದು ವಾರದಿಂದ ದಿನವೂ ಮಳೆಯಾಗುತ್ತಿದೆ.

ಇಂದಿನಿಂದ ಅಧಿವೇಶನ

← ಮೊದಲಪುಟದಿಂದ

ಕೇಂದ್ರದ ಟಾರ್ಗೆಟ್‌ಗೆ ತೀರ್ಮಾನ: ಪ್ರತಿಪಕ್ಷಗಳ ಬಾಯಿ ಮುಚ್ಚಿಸಲು ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಒಪ್ಪಿಗೆ ನೀಡುವಲ್ಲಿ ಆಗಿರುವ ವಿಳಂಬ, ತೆರಿಗೆ ಹಂಚಿಕೆಯಲ್ಲಿನ ಅನ್ಯಾಯ, ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ಅನುದಾನ ನೀಡದಿರುವುದು, ಬಿಜೆಪಿ ಸಂಸದರು ಕೇಂದ್ರದ ವಿರುದ್ಧ ದನಿ ಎತ್ತದೆ ಇರುವ ವಿಚಾರ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿ ಪ್ರತಿಪಕ್ಷಗಳನ್ನು ಹಣಿಯಲು ಕಾಂಗ್ರೆಸ್ ಸಹ ಸಿದ್ಧವಾಗಿದೆ.

ಪ್ರಮುಖ ವಿಧೇಯಕಗಳ ಮಂಡನೆ: ಚಳಿಗಾಲದ ಅಧಿವೇಶನದಲ್ಲಿ ಸುಮಾರು 23 ವಿಧೇಯಕಗಳನ್ನು ಮಂಡಿಸಲು ಸರಕಾರ ನಿರ್ಧರಿಸಿದ್ದು, ಕರ್ನಾಟಕ ಜನದಟ್ಟಣೆ ವಿಧೇಯಕ, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧ ಮತ್ತು ನಿಯಂತ್ರಣ ವಿಧೇಯಕ, ಸುಳ್ಳು ಸುದ್ದಿ ನಿಯಂತ್ರಣ ವಿಧೇಯಕದಂತಹ ಪ್ರಮುಖ ವಿಧೇಯಕಗಳು ಈ ಅಧಿವೇಶನದಲ್ಲಿ ಮಂಡನೆಯಾಗಲಿವೆ. ಜತೆಗೆ ಕರ್ನಾಟಕ ನಗರ ಮತ್ತು ಪಟ್ಟಣ ಯೋಜನೆ ಮತ್ತು ಇತರ ಕಾನೂನು ತಿದ್ದುಪಡಿ ವಿಧೇಯಕ, ಕರ್ನಾಟಕ ನೋಂದಣಿ ತಿದ್ದುಪಡಿ ವಿಧೇಯಕ, ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ತಿದ್ದುಪಡಿ ವಿಧೇಯಕ, ಕರ್ನಾಟಕ ದೇವದಾಸಿ ಪದ್ಧತಿ ತಡೆಗಟ್ಟುವಿಕೆ ನಿಷೇಧ ಪರಿಹಾರ ಮತ್ತು ಪುನರ್ ವಸತಿ ವಿಧೇಯಕ, ಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ ತಿದ್ದುಪಡಿ ವಿಧೇಯಕ ಸೇರಿದಂತೆ ಒಟ್ಟು 23 ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳಲು ತೀರ್ಮಾನಿಸಿದೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಧರ್ಮಸ್ಥಳ ವಿರುದ್ಧ ಪಿತೂರಿ ನಡೆದಿದೆ

ದಾವಣಗೆರೆ: ಧರ್ಮಸ್ಥಳದ ಧರ್ಮಾಧಿಕಾರಿಯಾದ ವೀರೇಂದ್ರ ಹೆಗಡೆಯವರು ಸರಕಾರ ಮಾಡುವ ಕೆಲಸವನ್ನು ಕೂಡ ಅವರೇ ಮಾಡಿಕೊಂಡು ಬರುತ್ತಿದ್ದಾರೆ ಎಂದು ಶಾಸಕ ಶಿವಗಂಗಾ ಬಸವರಾಜ್

ಕೊಂಡಾಡಿದ್ದಾರೆ. ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಧರ್ಮಸ್ಥಳದ ಮೇಲೆ ಬಂದ ಈ ಆರೋಪವನ್ನು ನಂಬಲು ಅಸಾಧ್ಯವಾಗಿದೆ. ಏಕೆ ರೋಪ ಮಾಡ್ತಾರೆ ಅಂತ ಗೊತ್ತಿಲ್ಲ. ಎಸ್‌ಐಟಿ ತನಿಖೆ ನಡೆಯುತ್ತಿದೆ. ಇದುವರೆಗೂ ಯಾವುದೇ ಆಧಾರಗಳು ಸಿಕ್ಕಿಲ್ಲ ಎಂದಿದ್ದಾರೆ. ಶವಗಳು ಕೂಡ ಸಿಕ್ಕಿಲ್ಲ. ಇದರ ಹಿಂದೆ ಕಾಣದ ಕೈಗಳು ಪಿತೂರಿ ನಡೆಯುತ್ತಿದೆ. ಧರ್ಮಸ್ಥಳ ನಮ್ಮ ರಾಜ್ಯದ ಜನತೆಯ ಧಾರ್ಮಿಕ ಭಕ್ತ ಕೇಂದ್ರವಾಗಿದೆ. ಆದ್ದರಿಂದ ಅದರ ಮೇಲೆ ಪಿತೂರಿ ನಡೆಸುತ್ತಿದ್ದವರು ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ರಾಹುಲ್ ವಿರುದ್ಧ ಯತ್ನಾಳ್ ಕಿಡಿ

ಬಾಗಲಕೋಟೆ: ರಾಹುಲ್ ಗಾಂಧಿ ಒಬ್ಬ ಬಚ್ಚಾ. ಅದಕ್ಕೆ ಮೆದುಳೇ ಇಲ್ಲ. ಎಲ್ಲರಿಗೂ ತಲೆಯಲ್ಲಿ ಮೆದುಳು ಇದ್ದರೆ ರಾಗಾಗೆ ಮೊಣಕಾಲಿನಲ್ಲಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಿಚಾ

ಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಅಕ್ರಮ ಮತದಾನ ಕುರಿತು ರಾಹುಲ್ ಗಾಂಧಿ ಆಧಾರ ರಹಿತ ಮಾತನಾಡಿದ್ದಾರೆ ಎಂದರು. ಬೆಂಗಳೂರು ಮೆಟ್ರೋ ವಿಚಾರದಲ್ಲಿ ನಡೆಯುತ್ತಿರುವ ಕ್ರೆಡಿಟ್ ವಾರ್ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ಮೆಟ್ರೋ ಕೇಂದ್ರ ಸರಕಾರದ ಯೋಜನೆ ಅದಕ್ಯಾಕೆ ಕಾಂಗ್ರೆಸಿಗೆ ಕ್ರೆಡಿಟ್ ಕೊಡಬೇಕು. ಸಿದ್ದರಾಮಯ್ಯ ಅವರು ರಾಜ್ಯ ದಿವಾಳಿ ಆಗಿರುವುದರ ಕ್ರೆಡಿಟ್ ತೆಗೆದುಕೊಳ್ಳಲಿ. ಗ್ಯಾರಂಟಿ ಯೋಜನೆಯಿಂದ ಇಡೀ ರಾಜ್ಯ ದಿವಾಳಿ ಆಗಿದೆ ಎಂದರು. ಬಿಜೆಪಿ ಅವರಿಗೆ ಅವಶ್ಯಕತೆ ಬಿದ್ದರೆ ನನ್ನನ್ನು ಸೇರ್ಪಡೆ ಮಾಡಿಸಿ ಕೊಳ್ಳುತ್ತಾರಂತೆ. ಅದು ಇಲ್ಲವಾದರೆ ನಮ್ಮದೇ ರಾಜಕೀಯ ಪಕ್ಷ ಇದೆಯಲಾ ಭಗವಾ ಧ್ವಜ ಹಿಡಿದು ಹಿಂದೂ ಪಾರ್ಟಿ ಎಂದು ಹೋಗುವೆ. ವಿಜ ಯೇಂದ್ರ ನನ್ನೇ ಮುಖ್ಯಮಂತ್ರಿ ಮಾಡುತ್ತೇನೆ ಎಂದು ಹೊರ ಟರೆ ಬಿಜೆಪಿಗೆ ಯಾಕೆ ಸುಡುಗಾಡಿಗೆ ಹೋಗಬೇಕು?. ಯಡಿಯೂರಪ್ಪ ಮುಖ ನೋಡುವುದಕ್ಕೋ ಅಥವಾ ವಿಜಯೇಂದ್ರನಿಗೆ ಜೀ ಎನ್ನಲು ಹೋಗಬೇಕೋ. ನಾನು ಜೀ ಎನ್ನುವ ಮಗನೇ ಅಲ್ಲ ಎಂದರು.

ರಾಹುಲ್ ಮೆದುಳಿಗೂ ನಾಲಿಗೆಗೂ ಲಿಂಕ್ ಇಲ್ಲ

ದಾವಣಗೆರೆ: ರಾಹುಲ್ ಗಾಂಧಿಯವರ ಮೆದುಳಿಗೂ ನಾಲಿಗೆಗೂ ಲಿಂಕ್ ಇಲ್ಲ ಎಂದು ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ ವ್ಯಂಗ್ಯವಾಡಿದ್ದಾರೆ. ಸುದ್ದಿಗಾರ

ರೊಂದಿಗೆ ಅವರು ಮಾತನಾಡಿದರು. ಈ ವೇಳೆ, ರಾಹುಲ್ ಗಾಂಧಿಯವರ ಮತಗಳ್ಳತನ ಆರೋಪದ ವಿಚಾರಕ್ಕೆ ಪ್ರತಿಕ್ರಿಯಿಸಿ, ಅವರು ಒಬ್ಬ ಅಪ್ರಬುದ್ಧ ವ್ಯಕ್ತಿ. ಯಾವ ಪುರುಷಾರ್ಥಕ್ಕೆ ನೀವು ಬೆಂಗಳೂರಿಗೆ ಬಂದ್ರಿ? ನೀವು ಪಲಾಯನ ವಾದಿ, ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದು ವಾಗ್ದಾಳಿ ನಡೆಸಿ ದ್ದಾರೆ. ರಾಜ್ಯದಲ್ಲಿ 138 ಸೀಟು ಗೆದ್ದಾಗ ಮತಕಳ್ಳತನ ಆಗಲಿಲ್ವಾ? ನೀವು ಚುನಾವಣಾ ಆಯೋಗಕ್ಕೆ ಮಾತ್ರವಲ್ಲ ದೇಶದ ಜನತೆಗೆ ಅಪಮಾನ ಮಾಡಿದ್ದೀರಿ. ನೀವು ಕೂಡಲೇ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. ಧರ್ಮಸ್ಥಳ ಕೇಸ್ ವಿಚಾರವಾಗಿ, ಕಾಂಗ್ರೆಸ್ ಎಡಪಂಥೀಯರ ಜತೆ ಸೇರಿ ಧರ್ಮಸ್ಥಳಕ್ಕೆ ಅಪಮಾನ ಮಾಡಿದೆ. ಯಾರೋ ಒಬ್ಬ ಅನಾಮಿಕ ವ್ಯಕ್ತಿಯ ಮಾತು ಕೇಳಿ ಎಸ್ ಐಟಿ ತನಿಖೆಗೆ ಒಪ್ಪಿಸಿದ್ದು ನಾಚಿಕೆಗೇಡಿನ ಸಂಗತಿಯಾಗಿದೆ. ಕಾಂಗ್ರೆಸ್ ಹಿಂದೂ ವಿರೋಧಿ ಎಂದು ಕಿಡಿಕಾರಿದ್ದಾರೆ.

8 ಜನರಿಗೆ ಅಂಗಾಂಗ ದಾನ ಮಾಡಿದ ಚಾಲಕ

ಕಾರವಾರ: ತನ್ನ ಸಾವಿನಲ್ಲೂ ಎಂಟು ಜನರಿಗೆ ಅಂಗಾಂಗ ದಾನ ಮಾಡುವ ಮೂಲಕ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಆಟೋ ಚಾಲಕ ಸಾರ್ಥಕತೆ ಮೆರೆದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಶಿರಳಗಿ ಮೂಲದ ವಿನಾಯಕ ವೆಂಕಟೇಶ ನಾಯ್ಕ ಅವರು ಜುಲೈ 27 ರಂದು ಬೆಂಗಳೂರಿನಲ್ಲಿ ಆಟೋ ಚಲಾಯಿಸುತ್ತಿದ್ದಾಗ ಬೆಂಗಳೂರಿನ ಸೀತಾ ಸರ್ಕಲ್ ಬಳಿ ಬಿಎಂಟಿಸಿ ಬಸ್ ಹಿಂಭಾಗದಿಂದ ರಿಕ್ಷಕ್ಕೆ ಗುದ್ದಿತ್ತು. ಆಟೋದಲ್ಲಿ ಇದ್ದ ಪ್ರಯಾಣಿಕರು ಸಾವು ಕಂಡಿದ್ದರೆ, ವಿನಾಯಕ್ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರು. ಅಪಘಾತದಿಂದ ವಿನಾಯಕ ವೆಂಕಟೇಶ್ ನಾಯ್ಕ ಕೋಮಾಕ್ಕೆ ಜಾರಿದ್ದರು. ಆದರೆ, ಬದುಕಿಗಾಗಿ 13 ದಿನಗಳ ಹೋರಾಟ ನಡೆಸಿದರೂ ಮಿದುಳು ನಿಷ್ಕ್ರಿಯವಾಗಿತ್ತು. ಹೀಗಾಗಿ, ಅವರ ಆಸೆ ಯಂತೆ ಅಂಗಾಂಗವನ್ನು ದಾನ ಮಾಡಲಾಗಿದ್ದು, ಎಂಟು ಜನರಿಗೆ ಅವರ ಅಂಗಗಳನ್ನು ನೀಡಲಾಗಿದೆ. ಈ ಮೂಲಕ ತನ್ನ ಸಾವಿನಲ್ಲೂ ಇನ್ನೊಬ್ಬರ ಜೀವನಕ್ಕೆ ಬೆಳಕಾಗಿದ್ದು, ಸಾರ್ಥಕತೆ ಮೆರೆದಿದ್ದಾರೆ. ಭಾನುವಾರ ಅವರ ಮೃತದೇಹವನ್ನು ಸಿದ್ದಾಪುರದ ಶಿರಳಗೆ ತರಲಾಗಿದ್ದು, ಸಕಲ ಗೌರವದೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ವಿಶ್ವವಾಣಿ ಕ್ಲಬ್ ಹೌಸ್
11.8.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಶ್ರೀಧರ್ ಮೂರ್ತಿ ಎನ್.ಎಸ್
ವಿಷಯ
ಬಿ.ಸರೋಜಾದೇವಿ ಸ್ಮರಣೆ
vishwavani.news

ಮೇಕ್ ಇನ್ ಇಂಡಿಯಾ ಮೂಲಕ ಶಸ್ತ್ರಾಸ್ತ್ರ ಆಮದು ಪ್ರಮಾಣ ತಗ್ಗಿದೆ | ಕೇಂದ್ರ, ರಾಜ್ಯ ಸರಕಾರಗಳು ಇರುವುದು ದೇಶದ ಜನರ ಸೇವೆಗಾಗಿ | 2 ಮೆಟ್ರೋ ಮಾರ್ಗಗಳಿಂದ ಬೆಂಗಳೂರಿನ ಸಂಚಾರ ಸಮಸ್ಯೆ ತಗ್ಗಲಿದೆ

ಆಪರೇಷನ್ ಸಿಂದೂರಕ್ಕೆ ಮೇಕ್ ಇನ್ ಇಂಡಿಯಾ ಶಕ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ ಶಕ್ತಿ ಏನು ಎನ್ನುವುದನ್ನು 'ಆಪರೇಷನ್ ಸಿಂಧೂರ' ಇಡೀ ಜಗತ್ತಿಗೆ ತೋರಿಸಿದೆ. ಇದರ ಹಿಂದೆ 'ಮೇಕ್ ಇನ್ ಇಂಡಿಯಾ'ದ ಶಕ್ತಿ ಅಡಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಆಪರೇಷನ್ ಸಿಂದೂರದ ಬಳಿಕ ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ವಿವಿಧ ಕಾರ್ಯಕ್ರಮಗಳ ಉದ್ಘಾಟನೆಯ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಆಪರೇಷನ್ ಸಿಂದೂರವನ್ನು ಪ್ರಸ್ತಾಪಿಸಿದರು. ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ಆರಂಭಿಸಿದ ಮೋದಿ ಅವರು, ಕೆಂಪೇಗೌಡರನ್ನು ಹಾಗೂ ಅಣ್ಣಮ್ಮ ದೇವಿಯನ್ನು ಸ್ಮರಿಸಿ ದರು. ಈ ವೇಳೆ ಕೇಂದ್ರ ಸರಕಾರದ ಸಾಧನೆಯನ್ನು ಹೇಳುವುದರೊಂದಿಗೆ ಮೇಕ್ ಇಂಡಿಯಾವನ್ನು ಪ್ರಸ್ತಾಪಿಸಿದರು.

ಇಡೀ ವಿಶ್ವವೇ ನೋಡಿದ ಆಪರೇಷನ್ ಸಿಂದೂರಕ್ಕೆ ಮೇಕ್ ಇಂಡಿಯಾ ಶಕ್ತಿ ತುಂಬಿದೆ. ಆಪರೇಷನ್ ಸಿಂದೂರ ನಡೆದ ನಂತರ ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದ್ದೇನೆ. ಪಾಕ್ ಭಯೋತ್ಪಾದಕರ ವಿರುದ್ಧ ನಮ್ಮ ಯೋಧರು ನಡೆಸಿದ ಪರಾಕ್ರಮವನ್ನು ಜಗತ್ತು ನೋಡಿದೆ. ಯೋಧರು ನಡೆಸಿದ ಯಶೋಗಾಥೆಯಲ್ಲಿ ಮೇಕ್ ಇನ್ ಇಂಡಿಯಾ ಮೂಲಕ ತಯಾರಿಸಿದ ಶಸ್ತ್ರಾಸ್ತ್ರಗಳು ನಮ್ಮ ಎದುರಾಳಿಗಳಿಗೆ ಮರ್ಮಾಘಾತ ಕೊಟ್ಟಿದೆ. ಅದರಲ್ಲೂ ಬೆಂಗಳೂರಿನ ಪಾತ್ರ ಇನ್ನೂ ಹಿರಿದಾಗಿದೆ ಎಂದು ಪ್ರಶಂಸಿಸಿದರು.

ಆಪರೇಷನ್ ಸಿಂದೂರದಲ್ಲಿ ಭಾರತೀಯ ಸೇನೆ ಸಫಲತೆ ಹಾಗೂ ಗಡಿಯನ್ನು ದಾಟಿ ಉಗ್ರರ ನೆಲೆಗಳನ್ನು ನಾಶಪಡಿಸಿರುವುದು ಇಡೀ ದೇಶಕ್ಕೆ ಭಾರತದ ಹೊಸ ಸ್ವರೂಪದ ದರ್ಶನವನ್ನು ಮಾಡಿದಂತಾಗಿದೆ. ಇದರ ಹಿಂದೆ ತಂತ್ರಜ್ಞಾನ, ರಕ್ಷಣೆ, ಮೇಕ್ ಇನ್ ಇಂಡಿಯಾದ ತಾಕತ್ತು ಇತ್ತು. ಕರ್ನಾಟಕದ ವಿಶೇಷವಾಗಿ ಬೆಂಗಳೂರು ಯುವಕರ ಪಾತ್ರವನ್ನು ನಾನು ಮರೆಯಲಾರೆ ಎಂದರು.

ಆರ್ಥಿಕತೆಯಲ್ಲಿ ಮೂರನೇ ಸ್ಥಾನಕ್ಕೆ ತಲುಪಬೇಕು

ಭಾರತ ಇಂದು ವಿಶ್ವದ ಆರ್ಥಿಕ ವ್ಯವಸ್ಥೆಯಲ್ಲಿ 5ನೇ ಸ್ಥಾನದಲ್ಲಿದೆ. ನಾವು ಮೂರನೇ ಸ್ಥಾನಕ್ಕೆ ತಲುಪಬೇಕು. ಈ ಗುರಿ ತಲುಪಬೇಕಾದರೆ ಇನ್ನೂ ಹೆಚ್ಚಿನ ಪರಿಶ್ರಮದ ಅಗತ್ಯವಿದೆ. ಇದಕ್ಕೆ ಎಲ್ಲರ ಸಹಕಾರವೂ ಅಗತ್ಯ. 2014ಕ್ಕೂ ಮೊದಲು ದೇಶದ ಐದು ನಗರಗಳಲ್ಲಿ ಮಾತ್ರ ಮೆಟ್ರೋ ರೈಲು ಇತ್ತು. ಆದರಿಂದ 24 ನಗರಗಳಿಗೆ ವಿಸ್ತರಣೆ ಮಾಡಿದ್ದೇವೆ. ಮೆಟ್ರೋ ಹೊಂದಿದ ವಿಶ್ವದ ಮೂರನೇ ರಾಷ್ಟ್ರ ಎಂದರೆ ಅದು ಭಾರತ. 2014 ರವರೆಗೆ 20 ಸಾವಿರ ಕಿ.ಮೀ. ವಿದ್ಯುದೀಕರಣ ಮಾಡಲಾಗಿತ್ತು. ಈಗ ಅದರ ಸಂಖ್ಯೆ 40 ಸಾವಿರಕ್ಕೆ ಏರಿಕೆಯಾಗಿದೆ. 74 ಇದ್ದ ವಿಮಾನನಿಲ್ದಾಣಗಳ ಸಂಖ್ಯೆ 160ಕ್ಕೇರಿದೆ. 2014ಕ್ಕೂ ಮೊದಲು 7 ಏಮ್ಸ್ ಹಾಗೂ 321 ವೈದ್ಯಕೀಯ ಕಾಲೇಜುಗಳಿದ್ದವು. ಈಗ ಏಮ್ಸ್ ಸಂಖ್ಯೆ 22ಕ್ಕೆ ಹಾಗೂ 704 ವೈದ್ಯಕೀಯ ಕಾಲೇಜುಗಳಿವೆ. ನಮ್ಮ ಸರಕಾರ ಪ್ರತಿಯೊಂದೂ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿದೆ. ಭಾರತ ಇಂದು ವಿಶ್ವದ 3ನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದರು. ಭಾರತದ ಅಗತ್ಯಗಳನ್ನು ಪೂರೈಸಲು ಒಟ್ಟಿಗೆ ಹೆಜ್ಜೆ ಇಡಬೇಕಿದೆ. ಭಾರತ ಉನ್ನತ ಸ್ಥಾನಕ್ಕೆ ಏರಬೇಕು. ಕೇಂದ್ರ ಸರಕಾರ ಇರಲಿ, ರಾಜ್ಯ ಸರಕಾರ ಇರಲಿ, ನಾವೆಲ್ಲರೂ ದೇಶದ ಜನರ ಸೇವೆಗೆ ಇದ್ದೇವೆ. ಒಟ್ಟಿಗೆ ದೇಶ, ದೇಶದ ಜನರ ಹಿತಕ್ಕೆ ಕೆಲಸ ಮಾಡಬೇಕು ಎನ್ನುವ ಮೂಲಕ ಕೇಂದ್ರದ ತಾರತಮ್ಯ ನೀತಿ ಆರೋಪಕ್ಕೆ ತಿರುಗೇಟು ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನ ರಾಗಿ ಗುಡ್ಡದಿಂದ ಎಲೆಕ್ಟ್ರಾನಿಕ್ ಸಿಟಿವರೆಗಿನ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಭಾನುವಾರ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್, ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ತೇಜಸ್ವಿ ಸೂರ್ಯ, ಸಿ.ಎನ್ ಮಂಜುನಾಥ್ ಮುಂತಾದವರು ಇದ್ದರು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಮೆಟ್ರೋ ಹಳದಿ ಮಾರ್ಗದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮ್ಯ ಅವರು ಗಣೇಶ ವಿಗ್ರಹ ನೀಡಿ ಸ್ವಾಗತಿಸಿದರು.

ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನದ ಮೇಲೆ ದಾಳಿ ನಡೆಸುವ ಮೂಲಕ ವಿಶ್ವಕ್ಕೆ ಭಾರತದ ವಿಶ್ವರೂಪ ತೋರಿಸಿದ್ದೇವೆ. ಆಪರೇಷನ್ ಸಿಂದೂರದ ಸಫಲತೆ ಹಿಂದೆ ಮೇಕ್ ಇನ್ ಇಂಡಿಯಾದ ಶಕ್ತಿ ಇದೆ. ಇದರಲ್ಲಿ ಬೆಂಗಳೂರು ಹಾಗೂ ಇಲ್ಲಿನ ಯುವ ತಂತ್ರಜ್ಞರ ಯೋಗದಾನವೂ ಇದೆ. ಆಪರೇಷನ್ ಸಿಂಧೂರ ಯಶಸ್ಸಿಗೆ ಕಾರಣರಾದ ಬೆಂಗಳೂರು ಯುವಕರಿಗೆ ಅಭಿನಂದನೆ.

-ನರೇಂದ್ರ ಮೋದಿ, ಪ್ರಧಾನ ಮಂತ್ರಿ

- 2014ಕ್ಕೂ ಮೊದಲು ದೇಶದ 5 ನಗರಗಳಲ್ಲಿ ಮೆಟ್ರೋ ರೈಲು
- ಸದ್ಯ ದೇಶದ 24 ನಗರಗಳಿಗೆ ಮೆಟ್ರೋ ಸೇವೆ ವಿಸ್ತರಣೆ
- ಮೆಟ್ರೋ ಹೊಂದಿದ ವಿಶ್ವದ ಮೂರನೇ ರಾಷ್ಟ್ರ ಭಾರತ
- ದೇಶದಲ್ಲಿ 74 ಇದ್ದ ವಿಮಾನ ನಿಲ್ದಾಣಗಳ ಸಂಖ್ಯೆ 160ಕ್ಕೇರಿಕೆ
- 2014ಕ್ಕೂ ಮೊದಲು 7 ಏಮ್ಸ್, 321 ವೈದ್ಯಕೀಯ ಕಾಲೇಜುಗಳಿದ್ದವು
- ಸದ್ಯ ಏಮ್ಸ್ ಸಂಖ್ಯೆ 22ಕ್ಕೆ ಹಾಗೂ 704 ವೈದ್ಯಕೀಯ ಕಾಲೇಜುಗಳಿವೆ

ಬೆಂಗಳೂರು ಭಾರತದ ಪ್ರಗತಿಯ ಸಂಕೇತ

ಬೆಂಗಳೂರು ಹೊಸ ಭಾರತದ ಪ್ರಗತಿಯ ಸಂಕೇತವಾಗಿದೆ. ಈ ನಗರವು ಜಾಗತಿಕ ವಲಯದಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿದೆ. ಇದರ ಯಶಸ್ಸಿಗೆ ಇಲ್ಲಿನ ಜನರ ಶ್ರಮ ಮತ್ತು ಪ್ರತಿಭೆ ಕಾರಣ. ಇಂತಹ ನಗರಗಳನ್ನು ಭವಿಷ್ಯಕ್ಕಾಗಿ ರೂಪಿಸಬೇಕು. ಹಳದಿ ಹಾಗೂ ಕಿತ್ತಳೆ ಮೆಟ್ರೋ ಮಾರ್ಗಗಳು ಬೆಂಗಳೂರು ಸಂಚಾರಕ್ಕೆ ದೊಡ್ಡ ಬಲ. ಎರಡೂ ಮಾರ್ಗಗಳಿಂದ 25 ಲಕ್ಷ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಬೆಂಗಳೂರಿನ ಕಂಪನಿಗಳು ಜಾಗತಿಕವಾಗಿ ಸ್ಪರ್ಧಿಸುತ್ತಿದೆ. ಸ್ಪರ್ಧಿಸುವುದು ಮಾತ್ರ ಅಲ್ಲ ನಾವು ಮುನ್ನಡೆಸುವ ಮಟ್ಟಕ್ಕೆ ಬೆಳೆಯಬೇಕು. ಕರ್ನಾಟಕವನ್ನು ವಿಕಾಸದತ್ತ ಕೊಂಡೊಯ್ಯುತ್ತೇವೆ. ಮೇಕ್ ಇನ್ ಇಂಡಿಯಾದಲ್ಲಿ ಉತ್ಪಾದನೆಯಲ್ಲಿ ಬೆಂಗಳೂರು, ಕರ್ನಾಟಕದ ಪಾಲು ಹೆಚ್ಚು ಹೆಚ್ಚಿರಬೇಕು ಎಂದರು.

ವಂದೇ ಭಾರತ್ ರೈಲಿನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ

ಬೆಂಗಳೂರು-ಬೆಳಗಾವಿ ವಂದೇ ಭಾರತ್ ರೈಲನ್ನು ಉದ್ಘಾಟಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ರೈಲಿನಲ್ಲಿ ತೆರಳಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು. ಹಲವು ವಿದ್ಯಾರ್ಥಿಗಳು ಮೋದಿ ಮಾಸ್ಕ್ ಹಾಗೂ ಭಾರತ ಧ್ವಜವನ್ನು ಹಿಡಿದು ಪ್ರಧಾನಿಯನ್ನು ಸ್ವಾಗತಿಸಿದರು. ಪ್ರಧಾನಿಯೊಂದಿಗೆ ವಿದ್ಯಾರ್ಥಿಗಳು ಮಾತನಾಡಿ ಸಂಭ್ರಮಿಸಿದರು. ಈ ವೇಳೆ ಮೋದಿ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್, ಮುಖ್ಯಮಂತ್ರಿ ಸಿದ್ದರಾಮಯ್ಯ, ರೈಲ್ವೇ ಸಚಿವ ಅಶ್ವಿನಿ ವೈಷ್ಣವ್, ವಿ. ಸೋಮಣ್ಣ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಾಥ್ ನೀಡಿದರು.

ಮಹಿಳೆಯರಿಗೆ ಮೆಟ್ರೋ ಇಷ್ಟವಂತೆ

ಪ್ರಧಾನಿ ಮೋದಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅಕ್ಕಪಕ್ಕ ಕುಳಿತು ಬೆಂಗಳೂರಿನ ಹಳದಿ ಮಾರ್ಗದ ಮೆಟ್ರೋದಲ್ಲಿ ಸಂಚರಿಸಿದರು. ಮಹಿಳೆಯರಿಗೆ ನೀಡಿದ ಉಚಿತ ಪ್ರಯಾಣವನ್ನು ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ಸಿಡಿಸಿದ ಹಾಸ್ಯ ಚಟಾಕಿಗೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಕ್ಕಿದ್ದಾರೆ. ಮೆಟ್ರೋದಲ್ಲಿ ಪ್ರಯಾಣಿಸಿದ ಕೆಲ ಮಹಿಳೆಯರಿಗೆ ನೀವು ಮೆಟ್ರೋದಲ್ಲಿ ಹೋಗಲು ಇಷ್ಟಪಡುತ್ತೀರೋ, ಬಸ್‌ನಲ್ಲಿ ಹೋಗಲು ಇಷ್ಟಪಡುತ್ತಿರೋ ಎಂದು ಮೋದಿ ಕೇಳಿದ್ದಾರೆ. ಈ ವೇಳೆ ಮಹಿಳೆಯರು ನಾವು ಮೆಟ್ರೋದಲ್ಲಿ ಹೋಗೋದಿಕ್ಕೆ ಇಷ್ಟ ಪಡ್ತೀವಿ, ಮೆಟ್ರೋ ಪ್ರಯಾಣ ಉತ್ತಮ ಎಂದು ಉತ್ತರಿಸಿದ್ದಾರೆ. ಇದನ್ನು ಅಕ್ಕಪಕ್ಕ ಕುಳಿತಿದ್ದ ಸಿಎಂ, ಡಿಸಿಎಂ ಬಳಿ ಪ್ರಸ್ತಾಪಿಸಿದ ಮೋದಿ, 'ನೋಡಿ ಸಿದ್ದರಾಮಯ್ಯನವರೇ, ನೀವು ಮಹಿಳೆಯರಿಗೆ ಫ್ರೀ ಬಸ್ ಮಾಡಿದರೂ ಅವರು ಬಸ್ ಇಷ್ಟಪಡುತ್ತಿಲ್ಲ. ಅವರಿಗೆ ಮೆಟ್ರೋದಲ್ಲಿ ಸಂಚರಿಸುವುದು ಇಷ್ಟ ಅಂತೆ' ಎಂದು ಹಾಸ್ಯ ಚಟಾಕಿ ಹಾರಿಸಿದರು.

ಯಾವ ವಿಷಯ ಓದುವಾಗ ನಿದ್ದೆ ಬರುತ್ತೆ?

ಮೆಟ್ರೋದಲ್ಲಿ ಪ್ರಯಾಣಿಸುವಾಗ ಪ್ರಧಾನಿ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ, ಸ್ವದೇಶಿ ಉತ್ಪನ್ನಗಳ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಇದರೊಂದಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಅವರು, 'ನಿಮಗೆ ಯಾವ ವಿಷಯ ಓದುವಾಗ ನಿದ್ರೆ ಬರುತ್ತದೆ' ಎಂದು ತಮಾಷೆ ಮಾಡುವುದರೊಂದಿಗೆ, ತಮ್ಮ ವಿದ್ಯಾರ್ಥಿ ಜೀವನವನ್ನು ಮೆಲಕು ಹಾಕಿದರು ಎಂದು ವಿದ್ಯಾರ್ಥಿಗಳು ಮಾಹಿತಿ ಹಂಚಿಕೊಂಡರು. ಯಾವ ಯಾವ ವಿಷಯದಲ್ಲಿ ನಿಮಗೆ ಹೆಚ್ಚಿನ ಆಸಕ್ತಿಯಿದೆ. ಶಾಲಾ ಹಂತದಲ್ಲಿ ದೇಶದ ಇತಿಹಾಸ, ಆರ್ಥಿಕತೆ, ವಿಜ್ಞಾನ-ತಂತ್ರಜ್ಞಾನ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಮೋದಿ ಜೀ ಅವರು ನಮಗೆ ತಿಳಿಸಿದರು.

ಪ್ರಯಾಣಿಕರಿಗೆ 80 ನಿಮಿಷ ಉಳಿತಾಯ

ಬೆಂಗಳೂರು: ಬೆಂಗಳೂರು-ಬೆಳಗಾವಿ ನಡುವಣ ಅತ್ಯಂತ ವೇಗದ ವಂದೇ ಭಾರತ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಚಾಲನೆ ನೀಡಿದರು.

ಇದರೊಂದಿಗೆ ಈ ಮಾರ್ಗದಲ್ಲಿ ಪ್ರಯಾಣದ ಅವಧಿ 80 ನಿಮಿಷಗಳಷ್ಟು ಉಳಿತಾಯ ಆಗಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ರೈಲಿನ ವಾಣಿಜ್ಯ ಸಂಚಾರ ಸೋಮವಾರ ದಿಂದ ಆರಂಭವಾಗಲಿದೆ. ಬುಧವಾರ ಹೊರತುಪಡಿಸಿ ವಾರದ ಆರು ದಿನಗಳಲ್ಲಿ ಸಂಚಾರ ಇರಲಿದೆ ಎಂದು ನೈಋತ್ಯ ರೈಲ್ವೆ ವಲಯದ (ಎಸ್ ಡಬ್ಲ್ಯುಆರ್) ಪ್ರಕಟಣೆ ತಿಳಿಸಿದೆ.

ಕೆಎಸ್‌ಆರ್ ಬೆಂಗಳೂರು-ಬೆಳಗಾವಿ ನಡುವಣ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು 611 ಕಿ.ಮೀ. ದೂರವನ್ನು ಕೇವಲ 8.5 ಗಂಟೆಗಳಲ್ಲಿ ಕ್ರಮಿಸಲಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ರಾಜ್ಯರೈಲ್ವೆ ಬಜೆಟ್ 9 ಪಟ್ಟು ಏರಿಕೆ

ಬೆಂಗಳೂರು: 2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಕರ್ನಾಟಕದ ರೈಲ್ವೆ ಬಜೆಟ್ 9 ಪಟ್ಟು ಏರಿಕೆಯಾಗಿದೆ ಎಂದು ಕೇಂದ್ರ ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನಮ್ಮ ಮೆಟ್ರೋ ಹಳದಿ ಮಾರ್ಗ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2014ರಲ್ಲಿ ಕರ್ನಾಟಕದ ರೈಲ್ವೆ ಬಜೆಟ್ 835 ಕೋಟಿಯಾಗಿತ್ತು. ಇದೀಗ 7,500 ಕೋಟಿ ಬಜೆಟ್ ಅನ್ನು ಪ್ರಧಾನಿ ಮೋದಿ ಅವರು ಕರ್ನಾಟಕಕ್ಕೆ ನೀಡಿದ್ದಾರೆ. ಅವರಿಗೆ ಧನ್ಯವಾದಗಳು ಎಂದಿದ್ದಾರೆ.

ಮೋದಿ ಕಾರ್ಯಕ್ರಮದ ವೇದಿಕೆಯಲ್ಲಿರಲಿಲ್ಲ ಆರ್. ಅಶೋಕ್‌ಗೆ ಕುರ್ಚಿ | ಮೋದಿಗೆ ಅಶೋಕ್ ಬೇಡವಾದರೆ ಎಂದು ಕಿಚಾಯಿಸಿದ ಕೈ ಪಡೆ | ಅಶೋಕ್ ಅವರನ್ನು ಕಾರ್ಯಕ್ರಮದಲ್ಲಿ ಕೂರಿಸಲು ಅವಕಾಶ ನೀಡಲಾಗಿದೆ: ವಿಜಯೇಂದ್ರ

ಪ್ರಧಾನಿ ಮೋದಿ ಕಾರ್ಯಕ್ರಮದಲ್ಲಿ ಕುರ್ಚಿ ಗದ್ದಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕೃತ ಕಾರ್ಯಕ್ರಮದಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್‌ಗೆ ಅವಕಾಶ ನೀಡದಿರುವುದು ರಾಜ್ಯ ರಾಜಕೀಯದಲ್ಲಿ 'ಬಿಸಿ-ಬಿಸಿ' ಚರ್ಚೆಗೆ ಗ್ರಾಸವಾಯಿತು.

ಹಳದಿ ಮಾರ್ಗದ ಮೆಟ್ರೋ ರೈಲು ಉದ್ಘಾಟನೆಯ ಬಳಿಕ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಆರಂಭದಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಅವಕಾಶ ನೀಡಿರಲಿಲ್ಲ. ಈ ವಿಷಯವನ್ನು ಮುಂದಿಟ್ಟುಕೊಂಡು, ಕಾಂಗ್ರೆಸ್ ನಾಯಕರು 'ಅಶೋಕ್ ಅವರ ಕುರ್ಚಿ ಅಲುಗಾಡುತ್ತಿದೆ' ಎಂದು ವ್ಯಂಗ್ಯವಾಡಿದರು.

ಬಿಜೆಪಿ ನಾಯಕರು ಸರಕಾರಿ ಕಾರ್ಯಕ್ರಮವಾಗಿರುವುದರಿಂದ ಅವಕಾಶ ನೀಡಿಲ್ಲವೆಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಇದೇ ಕಾರ್ಯಕ್ರಮದ ವೇದಿಕೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಅವಕಾಶ ನೀಡಿದ್ದರಿಂದ, ಪ್ರತಿಪಕ್ಷ ನಾಯಕರಿಗೆ ಏಕೆ ಅವಕಾಶ ನೀಡಿಲ್ಲ? ಇದರರ್ಥ ಅಶೋಕ್ ಅವರನ್ನು ಬದಲಾಯಿಸಲು ಮೋದಿ ಬಯಸಿದ್ದಾರೆ ಎಂದು ಕಾಂಗ್ರೆಸಿಗರು ಕಾಲೆಳೆದರು.

ಆರ್.ಅಶೋಕ್‌ಗೆ ವೇದಿಕೆಯಲ್ಲಿ ಅವಕಾಶ ನೀಡದಿರುವುದನ್ನು ಮುಂದಿಟ್ಟುಕೊಂಡು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ಪ್ರದೀಪ್ ಈಶ್ವರ್ ಸೇರಿದಂತೆ ಹಲವು ಕಾಂಗ್ರೆಸಿಗರು ಹೇಳಿಕೆ ನೀಡಿದರು. ಇದರ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಬಿಜೆಪಿ ನಾಯಕರು ಪ್ರಧಾನಿ ಕಚೇರಿಯನ್ನು ಸಂಪರ್ಕಿಸಿ, ಅಶೋಕ್ ಅವರಿಗೂ ವೇದಿಕೆ ಮೇಲೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಕೊನೆ ಕ್ಷಣದಲ್ಲಿ 'ಕೊನೆ' ಕುರ್ಚಿಯನ್ನು ಅಶೋಕ್ ಅವರಿಗೆ ನೀಡುವ ಮೂಲಕ ವಿವಾದವನ್ನು ಇತ್ಯರ್ಥಪಡಿಸಲು ಪ್ರಯತ್ನಿಸಲಾಗಿದೆ.

ಅಶೋಕ್ ಅವರಿಗೆ ವೇದಿಕೆಯಲ್ಲಿ ಆಸನದ ವ್ಯವಸ್ಥೆಯಾಗದಿರುವ ಬಗ್ಗೆ ಭಾನುವಾರ ಬೆಳಗ್ಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರ ಹೆಸರೂ ಆಹ್ವಾನ ಪತ್ರಿಕೆಯಲ್ಲಿ ಸೇರಿದ್ದು, ಅವರು ಕೂಡ ವೇದಿಕೆಯಲ್ಲಿ ಇರುತ್ತಾರೆ. ನಾನು ಈ ಕುರಿತು ಪ್ರಧಾನಮಂತ್ರಿಯವರ ಕಚೇರಿಯ ಗಮನ ಸೆಳೆದಿದ್ದೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರೊಂದಿಗೆ ಚರ್ಚಿಸಿದ್ದೇನೆ. ಅವರೂ ಪ್ರಯತ್ನ ಮಾಡಿದ್ದಾರೆ. ಈ ವಿಷಯದಲ್ಲಿ ಆತಂಕ ಪಡಬೇಕಾದ ಅಗತ್ಯ ಇಲ್ಲ ಎಂದು ಸ್ಪಷ್ಟಪಡಿಸಿದರು.

ಆಹ್ವಾನವಿಲ್ಲ ಎಂದು ತಲೆಕೆಡಿಸಿಕೊಳ್ಳುವ ಸಮಯಬಂದಿದೆ

ಇನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಟ್ವಿಟ್ ಮಾಡಿದ್ದ ಸಚಿವ ಪ್ರಿಯಾಂಕ್ ಖರ್ಗೆ, ಬೆಂಗಳೂರು ಮೆಟ್ರೋ ಫೇಸ್-2 ಉದ್ಘಾಟನೆ ಕಾರ್ಯಕ್ರಮ ಆಯೋಜಿಸಿರುವ ಕೇಂದ್ರ ಸರಕಾರ ಪ್ರತಿಪಕ್ಷ ನಾಯಕ ಅಶೋಕ್ ಅವರಿಗೇ ವೇದಿಕೆಯಲ್ಲಿ ಜಾಗ ನೀಡುವುದನ್ನು ನಿರಾಕರಿಸಿದೆ. ಕೇಂದ್ರ ಸರಕಾರ ಶಿಷ್ಟಾಚಾರ ಮರೆತಿದೆಯೇ? ಅಥವಾ ಉದ್ದೇಶಪೂರ್ವಕ ಕಡೆಗಣನೆಯೇ? ಮೊದಲ ಬಾರಿ ಶಾಸಕರಾಗಿರುವ ಹಾಗೂ ಬೆಂಗಳೂರಿನ ಶಾಸಕರಲ್ಲದಿರುವ ಬಿ.ವೈ. ವಿಜಯೇಂದ್ರ ಅವರಿಗೆ ಸಿಕ್ಕ ಅವಕಾಶ ಅಶೋಕ್ ಅವರಿಗೆ ಏಕಿಲ್ಲ. ಅಶೋಕ್ ಅವರೇ, ತಾವು ಬೆಂಗಳೂರು ನಗರವನ್ನು ಪ್ರತಿನಿಧಿಸಿರುವ ಶಾಸಕರಾಗಿದ್ದರೂ, ಜತೆಗೆ ವಿರೋಧ ಪಕ್ಷದ ನಾಯಕರಾಗಿದ್ದರೂ, ಬಿಜೆಪಿ ಹಿರಿಯ ನಾಯಕ ಎನಿಸಿಕೊಂಡಿದ್ದರೂ, ಹಲವು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರೂ ನಿಮ್ಮನ್ನು ಕಡೆಗಣಿಸಲಾಗಿದೆ ಎಂದರೆ ನಿಮ್ಮ ಕುರ್ಚಿ ಕಿತ್ತುಕೊಳ್ಳುವ ಸಂದೇಶ ಬಂದಿದೆ ಎಂದು ಭಾವಿಸೋಣವೇ? ಯಾರು ಯಾರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿಲ್ಲ ಎಂದು ತಲೆಕೆಡಿಸಿಕೊಂಡು ಕುಳಿತಿದ್ದ ತಮಗೆ ಈಗ ನನಗೇಕೆ ಆಹ್ವಾನವಿಲ್ಲ ಎಂದು ತಲೆಕೆಡಿಸಿಕೊಂಡು ಕೂರುವ ಸಮಯ ಬಂದಿದೆ. ಇನ್ನಾದರೂ ಇತರರ ಮನೆ ಇಣುಕುವ ಬದಲು ನಿಮ್ಮ ಬುಡ ಅಲ್ಲಾಡುತ್ತಿರುವುದನ್ನು ಗಮನಿಸಿದರೆ ಒಳ್ಳೆಯದು ಎಂದು ವ್ಯಂಗ್ಯವಾಡಿದ್ದರು.

ಅಶೋಕ್ ಅವರ ಬಗ್ಗೆ ನಮಗೆ ಗೌರವ ಭಾವನೆಯಿದೆ. ಅದರೆ ಅವರನ್ನು ಬಿಜೆಪಿಯಲ್ಲಿ ಕಡೆಗಣನೆ ಮಾಡುತ್ತಿರುವುದು ನೋವಿನ ವಿಚಾರ. ಅಶೋಕ್ ಅಂತಹ ಹಿರಿಯರಿಗೆ ಮಾನ್ಯತೆ ಇಲ್ಲ ಎಂದ ಮೇಲೆ ಚಿಕ್ಕಬಳ್ಳಾಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಸಂಸದರ ಕಾರು ಚಾಲಕನಿಗೆ ಬಿಜೆಪಿಯಿಂದ ನ್ಯಾಯ ಎಲ್ಲಿ ಸಿಗುತ್ತದೆ?

-ಪ್ರದೀಪ್ ಈಶ್ವರ್, ಶಾಸಕ

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೇ, ಇದೇ ಆತುರ, ಕಾತುರ, ಅವಸರ, ಹಂಬಲ, ಹಾತೊರೆಯುವ ತವಕ, ಉತ್ಸಾಹ, ಕುತೂಹಲಗಳನ್ನು ತಾವು ಮತ್ತು ತಮ್ಮ ಕುಟುಂಬ ರಿಪಬ್ಲಿಕ್ ಆಫ್ ಕಲಬುರಗಿ ಸೃಷ್ಟಿ ಮಾಡಿಕೊಳ್ಳುವ ಬದಲು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ತೋರಿಸಿದ್ದಿದ್ದರೆ, ಕಲ್ಯಾಣ ಕರ್ನಾಟಕ ಇವತ್ತು ಇಷ್ಟೊಂದು ಹಿಂದೆ ಉಳಿಯುತ್ತಿರಲಿಲ್ಲ.

-ಆರ್.ಅಶೋಕ್, ಪ್ರತಿಪಕ್ಷ ನಾಯಕ

ನಿಮ್ಮನ್ನು ಕಡೆಗಣಿಸಿದ್ದನ್ನು, ತಮಗಾದ ಅವಮಾನವನ್ನು, ನಿರ್ಲಕ್ಷ್ಯವನ್ನು ನಾನು ಜನರ ಮುಂದೆ ತೆರೆದಿಟ್ಟದ್ದಕ್ಕೆ ಈ ಕಾರ್ಯಕ್ರಮದಲ್ಲಿ ಕೊನೆ ಕ್ಷಣದಲ್ಲಿ ನಿಮಗೆ ಸ್ಥಾನ ಮತ್ತು ಕೊಂಚ ಮಾನ ದೊರಕಿದೆ. ಇದಕ್ಕಾಗಿ ನೀವು ನನಗೆ ಧನ್ಯವಾದಗಳನ್ನು ಹೇಳಬೇಕು. ಆಡಳಿತ ಪಕ್ಷದವರ ಟೀಕೆಗೆ ಆಹಾರವಾಗುತ್ತಿದೆ. ದಯಮಾಡಿ ಹೆಸರು ಸೇರಿಸಿ ಎಂದು ಕೇಂದ್ರ ಸರಕಾರದ ಕೈಕಾಲು ಹಿಡಿದು ಬೇಡಿಕೊಂಡು ಹೆಸರು ಸೇರ್ಪಡೆಗೆ ಶ್ರಮಿಸಿದ ನಿಮ್ಮ ಬೆಂಬಲಿಗರಿಗೂ ನೀವು ಧನ್ಯವಾದ ಹೇಳಬೇಕು! ಮೆಟ್ರೋ ಕಾರ್ಯಕ್ರಮದಲ್ಲಿ ಮಾತ್ರ ನಿಮಗೆ ಜಾಗ, ವಂದೇ ಭಾರತ್ ರೈಲಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ನಿಮಗೆ ಕುರ್ಚಿ ಇಲ್ಲ, ಶಿಕಾರಿಪುರದ ಶಾಸಕ ವಿಜಯೇಂದ್ರರಿಗೆ ಮಾತ್ರ ಕುರ್ಚಿ. ಪಾಪ ನೀವು....!

-ಪ್ರಿಯಾಂಕ್ ಖರ್ಗೆ, ಸಚಿವ

ಅಶೋಕ್ ಕುರ್ಚಿಗೆ ಕುತ್ತು ಬಂದಿದೆ

ಈ ಬಗ್ಗೆ ಮಾತನಾಡಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಭವಿಷ್ಯ ಹೇಳುತ್ತಿದ್ದ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ಕುರ್ಚಿಗೆ ಕುತ್ತು ಬಂದಿದೆ. ಅಶೋಕ್ ಅವರು ಬೇರೆಯವರ ಭವಿಷ್ಯವನ್ನು ನೋಡುವ ಭರದಲ್ಲಿ ತಮ್ಮ ಭವಿಷ್ಯವನ್ನು ಮರೆತು ಹೋದಂತೆ ಕಾಣುತ್ತಿದೆ. ಪ್ರತಿ ಪಕ್ಷ ನಾಯಕನ ಸ್ಥಾನಕ್ಕೆ ಸುನೀಲ್‌ಕುಮಾರ್ ಅವರನ್ನು ನೇಮಿಸಲಾಗುವುದು ಎಂಬ ಚರ್ಚೆಗಳಾಗುತ್ತಿವೆ ಎಂದು ಹೇಳಿದರು. ಖ್ಯಾತ ಜ್ಯೋತಿಷಿಯಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ಕುರ್ಚಿಗಳ ಬಗ್ಗೆ ಅಶೋಕ್ ಭವಿಷ್ಯ ಹೇಳುತ್ತಿದ್ದರು. ಪ್ರಧಾನಮಂತ್ರಿ ಕಾರ್ಯಕ್ರಮಕ್ಕೆ ಅಶೋಕ್ ಅವರನ್ನೇ ಆಹ್ವಾನಿಸಿಲ್ಲ. ಮೊದಲ ಬಾರಿಗೆ ಶಾಸಕರಾಗಿರುವ ಯುವ ನಾಯಕ ಬಿ.ವೈ ವಿಜಯೇಂದ್ರ ಅವರಿಗೆ ಆಹ್ವಾನ ಇದೆ. ಹಿರಿಯರಾದ ಆರ್.ಅಶೋಕ್ ಅವರನ್ನು ಕಡೆಗಣಿಸಿ, ಮೂಲೆಗುಂಪು ಮಾಡಲಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ವಿಶ್ವವಾಣಿ

ಸಂಪಾದಕೀಯ

ಧರೆ ಹೊತ್ತಿ ಉರಿದರೆ ನಿಲಲಾಗದು..

ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯ ಕೆಲವೆಡೆ ಸಂಭವಿಸಿದ ಭೀಕರ ಮೇಘಸ್ಫೋಟ ಮತ್ತು ಅದರಿಂದ ಸೃಷ್ಟಿಯಾದ ಪ್ರವಾಹದಿಂದಾಗಿ ಎಷ್ಟೆಲ್ಲಾ ಜೀವಹಾನಿ ಮತ್ತು ಸ್ವತ್ತುನಷ್ಟ ಆದವು ಎಂಬುದು ಈಗಾಗಲೇ ಗೊತ್ತಿರುವ ಸಂಗತಿಯೇ. ಅಲ್ಲಿನ ಖೀರ್ ಗಂಗಾ ಹೊಳೆಯಲ್ಲಿ ಹೆಚ್ಚುತ್ತಲೇ ಹೋದ ನೀರಿನ ಮಟ್ಟವು ವ್ಯಾಪಕ ವಿನಾಶವನ್ನು ಉಂಟುಮಾಡಿದ್ದು, ಹಳ್ಳಿಯೊಂದರ ಕೆಲವು ಭಾಗಗಳೇ ಕೊಚ್ಚಿಹೋಗಿದ್ದು ಹಾಗೂ ಹಲವು ಮಂದಿ ನಾಪತ್ತೆಯಾಗಿದ್ದು ಈ ಪ್ರಕೃತಿ ವಿಕೋಪದ ಭೀಕರತೆಗೆ ಸಾಕ್ಷಿ. ಇದು ಮನದಲ್ಲಿನ್ನೂ ಹಸಿರಾಗಿರುವಾಗಲೇ ಹಿಮಾಚಲ ಪ್ರದೇಶದಲ್ಲೂ ಮೇಘಸ್ಫೋಟ ಸಂಭವಿಸಿದೆ. ಅಲ್ಲಿನ ಕುಲು ಜಿಲ್ಲೆ ಸೇರಿದಂತೆ ಹಲವು ಭಾಗಗಳಲ್ಲಿ ಈಗಾಗಲೇ 350ಕ್ಕೂ ಹೆಚ್ಚು ರಸ್ತೆಗಳು ಮುಚ್ಚಿಹೋಗಿರುವ, ಹತ್ತತ್ತಿರ 600 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿರುವ, 170ಕ್ಕೂ ಹೆಚ್ಚಿನ ನೀರು ಸರಬರಾಜು ಯೋಜನೆಗಳಿಗೆ ಅಡ್ಡಿಯಾಗಿರುವ ವರದಿಗಳು ಬಂದಿವೆ. ಸಾಲದೆಂಬಂತೆ, ಪ್ರವಾಹ, ಭೂಕುಸಿತ ಮತ್ತು ಮನೆಕುಸಿತಗಳಿಂದಾಗಿ 200ಕ್ಕೂ ಹೆಚ್ಚು ಮಂದಿ ಅಸುನೀಗಿದ್ದಾರೆ ಎನ್ನಲಾಗಿದೆ. 'ಒಲೆ ಹೊತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹೊತ್ತಿ ಉರಿದಡೆ ನಿಲಲುಬಾರದು' ಎಂಬ ಬಸವಣ್ಣನವರ ವಚನವೊಂದರ ಸಾಲು ನೆನಪಾಗುವುದು ಇಂಥ ಸಂದರ್ಭದಲ್ಲೇ. ಪ್ರಕೃತಿ ವಿಕೋಪ ಒಮ್ಮೆ ಸಂಭವಿಸಿದರೆ, ಅದರ ಆಪೋಶನಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚೇ ಇರುತ್ತದೆ. ಸ್ವತ್ತುಹಾನಿಯ ಪ್ರಮಾಣವೂ ಅಗಾಧವಾಗೇ ಇರುತ್ತದೆ. ಕಾಳ್ಗಿಚ್ಚು, ನೀರಿನ ಪ್ರವಾಹ, ಭೀಕರ ಕ್ಷಾಮ ಮುಂತಾದ ಪ್ರಕೃತಿ ವಿಕೋಪಗಳನ್ನು ಸಾರಾಸಗಟಾಗಿ ತಡೆಯುವ ಶಕ್ತಿ ಹುಲುಮಾನವರಿಗೆ ಇಲ್ಲವಾದರೂ, ಇವು ಸಂಭವಿಸುವುದಕ್ಕೆ 'ಮನುಷ್ಯಕೃತ ಚಟುವಟಿಕೆಗಳು' ಕಾರಣವಾಗಿವೆಯೇ? ಎಂಬ ಅವಲೋಕನವನ್ನಾದರೂ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಕೇದಾರನಾಥ ಕ್ಷೇತ್ರದಲ್ಲಿ ಬೆಟ್ಟವನ್ನು ಅಗೆದು ಎಗ್ಗಿಲ್ಲದೆ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಕೂಡ ಅಲ್ಲಿ ಸಂಭವಿಸಿದ ದುರಂತಕ್ಕೆ ಕಾರಣ ಎನ್ನಲಾಗುತ್ತಿದೆ. ಒಟ್ಟಿನಲ್ಲಿ, ವಿವೇಚನೆಯರಿತು ನಡೆದಲ್ಲಿ ಒಂದಷ್ಟು ದುರಂತಗಳ ತೀವ್ರತೆಯನ್ನು ತಗ್ಗಿಸಬಹುದು ಎಂಬುದಂತೂ ಖರೆ...

ಸೊಂಪಾದಕೀಯ

ಜಂಬೂ ಸಫಾರಿ

ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್ಸೊಂದಕ್ಕೆ ಆನೆ ಅಡ್ಡ ಬಂದು ಒಂದು ಗಂಟೆಗೂ ಹೆಚ್ಚು ಕಾಲ ಆತಂಕ ಸೃಷ್ಟಿಸಿದ ಘಟನೆ ಕೆಲ ತಿಂಗಳ ಹಿಂದೆ ನಡೆದಿತ್ತು. ಅದೇನೂ ಆಶ್ಚರ್ಯದ ವಿಷಯ ಅಲ್ಲ ಬಿಡಿ. ನಗರದ ಅನೇಕ ಬಡಾವಣೆಗಳಲ್ಲಿ ಚಿರತೆಗಳು ಕಾಣಿಸಿಕೊಂಡು ರಸ್ತೆ ದಾಟುವ, ಮನೆ ಮಗ್ಗುಲಲ್ಲೇ ಓಡಾಡುವ ದೃಶ್ಯಗಳು ಸಿಸಿಟಿವಿಗಳಲ್ಲಿ ಕಾಣಿಸಿಕೊಂಡ ನಿದರ್ಶನಗಳುಂಟು. ಆದರೆ ತೀರಾ ಆನೆ ಊರಿಗೆ ಬಂದಿದ್ದು ಅಪರೂಪ. ಪಾಪ ಆ ಆನೆಗೂ ವಯಸ್ಸಾಗಿರಬೇಕು. 'ಕಾಡು ಹೋಗು ಅಂತಿದೆ, ಊರು ಬಾ ಅಂತಿದೆ' ಅಂತ ಆ ಆನೆಯೂ ಊರಿಗೆ ನುಗ್ಗಿತು ಎಂದುಕೊಳ್ಳಬಹುದು. ಆದರೆ ಇದು ನಡೆದಿದ್ದು ಬನ್ನೇರುಘಟ್ಟ ಸಫಾರಿ ವಲಯದಲ್ಲಿ. ಹಾಗಾಗಿ ಆನೆ 'ಇದು ನನ್ನ ಅಡ್ಡ, ಇದು ನನ್ನ ಏರಿಯಾ, ನೀವು ಹೆಂಗೆ ಬಂದ್ರಿ ಇಲ್ಲಿ?' ಅಂತ ಹಕ್ಕಿನಿಂದ ಅಡ್ಡ ನಿಂತಿದ್ರಲ್ಲಿ ತಪ್ಪೇನೂ ಇಲ್ಲ. ಆದರೂ ಬೆಂಗಳೂರೆಂಬ ಮಹಾನಗರದಿಂದ ಸವಾರಿ ಹೊರಟಿದ್ದ ಬಸ್ ಚಾಲಕ ಮತ್ತು ಪ್ರಯಾಣಿಕರಿಗೆ ಸಫಾರಿ ಜಾಗದಲ್ಲಿ ಆನೆ ಅಡ್ಡಗಾಲು ಹಾಕಿ ನಿಂತಿದ್ದು ಅಚ್ಚರಿಯ ಸಂಗತಿಯೇ! ಸಾಮಾನ್ಯವಾಗಿ ಇಂಥ ಆನೆಗಳನ್ನು ಸಂಜೆ ವೇಳೆ ನೀರು ಕುಡಿಯಲು ಬಿಡುತ್ತಾರಂತೆ. ಹಾಗೆ ಬಂದ ಈ ಆನೆ ಗುಂಪಿನಿಂದ ಬೇರಾಗಿ ಒಂಟಿಯಾಗಿ, ನಂತರ ಬೋರಾಗಿ ಬಸ್‌ಗೆ ಅಡ್ಡ ನಿಂತು ಬಸ್ಸಿನಲ್ಲಿ ಇದ್ದವರಿಗೆ ಸ್ವಲ್ಪ ಹೊತ್ತು ನೀರು ಕುಡಿಸಿರಬಹುದು. ಆದರೆ ಈ ಆನೆ ಯಾರಿಗೂ ತೊಂದರೆ ಮಾಡಲಿಲ್ಲ ಅನ್ನೋದು ವಿಶೇಷ. ಸಾಮಾನ್ಯವಾಗಿ ವಾಹನಗಳು ಸಿಕ್ಕರೆ, ವಾಹನದಲ್ಲಿ ಇರುವವರ ಗುಂಡಿಗೆ ಅಲ್ಲಾಡಿಸಿ, ನಂತರ ವಾಹನವನ್ನೂ ಅಲ್ಲಾಡಿಸಿ ದಾಂಧಲೆ ಮಾಡುವ ತಂಟೆಕೋರ ಆನೆಗಳೇ ಜಾಸ್ತಿ. ಆದರೆ ಇದು ಸಾದಾ ಸಾದಾ ಆನೆ, ಅಂಥ ಪುಂಡ ಪೋಕರಿ ಕೆಲಸವನ್ನೇನೂ ಮಾಡಲಿಲ್ಲ.

ಸಂಪಾದಕರ ಸದ್ಯಶೋಧನೆ

ದೂರ ಮಾಪನ ಉಪಕರಣ

ಪೈಲಟ್‌ಗಳು ದಟ್ಟ ಕತ್ತಲೆಯಲ್ಲಾಗಲಿ ಅಥವಾ ಪ್ರತಿಕೂಲ ಹವಾಮಾನದಲ್ಲಾಗಲಿ, ತಾವು ರನ್‌ವೇ ಅಥವಾ ನ್ಯಾವಿಗೇಷನ್ ಕೇಂದ್ರದಿಂದ ನಿಖರವಾಗಿ ಎಷ್ಟು ದೂರದಲ್ಲಿದ್ದೇವೆ ಎಂದು ತಿಳಿಯುತ್ತಾರೆ, ಹೇಗೆ? ಈ ಪ್ರಶ್ನೆಗೆ ಉತ್ತರವೇ DME ಅರ್ಥಾತ್ Distance Measuring Equipment (ದೂರ ಮಾಪನ ಉಪಕರಣ). ಇದನ್ನು ಸರಳವಾಗಿ 'ದೂರ ಅಳತೆ ಸಾಧನ' ಎಂದು ಹೇಳಬಹುದು. ಇದು ಒಂದು ರೇಡಿಯೋ ಸಂಚಲನ ವ್ಯವಸ್ಥೆಯಾಗಿದ್ದು, ವಿಮಾನವು ನೆಲದ ಮೇಲಿನ ಒಂದು ನಿಶ್ಚಿತ ಕೇಂದ್ರದಿಂದ (ಸಾಮಾನ್ಯವಾಗಿ VOR ಅಥವಾ ILS ಸ್ಟೇಷನ್) ಎಷ್ಟು ದೂರದಲ್ಲಿದೆ ಎಂಬುದನ್ನು ಪೈಲಟ್‌ಗಳಿಗೆ ತಿಳಿಸುತ್ತದೆ. ದೂರ ಮಾಪನ ಉಪಕರಣ (DME) ಹೇಗೆ ಕೆಲಸ ಮಾಡುತ್ತದೆ? ಈ ವ್ಯವಸ್ಥೆಯು ಒಂದು ಸರಳವಾದ ಪ್ರಶ್ನೆ-ಉತ್ತರ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ. ವಿಮಾನದಲ್ಲಿರುವ ಉಪಕರಣವು (Interrogator) ನೆಲದ ಮೇಲಿರುವ DME ಸ್ಟೇಷನ್‌ಗೆ ಒಂದು ಜೋಡಿ ರೇಡಿಯೋ Interrogation Signal ಕಳುಹಿಸುತ್ತದೆ. ನೆಲದ ಮೇಲಿನ ಸ್ಟೇಷನ್ (Transponder) ಆ ಸಂಕೇತವನ್ನು ಸ್ವೀಕರಿಸಿ, ಒಂದು ನಿಶ್ಚಿತ ಸಮಯದ ನಂತರ ಅದಕ್ಕೆ ಪ್ರತಿಕ್ರಿಯೆ ಸಂಕೇತವನ್ನು (Response Signal) ವಾಪಸ್ ಕಳುಹಿಸುತ್ತದೆ. ವಿಮಾನದ ಉಪಕರಣವು, ತಾನು ಸಂಕೇತವನ್ನು ಕಳುಹಿಸಿದ ಸಮಯ ಮತ್ತು ಪ್ರತಿಕ್ರಿಯೆ ಸಂಕೇತವನ್ನು ಸ್ವೀಕರಿಸಿದ ಸಮಯದ ನಡುವಿನ ವ್ಯತ್ಯಾಸವನ್ನು (Time Delay) ಲೆಕ್ಕಾಚಾರ ಮಾಡುತ್ತದೆ. ಬೆಳಕಿನ ವೇಗದಲ್ಲಿ ಚಲಿಸುವ ರೇಡಿಯೋ ತರಂಗಗಳು ತೆಗೆದುಕೊಂಡ ಈ ಸಮಯವನ್ನು ಆಧರಿಸಿ, ಉಪಕರಣವು ದೂರವನ್ನು ಲೆಕ್ಕಾಚಾರ ಮಾಡಿ ಅದನ್ನು Slant Range Distance ರೂಪದಲ್ಲಿ ನಾಟಿಕಲ್ ಮೈಲಿಗಳಲ್ಲಿ (Nautical Miles) ಪ್ರದರ್ಶಿಸುತ್ತದೆ. Slant Range ಎಂದರೆ ವಿಮಾನದಿಂದ ನೆಲದ ಮೇಲಿನ ಸ್ಟೇಷನ್‌ಗೆ ಇರುವ ನೇರವಾದ ವೈಮಾನಿಕ ದೂರ. ಇದು ವಿಮಾನದಿಂದ ಸ್ಟೇಷನ್‌ಗೆ ನೆಲದ ಮೇಲಿರುವ ಸಮತಲ ದೂರವಲ್ಲ (Ground Distance). ಪೈಲಟ್‌ಗಳಿಗೆ ದಿಕ್ಕು (VOR/ILS ನಿಂದ) ಮತ್ತು ದೂರ (DME ನಿಂದ) ಎರಡೂ ಒಂದೇ ಸಮಯದಲ್ಲಿ ಸಿಗುವಂತೆ ಮಾಡಲು, DME ಅನ್ನು ಸಾಮಾನ್ಯವಾಗಿ VOR (Omnidirectional Radio Range) ಅಥವಾ ILS (Instrument Landing System) ವ್ಯವಸ್ಥೆಗಳೊಂದಿಗೆ ಒಂದೇ ಸ್ಥಳದಲ್ಲಿ ಸ್ಥಾಪಿಸಲಾಗಿರುತ್ತದೆ. ವಿಮಾನವು ಚಲಿಸುತ್ತಿದ್ದಂತೆ, DME ನಿರಂತರವಾಗಿ ದೂರದ ಮಾಹಿತಿಯನ್ನು ಅಪ್‌ಡೇಟ್ ಮಾಡುತ್ತಾ, ಪೈಲಟ್‌ಗೆ ಕ್ಷಣಕ್ಷಣದ ಮಾಹಿತಿ ನೀಡುತ್ತದೆ. ಇನ್‌ಸ್ಟ್ರುಮೆಂಟ್ ಫ್ಲೈಟ್ ರೂಲ್ಸ್ (IFR) ಅಡಿಯಲ್ಲಿ ಹಾರಾಟ ಮಾಡುವಾಗ, ಅನೇಕ ಮಾರ್ಗಗಳು, ಹೋಲ್ಡಿಂಗ್ ಪ್ಯಾಟರ್ನ್‌ಗಳು ಮತ್ತು ಅಪ್ರೋಚ್‌ಗಳಿಗೆ (approaches) DME ಕಡ್ಡಾಯವಾಗಿದೆ. ವಿಮಾನದ ಎತ್ತರ ಮತ್ತು ಸ್ಟೇಷನ್‌ನ ಶಕ್ತಿಯನ್ನು ಅವಲಂಬಿಸಿ, DME ಯ ವ್ಯಾಪ್ತಿಯು ಸಾಮಾನ್ಯವಾಗಿ 199 ನಾಟಿಕಲ್ ಮೈಲಿಗಳವರೆಗೆ (ಸುಮಾರು 370 ಕಿಲೋಮೀಟರ್) ಇರುತ್ತದೆ. DME ಯು Slant Range ಅನ್ನು ಅಳೆಯುವುದರಿಂದ, ವಿಮಾನವು ನೇರವಾಗಿ ಸ್ಟೇಷನ್‌ನ ಮೇಲಿದ್ದಾಗ ದೋಷ ಉಂಟಾಗುತ್ತದೆ. ಆಗ DME '0' ತೋರಿಸುವ ಬದಲು, ವಿಮಾನದ ಎತ್ತರವನ್ನು (ನಾಟಿಕಲ್ ಮೈಲಿಗಳಲ್ಲಿ) ತೋರಿಸುತ್ತದೆ. ಉದಾಹರಣೆಗೆ, ಒಂದು ವಿಮಾನವು ನೆಲದಿಂದ 6,076 ಅಡಿ (ಸರಿಯಾಗಿ 1 ನಾಟಿಕಲ್ ಮೈಲಿ) ಎತ್ತರದಲ್ಲಿ ಸ್ಟೇಷನ್‌ನ ನೇರ ಮೇಲೆ ಹಾರುತ್ತಿದ್ದರೆ, DME ದೂರವನ್ನು 1.0 NM ಎಂದು ತೋರಿಸುತ್ತದೆ, ಶೂನ್ಯವನ್ನಲ್ಲ. ಈ ದೋಷವು ವಿಮಾನವು ಹೆಚ್ಚು ಎತ್ತರದಲ್ಲಿ ಮತ್ತು ಸ್ಟೇಷನ್‌ಗೆ ಹತ್ತಿರದಲ್ಲಿರುವಾಗ ಗಣನೀಯವಾಗಿರುತ್ತದೆ. ಇದನ್ನು ಪೈಥಾಗರಿಯನ್ ಪ್ರಮೇಯದಿಂದ ಅರ್ಥಮಾಡಿಕೊಳ್ಳಬಹುದು. ಪೈಲಟ್‌ಗಳು DME ಫ್ರೀಕ್ವೆನ್ಸಿಯನ್ನು ಪ್ರತ್ಯೇಕವಾಗಿ ಟ್ಯೂನ್ ಮಾಡುವ ಅಗತ್ಯವಿಲ್ಲ. ಅವರು ತಮ್ಮ ನ್ಯಾವಿಗೇಷನ್ ರೇಡಿಯೋದಲ್ಲಿ VOR ಅಥವಾ ILS ಫ್ರೀಕ್ವೆನ್ಸಿಯನ್ನು ಆಯ್ಕೆ ಮಾಡಿದಾಗ, ಅದಕ್ಕೆ ಸಂಬಂಧಿಸಿದ DME ಚಾನೆಲ್ ಸ್ವಯಂಚಾಲಿತವಾಗಿ ಆಯ್ಕೆಯಾಗುತ್ತದೆ. ಇದು ಪೈಲಟ್‌ನ ಕೆಲಸವನ್ನು ಸುಲಭಗೊಳಿಸುತ್ತದೆ. DME ವ್ಯವಸ್ಥೆಯು ಅತ್ಯಂತ ನಿಖರವಾಗಿದೆ. ಇದರ ನಿಖರತೆಯು ಸಾಮಾನ್ಯವಾಗಿ L 0.5 ನಾಟಿಕಲ್ ಮೈಲಿಗಳು ಅಥವಾ ಇರುವ ದೂರದ ಶೇ.3. ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟಿರುತ್ತದೆ. ಕೆಲವು ನ್ಯಾವಿಗೇಷನ್ ರೇಡಿಯೋಗಳಲ್ಲಿ, ಪ್ರತಿ 30-40 ಸೆಕೆಂಡಿಗೆ ಒಮ್ಮೆ DME ಸ್ಟೇಷನ್‌ನ ಗುರುತಿನ ಮೋರ್ಸ್ ಕೋಡ್ ಅನ್ನು ಕೇಳಬಹುದು. ಇದು ಪೈಲಟ್‌ಗೆ ತಾನು ಸರಿಯಾದ ಸ್ಟೇಷನ್‌ಗೆ ಟ್ಯೂನ್ ಆಗಿರುವುದನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ.

ಸುನೀಲ್‌ಕುಮಾರ್ ಎಂಟ್ರಿಯಾಗಿದ್ದು ಹೇಗೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಕಿವಿಗೆ ಕೆಲ ದಿನಗಳ ಹಿಂದೆ ಒಂದು ಸಂದೇಶ ತಲುಪಿದೆ. ಅವರಿಗೆ ಈ ಸಂದೇಶ ತಲುಪಿಸಿದ್ದು ಸ್ವತಃ ಅವರ ಗೂಢಚಾರರ ಪಡೆ. ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಡಿದರೆನ್ನಲಾದ ಮಾತನ್ನು ಈ ಗೂಢಚಾರರ ಪಡೆ ತಮ್ಮ ಕಿವಿಗೆ ತಲುಪಿಸಿದ್ದೇ ತಡ, ವಿಜಯೇಂದ್ರ ಕೆಂಡಾಮಂಡಲಗೊಂಡಿದ್ದಾರೆ. ಅಷ್ಟೇ ಅಲ್ಲ, ತಮಗೆ ತಲುಪಿದ ಸಂದೇಶದ ವಿವರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ತಲುಪಿಸಿ, ''ಹೀಗೆಲ್ಲ ಆದರೆ ನಾನು ಕೆಲಸ ಮಾಡುವುದು ಹೇಗೆ ಸರ್?'' ಅಂತ ಕೇಳಿದ್ದಾರೆ.

ಅಂದ ಹಾಗೆ, ವಿಜಯೇಂದ್ರ ಅವರ ಕೋಪಕ್ಕೆ ಕಾರಣವಾದ ಈ ಸಂದೇಶ ಹುಟ್ಟಿದ್ದು ಕಬಿನಿ ಹಿನ್ನೀರಿನ ಬಳಿ ಇರುವ ತಾಣದಲ್ಲಿ. ವಿಜಯೇಂದ್ರ ಅವರ ಗೂಢಚಾರರ ಪ್ರಕಾರ, ಕೆಲ ದಿನಗಳ ಹಿಂದೆ ಆರ್.ಅಶೋಕ್ ಅವರು ಕಬಿನಿ ಜಲಾಶಯದ ಬಳಿ ಇರುವ ತಾಣವೊಂದರಲ್ಲಿ ಪಾರ್ಟಿ ಮಾಡಿದ್ದಾರೆ. ಈ ಪಾರ್ಟಿಯಲ್ಲಿ ಚಿಕ್ಕಮಗಳೂರು, ಮಂಗಳೂರು ಮತ್ತು ಬೆಂಗಳೂರಿನ ಕೆಲ ಶಾಸಕರು ಭಾಗಿಯಾಗಿದ್ದಾರೆ. ಹೀಗೆ ಪಾರ್ಟಿ ಶುರುವಾದ ನಂತರ ಮಾತನಾಡಿದ ಆರ್.ಅಶೋಕ್ ಅವರು, ''ನೋಡ್ರೀ, ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಕೆಳಗಿಳಿಯುವುದು ಪಕ್ಕಾ. ಸ್ವತಃ ಅಮಿತ್ ಶಾ ಅವರು ನನ್ನ ಬಳಿ ಇದನ್ನು ಹೇಳಿದ್ದಾರೆ. ಹೀಗೆ ವಿಜಯೇಂದ್ರ ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ನಂತರ ನನಗೆ ಆಪ್ತರಾಗಿರುವವರೇ ಅಧ್ಯಕ್ಷರಾಗಲಿದ್ದಾರೆ. ಇನ್‌ಫ್ಯಾಕ್ಟ್, ಇವತ್ತಿನ ಸ್ಥಿತಿಯಲ್ಲಿ ವಿಧಾನಸಭೆಗೆ ಚುನಾವಣೆ ನಡೆದರೆ ಪಕ್ಷ ಅಧಿಕಾರಕ್ಕೆ ಬರುವುದು ಹಂಡ್ರೆಡ್ ಪರ್ಸೆಂಟ್ ಗ್ಯಾರಂಟಿ. ಹೀಗೆ ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ವಿಜಯೇಂದ್ರ ಅವರೇ ಅಧ್ಯಕ್ಷರಾಗಿದ್ದರೆ ಸಿಎಂ ಹುದ್ದೆಗೆ ಅವರು ಟ್ರೈ ಮಾಡುತ್ತಾರೆ. ಅವರ ನೇತೃತ್ವದಲ್ಲೇ ಚುನಾವಣೆ ಗೆದ್ದರೆ ಸಹಜವಾಗಿ ಅವರ ಬೇಡಿಕೆಗೆ ಶಕ್ತಿ ದೊರೆಯುತ್ತದೆ. ಹಾಗಾಗಬಾರದು ಎಂದರೆ ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಗೆ ನ್ಯೂಟ್ರಲ್ ಆಗಿರುವವರು ಬರಬೇಕು. ಆಗ ಸಿಎಂ ಹುದ್ದೇರಲು ನಮಗೂ ಶಕ್ತಿ ದೊರೆಯುತ್ತದೆ'' ಎಂದರಂತೆ.

ಹೀಗೆ ಅಶೋಕ್ ಅವರು ಆಡಿದ್ದಾರೆ ಎನ್ನಲಾದ ಮಾತನ್ನು ಗೂಢಚಾರರ ಪಡೆ ತಮ್ಮ ಕಿವಿಗೆ ತಲುಪಿಸಿದಾಗ ವಿಜಯೇಂದ್ರ ಸಹಜವಾಗಿಯೇ ರೋಷಾವಿಷ್ಟರಾಗಿದ್ದಾರೆ.

ಅಂದ ಹಾಗೆ, ಅಶೋಕ್ ಅವರ ವಿಷಯದಲ್ಲಿ ವಿಜಯೇಂದ್ರ ಕೋಪಗೊಳ್ಳುತ್ತಿರುವುದು ಇದೇ ಮೊದಲ ಸಲವಲ್ಲ. ನಿಜ ಸಂಗತಿ ಎಂದರೆ ವಿಜಯೇಂದ್ರ-ಅಶೋಕ್ ಮಧ್ಯೆ ಹುಲ್ಲುಕಡ್ಡಿ ಇಟ್ಟರೂ 'ಧಗ್' ಅಂತ ಹೊತ್ತಿ ಉರಿಯುವ ಪರಿಸ್ಥಿತಿ ಇದೆ. ಪರಿಣಾಮ? ಇವತ್ತು ವಿಜಯೇಂದ್ರ ಅವರ ಚಲನವಲನಗಳ ಮೇಲೆ ಅಶೋಕ್ ಮತ್ತು ಅಶೋಕ್ ಅವರ ಚಲನವಲನಗಳ ಮೇಲೆ ವಿಜಯೇಂದ್ರ ಹದ್ದುಗಣ್ಣಿಟ್ಟು ಕುಳಿತಿದ್ದಾರೆ. ಅಸೆಂಬ್ಲಿಯಲ್ಲಿ ವಿಜಯೇಂದ್ರ ಸರಕಾರದ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಸರಕಾರದ ವಿರುದ್ಧ ನಡೆಯುವ ಬೀದಿ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ ಎಂಬುದರಿಂದ ಹಿಡಿದು ವಿಜಯೇಂದ್ರ ಅವರ ಹೆಜ್ಜೆಗಳ ಬಗ್ಗೆ ಅಶೋಕ್ ಅವರು ಅಮಿತ್ ಶಾ ಅವರಿಗೆ ಮಾಹಿತಿ ರವಾನಿಸುತ್ತಲೇ ಇರುತ್ತಾರೆ.

ಇನ್ನು ವಿಜಯೇಂದ್ರ ಅವರು ಕೂಡ, ಪ್ರತಿಪಕ್ಷ ನಾಯಕರಾಗಿ ಅಶೋಕ್ ಅವರ ಫರ್ಫಾರ್ಮೆನ್ಸು ಡಲ್ಲು ಎಂಬುದರಿಂದ ಹಿಡಿದು ರಾಜಧಾನಿ ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರು ಅಶೋಕ್ ಅವರ ವಿರುದ್ಧ ಏಕೆ ತಿರುಗಿಬಿದ್ದಿದ್ದಾರೆ ಎಂಬುದರ ತನಕ ಇಂಚಿಂಚು ಮಾಹಿತಿಯನ್ನೂ ಅದೇ ಅಮಿತ್ ಶಾ ಅವರಿಗೆ ರವಾನಿಸಿದ್ದಾರೆ. ಬಿಜೆಪಿ ಮೂಲಗಳ ಪ್ರಕಾರ, ಹೀಗೆ ಉಭಯ ನಾಯಕರ ನಡುವಣ ಸಂಘರ್ಷ ತಾರಕಕ್ಕೇರಿರುವುದರಿಂದ ಅಮಿತ್ ಶಾ ಅವರಿಗೇ ತಲೆಬಿಸಿಯಾಗಿ ಹೋಗಿದೆ. ಹೀಗಾಗಿ ಅಶೋಕ್ ಅವರ ಕಂಪ್ಲೇಂಟುಗಳ ಪಟ್ಟಿ ತಮ್ಮ ಮುಂದೆ ಮಂಡನೆಯಾದಾಗ, ''ನಿಜ, ವಿಜಯೇಂದ್ರ ಅವರ ಕಾರ್ಯವೈಖರಿಯ ಬಗ್ಗೆ ಬೇರೆ ಕಡೆಯಿಂದಲೂ ನನಗೆ ದೂರುಗಳು ಬರುತ್ತಿವೆ. ಇದನ್ನು ತುಂಬ ಕಾಲ ನೋಡಿಕೊಂಡಿರಲು ಸಾಧ್ಯವಿಲ್ಲ. ನಾವೂ ಸಮಯ ಕಾಯುತ್ತಿದ್ದೇವೆ. ವಿಜಯೇಂದ್ರ ಅವರನ್ನು ಬದಲಿಸಿ ಬೇರೆಯವರನ್ನು ತರುತ್ತೇವೆ'' ಅಂತ ಪ್ರಾಮಿಸ್ಸು ಮಾಡುತ್ತಾರೆ. ಆದರೆ ಕಂಪ್ಲೇಂಟುದಾರರ ಫೇಸ್‌ಕಟ್ಟು ಬದಲಾಗಿ ವಿಜಯೇಂದ್ರ ಕಾಣಿಸಿಕೊಂಡರೆ, ''ರಾಜಕಾರಣದಲ್ಲಿ ವಿರೋಧಿಗಳಿರುವುದು ಸಹಜ. ನಿಮ್ಮ ಬಗ್ಗೆ ಇರುವ ಕಂಪ್ಲೇಂಟುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಅದನ್ನು ನಮಗೆ ಬಿಡಿ. ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ. ಗೋ ಅಹೆಡ್'' ಎನ್ನುತ್ತಾರೆ.

ಮೊನ್ನೆಯ ಎಪಿಸೋಡಿನಲ್ಲೂ ಅಷ್ಟೇ. ಅಶೋಕ್ ಅವರ ವಿರುದ್ಧ ವಿಜಯೇಂದ್ರ ಕಂಪ್ಲೇಂಟು ರವಾನಿಸಿದ ನಂತರ ಅಮಿತ್ ಶಾ ಅವರು ಕ್ರಮ ಕೈಗೊಳ್ಳುವ ಮಾತನಾಡಿದ್ದಾರೆ. ಇದಾದ ನಂತರ ವಿಜಯೇಂದ್ರ ಅವರ ಕ್ಯಾಂಪಿಗೆ ಬಂದ ಸಂದೇಶವೆಂದರೆ, ಕಳೆದ ವಾರ ತಮ್ಮನ್ನು ಭೇಟಿ ಮಾಡಿದ ಅಶೋಕ್ ಅವರಿಗೆ ಅಮಿತ್ ಶಾ ಕಿರಿಕಿರಿ ಮಾಡಿದ್ದಾರೆ. ನಾಯಕತ್ವದ ವಿರುದ್ಧ ಮಾತನಾಡಬಾರದು ಎಂದು ಎಚ್ಚರಿಸಿದ್ದಾರೆ. ಯಾವಾಗ ಅಮಿತ್ ಶಾ ಈ ಎಚ್ಚರಿಕೆ ನೀಡಿದರೋ ಆಗ ಅಶೋಕ್, 'ನಾನು ಅಂಥ ಮಾತುಗಳನ್ನೇ ಆಡಿಲ್ಲ' ಅಂತ ಸಮಜಾಯಿಷಿ ನೀಡಿದ್ದಾರೆ. ಅರ್ಥಾತ್, ಅಮಿತ್ ಶಾ ಅವರು ನೀಡಿದ ಎಚ್ಚರಿಕೆಯಿಂದ ಅಶೋಕ್ ಎಚ್ಚೆತ್ತುಕೊಂಡಿದ್ದಾರೆ ಎಂಬುದು ವಿಜಯೇಂದ್ರ ಕ್ಯಾಂಪಿಗೆ ತಲುಪಿರುವ ಸಂದೇಶ. ಇದು ಎಷ್ಟರ ಮಟ್ಟಿಗೆ ನಿಜವೋ? ಅ ಮಾತು ಬೇರೆ. ಆದರೆ ಇಂಥ ಬೆಳವಣಿಗೆಗಳು ಅಶೋಕ್ ಮತ್ತು ವಿಜಯೇಂದ್ರ ನಡುವಣ ಸಂಘರ್ಷಕ್ಕೆ ಇಂಬು ಕೊಡುತ್ತಿರುವುದು ಮಾತ್ರ ನಿಜ.

ಸುನೀಲ್‌ಕುಮಾರ್ ಫೀಲ್ಡಿಗೆ ಬಂದರು

ಈ ಮಧ್ಯೆ, ಬಿಜೆಪಿ ಪಾಳಯದಲ್ಲಿ ತೇಲಿಬರುತ್ತಿರುವ ಕುತೂಹಲದ ಸಂಗತಿ ಎಂದರೆ ಮಾಜಿ ಸಚಿವ, ಕಾರ್ಕಳ ಶಾಸಕ ಸುನೀಲ್‌ಕುಮಾರ್ ಹೆಸರು ಫೀಲ್ಡಿಗೆ ಬಂದಿರುವುದು. ಪ್ರತಿಪಕ್ಷ ನಾಯಕ ಆರ್.ಅಶೋಕ್ ಇತ್ತೀಚೆಗೆ ಆಪ್ತರ ಜತೆ ಪಾರ್ಟಿ ಮಾಡಿದರಲ್ಲ?ಈ ಪಾರ್ಟಿಯ ಸಂದರ್ಭದಲ್ಲಿ ಅಶೋಕ್ ಅವರಾಡಿದ ಒಂದು ಮಾತು ಸುನೀಲ್‌ಕುಮಾರ್ ಹೆಸರು ಫೀಲ್ಡಿಗೆ ಬರುವಂತೆ ಮಾಡಿದೆ. ಹಾಲಿ ಅಧ್ಯಕ್ಷ ವಿಜಯೇಂದ್ರ ಅವರು ಕೆಳಗಿಳಿದು ನನ್ನ ಆಪ್ತರೇ ಆ ಜಾಗಕ್ಕೆ ಬರುತ್ತಾರೆ ಅಂತ ಅಶೋಕ್ ಹೇಳಿದ್ದು ಯಾರ ಕುರಿತು? ಎಂಬ ಬಗ್ಗೆ ಸಹಜವಾಗಿಯೇ ಚರ್ಚೆ ಶುರುವಾಗಿದೆ. ಅಷ್ಟೇ ಅಲ್ಲ, ಅಂತಿಮವಾಗಿ ಹಲವರ ಗಮನ ಸುನೀಲ್‌ಕುಮಾರ್ ಕಡೆ ತಿರುಗಿದೆ.

ಅಂದ ಹಾಗೆ, ಕೆಲ ತಿಂಗಳ ಹಿಂದೆ ಅಶೋಕ್ ವಿಷಯದಲ್ಲಿ ಸುನೀಲ್‌ಕುಮಾರ್ ಮುನಿಸಿಕೊಂಡಿದ್ದರು. ವಿಧಾನಸಭೆಯಲ್ಲಿ ಸರಕಾರದ ವಿರುದ್ಧ ತಿರುಗಿ ಬೀಳಬೇಕಾದ ಸಂದರ್ಭದಲ್ಲಿ ಅಶೋಕ್ ಮೌನವಾಗಿದ್ದರು ಎಂಬುದು ಸುನೀಲ್‌ಕುಮಾರ್ ಸಿಟ್ಟಿಗೆ ಕಾರಣ. ಹಾಗಂತಲೇ ಸುನೀಲ್‌ಕುಮಾರ್ ಅವರು ಅಶೋಕ್ ಅವರ ವಿರುದ್ಧ ಗುಡುಗುತ್ತಾ ತಿರುಗುತ್ತಿದ್ದರು. ಆದರೆ ಅವರು ಗುಡುಗುತ್ತಾ ತಿರುಗಿದರು ಅಂತ ಅಶೋಕ್ ಅವರೇನೂ ಮುನಿಸಿಕೊಳ್ಳಲಿಲ್ಲ.

ಬಿಜೆಪಿ ಮೂಲಗಳ ಪ್ರಕಾರ ಈ ಎಪಿಸೋಡಿನ ನಂತರ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸಕ್ಕೆ ಅಂತ ಹೋದ ಅಶೋಕ್ ಅವರು ಅಲ್ಲಿನ ರೆಸಾರ್ಟ್ ಒಂದರಲ್ಲಿ ಸುನೀಲ್‌ಕುಮಾರ್ ಜತೆ ರಹಸ್ಯ ಸಭೆ ನಡೆಸಿದ್ದರು. ಈ ಸಭೆಯ ಸಂದರ್ಭದಲ್ಲಿ ಅಸೆಂಬ್ಲಿಯ ತಮ್ಮ ನಡವಳಿಕೆಗೆ ಕಾರಣ ಬಿಚ್ಚಿಟ್ಟ ಅಶೋಕ್ ಅವರು, ''ಸರಕಾರದ ವಿರುದ್ಧ ಮಾತನಾಡಲು ನಾನು ತಯಾರಿದ್ದೆ. ಆದರೆ ಪಕ್ಷದ ಅಧ್ಯಕ್ಷರಾದ ವಿಜಯೇಂದ್ರ ಅವರು ಮಾತನಾಡದಂತೆ ಅಸೆಂಬ್ಲಿಯಲ್ಲೇ ನನಗೆ ಚೀಟಿ ಕಳಿಸಿದ್ದರು. ಸ್ವತಃ ಪಕ್ಷಾಧ್ಯಕ್ಷರೇ ಅಂಥ ಸೂಚನೆ ಕೊಟ್ಟ ಮೇಲೆ ನಾನು ಮಾತನಾಡುವುದು ಹೇಗೆ?'' ಅಂತ ಸುನೀಲ್ ಮುಂದೆ ತಮ್ಮ ಧರ್ಮಸಂಕಟ ತೋಡಿಕೊಂಡಿದ್ದರು.

ಯಾವಾಗ ಅವರು ತಮ್ಮ ಮುಂದೆ ಈ ವಿಷಯ ಹೇಳಿದರೋ, ಸುನೀಲ್‌ಕುಮಾತ್ ತಮ್ಮ ಮುನಿಸು ಮರೆತು ಅಶೋಕ್ ಅವರ ಜತೆಗಿನ ವಿಶ್ವಾಸವನ್ನು ಮರುಸ್ಥಾಪಿಸಿಕೊಂಡಿದ್ದರು. ಇದೇ ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಪಕ್ಷಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಿ ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ತರುವ ವಿಷಯದಲ್ಲಿ ಅಶೋಕ್ ಆಸಕ್ತಿ ತೋರಿರುವುದು ನಿಜವಾದರೂ ವರಿಷ್ಠರ ಮನಸ್ಸಿನಲ್ಲಿ ಸುನೀಲ್‌ಕುಮಾರ್ ಹೆಸರೂ ಇದೆ ಎಂಬುದು ಅವರಿಗೆ ಕನ್‌ಫರ್ಮ್ ಆಗಿದೆ. ಅದರಲ್ಲೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ''ಸುನೀಲ್ ಕುಮಾರ್ ಅವರನ್ನು ಪಕ್ಷಾಧ್ಯಕ್ಷ ಸ್ಥಾನಕ್ಕೆ ತಂದರೆ ಹೇಗೆ?'' ಅಂತ ಸ್ವತಃ ಅಶೋಕ್ ಅವರ ಬಳಿಯೇ ಕೇಳಿದ್ದರಂತೆ. ಅಮಿತ್ ಶಾ ಹೀಗೆ ಕೇಳುತ್ತಿದ್ದಾರೆ ಎಂದರೆ ಹಿಂದೂ ಫೈರ್ ಬ್ರ್ಯಾಂಡ್ ಅಂತ ಅವರು ಸುನೀಲ್‌ಕುಮಾರ್ ಅವರನ್ನು ಗುರುತಿಸಿದ್ದಾರೆ ಅಂತಲೇ ಅರ್ಥವಲ್ಲವೇ? ಹಾಗಂತಲೇ ಅಮಿತ್ ಶಾ ಅವರ ಮುಂದೆ ಸುನೀಲ್‌ಕುಮಾರ್ ಬಗ್ಗೆ ಅಶೋಕ್ ಪಾಸಿಟಿವ್ ಆಗಿ ಮಾತನಾಡಿ ಬಂದಿದ್ದಾರೆ.

ಅಂದ ಹಾಗೆ, ವಿಜಯೇಂದ್ರ ಅವರ ಜಾಗಕ್ಕೆ ಸೋಮಣ್ಣ ಅವರನ್ನು ತರಬೇಕು ಎಂಬ ವಿಷಯದಲ್ಲಿ ಬೊಮ್ಮಾಯಿ ಮತ್ತಿತರ ನಾಯಕರ ಜತೆ ಸೇರಿ ಅಶೋಕ್ ಒತ್ತಾಸೆ ನೀಡಿದ್ದು ನಿಜವಾದರೂ ವರಿಷ್ಠರ ಆಟ ಯಾವ ರೂಪಕ್ಕೆ ತಿರುಗುತ್ತದೋ? ಎಂಬ ಯೋಚನೆಯಿಂದ ಹುಷಾರಾಗಿ ಹೆಜ್ಜೆ ಇಡುತ್ತಿದ್ದಾರೆ.

ಬಿಜೆಪಿ ವರಿಷ್ಠರಿಗೆ ಜೆಡಿಎಸ್ ಏಕೆ ಬೇಕು?

ಈ ಮಧ್ಯೆ, ಕರ್ನಾಟಕದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಗೆ ಬಲ ತುಂಬಲು ಖುದ್ದು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ಇದಕ್ಕೆ ಮಧ್ಯಂತರ ಚುನಾವಣೆಯ ಕನಸೂ ಕಾರಣ. ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಮಾತು ಸದ್ಯಕ್ಕೆ ತಣ್ಣಗಾಗಿದ್ದರೂ ನವೆಂಬರ್ ಇಪ್ಪತ್ತರ ನಂತರ ಪರಿಸ್ಥಿತಿ ಬದಲಾಗಲಿದೆ ಮತ್ತು ಇದು ಮಧ್ಯಂತರ ಚುನಾವಣೆಗೆ ದಾರಿಯಾಗಲಿದೆ ಎಂಬುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವ್ಯವಹಾರಗಳ ಮೇಲೆ ಕಣ್ಣಿಟ್ಟಿರುವ ವರಿಷ್ಠರು, ಮಿತ್ರಪಕ್ಷ ಜೆಡಿಎಸ್ ಜತೆಗಿನ ಬಾಂಧವ್ಯ ಗಟ್ಟಿ ಮಾಡಲು ಮುಂದಾಗಿದ್ದಾರೆ.

ಜೆಡಿಎಸ್ ವಿಷಯದಲ್ಲಿ ಅವರು ಹೆಚ್ಚು ಆಸಕ್ತಿ ತೋರಲು ಮತ್ತೊಂದು ಕಾರಣವೂ ಇದೆ. ಅದೆಂದರೆ ಇತ್ತೀಚೆಗೆ ಅವರಿಗೆ ತಲುಪಿರುವ ವರದಿ. ಅದರ ಪ್ರಕಾರ, ಕರ್ನಾಟಕದಲ್ಲಿ ಚುನಾವಣೆ ನಡೆದರೆ ಬಿಜೆಪಿ-ಜೆಡಿಎಸ್ ಮೈತ್ರಿಕೂಟ 145ರಿಂದ 155 ಕ್ಷೇತ್ರಗಳಲ್ಲಿ ಗೆಲುವು ಗಳಿಸಲಿದೆ. ಈ ಪೈಕಿ ಬಿಜೆಪಿ 95ರಿಂದ 100 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ, ಜೆಡಿಎಸ್ 50ರಿಂದ 55 ಕ್ಷೇತ್ರಗಳಲ್ಲಿ ಗೆಲುವು ಗಳಿಸಲಿದೆ. ಒಂದು ವೇಳೆ ಮೈತ್ರಿ ಇಲ್ಲದೆ ಚುನಾವಣೆಗೆ ಹೋದರೆ ಬಿಜೆಪಿ 60 ಕ್ಷೇತ್ರಗಳಿಗೆ ಲಿಮಿಟ್ ಆದರೆ, ಜೆಡಿಎಸ್ 25 ಕ್ಷೇತ್ರಗಳಿಗೆ ಲಿಮಿಟ್ ಆಗುತ್ತದೆ. ಅರ್ಥಾತ್, ಕರ್ನಾಟಕದ ನೆಲೆಯಲ್ಲಿ ಜೆಡಿಎಸ್ ಜತೆ ಮೈತ್ರಿ ಸಾಧಿಸದೆ ಸ್ವಯಂಬಲದ ಮೇಲೆ ಗೆಲ್ಲುವುದು ಕಷ್ಟ ಎಂಬುದು ಬಿಜೆಪಿ ವರಿಷ್ಠರಿಗಿರುವ ಮಾಹಿತಿ. ಪರಿಣಾಮ? ಜೆಡಿಎಸ್ ಜತೆಗಿನ ಮೈತ್ರಿಗೆ ಆದ್ಯತೆ ನೀಡುತ್ತಿರುವ ಬಿಜೆಪಿ ವರಿಷ್ಠರು ಈ ಬಾರಿ ಮೋದಿಯವರ ಕರ್ನಾಟಕ ಭೇಟಿಯ ಸಂದರ್ಭದಲ್ಲಿ ಕೊಡಬೇಕಾದ ಮೆಸೇಜು ಕೊಟ್ಟಿದ್ದಾರೆ. ಅರ್ಥಾತ್, ಮೋದಿಯವರು ಕರ್ನಾಟಕಕ್ಕೆ ಬಂದಾಗ ಅವರನ್ನು ಸ್ವಾಗತಿಸಲು ಮತ್ತು ಬೀಳ್ಕೊಡಲು ಜೆಡಿಎಸ್ ನಾಯಕರು ಇರುವಂತೆ ನೋಡಿಕೊಂಡಿದ್ದಾರೆ.

ಲಾಸ್ಟ್ ಸಿಪ್: ಅಂದ ಹಾಗೆ, ಈ ಹಿಂದೆ ಕರ್ನಾಟಕಕ್ಕೆ ಬಂದಾಗಲೆಲ್ಲ ಸಿದ್ದು ಸರಕಾರದ ವಿರುದ್ಧ ಗುಡುಗುತ್ತಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇದ್ದಕ್ಕಿದ್ದಂತೆ ಕೂಲ್ ಆಗಿದ್ದಾರೆ. ಹೀಗವರು ಕೂಲ್ ಆಗಲು ಆಪ್ತರು ನೀಡಿದ ಸಲಹೆಯೇ ಕಾರಣ. ''ನೀವು ಕರ್ನಾಟಕಕ್ಕೆ ಬಂದಾಗಲೆಲ್ಲ ಸಿಎಂ, ಡಿಸಿಎಂ ವಿರುದ್ಧ ಮುಗಿಬೀಳುತ್ತಿದ್ದರೆ ಅವರಿಗೆ ಒಂದು ವಾರಕ್ಕಾಗುವಷ್ಟು ಆಹಾರ ನೀಡಿದಂತಾಗುತ್ತದೆ. ಅಷ್ಟೇ ಯಾಕೆ? ಕಾಂಗ್ರೆಸ್ಸಿನ ಸಣ್ಣ ಪುಟ್ಟ ನಾಯಕರಿಗೂ ವೇದಿಕೆ ಕೊಟ್ಟಂತಾಗುತ್ತದೆ. ಹೀಗೆ ಅವರಿಗೆ ಫುಡ್ಡು ನೀಡುತ್ತಿದ್ದರೆ ಅವರ ಪಕ್ಷದ ಪರ ಪ್ರಚಾರಕ್ಕೆ ನೀವೇ ಅವಕಾಶ ಕೊಟ್ಟಂತೆ. ಆದ್ದರಿಂದ ಸಿಎಂ, ಡಿಸಿಎಂ ವಿಚಾರದಲ್ಲಿ ಆದಷ್ಟೂ ಮೌನವಾಗಿರಿ. ಕೇಂದ್ರ ಸಚಿವರಾಗಿ ನಿಮ್ಮ ಕೆಲಸದ ಮೇಲೆ ಗಮನವಿಡಿ. ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆಯ ಕನಸು ಚಿಗುರೊಡೆದಿರುವಾಗ ನಿಮ್ಮ ಪಕ್ಷವನ್ನು ಗಟ್ಟಿ ಮಾಡಿಕೊಳ್ಳಿ'' ಎಂಬುದು ಆಪ್ತರ ಸಲಹೆ. ಈ ಸಲಹೆ ಕುಮಾರಸ್ವಾಮಿಯವರಿಗೂ ಹೌದು ಎನ್ನಿಸಿದೆ. ಹೀಗಾಗಿ ಅವರು ಇದ್ದಕ್ಕಿದ್ದಂತೆ 'ಥಂಡಾ ಥಂಡಾ ಕೂಲ್ ಕೂಲ್' ಆಗಿದ್ದಾರೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಮಾದರಿ ಸಾಧನೆ

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು 27ನೇ ವಯಸ್ಸಿನಲ್ಲಿದ್ದಾಗ, ಅಟಲ್‌ಬಿಹಾರಿ ವಾಜಪೇಯಿಯವರ ಕುರಿತಾಗಿ ಅವರು ಬರೆದ 'ಅಜಾತಶತ್ರು' ಕೃತಿ ಬಿಡುಗಡೆ ಆಯಿತು. ಈ ಸಂದರ್ಭದಲ್ಲಿ ಭಟ್ಟರು ತಮ್ಮ ಡೈರಿಯಲ್ಲಿ ಒಂದಷ್ಟು ಕನಸುಗಳನ್ನು ದಾಖಲಿಸಿದ್ದರು. ಅವು- ತಮ್ಮ ಅರವತ್ತನೆಯ ವಯಸ್ಸಿನೊಳಗೆ ಒಂದು ಪತ್ರಿಕೆಯ ಸಂಪಾದಕನಾಗಬೇಕು, ನೂರು ಪುಸ್ತಕ ಬರೆಯಬೇಕು, ನೂರು ದೇಶಗಳನ್ನು ಸುತ್ತಬೇಕು ಎಂಬುದು. ಈಗ ಭಟ್ಟರಿಗೆ ಅರವತ್ತಾಗಿದೆ. ವಿಜಯಕರ್ನಾಟಕ, ಕನ್ನಡಪ್ರಭ, ಸುವರ್ಣ ನ್ಯೂಸ್ ಮುಂತಾದ ಪತ್ರಿಕೆ/ವಾಹಿನಿಯ ಸಾರಥ್ಯ ವಹಿಸಿದ

ಅವರು ಪ್ರಸ್ತುತ 'ವಿಶ್ವವಾಣಿ', 'ಪ್ರವಾಸಿ ಪ್ರಪಂಚ' ಪತ್ರಿಕೆಗಳ ಪ್ರಧಾನ ಸಂಪಾದಕರೂ ಆಗಿದ್ದಾರೆ. ಜತೆಗೆ 101 ಪುಸ್ತಕ ಬರೆದ, ನೂರಾರು ದೇಶಗಳನ್ನು ಸುತ್ತಿದ ದಾಖಲೆಯೂ ಅವರ ಖಾತೆಯಲ್ಲಿ ಜಮೆಯಾಗಿ, ಹಿಂದೆ ಅವರು ಕಂಡ ಮೂರೂ ಕನಸುಗಳೂ ಇಂದು ಸಾಕಾರಗೊಂಡಿವೆ'' ಎಂಬ ವಿಷಯವನ್ನು, ಭಟ್ಟರ ಮತ್ತು ಇತರ ಲೇಖಕರ ಒಂದಿಷ್ಟು ಪುಸ್ತಕಗಳು ಇತ್ತೀಚೆಗೆ ಬಿಡುಗಡೆಯಾದಾಗ ಆ ಕಾರ್ಯಕ್ರಮದ ನಿರೂಪಕಿ ತಿಳಿಸಿದರು.

ಭಟ್ಟರ ಈ ಸಾಧನೆ ನಿಜಕ್ಕೂ ಎಲ್ಲರೂ ಹೆಮ್ಮೆಪಡುವಂಥ ವಿಷಯವೇ. ಕನಸನ್ನು ಎಲ್ಲರೂ ಕಾಣುತ್ತಾರೆ, ಆದರೆ ಅದನ್ನು ನನಸು ಮಾಡಲು ಬೇಕಾದ ಭರವಸೆಯನ್ನೇ ಬಹುತೇಕರು ಗಟ್ಟಿಮಾಡಿಕೊಳ್ಳುವುದಿಲ್ಲ. ಸಿದ್ಧತೆ-ಬದ್ಧತೆ, ದೃಢಮನಸ್ಸು, ನಿರಂತರ ಪ್ರಯತ್ನ ಇದ್ದರೆ ಮಾತ್ರವೇ ಕನಸುಗಳು ಸಾಕಾರಗೊಳ್ಳುತ್ತವೆ. ಆದರೆ ಈ ನಿಟ್ಟಿನಲ್ಲಿ ಪ್ರಯತ್ನಿಸುವವರು ಕಡಿಮೆ. ಕಂಡ ಕನಸನ್ನು ನನಸಾಗಿಸಿಕೊಳ್ಳುವುದು ಭಟ್ಟರಂಥ ಕೆಲವರಿಗೆ ಮಾತ್ರ ಸಾಧ್ಯ. ಇಷ್ಟೆಲ್ಲಾ ಸಾಧಿಸಿದರೂ ಅವರಲ್ಲಿ ನಾವು ಕಾಣುವ ಸರಳತೆ, ವಿನಯವಂತಿಕೆ, ಇನ್ನೊಬ್ಬರನ್ನು ಪ್ರೋತ್ಸಾಹಿಸಿ ಬೆಳೆಸುವ ಪ್ರವೃತ್ತಿ, ಎಲ್ಲದಕ್ಕೂ ಸಮಯವನ್ನು ಹೊಂದಿಸಿಕೊಳ್ಳುವಿಕೆ ಮುಂತಾದ ವೈಶಿಷ್ಟ್ಯಗಳು ಅವರು ನಮಗೆ ಇನ್ನಷ್ಟು ಹತ್ತಿರವಾಗುವಂತೆ ಮಾಡುತ್ತವೆ.

'ಜ್ಞಾನವನ್ನು ಸಂಪಾದಿಸಲು ದೇಶವನ್ನು ಸುತ್ತಬೇಕು, ಇಲ್ಲವೇ ಕೋಶವನ್ನು ಓದಬೇಕು' ಎಂಬುದೊಂದು ಮಾತಿದೆ. ಇವೆರಡೂ ಬಾಬತ್ತಿನಲ್ಲಿ ಕೈಯಾಡಿಸಿ, ಓದುಗರಿಗೆ ತಮ್ಮ ಅನುಭವವನ್ನು ಹಂಚುತ್ತಿರುವ ಭಟ್ಟರು ಅನೇಕರಿಗೆ ಒಂದು 'ರೋಲ್ ಮಾಡೆಲ್'. ಅವರಿಗೆ ಅಭಿನಂದನೆಗಳು.

- ರಾಘವೇಂದ್ರ ಜೋಯಿಸ್, ಮೈಸೂರು

ಜೀರ್ಣೋದ್ಧಾರ ಯಾವಾಗ?

ವಿಶ್ವವಿಖ್ಯಾತ ಮೈಸೂರು ದಸರಾಗೆ ಮೆರುಗು ತಂದು ಕೊಟ್ಟ ಹಾಗೂ ನಮ್ಮ ಪರಂಪರೆಯನ್ನು ಸಾರುವ 'ಕುಸ್ತಿ ಕಲೆ'ಯನ್ನು ಉಳಿಸಿ ಬೆಳೆಸುವ ಕಾಳಜಿ ಜನಪ್ರತಿನಿಧಿಗಳಲ್ಲಿ ಇಲ್ಲವಾಗಿದೆ ಎಂದು ಹಿರಿಯ ಕುಸ್ತಿ ಪೈಲ್ವಾನರು ವಿಷಾದಿಸಿದ್ದಾರೆ. ಅವರ ನೋವಿನಲ್ಲಿ ಹುರುಳಿದೆ. ಮೈಸೂರಿನ ರಾಜ ಮನೆತನವು ನೀಡಿದ ಪ್ರೋತ್ಸಾಹದಿಂದಾಗಿ ಕುಸ್ತಿ ಕಲೆಯನ್ನು ದೇಶ-ವಿದೇಶಗಳಲ್ಲಿ ಜನಪ್ರಿಯಗೊಳಿಸಿದ ಮೈಸೂರಿನ ಪೈಲ್ವಾನರ ಸಾಹಸವು ಎಂದಿಗೂ ಮರೆಯಲಾಗದ ಇತಿಹಾಸ. ಆದರೆ ಇಂಥ ಪೈಲ್ವಾನರನ್ನು ಸೃಷ್ಟಿಸಿದ ಗರಡಿ ಮನೆಗಳು ವರ್ಷದಿಂದ ವರ್ಷಕ್ಕೆ ಅವಸಾನದ ಅಂಚಿಗೆ ಸಾಗುತ್ತಿವೆ. ಇದು ವಿಪರ್ಯಾಸವೇ ಸರಿ. ಮಹಾರಾಜರ ಆಳ್ವಿಕೆಯ ಕಾಲಘಟ್ಟದಲ್ಲಿ 80ರಷ್ಟು ಇದ್ದ ಗರಡಿಮನೆಗಳು ಈಗ 25ಕ್ಕೆ ಇಳಿದಿವೆ ಎಂಬ ಪೈಲ್ವಾನರ ಮಾತನ್ನು ಮತ್ತು ಅದರ ಆಳದಲ್ಲಿರುವ ನೋವನ್ನು ನಮ್ಮ ಆಳುಗರು ಇನ್ನಾದರೂ ಅರ್ಥಮಾಡಿಕೊಂಡು ಅವುಗಳ ಜೀರ್ಣೋದ್ಧಾರಕ್ಕೆ ಸಂಕಲ್ಪ ಮಾಡಲಿ, ತನ್ಮೂಲಕ ಕುಸ್ತಿ ಕಲೆಯನ್ನು ಉಳಿಸಿ ಬೆಳೆಸುವುದಕ್ಕೆ ಆದ್ಯತೆ ನೀಡಲಿ.

- ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಹಾವಿಗೆ ಹಾಲೆರೆದರೇ ಪ್ರಧಾನಿ ನರೇಂದ್ರ ಮೋದಿ?

ಮಂತ್ರಾಲೋಚನೆ

ಹರೀಶ್‌ಕುಮಾರ್ ಕುಡ್ತಡ್ಕ
vveditoped@gmail.com

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತದಿಂದ ತಮ್ಮಲ್ಲಿಗೆ ಆಮದಾಗುವ ಸರಕುಗಳ ಮೇಲೆ ಕೊನೆಗೂ ಶೇ.25ರಷ್ಟು ಹೆಚ್ಚುವರಿ ಸುಂಕವನ್ನು ವಿಧಿಸಿಯೇಬಿಟ್ಟರು. ಈ ಬಗ್ಗೆ ಅನೇಕ ಸಲ ಒತ್ತಡ/ಬೆದರಿಕೆಯ ತಂತ್ರ ಹೂಡಿ ಭಾರತವನ್ನು ಬಗ್ಗಿಸಲು ಯತ್ನಿಸಿದ್ದ ಟ್ರಂಪ್, ಈ ಬಾರಿ ಅದನ್ನು ಕಾರ್ಯರೂಪಕ್ಕೆ ತಂದೇಬಿಟ್ಟರು. ಅಮೆರಿಕದಿಂದ ರಫ್ತಾಗುವ ಸರಕಿನ ಮೇಲೆ ಭಾರತವು ಅಧಿಕ ಸುಂಕವನ್ನು ವಿಧಿಸುತ್ತಿದೆ ಎಂಬ ಆಕ್ಷೇಪ ಹಿಂದಿನಿಂದಲೂ ಇದೆ (ಇದು ಭಾರತವು ತನ್ನ ಕೃಷಿಕರು ಮತ್ತು ಹೈನುಗಾರರ ಹಿತದೃಷ್ಟಿಯಿಂದ ಬಹಳ ಹಿಂದಿನಿಂದ ಅನುಸರಿಸಿಕೊಂಡು ಬಂದಿರುವ ಕ್ರಮ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ). ಜತೆಗೆ, ಭಾರತವು ರಷ್ಯಾದಿಂದ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದು ಅಮೆರಿಕದ ಕೆಂಗಣ್ಣಿಗೆ ಇನ್ನೊಂದು ಕಾರಣ. ಇದಕ್ಕೆಲ್ಲ ಪ್ರತೀಕಾರವೆಂಬಂತೆ ಅಮೆರಿಕ ಈಗ ಹೆಚ್ಚುವರಿ ಸುಂಕದ ಬರೆ ಎಳೆದಿದೆ.

ಅಮೆರಿಕದ ಈ ನಿರ್ಧಾರದ ಬಿಸಿಯನ್ನು ಭಾರತೀಯ ರಫ್ತು ಉದ್ಯಮ ಈಗ ಅನುಭವಿಸಬೇಕಾಗಿ ಬಂದಿದೆ. ಏಕೆಂದರೆ, ಈಗ ರಫ್ತುದಾರರು ಒಟ್ಟು ಶೇ.50ರಷ್ಟು ಸುಂಕವನ್ನು ಪಾವತಿಸಬೇಕಾಗುತ್ತದೆ. ಅಮೆರಿಕದ ಈ ಸೇಡಿನ ಕ್ರಮವು ಭಾರತದ ಆರ್ಥಿಕತೆಗೆ ದೊಡ್ಡ ಹೊಡೆತವನ್ನು ನೀಡಲಿದೆ ಎನ್ನಲಾಗುತ್ತಿದೆ. 'ಈ ಕ್ರಮವು ಅನ್ಯಾಯ, ಅಸಮರ್ಥನೀಯ ಮತ್ತು ಅತಾರ್ಕಿಕ' ಎಂದು ಭಾರತ ಪ್ರತಿಕ್ರಿಯಿಸಿದೆ. ಆದರೆ ಇಂಥ ಯಾವುದೇ ಪ್ರತಿಕ್ರಿಯೆಯೂ ಟ್ರಂಪ್‌ರಂಥ ವಿಲಕ್ಷಣ ವ್ಯಕ್ತಿತ್ವದವರನ್ನು ತಟ್ಟಲು ಸಾಧ್ಯವೇ?

ಈ ಬೆಳವಣಿಗೆಯು ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ನಡುವಿನ ಬಾಂಧವ್ಯಕ್ಕೊಂದು ನಕಾರಾತ್ಮಕ ತಿರುವು ನೀಡಿದೆ. ಮೋದಿ-ಟ್ರಂಪ್ ನಡುವಿನ ಸ್ನೇಹ ಮೊದಲಿನಿಂದಲೂ ಸುಪ್ರಸಿದ್ಧ. ಇಬ್ಬರೂ ಪರಸ್ಪರರ ಹೆಸರನ್ನು ಸಂಬೋಧಿಸುವಾಗ 'ಮೈ ಫ್ರೆಂಡ್' ಎಂಬ ಪದಗುಚ್ಛವನ್ನು ಅದಕ್ಕೆ ಲಗತ್ತಿಸುತ್ತಿದ್ದುದನ್ನು, ಭೇಟಿಯ ವೇಳೆ ಅಪ್ಪುಗೆ ನೀಡುತ್ತಿದ್ದುದನ್ನು ಜಗತ್ತು ನೋಡಿಕೊಂಡೇ ಬಂದಿದೆ. 2019ರಲ್ಲಿ ಅಮೆರಿಕದ ಹ್ಯೂಸ್ಟನ್ ನಗರದಲ್ಲಿ ನಡೆದ 'ಹೌಡಿ ಮೋದಿ' ಕಾರ್ಯಕ್ರಮದಲ್ಲಿ ಮೋದಿಯವರು ಭಾಷಣ ಮಾಡುತ್ತ ಟ್ರಂಪ್‌ರನ್ನು ಹೊಗಳಿದ್ದೇ ಹೊಗಳಿದ್ದು! ಭಾಷಣದ ಕೊನೆಯಲ್ಲಿ ಅವರು, 'ಅಬ್ ಕಿ ಬಾರ್, ಟ್ರಂಪ್ ಸರ್ಕಾರ್' ಎಂದಿದ್ದನ್ನು ಮರೆಯಲಾದೀತೇ? ಅದು 2020ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾರ್ಮಿಕವಾಗಿ ನುಡಿದ ಮಾತಾಗಿತ್ತು (ಇದು ವಿವಾದಕ್ಕೆ ಎಡೆಮಾಡಿಕೊಟ್ಟಿದ್ದು ಬೇರೆ ವಿಷಯ!). ರಾಜತಾಂತ್ರಿಕ ಶಿಷ್ಟಾಚಾರಗಳನ್ನು ಮೀರಿದ ಈ ನಡೆಯು ಟ್ರಂಪ್-ಮೋದಿ ನಡುವಿನ ಸಂಬಂಧದ ಸಲಿಗೆ ಹಾಗೂ ಆಪ್ತತೆಯನ್ನು ತೆರೆದು ತೋರಿಸಿದ್ದು ಸತ್ಯ. ತರುವಾಯದಲ್ಲಿ, ಈ ಕಾರ್ಯಕ್ರಮಕ್ಕೆ ಪ್ರತಿಕ್ರಿಯೆ ಎಂಬಂತೆ ಮೋದಿಯವರ ತವರುರಾಜ್ಯ ಗುಜರಾತಿನ ಅಹಮದಾಬಾದ್‌ನಲ್ಲಿ 'ನಮಸ್ತೆ ಟ್ರಂಪ್' ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಈ ಎರಡೂ ಕಾರ್ಯಕ್ರಮಗಳಲ್ಲಿ ಮೋದಿಯವರು ಮತ್ತು ಅವರ ಅಭಿಮಾನಿಗಳು ತೋರಿದ ಪ್ರೀತ್ಯಾದರಗಳನ್ನು ಟ್ರಂಪ್ ನೆನಪಿಡಬೇಕಾಗಿತ್ತು.

ಇಂಥ ಕಾರ್ಯಕ್ರಮಗಳಿಂದಾಗಿ ಟ್ರಂಪ್ ಅವರಿಂದ ಭಾರತಕ್ಕೆ ಹೆಚ್ಚು ಅನುಕೂಲವಾಗಲಿದೆ ಎಂಬ ನಿರೀಕ್ಷೆ ಭಾರತೀಯರಲ್ಲಿ ಮೂಡಿದ್ದರೆ ಅದರಲ್ಲೇನೂ ಅಚ್ಚರಿಯಿಲ್ಲ. ಆದರೆ, ಇಂಥ ಕಾರ್ಯಕ್ರಮಗಳಿಂದ ಭಾರತಕ್ಕಾಗಿರುವ ಪ್ರಯೋಜನವಾದರೂ ಏನೆಂಬುದು ಇವತ್ತಿಗೂ ಗೊತ್ತಾಗುತ್ತಿಲ್ಲ. ಇದೊಂದು ಚರ್ಚಾಸ್ಪದ ವಿಷಯವಾಗಿ ಉಳಿದಿದ್ದಂತೂ ಹೌದು. ಆ ವರ್ಷಾಂತ್ಯದಲ್ಲಿ ನಡೆದ ಚುನಾವಣೆಯಲ್ಲಿ ಟ್ರಂಪ್ ಪರಾಭವಗೊಂಡರು; ಅಲ್ಲಿಗೆ ಮೋದಿ-ಟ್ರಂಪ್ ಸ್ನೇಹಕ್ಕೆ ಒಂದು ತಾತ್ಕಾಲಿಕ ತಡೆ ಬೀಳುವಂತಾಯಿತು.

2024ರ ಚುನಾವಣೆಯಲ್ಲಿ ಟ್ರಂಪ್ ಮತ್ತೆ ಗೆದ್ದುಬಂದಾಗ, 'ಇವರಿಬ್ಬರ ಸ್ನೇಹದ ಹೊಸಶಕೆ ಆರಂಭವಾಗಿ, ಭಾರತಕ್ಕೆ ಅನುಕೂಲವೇನಾದರೂ ಆಗಬಹುದೇ?' ಎಂಬ ಕುತೂಹಲವಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಇವರಿಬ್ಬರ ಬಾಂಧವ್ಯ ಆರಂಭದಲ್ಲಿಯೇ ಹಳ್ಳ ಹಿಡಿದಿದ್ದು ಸ್ಪಷ್ಟವಾಗಿ ಗೋಚರಿಸಿತು. 'ಅಮೆರಿಕ ಮೊದಲು' ಎಂಬ ಮಂತ್ರದೊಂದಿಗೆ ಈ ಸಲ ಅಧಿಕಾರ ಹಿಡಿದ ಟ್ರಂಪ್, 'ಮೊದಲಿನ ಟ್ರಂಪ್' ಆಗಿರಲಿಲ್ಲ. ಅವರ ನಡೆಗಳನ್ನು ಗಮನಿಸಿದರೆ, ಅವರು ಜಗತ್ತಿನ ದೊಡ್ಡಣ್ಣನ ಪಾತ್ರವನ್ನು 'ಅತಿರೇಕವಾಗಿ' ಆವಾಹಿಸಿಕೊಂಡಂತಿತ್ತು. ಟ್ರಂಪ್ ಅವರ ಪ್ರಮಾಣವಚನಕ್ಕೆ ಭಾರತದ ಪ್ರಧಾನಿಗೆ ಆಹ್ವಾನವಿರಲಿಲ್ಲ ಎಂಬುದು ಸುದ್ದಿಯಾಯಿತು. ಪ್ರಮಾಣವಚನದ ಬಳಿಕ 'ಜಾಗತಿಕ ಪಾಳೇಗಾರ'ನ ಗತ್ತು ಹಾಗೂ ಠೇಂಕಾರದಲ್ಲಿ ಟ್ರಂಪ್ ಕೆಲವು ರಾಷ್ಟ್ರಗಳ ಮುಖ್ಯಸ್ಥರನ್ನು ವ್ಯವಹಾರ ಸಂಬಂಧಿತ ಚರ್ಚೆಗೆ ಅಮೆರಿಕಕ್ಕೆ ಬರುವಂತೆ ಸೂಚಿಸಿದರು. ಉಳಿದ ರಾಷ್ಟ್ರಗಳ ಮುಖ್ಯಸ್ಥರನ್ನು ಟ್ರಂಪ್ ಸ್ವತಃ ಬಾಗಿಲ ಬಳಿ ನಿಂತು ಸ್ವಾಗತಿಸಿದರೆ, ಮೋದಿಯವರನ್ನು ಎದುರುಗೊಳ್ಳುವ ಹೊಣೆಗಾರಿಕೆಯನ್ನು ರಾಜತಾಂತ್ರಿಕರೊಬ್ಬರಿಗೆ ವಹಿಸಲಾಗಿತ್ತು!

ನಂತರ ಶುರುವಾಗಿದ್ದೇ ಟ್ರಂಪ್‌ರ ಅಸಲಿ ಆಟ! ಮೊದಲಿಗೆ, ಅಮೆರಿಕದ ಹೊರಗಿನ ವಿದ್ಯಾರ್ಥಿಗಳು ಮತ್ತು ಪ್ರಜೆಗಳಿಗೆ ನೀಡಲಾಗುವ 'ಎಚ್ 1-ಬಿ' ವೀಸಾಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮಗಳ ಸೂಚನೆಯನ್ನು ಟ್ರಂಪ್ ನೀಡಿದರು. ಇದು ಅಮೆರಿಕದ ಕನಸು ಕಾಣುತ್ತಿದ್ದಂಥ ಭಾರತೀಯರಲ್ಲಿ ಆತಂಕವನ್ನು ಸೃಷ್ಟಿಸಿತು. ತರುವಾಯದಲ್ಲಿ ಅವರು, ಅಮೆರಿಕದ ಹಿತಾಸಕ್ತಿಯನ್ನು ಕಾಪಾಡುವಂಥ ಸುಂಕಗಳ ಕುರಿತು ಪ್ರಸ್ತಾಪಿಸುತ್ತ, ಅಮೆರಿಕದೊಡನೆ ವ್ಯಾಪಾರ ಮಾಡುವಂಥ ದೇಶಗಳ ಆತಂಕ, ಚಿಂತೆಗಳನ್ನು ಹೆಚ್ಚಿಸುವಂಥ ಹೇಳಿಕೆಗಳನ್ನು ನೀಡುತ್ತಾ ಮುಂದುವರಿದರು. ಅವರ ನಂತರದ ಕ್ರಮಗಳೆಲ್ಲ ಭಾರತೀಯರಿಗೆ ಸರಣಿ ಆಘಾತವನ್ನು ಉಂಟುಮಾಡುತ್ತಾ ಸಾಗಿದವು. ಪಹಲ್ಗಾಮ್‌ನಲ್ಲಾದ ಉಗ್ರರ ದಾಳಿಯಲ್ಲಿ 26 ಮಂದಿ ಪ್ರವಾಸಿಗರು ಅಸುನೀಗಿದ ಸಂದರ್ಭದಲ್ಲಿ ಟ್ರಂಪ್ ನಿಲುವು ತುಂಬಾ ನಿರಾಸೆಯನ್ನು ಉಂಟುಮಾಡಿತು. ''ಈ ದಾಳಿ ಕೆಟ್ಟದ್ದು'' ಎಂದಷ್ಟೇ ಹೇಳಿದ ಅವರು, ''ನಾನು ಏಕಕಾಲದಲ್ಲಿ ಭಾರತ ಮತ್ತು ಪಾಕಿಸ್ತಾನ ಎರಡಕ್ಕೂ ಹತ್ತಿರದವನಾಗಿದ್ದೇನೆ'' ಎಂದರು. ಅವರು ಕನಿಷ್ಠಪಕ್ಷ, ''ಉಗ್ರಗಾಮಿ ಚಟುವಟಿಕೆಗಳಿಗೆ ಯಾವುದೇ ಬೆಂಬಲವನ್ನು ನೀಡಬಾರದು'' ಎಂದು ಪಾಕಿಸ್ತಾನಕ್ಕೆ ಬುದ್ಧಿ ಹೇಳಲಿಲ್ಲ. ಇದು ಮೋದಿ-ಟ್ರಂಪ್ ಬಾಂಧವ್ಯದ ಟೊಳ್ಳುತನಕ್ಕೆ ಹಿಡಿದ ಕನ್ನಡಿಯಂತಿತ್ತು!

ಭಾರತ ತನ್ನ ಸುರಕ್ಷತೆಗಾಗಿ ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆ ಬಳಿಕ, ''ಈ ಘರ್ಷಣೆಯನ್ನು ನಾನೇ ನಿಲ್ಲಿಸಿದೆ'' ಎಂದು ಘೋಷಿಸಿಕೊಂಡ ಟ್ರಂಪ್ ಅಷ್ಟಕ್ಕೇ ಸುಮ್ಮನಾಗಲಿಲ್ಲ; ''ಪಾಕಿಸ್ತಾನದ ಕೋರಿಕೆ ಮೇರೆಗೆ ಕಾರ್ಯಾಚರಣೆಯನ್ನು ನಿಲ್ಲಿಸಲಾಯಿತು'' ಎಂದು ಭಾರತ ಸರಕಾರವು ಸ್ಪಷ್ಟೀಕರಣವನ್ನು ನೀಡಿದ ನಂತರವೂ ಟ್ರಂಪ್ ಮಹಾಶಯರ ಬಡಿವಾರ ಮುಂದುವರಿಯಿತು. ಇದೇ ಮಾತನ್ನು ಟ್ರಂಪ್ ಪುನರಾವರ್ತಿಸುತ್ತಲೇ ಸಾಗಿದರು. ಇಷ್ಟು ಸಾಲದೆಂಬಂತೆ, ಅದಾಗಲೇ ಆಗಿದ್ದ ಗಾಯಕ್ಕೆ ಉಪ್ಪು ಸವರುವಂತೆ ಪಾಕಿಸ್ತಾನದ ಸೇನಾ ಮುಖ್ಯಸ್ಥರನ್ನು ಅಮೆರಿಕಕ್ಕೆ ಆಹ್ವಾನಿಸಿ ಒಂದೇ ಮೇಜಿನಲ್ಲಿ ಭೋಜನವನ್ನು ಸವಿದರು. ''ಭಾರತ-ಪಾಕ್ ನಡುವಿನ ಸಂಘರ್ಷವನ್ನು ನಿಲ್ಲಿಸಿದ್ದು ನಾನೇ'' ಎಂಬ ಟ್ರಂಪ್‌ರ ಮಾತನ್ನು ಪ್ರತಿಪಕ್ಷ ಕಾಂಗ್ರೆಸ್ ನೆನಪಿಟ್ಟುಕೊಂಡು, ''ಆ ಮಾತನ್ನು ಟ್ರಂಪ್ 33 ಬಾರಿ ಪುನರುಚ್ಚರಿಸಿದ್ದಾರೆ'' ಎಂದು ಹೇಳಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಹವಣಿಸಿತು. ಆಗ ಕೆಲದಿನ ಮೌನಕ್ಕೆ ಶರಣಾದ ಮೋದಿಯವರು, ಈ ಮಾತನ್ನು ಕೊನೆಗೂ ನೇರವಾಗಿ ನಿರಾಕರಿಸದೆ ಅಲ್ಲಿಂದ ಅಲ್ಲಿಗೇ ತೇಪೆ ಹಚ್ಚಿದರು.

ವಾಸ್ತವಾಂಶ ಏನೇ ಇರಲಿ, ಕನಿಷ್ಠಪಕ್ಷ ಮೋದಿಯವರ ಗೆಳೆತನಕ್ಕೆ ಬೆಲೆ ಕೊಟ್ಟಾದರೂ ಟ್ರಂಪ್ ಸುಮ್ಮನಾಗಬಹುದಿತ್ತು. ಟ್ರಂಪ್ ಉದ್ದೇಶ, ಅಮೆರಿಕದ ಸರಕುಗಳ ಮೇಲಿನ ಭಾರತದ ಸುಂಕವನ್ನು ಕಡಿತಗೊಳಿಸಲು ಹೂಡಿದ ಒತ್ತಡ ತಂತ್ರವೇ ಇರಬಹುದು. ಆದರೆ ಬಹುಕಾಲದ ಗೆಳೆಯರಾಗಿರುವ ಮೋದಿಯವರನ್ನು ಬೇಕಂತಲೇ ಇಕ್ಕಟ್ಟು, ಮುಜುಗರಗಳಿಗೆ ಸಿಲುಕಿಸುವ ಅವರ ನಡೆ ಎಷ್ಟರಮಟ್ಟಿಗೆ ಸರಿ? ಟ್ರಂಪ್ ಅವರ ಮಾತು ಮತ್ತು ವರ್ತನೆಗಳ ನಡುವೆ ತಾಳ-ಮೇಳವಿಲ್ಲ. ''ಭಾರತವು ವ್ಯವಹಾರಗಳಿಗೆ ಉತ್ತಮ ಪಾಲುದಾರ ರಾಷ್ಟ್ರವಲ್ಲ; ಭಾರತದ್ದು ಸತ್ತ ಆರ್ಥಿಕತೆ'' ಎಂದೆಲ್ಲಾ ಅವಮಾನ ಮಾಡಿದರು ಟ್ರಂಪ್. ಅಲ್ಲಿಗೆ, ಟ್ರಂಪ್ ಗೆಳೆತನದ ಸಾಚಾತನವನ್ನು ಅಂದಾಜಿಸುವಲ್ಲಿ ಮೋದಿ ಎಡವಿದ್ದು ಸ್ಪಷ್ಟವಾದಂತಾಯಿತು. ಇದರಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವು ಅವಮಾನವನ್ನು ಅನುಭವಿಸಬೇಕಾಗಿ ಬಂತು. ಸ್ವತಃ ಒಂದು ದೇಶದ ಅಧ್ಯಕ್ಷರಾಗಿರುವ ಟ್ರಂಪ್, ಭಾರತದಂಥ ಪ್ರಜಾಸತ್ತಾತ್ಮಕ ದೇಶವನ್ನು ನಡೆಸಿಕೊಳ್ಳುವ ರೀತಿಯೇ ಇದು? ಭಾರತ ಸರಕಾರ ಕೂಡ ಟ್ರಂಪ್ ಅವರ ನಡೆಯನ್ನು ದಿಟ್ಟತನದಲ್ಲಿ ಎದುರಿಸಲು ವಿಫಲವಾಗಿರುವಂಥದ್ದು ಚರಿತ್ರೆಯಲ್ಲಿ ದಾಖಲಾಗಲಿದೆ.

ವಾಸ್ತವದಲ್ಲಿ ಮೋದಿಯವರ ಸರಕಾರವು, ಅಮೆರಿಕದ ವಿದೇಶಾಂಗ ನೀತಿಯನ್ನು ತಪ್ಪಾಗಿ ಅಂದಾಜಿಸಿತು ಎನ್ನಬಹುದು. ಕೇಂದ್ರದಲ್ಲಿ ಅಧಿಕಾರ ಹಿಡಿದ ಮೋದಿಯವರಿಗೆ ಕಾಶ್ಮೀರದಲ್ಲಿ 'ಪಾಕಿಸ್ತಾನ-ಪ್ರಾಯೋಜಿತ' ಉಗ್ರಗಾಮಿ ಚಟುವಟಿಕೆಗಳನ್ನು ಪೂರ್ಣವಾಗಿ ಕೊನೆಗಾಣಿಸುವ ಇರಾದೆಯಿತ್ತು. ಪಾಕಿಸ್ತಾನವನ್ನು ಮಣಿಸದೆಯೇ ಇದು ಸಾಧ್ಯವಾಗುವ ಗುರಿಯಲ್ಲ ಎಂದೂ ಗೊತ್ತಿತ್ತು. ಬಹುಶಃ ಇದಕ್ಕಾಗಿಯೇ ಭಾರತ ಸರಕಾರವು ಅಮೆರಿಕದ ಜತೆಗಿನ ಸಂಬಂಧಕ್ಕೆ ಅತಿಯಾದ ಪ್ರಾಮುಖ್ಯವನ್ನು ನೀಡಿತು ಎಂದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಅಮೆರಿಕದ ನೀತಿಯನ್ನು ತಪ್ಪಾಗಿ ಅರ್ಥಮಾಡಿಕೊಂಡಂತೆ, ಅಧ್ಯಕ್ಷ ಟ್ರಂಪ್ ವ್ಯಕ್ತಿತ್ವವನ್ನು ಅರಿಯುವಲ್ಲಿಯೂ ಮೋದಿಯವರು ಸೋತರು ಎನ್ನಬಹುದು. ಟ್ರಂಪ್ ಅವರ ವೈಯಕ್ತಿಕ ದೌರ್ಬಲ್ಯಗಳು, ಪ್ರಬುದ್ಧವಲ್ಲದ ವರ್ತನೆ ಮತ್ತು ಆಕ್ರಮಣಕಾರಿ ನಡವಳಿಕೆಗಳು, ಅವರ ಕುರಿತು ಸದಭಿಪ್ರಾಯ ಮೂಡಿಸುವಂತಿರಲಿಲ್ಲ. ಹೀಗಿದ್ದೂ ಟ್ರಂಪ್ ಅವರ ಮೇಲೆ ಅತಿಯಾದ ನಂಬಿಕೆಯಿಟ್ಟಿದ್ದು ಭಾರತಕ್ಕೆ ಮುಳುವಾಯಿತು ಎನ್ನಬಹುದೇ?

ಅಮೆರಿಕವು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರತಿಪಾದಕ ಎಂಬುದನ್ನು ಹೊರತುಪಡಿಸಿದರೆ, ಮಿಕ್ಕಂತೆ ಅದಕ್ಕೆ ವ್ಯಾವಹಾರಿಕ ಹಿತಾಸಕ್ತಿಗಳೇ ಆದ್ಯತೆಯ ವಿಷಯ ಎಂಬುದು ಇಡೀ ಜಗತ್ತಿಗೇ ಗೊತ್ತು. ನ್ಯಾಯ, ಮಾನವೀಯತೆ, ನಿಷ್ಪಕ್ಷಪಾತಿ ವರ್ತನೆ ಇತ್ಯಾದಿ ಮೌಲ್ಯಗಳೆಲ್ಲ ಅದಕ್ಕೆ ಮುಖ್ಯವಲ್ಲ. ಯುದ್ಧೋಪಕರಣಗಳು, ಶಸ್ತ್ರಾಸ್ತ್ರಗಳ ಮಾರಾಟದಂಥ ವ್ಯವಹಾರಕ್ಕೇ ಅದರ ಆದ್ಯತೆ. ಜತೆಗೆ, ಮಿತ್ರದೇಶಗಳ ನೈಸರ್ಗಿಕ ಸಂಪತ್ತನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸುವಂಥ ತಂತ್ರಗಾರಿಕೆಯೂ ಅದಕ್ಕೆ ಕರಗತ. ತನಗೆ ಲಾಭವಿಲ್ಲದೆ ಮಿತ್ರದೇಶಗಳಿಗೆ ನೆರವು ನೀಡುವುದು ಅಮೆರಿಕಕ್ಕೆ ಒಗ್ಗದ ವಿಷಯ! ಹಾಗೆಯೇ ಜಗತ್ತಿನ ಇತರ ದೇಶಗಳ ವಿಷಯಗಳಲ್ಲಿ ಮೂಗು ತೂರಿಸಿ ತನ್ನ ಬೇಳೆ ಬೇಯಿಸಿಕೊಳ್ಳುವಲ್ಲಿಯೂ ಅದು ಯಾವತ್ತೂ ಹಿಂದೆ ಬಿದ್ದಿಲ್ಲ. ಇಂಥ ದೇಶ ಮತ್ತು ಅದರ ಅಧ್ಯಕ್ಷ ಟ್ರಂಪ್ ಜತೆಗಿನ ಮಿತ್ರತ್ವವು ಭಾರತಕ್ಕೆ ದುಬಾರಿಯಾಗಿ ಪರಿಣಮಿಸಿದೆ. ಸುಂಕ ಹೆಚ್ಚಿಸಿದ ಎರಡು ದಿನಗಳ ಬಳಿಕವೂ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯವರು, ''ಭಾರತ-ಪಾಕಿಸ್ತಾನದ ಯುದ್ಧವನ್ನು ನಿಲ್ಲಿಸಿದ್ದು ನಾವೇ'' ಎಂಬ ಹೇಳಿಕೆ ನೀಡಿದ್ದಾರೆ. ಈ ಬೆಳವಣಿಗೆ ನಮಗೆ ಪಾಠವಾಗಬೇಕಿದೆ ಹಾಗೂ ಭಾರತವು ಮುಂದಿನ ದಿನಗಳಲ್ಲಿ ಅಮೆರಿಕದೊಂದಿಗೆ ಒಂದು ಅಂತರ ಕಾಯ್ದುಕೊಂಡು ಎಚ್ಚರದ ಹಾಗೂ ವಿವೇಕದ ಹೆಜ್ಜೆಗಳನ್ನು ಇಡಬೇಕಾಗಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಭಟ್ಟರ್ ಸ್ಕಾಚ್

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನಿನ್ನ ಗುಂಡಿ ತೋಡುತ್ತೇನೆ ಅಂತಾನಲ್ಲ?
– **ಅಸ್ಥಿಪಂಜರ ಸಿಕ್ತಾ ಅಂತ ಕೇಳಬೇಕಿತ್ತು!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಸಮಯ ಮೊದಲು ಕಂಡುಹಿಡಿದವರಿಗೆ ಆಗಿನ ಸಮಯ ಹೇಗೆ ಗೊತ್ತಾಯ್ತು?
– **ಆಮ್ಲಜನಕ ಕಂಡು ಹಿಡಿದವ ಅದಕ್ಕೂ ಮುನ್ನ ಹೇಗೆ ಉಸಿರಾಡುತ್ತಿದ್ದ ಮೊದಲು ಹೇಳು!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, 'ಪ್ರವಾಸಿ ಪ್ರಪಂಚ' ಓದುವುದರ ಒಂದು ಸಮಸ್ಯೆ ಏನು?
– **ಒಂದು ವಾರ ಕಳೆದುಹೋಗಿದ್ದೇ ಗೊತ್ತಾಗುವುದಿಲ್ಲ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಭೂತಾನ್‌ಗೆ ನನ್ನನ್ನೇಕೆ ಕರೆಯಲಿಲ್ಲ ಅಂತ ಮೊಯಿಲಿ ಕೇಳಿದ್ರೆ?
– **ಮಹಾಕಾವ್ಯವನ್ನು ನಾನು ಇಲ್ಲಿ ಬರೀತಾ ಕುಳಿತುಕೊಳ್ಳಲಾ ಅಂತ ಕೇಳ್ತೀನಿ!**

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಹೆಂಡತಿ ಜತೆ ಜಗಳವಾಡಿದ್ದರೆ ಎಲ್ಲಿಗೆ ಹೋಗಬೇಕು?
– **ಅವಳೇ ಹೋಗ್ತಾಳೆ ಬಿಡು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಮುಂದೊಂದು ದಿನ ಮಂಗಳನಲ್ಲಿ ಮನೆ ಕಟ್ಟಬಹುದಾ?
– **ಮೊದಲು ಗುಂಡಿಯಿಲ್ಲದ ರಸ್ತೆಗಳನ್ನು ಮಾಡಲಿ!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ರಾಹುಲ್ ಗಾಂಧಿ ಎರಡನೇ ಅಂಬೇಡ್ಕರ್ ಅಂತ ಕಾಂಗ್ರೆಸ್ ನಾಯಕ ಉದಿತ್ ರಾಜ್ ಹೇಳಿದ್ದಾರಂತೆ?
– **ನಮ್ಮಪ್ಪ ಮೂರನೇ ಅಂಬೇಡ್ಕರ್ ಅಂತ ಅನೇಕರು ಹೇಳಬಹುದು!**

- **ವಿ.ವಿ.ರೆಡ್ಡಿ, ಬೆಂಗಳೂರು**
ಭಟ್ರೇ, ರಾಜಕಾರಣಿಗಳ ಮಕ್ಕಳ ಚಿತ್ರಕ್ಕೆ ಯಾರ ಕಥೆ ಇದ್ರೆ ಒಳ್ಳೆಯದು?
– **ಅವರ ಅಪ್ಪಂದಿರ ಕಥೆ ಇದ್ರೆ ಒಳ್ಳೆಯದು!**

- **ರಮ್ಯ ಮಲ್ಲಿಕಟ್ಟೆ, ಕೋಣಂದೂರು**
ಭಟ್ರೇ, ಈಗಿನ ಆಂಟಿಯರು ಮೊಬೈಲಿನಲ್ಲಿಯೇ ಮುಳುಗಿರುತ್ತಾರಲ್ಲ?
– **ಮುಳುಗಿದ್ರೆ ಓಕೆ, ಆದರೆ ತೇಲುತ್ತಿರುತ್ತಾರಲ್ಲ?!**

ಸುಭಾಷಿತ, ನಮ್ಮೆಲ್ಲಾಗಲಿ ಅಂತರ್ಗತ

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಾವು ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಕನ್ನಡ ಪ್ರಥಮ ಭಾಷೆಯಾಗಿತ್ತು. ನಾಲ್ಕನೆಯ ತರಗತಿಯವರೆಗೂ ಬೇರೆ ಯಾವ ಭಾಷೆಯ ಗಂಧ-ಗಾಳಿಯೂ ನಮಗೆ ತಿಳಿದಿರಲಿಲ್ಲ. ಐದನೇ ತರಗತಿಯಲ್ಲಿ ಮೊದಲ ಬಾರಿಗೆ ಇಂಗ್ಲಿಷ್ ಪಠ್ಯಪುಸ್ತಕ ನಮ್ಮ ಚೀಲದಲ್ಲಿ ಸೇರಿಕೊಂಡಿತ್ತು. ಪ್ರಾಥಮಿಕ ಶಾಲೆ ಮುಗಿಸುವ ಹೊತ್ತಿಗೆ, ತೃತೀಯ ಭಾಷೆಯಾಗಿ ಯಾವುದನ್ನು ಆಯ್ದುಕೊಳ್ಳಬೇಕು ಎಂಬ ಪ್ರಶ್ನೆ ನಮ್ಮೆಲ್ಲರ ಮನದಲ್ಲಿ ಸಾಮಾನ್ಯವಾಗಿ ಮೂಡುತ್ತಿತ್ತು.

ಆ ಕಾಲದಲ್ಲಿ ಈಗಿನಂತೆ ಫ್ರೆಂಚ್, ಸ್ಪ್ಯಾನಿಷ್, ಇಟಾಲಿಯನ್, ಮಲಯಾಳಂ, ತಮಿಳು ಇತ್ಯಾದಿ ಆಯ್ಕೆಗಳಿರಲಿಲ್ಲ. ನಮ್ಮ ಮುಂದೆ ಆಗ ಇದ್ದ ಆಯ್ಕೆ ಎರಡೇ. ಹಿಂದಿ ಅಥವಾ ಸಂಸ್ಕೃತ. 'ಭಾರತದಲ್ಲಿ ಬಹುಜನರು ಬಳಸುವ ಭಾಷೆ ಹಿಂದಿ, ಅದನ್ನು ಆಯ್ದುಕೊಂಡರೆ ಒಳಿತು' ಎನ್ನುವುದು ಕೆಲವರ ಸಲಹೆಯಾಗಿದ್ದರೆ, 'ಸಂಸ್ಕೃತ ದೈವಭಾಷೆ. ಅಷ್ಟೇ ಅಲ್ಲ, ಸಂಸ್ಕೃತದಲ್ಲಿ ಹೆಚ್ಚಿನ ಅಂಕ ತೆಗೆದುಕೊಳ್ಳಬಹುದು' ಎಂಬ ಮಾತಿತ್ತು. ಅದಕ್ಕೆ ಪುರಾವೆ ಎಂಬಂತೆ ಸಂಸ್ಕೃತ ಆಯ್ದುಕೊಂಡ ಮಕ್ಕಳಲ್ಲಿ ಕೆಲವರು ಐವತ್ತಕ್ಕೆ ಐವತ್ತು ಅಂಕ ಪಡೆದದ್ದು ನಮ್ಮ ಕಣ್ಣೆದುರಿಗೆ ಕಾಣುತ್ತಿತ್ತು. ಹಿಂದಿಯಲ್ಲಿ, ಬುದ್ಧಿವಂತರೆಂದು ಕರೆಸಿಕೊಂಡ ಮಕ್ಕಳು ನಲವತ್ತೆಂಟು, ನಲವತ್ತೊಂಬತ್ತು ಅಂಕ ಪಡೆದರೆ, ಸಾಮಾನ್ಯದವರು ನಲವತ್ತರ ಆಸುಪಾಸಿನಲ್ಲಿಯೇ ಇರುತ್ತಿದ್ದರು. ಅದು ಕಾಕತಾಳಿಯವೋ, ಭಾಷೆಯನ್ನು ಆಯ್ದುಕೊಂಡ ಮಕ್ಕಳ ಬುದ್ಧಿಮತ್ತೆಯೋ ಅಥವಾ ಆ ಕಾಲಘಟ್ಟದಲ್ಲಿನ ಸತ್ಯವೋ ಗೊತ್ತಿಲ್ಲ. ಆದರೆ ಇದರಿಂದಾಗಿ ಪ್ರಾಥಮಿಕ ಶಾಲೆಯಲ್ಲಿರುವಾಗಲೇ ಮುಂದೊಂದು ದಿನ ಸಂಸ್ಕೃತವನ್ನು ಸ್ವಲ್ಪ ಮಟ್ಟಿಗಾದರೂ ಓದಬೇಕು ಎನ್ನುವ ಹಂಬಲ ಉಂಟಾಗಿತ್ತು. ಅದರಲ್ಲೂ ಅಲ್ಲಲ್ಲಿ ಕೇಳುತ್ತಿದ್ದ ಮಂತ್ರಘೋಷಗಳು, ನಾವು ನೋಡುತ್ತಿದ್ದ ಯಕ್ಷಗಾನ, ತಾಳಮದ್ದಲೆಯಲ್ಲಿ ಪಾತ್ರಧಾರಿಗಳು ಬಳಸುತ್ತಿದ್ದ ಸಂಸ್ಕೃತ ಪದಗಳು ನನ್ನನ್ನಂತೂ ಆಕರ್ಷಿಸಿದ್ದು ಸುಳ್ಳಲ್ಲ. ಇದರಿಂದಾಗಿ ನಾನು ಐದನೇ ತರಗತಿಯಲ್ಲಿರುವಾಗಲೇ, ಸಂಸ್ಕೃತವನ್ನು ಓದಬೇಕು ಎಂಬ ಹಂಬಲ ನನ್ನಲ್ಲಿ ಉತ್ಕಟವಾಗಿತ್ತು.

ಇಂತಿರ್ಪ ದಿನಗಳಲ್ಲಿ, ಪಕ್ಕದಲ್ಲಿಯೇ ಇರುವ ಪ್ರೌಢಶಾಲೆಯೊಂದರಲ್ಲಿ ಆಸಕ್ತ ಮಕ್ಕಳಿಗಾಗಿ, ಶಾಲಾ ವೇಳೆ ಮುಗಿದ ನಂತರ ಸಂಸ್ಕೃತವನ್ನು ಹೇಳಿಕೊಡುತ್ತಿದ್ದರು. ಅದೇನು ಇಡೀ ವರ್ಷ ನಡೆಯುವ ತರಗತಿಯಾಗಿರಲಿಲ್ಲ. ದಿನಕ್ಕೆ ಒಂದು ಗಂಟೆಯಂತೆ ವಾರದಲ್ಲಿ ಮೂರು ದಿನ, ಅಂದರೆ ವಾರಕ್ಕೆ ಒಟ್ಟು ಮೂರು ತರಗತಿ. ಮೂರು ತಿಂಗಳ ನಂತರ ಅದಕ್ಕೊಂದು ಪರೀಕ್ಷೆ. ಅದರಲ್ಲಿ ಪ್ರಥಮ, ದ್ವಿತೀಯ, ತೃತೀಯ ಹೀಗೆ ಪರೀಕ್ಷೆಗಳಾಗುತ್ತಿದ್ದವು. ವರ್ಷಕ್ಕೆ ಒಂದೇ ಪರೀಕ್ಷೆ ಬರೆಯಬಹುದಾಗಿತ್ತು. ಪ್ರಥಮ ಮುಗಿದ ನಂತರ ದ್ವಿತೀಯ, ನಂತರ ತೃತೀಯ, ಹೀಗೆ. ಐದನೇ ತರಗತಿಯಲ್ಲಿರುವಾಗ ಇದಕ್ಕೆ ಸೇರಿಕೊಂಡ ನಾನು ಏಳನೇ ತರಗತಿ ಮುಗಿಸುವ ಹೊತ್ತಿಗೆ ತೃತೀಯ ಪರೀಕ್ಷೆಯನ್ನು ಪಾಸಾಗಿದ್ದೆ. ಹಾಗಾಗಿ ಪ್ರೌಢಶಾಲೆಗೆ ಹೋಗುವಾಗ ಮೂರನೆಯ ಭಾಷೆಯಾಗಿ ನಾನು ಸಂಸ್ಕೃತವನ್ನು ಆಯ್ದುಕೊಂಡಿದ್ದೆ. ಮೊದಲೇ ಸ್ವಲ್ಪಮಟ್ಟಿನ ಸಂಸ್ಕೃತ ತಿಳಿದಿದ್ದ ಕಾರಣ ಪ್ರೌಢಶಾಲೆಯಲ್ಲಿ ಸಂಸ್ಕೃತ ನನಗೆ 'ಕಬ್ಬಿಣದ ಕಡಲೆ' ಎಂದು ಅನಿಸಿರಲಿಲ್ಲ. ನನ್ನಂತೆಯೇ ಇನ್ನೂ ಕೆಲವು ವಿದ್ಯಾರ್ಥಿಗಳು ಅದೇ ರೀತಿಯ ಪರೀಕ್ಷೆ ಮುಗಿಸಿ ಬಂದಿದ್ದರು. ಅವರನ್ನು ಹೊರತುಪಡಿಸಿದರೆ, ಉಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಿಂತ ಸಂಸ್ಕೃತ 'ನನ್ನ ತಲೆಗೆ ಬೇಗ ಹತ್ತುತ್ತದೆ' ಎಂಬ ಒಂದು ಸಣ್ಣ ಡೌಲು ನನ್ನಲ್ಲಿಯೂ ಇತ್ತು. ಒಂಬತ್ತು ಮತ್ತು ಹತ್ತನೇ ತರಗತಿಗೆ ಬರುವಾಗ ಅದೇ ಸಂಸ್ಕೃತದಲ್ಲಿ, ನನ್ನ ಸಹಪಾಠಿಗಳಲ್ಲಿ ಹಲವರು ನನಗಿಂತ ಮುಂದೆ ಹೋದಾಗ ನನ್ನ ಡೌಲು ಅಡಗಿದ್ದೂ ಸುಳ್ಳಲ್ಲ.

ಐದನೇ ತರಗತಿಯಲ್ಲಿರುವಾಗ ಸಂಸ್ಕೃತ ಅಭ್ಯಾಸಕ್ಕೆ ತೊಡಗಿದೆ ಎಂದಿದ್ದೆನಲ್ಲ, ಆ ತರಗತಿಯಲ್ಲಿ ನನಗೆ ಅತ್ಯಂತ ಆಸಕ್ತಿದಾಯಕ ಎನಿಸಿದ್ದು ಸುಭಾಷಿತಗಳು. ಇನ್ನೂ ನೆನಪಿದೆ, ನಾನು ಕಲಿತ ಮೊದಲ ಸುಭಾಷಿತ–

> ಕಾಕಃ ಕೃಷ್ಣಃ ಪಿಕಃ ಕೃಷ್ಣಃ
> ಕೋ ಭೇದಃ ಪಿಕಾಕಾಕಯೋಃ।
> ವಸಂತಕಾಲೇ ಸಂಪ್ರಾಪ್ತೇ
> ಕಾಕಃ ಕಾಕಃ ಪಿಕಃ ಪಿಕಃ ॥

ಅಂದು ಕಲಿತ ಈ ಸುಭಾಷಿತ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ಕುಳಿತಿದೆ. ಅಂದರೆ, ''ಕಾಗೆಯೂ ಕಪ್ಪು, ಕೋಗಿಲೆಯು ಕಪ್ಪು, ಮೇಲ್ನೋಟಕ್ಕೆ ಇವೆರಡರಲ್ಲಿ ಯಾವ ಭೇದವೂ ಕಾಣುವುದಿಲ್ಲ. ವಸಂತಕಾಲ ಬಂದಾಗ ಕಾಗೆ ಯಾವುದು, ಕೋಗಿಲೆ ಯಾವುದು ಎಂಬುದು ತಿಳಿಯುತ್ತದೆ'' ಎಂಬುದು ಇದರ ಅರ್ಥ. ವಸಂತಕಾಲದಲ್ಲಿ ಗಿಡಮರಗಳು ಚಿಗುರೊಡೆದಾಗ ಕೋಗಿಲೆ ಹಾಡುತ್ತದೆ, ಆ ಧ್ವನಿಯಿಂದಾಗಿ ಕೋಗಿಲೆ ಮತ್ತು ಕಾಗೆಯ ನಡುವಿನ ಭೇದವನ್ನು ಗುರುತಿಸಬಹುದು ಎಂಬ ತಾತ್ಪರ್ಯ. ಆಗ ಇದರ ಅರ್ಥವನ್ನು ಅಷ್ಟೇನೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಇಂದಿನ ಕಾಲಕ್ಕಂತೂ ಅದು ನೂರಕ್ಕೆ ನೂರರಷ್ಟು ಸತ್ಯ. ಇತ್ತೀಚಿನ ದಿನಗಳಲ್ಲಂತೂ ಒಬ್ಬ ವ್ಯಕ್ತಿಯನ್ನು ಹೊರಗಿನಿಂದ ಅಳೆಯುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಕೆಲವೊಮ್ಮೆ ನಮಗೆ ಎಲ್ಲರೂ ಒಳ್ಳೆಯವರಾಗಿಯೇ ಕಾಣುತ್ತಾರೆ ಅಥವಾ ಎಲ್ಲರೂ ಒಳ್ಳೆಯವರಂತೆ ನಟಿಸುತ್ತಾರೆ. ಸರಿಯಾದ ಸಂದರ್ಭದಲ್ಲಿ ಅಂಥವರ ನಿಜವಾದ ಬಣ್ಣ ಬಯಲಾಗುತ್ತದೆ.

ನನಗೆ ಅಚ್ಚುಮೆಚ್ಚಿನ ಇನ್ನೊಂದು ಸುಭಾಷಿತ:

> ವಿದ್ಯಾ ದದಾತಿ ವಿನಯಂ ವಿನಯಾದ್ ಯಾತಿ ಪಾತ್ರತಾಮ್।
> ಪಾತ್ರತ್ವಾದ್ ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್॥

ಅಂದರೆ, ''ವಿದ್ಯೆ ವಿನಯವನ್ನು ಕೊಡುತ್ತದೆ, ನಮ್ಮನ್ನು ವಿನಮ್ರನನ್ನಾಗಿ ಮಾಡುತ್ತದೆ; ವಿನಯ ಅಥವಾ ವಿನಮ್ರತೆ ನಮ್ಮ ಮೌಲ್ಯವನ್ನು, ಯೋಗ್ಯತೆಯನ್ನು ಹೆಚ್ಚಿಸುತ್ತದೆ. ಯೋಗ್ಯತೆಯಿಂದ ನಾವು ಹಣ ಸಂಪಾದಿಸುತ್ತೇವೆ, ಆ ಹಣದಿಂದ ಧರ್ಮಕಾರ್ಯಗಳನ್ನು ಮಾಡುತ್ತೇವೆ. ಧರ್ಮ ನಮಗೆ ತೃಪ್ತಿ ನೀಡುತ್ತದೆ'' ಎಂಬುದು ಇದರರ್ಥ. ನೋಡಿ, ಇಲ್ಲಿ ಓದಿದ ಮಾತ್ರಕ್ಕೆ ಸಂತೋಷ ಸಿಗುತ್ತದೆ ಎಂದು ಹೇಳಲಿಲ್ಲ. ಹಣ ಸಿಕ್ಕಿದ ಕಾರಣಕ್ಕೆ ಅಥವಾ ಶ್ರೀಮಂತನಾದ ಮಾತ್ರಕ್ಕೆ ಸುಖವಾಗಿರಬಹುದು ಎಂದೂ ಹೇಳಲಿಲ್ಲ. ಇಲ್ಲಿ ಯಾವುದೇ ಶಾರ್ಟ್‌ಕಟ್ ವ್ಯವಹಾರ, ಉಪದೇಶ ಇಲ್ಲ. ಇತ್ತೀಚಿನ ಜಾಹೀರಾತುಗಳಲ್ಲಿ ನೋಡುವಂತೆ, 'ಒಂದೇ ತಿಂಗಳಿನಲ್ಲಿ ಶ್ರೀಮಂತರಾಗುವ ಬಗೆ, ಮನೆಯಲ್ಲೇ ಕುಳಿತು ಹಣ ಗಳಿಸುವ ವಿಧಾನ' ಹೇಳಲಿಲ್ಲ. ಬದಲಾಗಿ, ವಿದ್ಯೆಯಿಂದ ಸುಖದ ಕಡೆಗಿನ ಪ್ರಯಾಣವನ್ನು ವಿಸ್ತಾರವಾಗಿ ಹೇಳಿದ್ದಾರೆ. ವಿನಯದಿಂದ, ಯೋಗ್ಯತೆಯಿಂದ ಹಣ ಗಳಿಸಬೇಕು; ಹಣ ಸಂಪಾದಿಸಿದರೆ ಸಾಲದು, ಅದನ್ನು ಧರ್ಮಮಾರ್ಗದಲ್ಲಿ ಬಳಸಿದಾಗ ಮಾತ್ರ ಸಂತೃಪ್ತಿ ಎಂದಿದ್ದಾರೆ. ಇಂದು ಬಹುತೇಕ ಶ್ರೀಮಂತರು ಸಂತೋಷದಿಂದ ಇರದಿರಲು ಕಾರಣ ಇದೇ ಇದ್ದರೂ ಇರಬಹುದು!

ಇನ್ನೊಂದು ಲೋಕಪ್ರಿಯ ಸುಭಾಷಿತ ಹೇಳುತ್ತದೆ:

> ಪರೋಪಕಾರಾಯ ಫಲಂತಿ ವೃಕ್ಷಾಃ
> ಪರೋಪಕಾರಾಯ ವಹಂತಿ ನದ್ಯಃ।
> ಪರೋಪಕಾರಾಯ ದುಹಂತಿ ಗಾವಃ
> ಪರೋಪಕಾರಾರ್ಥಮಿದಂ ಶರೀರಮ್॥

ಅಂದರೆ, ''ಇತರರಿಗೆ ಉಪಕಾರ ಮಾಡುವುದಕ್ಕಾಗಿ ಮರಗಳು ಹಣ್ಣು ಬಿಡುತ್ತವೆ, ಪರರಿಗೆ ಉಪಕಾರ ಮಾಡುವುದಕ್ಕಾಗಿ ನದಿಗಳು ಹರಿಯುತ್ತವೆ, ಪರೋಪಕಾರ ಮಾಡುವುದಕ್ಕೆಂದು ಹಸುಗಳು ಹಾಲು ಕೊಡುತ್ತವೆ. ಮನುಷ್ಯನ ಶರೀರ ಕೂಡ ಪರೋಪಕಾರಕ್ಕಾಗಿಯೇ ಇದೆ'' ಎಂಬುದು ಇದರರ್ಥ.

ಮನುಷ್ಯನ ಬದುಕನ್ನು ತಿದ್ದುವ, ಹಸನಾಗಿಸುವ, ಮಾರ್ಗದರ್ಶಿಯಾಗಿರುವ ಇಂಥ ಸಾವಿರಾರು ಸುಭಾಷಿತಗಳು, ಶ್ಲೋಕಗಳು ಸಂಸ್ಕೃತದಲ್ಲಿವೆ. ಪುರಾತನ ಭಾಷೆಯ ಈ ಸುಭಾಷಿತಗಳು ಹಿಂದಿಯ ದೋಹಾ, ಕನ್ನಡದ ವಚನ, ಕಗ್ಗ ಇತ್ಯಾದಿಗಳಿಗೆ ಸ್ಫೂರ್ತಿ ಎಂದರೆ ತಪ್ಪಾಗಲಾರದು. ಭಾರತದ ಕೆಲವು ಭಾಷೆಗಳಿಗೆ ಸಂಸ್ಕೃತವೇ ಮೂಲ ಅಥವಾ ಅನೇಕ ಭಾಷೆಯ ಕೆಲವು ಪದಗಳು ಸಂಸ್ಕೃತದಿಂದ ಬಂದವು ಅಥವಾ ಕೆಲವು ಪದಗಳಲ್ಲಿ ಸಂಸ್ಕೃತದ ಛಾಯೆ ಇದೆ, ಇಂಗ್ಲಿಷ್‌ನ ಕೆಲವು ಪದಗಳು ಕೂಡ ಸಂಸ್ಕೃತದಿಂದ ಹುಟ್ಟಿಕೊಂಡವು ಎಂಬ ಮಾತುಗಳನ್ನು ನಾವು ಸಣ್ಣವರಾಗಿದ್ದಾಗಿನಿಂದಲೂ ಕೇಳುತ್ತಿದ್ದೆವು. ಆ ಕಾಲದಲ್ಲಿ ಮಕ್ಕಳಾದ ನಮ್ಮಲ್ಲಿ ಭಾಷಾ ತಾರತಮ್ಯ ಇದ್ದಿರಲಿಲ್ಲ. ನಮ್ಮ ಶಾಲೆಯ ಪಠ್ಯಪುಸ್ತಕದ ಹೊರತಾಗಿ ಸಂಸ್ಕೃತ, ಹಿಂದಿ, ರಾಮಾಯಣ, ಮಹಾಭಾರತ, ಪಂಚತಂತ್ರ ಇತ್ಯಾದಿಗಳನ್ನು ಓದಿ, ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದೆವು. ಇವೆಲ್ಲದರಲ್ಲೂ ಸಂಸ್ಕೃತದ ಛಾಯೆ ಎದ್ದು ಕಾಣುತ್ತದೆ. ಪಂಚತಂತ್ರದ ಕಥೆಗಳಲ್ಲೂ ಸುಭಾಷಿತಗಳು ಕಾಣಸಿಕೊಳ್ಳುತ್ತವೆ. ಹಾಗಾದರೆ ಇಷ್ಟೊಂದು ಸುಭಾಷಿತಗಳನ್ನು ಬರೆದವರಾದರೂ ಯಾರು ಎಂದು ಹುಡುಕುತ್ತ ಹೊರಟರೆ ಸಿಗುವ ಉತ್ತರ ಮಾತ್ರ ಸೋಜಿಗ.

ಬಹುತೇಕ ಸುಭಾಷಿತಗಳ ಕರ್ತೃ ಯಾರು ಎಂಬುದು ಇಂದಿಗೂ ಅಗೋಚರ. ನಮ್ಮ ಜನಪದದಂತೆಯೇ ಇವುಗಳು ಕೂಡ ಅಂದಿನ ಅನುಭವಗಳ ಬುನಾದಿಯ ಮೇಲೇ ನಿಂತದ್ದು. ಅಲ್ಲಲ್ಲಿ ಶಿಲಾಶಾಸನಗಳಲ್ಲಿ ದೊರೆತದ್ದು ಬಿಟ್ಟರೆ ಬಾಯಿಂದ ಬಾಯಿಗೆ ಬಂದದ್ದೇ ಹೆಚ್ಚು. ಆ ಕಾಲದಲ್ಲಿ ಬಾಯಿ ಪ್ರಮುಖ ಮಾಧ್ಯಮವಾಗಿತ್ತು ಬಿಡಿ. ಎರಡನೆಯ ಶತಮಾನದಿಂದ ಇಂದಿನವರೆಗೂ ಸುಭಾಷಿತಗಳು ಅಸ್ತಿತ್ವದಲ್ಲಿವೆ ಎಂದರೆ ಅವುಗಳಲ್ಲಿ ಅಡಗಿರುವ ತತ್ತ್ವ, ಸತ್ತ್ವ ಎಂಥದ್ದು ಎಂಬುದರ ಅರಿವಾಗುತ್ತದೆ. ಸಶಕ್ತವಾಗಿರದೇ ಜೊಳ್ಳು ಕಾಳುಗಳಾಗಿದ್ದರೆ ಅವು ನಶಿಸಿಹೋಗಿ ಶತಮಾನಗಳೇ ಕಳೆದಿರುತ್ತಿತ್ತು.

'ಸು' ಎಂದರೆ ಒಳ್ಳೆಯದು, 'ಭಾಷಿತ' ಎಂದರೆ ಮಾತನಾಡುವುದು. ಇದನ್ನು ಒಟ್ಟಾಗಿ 'ಒಳ್ಳೆಯ ಮಾತು' ಎಂದು ಹೇಳಬಹುದು. ಸಾಮಾನ್ಯವಾಗಿ ಎರಡು ಅಥವಾ ನಾಲ್ಕು ಸಾಲುಗಳಲ್ಲಿ ಇರುವ ಸುಭಾಷಿತಗಳು ಕಲಿಸುವ ಜೀವನಪಾಠಕ್ಕೆ ಮಾತ್ರ ಮಿತಿಯೇ ಇಲ್ಲ. ಬೆಲೆ ಕಟ್ಟಲಾಗದ ಸುಭಾಷಿತಗಳು, ಅಂತರ್ಗತ ನೈತಿಕತೆ, ಲೌಕಿಕ ಬುದ್ಧಿವಂತಿಕೆಯನ್ನು ಸೂಚಿಸುವ, ನೀತಿಪಾಠ ಹೇಳುವ ಶ್ಲೋಕಗಳಾಗಿ, ಸೂಕ್ತಿಗಳಾಗಿ, ಸಾಲುಗಳಾಗಿ ಹೆಸರುವಾಸಿಯಾಗಿವೆ. ಕೆಲವು ಸುಭಾಷಿತಗಳಂತೂ ಸಕ್ಕರೆ ಲೇಪಿತ ಕಹಿ ಔಷಧಿಗಳಿದ್ದಂತಿವೆ.

ಸುಭಾಷಿತಗಳು ವಿಭಿನ್ನ ವಿಷಯಗಳನ್ನು ಒಳಗೊಂಡಿರುತ್ತವೆ, ವಿವಿಧ ವಿಷಯಗಳೊಂದಿಗೆ ವ್ಯವಹರಿಸುತ್ತವೆ. ಪ್ರತಿಯೊಬ್ಬರೂ ಸುಲಭವಾಗಿ ಅರ್ಥೈಸಿಕೊಳ್ಳಬಹುದಾದ ದೈನಂದಿನ ಅನುಭವಗಳನ್ನು ಒಳಗೊಂಡಿರುತ್ತವೆ. ಸುಭಾಷಿತಗಳು ಒಂದು ಭಾವನೆ, ಕಲ್ಪನೆ, ಸತ್ಯ, ಧರ್ಮ ಅಥವಾ ಸನ್ನಿವೇಶಗಳನ್ನು ಚಿತ್ರಿಸುತ್ತವೆ. ಮನುಷ್ಯನ ಜೀವನದ ಬರಡು ಬೊಡ್ಡೆಯ ಮೇಲೆ ಅನುಭವದ ನೀತಿಪಾಠಗಳ ಕಸಿ ಮಾಡಿ ಫಲಪ್ರದವಾಗುವಂತೆ ಮಾಡುತ್ತವೆ.

ಮಹಾನ್ ವಿದ್ವಾಂಸರಾದ ಕಾಳಿದಾಸ, ಕಲ್ಹಣ, ಭರ್ತೃಹರಿ, ಭವಭೂತಿ, ಚಾಣಕ್ಯ ಮುಂತಾದ ಪ್ರಾಚೀನ ಭಾರತೀಯರ ಕೃತಿಗಳಲ್ಲಿ ಅಮೂಲ್ಯವಾದ ಸುಭಾಷಿತಗಳು ಇವೆ ಎಂದು ಹೇಳಲಾಗುತ್ತದೆ. ಅಲ್ಲದೆ, ಪಂಚತಂತ್ರ, ಹಿತೋಪದೇಶ ಕಥೆಗಳು, ಭಗವದ್ಗೀತೆ, ಭಾಗವತ, ಪುರಾಣಗಳು, ವೇದಗಳು, ರಾಮಾಯಣ, ಮಹಾಭಾರತದಂಥ ಗ್ರಂಥಗಳು ಸುಭಾಷಿತಗಳ ಪ್ರಮುಖ ಮೂಲಗಳು. ಹಾಗಾಗಿ, ಸುಭಾಷಿತಗಳೆಂದರೆ, ಬಗೆದಷ್ಟೂ ಬಾಳುವ, ಅಗೆದಷ್ಟೂ ಆಳುವ ದಿವ್ಯೌಷಧಿ!

ಅಂದ ಹಾಗೆ, ಇದೇ ಆಗಸ್ಟ್ 6ರಿಂದ 12ನೆಯ ತಾರೀಖಿನವರೆಗೆ ಈ ವರ್ಷದ ಸಂಸ್ಕೃತ ಸಪ್ತಾಹ. ಈ ಸಂದರ್ಭದಲ್ಲಿ ಜೀವನಿಧಿಯಾದ ಸುಭಾಷಿತ ಸೂಕ್ತಿಯನ್ನು ನೆನೆಸಿಕೊಳ್ಳುವುದು ಸೂಕ್ತ ಎಂದೆನಿಸಿತು.

ಕೊನೆಯಲ್ಲಿ ಒಂದು ಸುಭಾಷಿತದೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ. ಇದೊಂದನ್ನೇ ಅರ್ಥ ಮಾಡಿಕೊಂಡರೂ ಸಾಕು, ಇಡೀ ಜೀವನವನ್ನೇ ಅರ್ಥಪೂರ್ಣವಾಗಿಸಿಕೊಳ್ಳಬಹುದು.

> ಪೃಥಿವ್ಯಾಂ ತ್ರೀಣಿ ರತ್ನಾನಿ ಜಲಮನ್ನಂ ಸುಭಾಷಿತಮ್।
> ಮೂಢೈಃ ಪಾಷಾಣಖಂಡೇಷು ರತ್ನ ಸಂಜ್ಞಾ ವಿಧೇ॥

ಇದರ ಅರ್ಥ: ''ಈ ಭೂಮಿಯಲ್ಲಿ ಮೂರು ಬಗೆಯ ರತ್ನಗಳಿವೆ ನೀರು, ಅನ್ನ (ಆಹಾರ) ಮತ್ತು ಸುಭಾಷಿತ. ಆದರೆ ಮೂರ್ಖನಾದವನು ಕಲ್ಲಿನ ತುಂಡುಗಳನ್ನು ರತ್ನಗಳೆಂದು ತಿಳಿದು ಅದರ ಹಿಂದೆ ಓಡುತ್ತಾನೆ''.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಅಬ್ಬಾ, ಭೂ-ರಾಜಕೀಯವೇ...!

ಅಂತಾರಾಷ್ಟ್ರೀಯ ಬಾಂಧವ್ಯದ ವಿಷಯದಲ್ಲಿ ಒಂದಿಷ್ಟು ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದರಲ್ಲೇನೂ ತಪ್ಪಿಲ್ಲ; ಆದರೆ ಅವು ಅತಿರೇಕದ ಮಟ್ಟದಲ್ಲಂತೂ ಇರಬಾರದು ಎಂಬುದಕ್ಕೆ ಇತ್ತೀಚೆಗೆ ಸಾಕಷ್ಟು ಪುಷ್ಟಿ ಸಿಗುತ್ತಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪಾಲಿಗೆ ಭಾರತೀಯರು 'ವಿಶೇಷ' ಸ್ನೇಹಿತರಾಗಿರುವುದರಿಂದ, ಅಮೆರಿಕದೊಂದಿಗೆ ವ್ಯಾಪಾರ ಸುಂಕ ಒಡಂಬಡಿಕೆಯೊಂದನ್ನು ಸಂಪನ್ನಗೊಳಿಸುವ ವಿಷಯದಲ್ಲಿ ಭಾರತಕ್ಕೆ ಪ್ರಥಮ ಪ್ರಾಶಸ್ತ್ಯ ಸಿಗಲಿದೆ ಎಂದೇ ನಾವೆಲ್ಲರು ನಂಬಿದ್ದೆವು. ಆದರೆ ಆಗಿದ್ದೇ ಬೇರೆ! ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತವೀಗ ಸರದಿಯಲ್ಲಿ ಬಹಳ ಹಿಂದಕ್ಕೆ ಸರಿಸಲ್ಪಟ್ಟಿರುವುದು ಮಾತ್ರವೇ ಅಲ್ಲ, ಸಂಪೂರ್ಣ ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆಯೂ ಇದೆ!

ಡೊನಾಲ್ಡ್ ಟ್ರಂಪ್ ಮತ್ತು ಭಾರತದ ನಡುವಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸುವವರು, ಈ ನಿಗೂಢ ಪರಿಣಾಮದ ಬಗ್ಗೆ ಇತರರಿಗಿಂತ ತುಸು ಭಿನ್ನವಾದ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಅಭಿಪ್ರಾಯವು ಪಾಕಿಸ್ತಾನದ ಇತ್ತೀಚಿನ ವಿಶ್ವಾಸಘಾತುಕತನದ ಕುರಿತಾಗಲೀ, ಭಾರತವು ರಷ್ಯಾದಿಂದ ಕಚ್ಚಾತೈಲವನ್ನು ತರಿಸಿಕೊಳ್ಳಲು ಮುಂದಾಗಿದ್ದರ ಬಗೆಗಾಗಲೀ ಅಥವಾ ನೊಬೆಲ್ ಶಾಂತಿ ಪ್ರಶಸ್ತಿಯನ್ನು ದಕ್ಕಿಸಿಕೊಳ್ಳಬೇಕೆಂಬ ಡೊನಾಲ್ಡ್ ಟ್ರಂಪ್ ಅವರ ಮಹತ್ವಾಕಾಂಕ್ಷೆ ವಿಫಲಗೊಂಡಿದ್ದರ ಕುರಿತಾಗಲೀ ಇರುವಂಥದಲ್ಲ. ಬದಲಾಗಿ ಅದು, ಟ್ರಂಪ್ ತಮ್ಮ ಮೊದಲ ಅಧ್ಯಕ್ಷಗಿರಿಯನ್ನು ಅನುಭವಿಸಿದ ಕಾಲಘಟ್ಟದಿಂದ ಶುರುವಾಗಿರುವಂಥದ್ದು ಎಂಬುದು ನಿಮ್ಮ ಗಮನಕ್ಕೆ. ತಮ್ಮ ಮೊದಲ ಅಧಿಕಾರಾವಧಿಯಿಂದಲೂ ಈ ಒಡಂಬಡಿಕೆಗೆ ಸಹಿಹಾಕುವಲ್ಲಿ ಭಾರತವು ವಿಳಂಬ ನೀತಿಯನ್ನು ಅನುಸರಿಸಿದ್ದಕ್ಕೆ ಟ್ರಂಪ್ ಭಾರತದ ಮೇಲೆ ಕೋಪಗೊಂಡಿದ್ದರು. 2019ರಲ್ಲಿ ಟೆಕ್ಸಾಸ್‌ನಲ್ಲಿ ಅವರು ಪ್ರಧಾನಿ ಮೋದಿಯವರೊಂದಿಗೆ ಜಂಟಿಯಾಗಿ ಕಾಣಿಸಿಕೊಂಡಿದ್ದು, ಈ ಒಡಂಬಡಿಕೆಯನ್ನು ಸಂಪನ್ನಗೊಳಿಸುವಲ್ಲಿ ನೆರವಾಗುತ್ತದೆ ಎನ್ನಲಾಗಿತ್ತು. ಆದರೆ ಈ ಸಂಬಂಧದ ಮಾತುಗಳು ಒಂದು ದಿನದ ನಂತರ ನ್ಯೂಯಾರ್ಕ್‌ನಲ್ಲಿ ಕೊನೆಗೊಂಡವು. ಆದರೆ ತರುವಾಯದಲ್ಲಿ, ಬೆಣ್ಣೆಯಲ್ಲಿ ಕೂದಲು ತೆಗೆದಂತೆ ನವಿರಾಗಿ ಮಾತನಾಡುವ ಭಾರತೀಯ ಸಾಂಪ್ರದಾಯಿಕ ವ್ಯಾಪಾರಿಗಳಂತೆ ನಮ್ಮ ಅಧಿಕಾರಿಗಳು 'ಕೃಷಿ ಮತ್ತು ಹೈನು ಉತ್ಪನ್ನಗಳಿಗೆ ಸಂಬಂಧಿಸಿದ ಒಡಂಬಡಿಕೆಯ ಕೆಲವು ಭಾಗಗಳು ಮಾತುಕತೆಗೆ ಒಳಪಡುವುದಿಲ್ಲ' ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳದೆ 'ಒಡಂಬಡಿಕೆಯು ಬಹುತೇಕ ಸಂಪನ್ನಗೊಂಡಿದೆ' ಎಂದು ಭರವಸೆ ನೀಡಿದರು!

ಎಡವಟ್ಟಾಗಿದ್ದು ಇಲ್ಲೇ! ಏಕೆಂದರೆ, ಟ್ರಂಪ್ ಅವರ ಬಹುತೇಕ 'ರಿಪಬ್ಲಿಕನ್ ಬೆಂಬಲಿಗರು' ಕೃಷಿ ಪ್ರದೇಶದಿಂದ ಬಂದಿರುವವರಾದ್ದರಿಂದ, ಈ ವಲಯದ ಮೇಲೆ ಮಾತ್ರವೇ ಅವರು ಗಮನ ಹರಿಸಿದ್ದಾರೆ. ''ನಿಮ್ಮದು ಅಷ್ಟು ದೊಡ್ಡ ದೇಶ ಎಂದು ಹೇಳಿಕೊಳ್ಳುತ್ತೀರಲ್ಲಾ, ಒಂದು ಬುಶೆಲ್‌ನಷ್ಟು (ಅಂದರೆ, ಒಂದು ಕೊಳಗದಷ್ಟು) ಅಮೆರಿಕನ್ ಜೋಳವನ್ನು ನಿಮ್ಮಿಂದ ಸ್ವೀಕರಿಸಲು ಆಗುತ್ತಿಲ್ಲವೇ?'' ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಅವರು ಕೋಪದಿಂದ ಟೀಕಿಸಿದ್ದು ಈ ಕಾರಣಕ್ಕೇ! ಮರು ಆಯ್ಕೆಯಾದ ನಂತರ, ಅಧ್ಯಕ್ಷ ಟ್ರಂಪ್ ಅವರು ಹಿಂದಿನ ಅವಹೇಳನಗಳನ್ನು ನಿರ್ಲಕ್ಷಿಸಲು ಕೂಡ ಸಿದ್ಧರಿದ್ದರು (ಜೋ ಬೈಡನ್ ಅಧ್ಯಕ್ಷರಾಗಿದ್ದ ವೇಳೆ ಅಮೆರಿಕಕ್ಕೆ ಮೂರು ಬಾರಿ ತೆರಳಿದ್ದ ಮೋದಿಯವರು ಟ್ರಂಪ್‌ರನ್ನು ಭೇಟಿಯಾಗಿಲ್ಲ ಅಥವಾ ಕರೆಯನ್ನೂ ಮಾಡಲಿಲ್ಲ ಎಂಬುದು ನಿಮ್ಮ ಗಮನಕ್ಕೆ!). ಈಗ 2025ರ ವರ್ಷದಲ್ಲಿ ಅರ್ಧಭಾಗ ಮುಗಿದಿದ್ದರೂ, ಸದರಿ ಒಡಂಬಡಿಕೆಯು ಕಾರ್ಯರೂಪಕ್ಕೆ ಬಂದಿಲ್ಲ!

ಭೂ-ರಾಜಕೀಯ ಅಂದ್ರೆ ತಮಾಷೆನಾ?!

ಪತ್ರಿಕೆಯನ್ನೂ ಪಾಳಿಯಲ್ಲಿ ಓದುವ ಪರಿಪಾಠ...!



ಪೇಪರ್‌ದೋಸೆ

ರಮಾನಂದ ಶರ್ಮಾ
vveditoped@gmail.com

ಇದು ಸಾಕಷ್ಟು ವರ್ಷಗಳ ಹಿಂದೆ ಕಾಣಬರುತ್ತಿದ್ದ ದೃಶ್ಯ: ಕಚೇರಿಗೆ ಹೋಗುವವರ ಲಂಚ್ ಬಾಕ್ಸ್ ಸಂಗಡ ಒಂದು ದಿನಪತ್ರಿಕೆಯೋ, ವಾರಪತ್ರಿಕೆಯೋ, ಮಾಸಪತ್ರಿಕೆಯೋ ಇರುತ್ತಿತ್ತು. ಮಹಿಳಾ ಉದ್ಯೋಗಿಗಳಂತೂ ಬಸ್ಸಿನಲ್ಲಿ ಕಿಟಕಿ ಪಕ್ಕದ ಸೀಟು ಹಿಡಿದು, ತಮ್ಮ ಇಳಿದಾಣ ಬರುವವರೆಗೆ ಪತ್ರಿಕೆಯಲ್ಲಿನ ತಮ್ಮ ನೆಚ್ಚಿನ ಧಾರಾವಾಹಿಯನ್ನು ಓದುತ್ತಿದ್ದರು. ನಿಲ್ದಾಣಕ್ಕೆ ಬಸ್ಸು ಬರುವವರೆಗೆ, ಬಸ್ಸು ಹತ್ತಿದ ನಂತರ ಕಚೇರಿ ತಲುಪುವವರೆಗೆ, ಮಧ್ಯಾಹ್ನದ ಊಟದ ವೇಳೆ, ಕಚೇರಿಯಲ್ಲಿ ಸ್ವಲ್ಪ ಬಿಡುವಾದಾಗ ಪತ್ರಿಕೆಗಳ ಪುಟವನ್ನು ತಿರುವಿಹಾಕುವುದು ಸಾಮಾನ್ಯವಾಗಿತ್ತು ('ಆಫೀಸ್‌ನಲ್ಲಿ ಯಾರೂ ಪೇಪರ್ ಓದಬಾರದು, ನಿಮ್ಮ ನಿಮ್ಮ ಕೆಲಸ ಮಾಡಬೇಕು' ಎಂದು ಮೇಲಧಿಕಾರಿಗಳು ಗದರಿಸುತ್ತಿದ್ದರು ಎನ್ನಿ!). ದೂರ ಪ್ರಯಾಣದ ಬಸ್ಸುಗಳಲ್ಲಿ ಏನಿಲ್ಲವೆಂದರೂ ಕಾಲುಭಾಗದಷ್ಟು ಪ್ರಯಾಣಿಕರು ಪತ್ರಿಕೆಯಲ್ಲಿ ಮುಖ ಹುದುಗಿಸಿ ಟೈಮ್‌ಪಾಸ್ ಮಾಡುತ್ತಿದ್ದರು. ಯಾರಾದರೊಬ್ಬರ ಕೈಯಲ್ಲಿ ಪತ್ರಿಕೆ ಕಂಡರೆ, ಅದರ ಪುಟಗಳು ಬೇರೆಯಾಗಿ, ನಿಜಕ್ಕೂ ಪತ್ರಿಕೆ ಖರೀದಿಸಿದ್ದವರು ಬಸ್‌ನಿಂದ ಇಳಿಯುವಾಗ ಅದರ ಪುಟಗಳಿಗಾಗಿ ಪರದಾಡಬೇಕಿತ್ತು.

ಆದರೆ ಈ ದೃಶ್ಯವೀಗ ಕ್ರಮೇಣ ಮಸುಕಾಗುತ್ತಿದೆ. 'ಕಚೇರಿಗೆ ನಿಯತವಾಗಿ ಬರುವ ಪತ್ರಿಕೆಗಳನ್ನೂ ಕಣ್ಣೆತ್ತಿ ನೋಡುವವರಿಲ್ಲ' ಎನ್ನುವ ಮಾತು ಅಲ್ಲಲ್ಲಿ ಕೇಳುವುದುಂಟು; ಪತ್ರಿಕೆಯ ಸ್ಥಳವನ್ನು ಈಗ ಸ್ಮಾರ್ಟ್‌ಫೋನು ಆಕ್ರಮಿಸಿರುವುದೇ ಇದಕ್ಕೆ ಬಹುತೇಕ ಕಾರಣ.

ಇಂದು ದೇಶದಲ್ಲಿ 1,46,045ರಷ್ಟು ನೋಂದಾಯಿತ ಪಬ್ಲಿಕೇಷನ್‌ಗಳಿದ್ದು ಅವುಗಳಲ್ಲಿ 20,821ರಷ್ಟು ದಿನಪತ್ರಿಕೆಗಳಾಗಿವೆ. ಅವುಗಳ ಒಟ್ಟಾರೆ ಪ್ರಸಾರ ಸಂಖ್ಯೆ ಸುಮಾರು 45 ಕೋಟಿ ಎನ್ನಲಾಗುತ್ತಿದ್ದು, 331 ಶತಕೋಟಿ ರುಪಾಯಿ ಮೌಲ್ಯದ ಈ ಉದ್ಯಮವು 9.10 ಲಕ್ಷ ಜನರಿಗೆ ಪ್ರತ್ಯಕ್ಷವಾಗಿ, 18.20 ಲಕ್ಷ ಜನರಿಗೆ ಪರೋಕ್ಷವಾಗಿ ಬದುಕು ನೀಡುತ್ತಿದೆ. ಈ ಮುದ್ರಣ ಮಾಧ್ಯಮವು ಪ್ರಸ್ತುತ ಜಗತ್ತಿನಾದ್ಯಂತ ಸ್ವಲ್ಪ ಹಿನ್ನಡೆಯನ್ನು ಕಂಡಿದ್ದರೂ, ಭಾರತದಲ್ಲಿ ಕರೋನಾ ಮಹಾಮಾರಿ ವಕ್ಕರಿಸುವವರೆಗೆ ಸುಮಾರು ಶೇ.4.7ರ ಬೆಳವಣಿಗೆಯನ್ನು ದಾಖಲಿಸಿತ್ತು.

ಇಂಥ ಮುದ್ರಣ ಮಾಧ್ಯಮವಿಂದು ಓದುಗರ ಕೊರತೆಯಿಂದ ಸಂಕಷ್ಟದ ಸ್ಥಿತಿಯನ್ನು ಎದುರಿಸುತ್ತಿದೆ ಎನ್ನಲಾಗುತ್ತಿದೆ. ಒಂದು ಕಾಲಕ್ಕೆ, ಕೆಲವು ಪತ್ರಿಕೆಗಳು ಪ್ರತಿದಿನವೂ 30-40 ಪುಟಗಳನ್ನು ನೀಡುತ್ತಿದ್ದುದುಂಟು ಆದರೀಗ ಬಹುತೇಕ ಪತ್ರಿಕೆಗಳು 10-20 ಪುಟಗಳಿಗೆ ಸೀಮಿತವಾಗಿವೆ. ಪತ್ರಿಕೆಗಳ ಅವಿಭಾಜ್ಯ ಅಂಗವಾಗಿ ಬರುತ್ತಿದ್ದ ಪುರವಣಿಗಳು ಬಹುತೇಕ ಸ್ಥಗಿತಗೊಂಡಿವೆ ಅಥವಾ ಒಂದೆರಡು ಪುಟಗಳಿಗೆ ಅವು ಸೀಮಿತವಾಗಿವೆ. 5-6 ಆವೃತ್ತಿಗಳನ್ನು ಹೊಂದಿರುವ ಮುಂಬೈ ಮೂಲದ ಇಂಗ್ಲಿಷ್ ಪತ್ರಿಕೆಯೊಂದು, ಮುದ್ರಣ ಆವೃತ್ತಿಯನ್ನು ಕೈಬಿಟ್ಟು ಡಿಜಿಟಲ್ ಆವೃತ್ತಿಗೆ ಶರಣಾಗಿ, ಮುದ್ರಣ ಕಾಗದ, ಮುದ್ರಣ ಮತ್ತು ಸಾಗಣೆ ವೆಚ್ಚವನ್ನು ಉಳಿಸಿದೆ. ಇಂಗ್ಲೆಂಡ್‌ನಲ್ಲಿ ಅಲ್ಲಿನ ಪ್ರತಿಷ್ಠಿತ 'ದಿ ಇಂಡಿಪೆಂಡೆಂಟ್' ಪತ್ರಿಕೆ ಡಿಜಿಟಲ್ ಆಗಿದ್ದರೆ, ಮತ್ತೆ ಕೆಲವು ಪತ್ರಿಕೆಗಳು ತಮ್ಮ ಒಂದಿಷ್ಟು ಆವೃತ್ತಿಗಳನ್ನು ನಿಲ್ಲಿಸಿವೆ. ಈವರೆಗೆ ಉಚಿತವಾಗಿ ನೀಡಲಾಗುತ್ತಿದ್ದ 'ಇ-ಪೇಪರ್' ಅನ್ನು, ಒಂದೊಂದೇ ಪತ್ರಿಕಾ ಸಂಸ್ಥೆಗಳು ಕ್ರಮೇಣ 'ಪೇಮೆಂಟ್ ಕೆಟಗರಿ'ಗೆ ಅನಿವಾರ್ಯವಾಗಿ ಮತ್ತು ಮನಸ್ಸಿಲ್ಲದ ಮನಸ್ಸಿನಿಂದ ಬದಲಾಯಿಸುತ್ತಿವೆ. ಪತ್ರಿಕೆಗಳ ಪ್ರಸರಣ ಕಡಿಮೆಯಾದಾಗ ಪತ್ರಿಕೆಗಳಿಗೆ ಬರುವ ಜಾಹೀರಾತು ಕಡಿಮೆಯಾಗುತ್ತದೆ ಅಥವಾ ನಿಂತುಹೋಗುತ್ತದೆ. ಅಂದರೆ, ಪತ್ರಿಕೆಗಳ ಪ್ರಸರಣದ ಮೇಲೆ ಜಾಹೀರಾತು ಆದಾಯವು ಅವಲಂಬಿತವಾಗಿರುತ್ತದೆ. ಪತ್ರಿಕೆಗಳ ಆದಾಯದಲ್ಲಿ ಶೇ.60-70 ಭಾಗವು ಜಾಹೀರಾತಿನಿಂದ ಬಂದರೆ, ಶೇ.20-30 ಭಾಗವು ಚಂದಾದಾರರಿಂದ/ಖರೀದಿದಾರರಿಂದ ಬರುತ್ತದೆ ಎನ್ನಲಾಗುತ್ತದೆ. ಜಾಹೀರಾತು ಮತ್ತು ಚಂದಾ ಇವೆರಡೂ ಕ್ಷೀಣಿಸಿದರೆ ಪತ್ರಿಕೆಗಳು ನಲುಗುತ್ತವೆ.

ಯಾವುದೇ ಉದ್ಯಮದಲ್ಲಿ ಒಂದು ವಸ್ತುವಿನ ಮಾರಾಟದ ದರವು, ಅದರ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. ವಿಪರ್ಯಾಸವೆಂದರೆ, ಮುದ್ರಣ ಮಾಧ್ಯಮದಲ್ಲಿ ಮಾರಾಟ ದರವು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಇರುತ್ತದೆ. ಪತ್ರಿಕೆಗೆ ಆಗುವ ಉತ್ಪಾದನಾ ವೆಚ್ಚದಲ್ಲಿ ಗಣನೀಯ ಭಾಗ ನ್ಯೂಸ್‌ಪ್ರಿಂಟ್‌ನದ್ದೇ ಆಗಿರುತ್ತದೆ. ಇದಕ್ಕೆ ಸಾಗಾಟ, ವಿತರಣೆಗಾರರ/ಮಾರಾಟಗಾರರ ಕಮಿಷನ್ ಮುಂತಾದ ವೆಚ್ಚಗಳೂ ಸೇರಿಕೊಳ್ಳುತ್ತವೆ. ಪರಿಣಾಮವಾಗಿ, ಒಂದು ಅಂದಾಜಿನ ಪ್ರಕಾರ ಸುಮಾರು 10 ಪುಟದ ಒಂದು ದಿನಪತ್ರಿಕೆಯು ಓದುಗನ ಕೈ ತಲುಪುವ ವೇಳೆಗೆ ಅದರ ಉತ್ಪಾದನಾ ವೆಚ್ಚವು ಸುಮಾರು 18-20 ರುಪಾಯಿಗೆ ಮುಟ್ಟಿರುತ್ತದೆ (ಇದು ವರ್ಷಗಳ ಹಿಂದಿನ ಲೆಕ್ಕಾಚಾರ, ಈಗ ಇನ್ನೂ ಹೆಚ್ಚಾಗಿರಬಹುದು). ಜತೆಗೆ ಪತ್ರಿಕೆಯ ನಿರ್ವಹಣಾ ವ್ಯವಸ್ಥೆ ಮತ್ತು ಸಿಬ್ಬಂದಿಗಳ ವೇತನ ಮುಂತಾದವೂ ಸೇರಿಕೊಳ್ಳುತ್ತವಲ್ಲಾ, ಹೀಗಾಗಿ ಪತ್ರಿಕೆಗೆ 30-35 ರುಪಾಯಿಯಷ್ಟು ಮುಖಬೆಲೆಯನ್ನಾದರೂ ಇಡಬೇಕಾಗುತ್ತದೆ. ಆದರೆ ನಮ್ಮಲ್ಲಿ ಯಾರಾದರೂ ಇಷ್ಟು ಹಣ ಕೊಟ್ಟು ದಿನಪತ್ರಿಕೆಯನ್ನು ಕೊಳ್ಳುವುದುಂಟಾ? ಹೀಗಾಗಿ ಪತ್ರಿಕೆಗಳಿಗೆ ಜಾಹೀರಾತುಗಳು ಅನಿವಾರ್ಯ.

ಕರೋನಾ ಮಹಾಮಾರಿಯು ಮುದ್ರಣ ಮಾಧ್ಯಮಕ್ಕೆ ಬಲವಾದ ಪೆಟ್ಟನ್ನು ಕೊಟ್ಟಿದೆ ಎಂಬ ಮಾತಿನಲ್ಲಿ ಸ್ವಲ್ಪ ಹುರುಳಿದ್ದರೂ, ಪತ್ರಿಕೆಗಳು ಎದುರಿಸುತ್ತಿರುವ ಮೇಲೆ ಉಲ್ಲೇಖಿಸಿದಂಥ ಸಮಸ್ಯೆ-ಸವಾಲುಗಳಿಗೆ ದಶಕಗಳ ಇತಿಹಾಸವಿದೆ. ಕರೋನಾ ಒಂದು ನೆಪವಷ್ಟೇ. ಇತ್ತೀಚಿನ ದಿನಗಳಲ್ಲಿ ಹೊಸ ಪತ್ರಿಕೆಗಳು/ನಿಯತಕಾಲಿಕಗಳು ಶುರುವಾಗುವುದು ಅಪರೂಪವಾಗುತ್ತಿದೆ ಎನ್ನಬೇಕು. ಇನ್ನು, ಪತ್ರಿಕೆಗಳು ಹೊಸ ಆವೃತ್ತಿಗಳನ್ನು ಹೊರತರುವ ಸಾಹಸ ಮಾಡುತ್ತಿಲ್ಲ. ದಿನಪತ್ರಿಕೆಗಳ ಪ್ರಸರಣಕ್ಕೆ ಮೊದಲ 'ಶಾಕ್' ಒದಗಿದ್ದು 24X7 ಸುದ್ದಿ ವಾಹಿನಿಗಳ ಮಹಾಪೂರದಿಂದ. 'ಆಯಾ ದಿನದ, ಆಯಾ ಕ್ಷಣದ ವರ್ತಮಾನಗಳನ್ನು ಸುದ್ದಿವಾಹಿನಿಯಲ್ಲಿ ನೋಡಿದ ಮೇಲೆ ಪತ್ರಿಕೆಗಳೇಕೆ?' ಎಂಬ ಕುತರ್ಕಕ್ಕೆ ಕೆಲವರು ಒಡ್ಡಿಕೊಂಡಿದ್ದರಿಂದಾಗಿ, ಕೆಲ ಪತ್ರಿಕೆಗಳ ಪ್ರಸರಣ ಕುಸಿಯಿತು. ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ನಡುವಿನ ವ್ಯತ್ಯಾಸ, ಅವು ನೀಡುವ ಮಾಹಿತಿ-ವೈವಿಧ್ಯವನ್ನು ತುಲನೆಮಾಡುವ ಗೋಜಿಗೆ ಇಂಥವರು ಹೋಗಲಿಲ್ಲ ಎನ್ನಬೇಕು.

ಸಾಮಾನ್ಯವಾಗಿ, ವಾರಪತ್ರಿಕೆ-ಮಾಸಪತ್ರಿಕೆಗಳನ್ನು ಓದುವವರು ಮಹಿಳೆಯರು. ಇಂಥ ನಿಯತಕಾಲಿಕಗಳ ಪ್ರಸರಣಕ್ಕೆ ಸರ್ಕ್ಯುಲೇಟಿಂಗ್ ಲೈಬ್ರರಿಗಳು ರಸ್ತೆಯ 'ಹಂಪ್'ಗಳಾಗಿ ಪರಿಣಮಿಸಿದರೆ, ಟಿವಿ ಧಾರಾವಾಹಿಗಳು ಬಂದ ಮೇಲೆ ಈ ನಿಯತಕಾಲಿಕಗಳು ಡ್ರಾಯಿಂಗ್ ರೂಮ್‌ನಿಂದಲೇ ಬಹುತೇಕವಾಗಿ ಮಾಯವಾದವು ಎನ್ನಬೇಕು. ಇಂದು ಸುದ್ದಿಗಳು/ವಿದ್ಯಮಾನಗಳು, ಅವು ಘಟಿಸುತ್ತಿರುವಂತೆಯೇ ಅಂಗೈಯಲ್ಲಿನ ಮೊಬೈಲ್

ಗಳಲ್ಲಿ, ಅಂತರ್ಜಾಲ ಮಾಧ್ಯಮದಲ್ಲಿ ಲಭ್ಯವಾಗಿಬಿಡುತ್ತವೆ. ಹೀಗಾಗಿ ವಿದ್ಯಾರ್ಥಿಗಳು-ಯುವಕರು ಸೇರಿದಂತೆ ಹೆಚ್ಚಿನವರು ಪತ್ರಿಕೆಗಳತ್ತ ಕಣ್ಣು ಹಾಯಿಸಲು ಹೋಗುತ್ತಿಲ್ಲ. ಮನೆಯಲ್ಲಿನ ಮಧ್ಯವಯಸ್ಕರು, ನಿವೃತ್ತರು ಮತ್ತು ಬದುಕಿನ ಮುಸ್ಸಂಜೆಯಲ್ಲಿರುವವರು ಮಾತ್ರವೇ ಪತ್ರಿಕೆಗಳನ್ನು ಒಂದು ಮಟ್ಟಿಗೆ ನೆಚ್ಚಿದ್ದಾರೆ.

ವಿಪರ್ಯಾಸವೆಂದರೆ, ಹಲವರು ಪತ್ರಿಕೆಯನ್ನು ಅಗತ್ಯವಸ್ತು ಎನ್ನದೆ avoidable luxury ಎಂದು ಪರಿಗಣಿಸುತ್ತಾರೆ. ದಿನಕ್ಕೆ 25 ರುಪಾಯಿ ತೆತ್ತು ಪಾನ್ ಬೀಡಾ ತಿಂದು ಉಗುಳುವಾಗ, ಬಾರ್‌ನಲ್ಲಿ ಕಂಠಪೂರ್ತಿ ಕುಡಿದು ವೇಟರ್ ನೀಡಿದ ಬಿಲ್ಲನ್ನು ಪರಿಷ್ಕರಿಸದೇ ಪಾವತಿಸುವಾಗ, ಹೋಟೆಲ್‌ನಲ್ಲಿ ಧಾರಾಳವಾಗಿ 'ಟಿಪ್ಸ್' ನೀಡಿ ಅದಕ್ಕೆ ಪ್ರತಿಯಾಗಿ ವೇಟರ್‌ನಿಂದ 'ಸಲಾಮ್' ಸ್ವೀಕರಿಸುವಾಗ ಇಲ್ಲದ ಹಣದ ಲೆಕ್ಕಾಚಾರವು, 5-6 ರುಪಾಯಿ ಕೊಟ್ಟು ಪತ್ರಿಕೆಯನ್ನು ಕೊಳ್ಳುವಾಗ ದಿಢೀರನೆ ಮುನ್ನೆಲೆಗೆ ಬಂದುಬಿಡುತ್ತದೆ! ಒಂದು ವಠಾರದಲ್ಲಿ 6-7 ಮನೆಗಳಿದ್ದರೆ, ವೈವಿಧ್ಯಕ್ಕಾದರೂ 6-7 ಪತ್ರಿಕೆಗಳನ್ನು ತರಿಸದೇ, ಒಂದೇ ಪತ್ರಿಕೆಯನ್ನು ಅಷ್ಟೂ ಮನೆಯವರು 'ಪಾಳಿಯಲ್ಲಿ ಓದುವ' ಪರಿಪಾಠವನ್ನು ಈಗಲೂ ಕೆಲವೆಡೆ ಕಾಣಬಹುದು!

ಪತ್ರಿಕೆಗಳನ್ನು ಓದುವ ನಿಟ್ಟಿನಲ್ಲಿ ಕನ್ನಡಿಗರು ಬೇರೆ ರಾಜ್ಯದವರಿಗಿಂತ ಹಿಂದೆ ಎಂಬುದೊಂದು ಮಾತಿದೆ. ಹತ್ತಿರ 7 ಕೋಟಿಯಷ್ಟು ಜನಸಂಖ್ಯೆಯಿರುವ ಕರ್ನಾಟಕದಲ್ಲಿ ಕನ್ನಡ ಪತ್ರಿಕೆಗಳ ಒಟ್ಟಾರೆ ಪ್ರಸರಣ ಸಂಖ್ಯೆಯು ಸರಿಸುಮಾರು 30 ಲಕ್ಷದಷ್ಟಿದೆಯಂತೆ. ಆದರೆ ಕರ್ನಾಟಕದ ಅರ್ಧದಷ್ಟು ಜನಸಂಖ್ಯೆಯಿರುವ ಕೇರಳದಲ್ಲಿ ಮಲಯಾಳಂ ಪತ್ರಿಕೆಗಳ ಪ್ರಸರಣ ಸಂಖ್ಯೆ 65 ಲಕ್ಷವಂತೆ. ಮಲಯಾಳಂನ ಕೆಲವೊಂದು ಪತ್ರಿಕೆಗಳದ್ದು ಹೊರರಾಜ್ಯ/ವಿದೇಶಿ ಆವೃತ್ತಿಗಳೂ ಇವೆಯಂತೆ. ಖ್ಯಾತ ಲೇಖಕ ಹಾಗೂ ಪತ್ರಕರ್ತ ಖುಷ್ವಂತ್ ಸಿಂಗ್ ಅವರು, ''ರಾಜಕೀಯವಾಗಿ ತುಂಬಾ ಕ್ರಿಯಾಶೀಲ ರಾಜ್ಯ ಕೇರಳ. ಇಲ್ಲಿನ ಜನರು ಮುಂಜಾನೆ ಒಂದು ಕೈಯಲ್ಲಿ ಲುಂಗಿಯ ಚುಂಗು ಎತ್ತಿಹಿಡಿದು, ಮತ್ತೊಂದು ಕೈಯಲ್ಲಿ ಹಾಲಿನ ಪ್ಯಾಕೆಟ್ ಹಿಡಿದು, ಕಂಕುಳಲ್ಲಿ ಒಂದು ಪತ್ರಿಕೆಯನ್ನು ಸಿಕ್ಕಿಸಿಕೊಂಡು ಮನೆಯತ್ತ ಧಾವಿಸುವುದು ತೀರಾ ಸಾಮಾನ್ಯ'' ಎನ್ನುವ ಮೂಲಕ ಕೇರಳಿಗರ ಪತ್ರಿಕಾ ವ್ಯಾಮೋಹ ಮತ್ತು ಅಲ್ಲಿನ ಪತ್ರಿಕೆಗಳ ಪ್ರಸರಣದ ಬಗ್ಗೆ ಪ್ರಶಂಸಿಸಿದ್ದುಂಟು!

ತೀವ್ರಗತಿಯಲ್ಲಿ ಬದಲಾಗುತ್ತಿರುವ ಜಗತ್ತು ಹಾಗೂ ಜೀವನಶೈಲಿಯಲ್ಲಿ ಮುದ್ರಣ ಮಾಧ್ಯಮದೆಡೆಗಿದ್ದ ಒಲವು ಡಿಜಿಟಲ್ ಮಾಧ್ಯಮದತ್ತ ಹೊರಳುವುದನ್ನು ತಡೆಯಲು ಮತ್ತು ಅಲ್ಲಗಳೆಯಲು ಸಾಧ್ಯವಿಲ್ಲ. ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಓದುವುದಕ್ಕೂ, ಡಿಜಿಟಲ್ ಸ್ವರೂಪದಲ್ಲಿ ಅದನ್ನು ಅವಲೋಕಿಸುವುದಕ್ಕೂ ವ್ಯತ್ಯಾಸವಿದೆ. ಸುದ್ದಿ, ಸಂದರ್ಶನ, ಅಂಕಣಬರಹ, ವ್ಯಕ್ತಿಚಿತ್ರ, ಮತ್ತಿತರ ಮಾಹಿತಿಗಳನ್ನು ಮುದ್ರಿತ ಸ್ವರೂಪದಲ್ಲಿ ಓದುವಾಗಿನ ಖುಷಿ ಮತ್ತು ಸಂತೃಪ್ತಿಯೇ ಬೇರೆ. ಜತೆಗೆ, ಮುದ್ರಣ ಮಾಧ್ಯಮದ ಕಾರ್ಯಭಾರವು ಒಂದು ಹವ್ಯಾಸವಾಗಿರದೆ 'ಗಂಭೀರ ಬಿಜಿನೆಸ್' ಆಗಿರುತ್ತದೆ. ಇದರಲ್ಲಿ ಹೊರಜಗತ್ತಿನ ಆಗುಹೋಗುಗಳ ಬಗ್ಗೆ ಮಾಹಿತಿ ಕೊಡುವುದರೊಂದಿಗೆ ಸಮಾಜಕ್ಕೆ ಒಳಿತುಮಾಡುವ, ಸಮಾಜದಲ್ಲಿನ ಅಂಕು-ಡೊಂಕುಗಳನ್ನು ಸರಿಪಡಿಸುವ ಕಳಕಳಿ ಇರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಮಿಕ್ಕ ಸ್ವರೂಪಗಳಿಗೆ ಹೋಲಿಸಿದಾಗ ಮುದ್ರಣ ಮಾಧ್ಯಮವು ಈಗಲೂ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿದೆ. ಅದನ್ನು avoidable luxury ಎಂದು ಪರಿಗಣಿಸದೇ, ಅತ್ಯಾವಶ್ಯಕ ವಸ್ತು ಎಂದು ತಿಳಿಯಬೇಕಾಗಿದೆ. ದಿನಪತ್ರಿಕೆ ಬರುವುದು ಕೊಂಚ ತಡವಾದರೆ ಅಥವಾ ಬಾರದೇ ಇದ್ದರೆ, ಪತ್ರಿಕಾಲಯಕ್ಕೆ ರಜೆಯಿದ್ದರೆ ಓದುಗರು ಚಡಪಡಿಸುವ ದೃಶ್ಯ ಒಂದು ಕಾಲಕ್ಕೆ ಸಾಮಾನ್ಯವಾಗಿತ್ತು; ಈಗ ಅಂಥ ತೀವ್ರತೆ-ತವಕ ಕಡಿಮೆಯಾಗಿದ್ದರೂ, ದಿನಪತ್ರಿಕೆಯೊಂದನ್ನು ಓದುವುದರೊಂದಿಗೆ ಆಯಾ ದಿನವನ್ನು ಆರಂಭಿಸುವುದನ್ನು ಮುಂದುವರಿಸುವುದು ಆರೋಗ್ಯಕರ ಪರಿಪಾಠವಾಗಬಲ್ಲದು.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಧರ್ಮವಿರೋಧಿಗಳನ್ನು ಇನ್ನಾದರೂ ಮಟ್ಟಹಾಕಬೇಕಿದೆ

ಅಭಿಮತ

ಪ್ರವೀಣ್ ಸುಭಾಷ್ ಪಡನಾಡ

ಧರ್ಮಸ್ಥಳ ಕ್ಷೇತ್ರ ಮತ್ತು ಖಾವಂದರ ಕುರಿತು ಹಲವು ವರ್ಷಗಳಿಂದ ಆಗುತ್ತಿರುವ ಅಪಪ್ರಚಾರವನ್ನು ಇಡೀ ದೇಶವೇ ಗಮನಿಸುತ್ತಿದೆ. ಕೆಲವರ ಹೋರಾಟ, ಹಾರಾಟ, ದಾಖಲೆ, ಸುಳ್ಳು, ಸತ್ಯ ಎಲ್ಲವನ್ನೂ ಜನರ ಮುಂದೆ ತೆರೆದಿಟ್ಟಾಗಿದೆ. ಆ ಬಗ್ಗೆ ಹೆಚ್ಚಿನದೇನನ್ನೂ ಹೇಳಬೇಕಾಗಿಲ್ಲ. ಆದರೆ ಧರ್ಮಸ್ಥಳ ಕ್ಷೇತ್ರವು ಸರಕಾರ ಮಾಡದೇ ಇರುವಂಥ ಎಷ್ಟೋ ಕೆಲಸಗಳನ್ನು ಮಾಡಿದೆ ಎಂಬುದಂತೂ ಎಲ್ಲರಿಗೂ ತಿಳಿದಿರುವ ಸತ್ಯ. ಸ್ವ ಸಹಾಯ ಸಂಘಗಳಾಗಿರಬಹುದು, ಭಜನಾ ಮಂಡಳಿಗಳಾಗಿರಬಹುದು, ಸಾವಿರಾರು ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಇರಬಹುದು, ವಿದ್ಯಾದಾನ, ಅನ್ನದಾನ, ವೈದ್ಯಕೀಯ ಸೇವೆ, ಸಾಮೂಹಿಕ ವಿವಾಹ ಹೀಗೆ ಹೇಳುತ್ತಾ ಹೋದರೆ ಧರ್ಮಸ್ಥಳ ಕ್ಷೇತ್ರದ ಸೇವೆಗೆ ಸರಿಸಾಟಿಯೇ ಇಲ್ಲ.

ಆದರೆ ಧರ್ಮದ ಹಾದಿಯಲ್ಲಿ ನಡೆಯುವ ಒಬ್ಬ ಧರ್ಮಾಧಿಕಾರಿ ಹೇಗೆ ಬದುಕಬೇಕು? ಈ ಸಮಾಜದಲ್ಲಿ ಹೇಗೆ ಇರಬೇಕು? ಎಂಬುದು ಇತ್ತೀಚೆಗೆ ಧರ್ಮಸ್ಥಳದ ವಿಚಾರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡುತ್ತಾ ಹೋದವರಿಗೆ ಸ್ಪಷ್ಟವಾಗುತ್ತದೆ. ಸಾವಿರಾರು ಜನರು ಸೇರಿ ಕೋಟಿ ಕೋಟಿ ಹಣ ಖರ್ಚುಮಾಡಿ, ಹಲವು ವರ್ಷಗಳಿಂದ ಪೂಜ್ಯರ ಮೇಲೆ ತಪ್ಪು ಹೊರಿಸುವ ಪ್ರಯತ್ನ ಮಾಡಿದರೂ, ಒಂದೇ ಒಂದು ಸಣ್ಣ ತಪ್ಪು ಕೂಡ ಈವರೆಗೂ ಸಿಗಲಿಲ್ಲ. ಯಾವುದೇ ತಪ್ಪು ನಡೆದೇ ಇಲ್ಲವೆಂದ ಮೇಲೆ ತಪ್ಪು ಸಿಗುವುದಾದರೂ ಎಲ್ಲಿಂದ?

ಇಂದಿನ ದಿನಗಳಲ್ಲಿ, ಧರ್ಮದ ಹಾದಿಯಲ್ಲಿ ನಡೆಯುವ ಇಂಥ ಧರ್ಮಾಧಿಕಾರಿಗಳು ಸಿಗುವುದೇ ನಮ್ಮ ಪುಣ್ಯ ಎಂದು ಭಾವಿಸಬೇಕು. ಈ ಎಲ್ಲ ಆರೋಪಗಳನ್ನು ನೋಡಿಯೂ ಮಂಜುನಾಥ ಸ್ವಾಮಿ ಮೌನವಾಗಿರುವುದನ್ನು ಗಮನಿಸಿದರೆ, ಒಬ್ಬ ಧರ್ಮಾಧಿಕಾರಿ ಹೇಗಿರಬೇಕು ಎನ್ನುವುದನ್ನು ಇವತ್ತಿನ ಸಮಾಜಕ್ಕೆ ತೋರಿಸುವ ಉದ್ದೇಶ ಆ ಸ್ವಾಮಿಗೆ ಇದೆ ಎಂದೆನಿಸುತ್ತದೆ. ಧರ್ಮಸ್ಥಳ ಕ್ಷೇತ್ರದ ಬಗ್ಗೆ ನಡೆಯುತ್ತಿರುವ ಪಿತೂರಿ ನೋಡಿದರೆ, 'ಮನುಷ್ಯನ ಸ್ವಭಾವ'ದ ಬಗ್ಗೆಯೇ ಹೊಸ ಚಿತ್ರಣ ಸೃಷ್ಟಿಯಾದಂತೆ ಅನಿಸುತ್ತದೆ. ಒಬ್ಬ ವ್ಯಕ್ತಿ ಶ್ರೀಮಂತನಾಗಿ ಹುಟ್ಟಬಹುದು, ಇಲ್ಲವೇ ಬಡವನಾಗಿ ಹುಟ್ಟಬಹುದು; ತಂದೆ ತಾಯಿಯ ತಪ್ಪೋ, ದೇವರ ಶಾಪವೋ ಅಂಗವಿಕಲನಾಗಿ ಹುಟ್ಟಬಹುದು. ಜನ್ಮತಾಳಿದವನಿಗೆ ಸಿಗುವ ಅವಕಾಶ, ಸೌಲಭ್ಯ, ಪರಿಸರ, ಪರಿಸ್ಥಿತಿಯ ಆಧಾರದ ಮೇಲೆ ಜ್ಞಾನಿ, ವೀರ, ಶೂರ, ಕಳ್ಳ, ಮಳ್ಳ, ಸುಳ್ಳ, ಕೊಲೆಗಾರ ಏನೇನೋ ಆಗಬಹುದು. ಆದರೆ ಇವತ್ತಿನ ಪರಿಸ್ಥಿತಿ ನೋಡಿದರೆ ಮನುಷ್ಯನಿಗೆ ಭಕ್ತಿ, ಪ್ರೀತಿ, ವಿಶ್ವಾಸ, ನಂಬಿಕೆ, ಮನುಷ್ಯತ್ವ ಇಲ್ಲದಂತಾಗಿದೆಯಲ್ಲ ಎಂಬ ಮರುಕ ಹುಟ್ಟುತ್ತದೆ. ದೇವರ ಕ್ಷೇತ್ರವನ್ನು, ದೇವರನ್ನು ಸವಾಲಾಗಿ ಪರಿಗಣಿಸಿ, ಭಯಭಕ್ತಿ ಇಲ್ಲದೆ ಬಾಯಿಗೆ ಬಂದದ್ದನ್ನು ಮಾತನಾಡಿ ಹಣ ಮಾಡುವ ಉದ್ದೇಶ ಮನುಷ್ಯರಿಗೆ ಬಂದಿದೆಯಲ್ಲಾ ಎಂಬುದು ನಾಚಿಕೆಗೇಡಿನ ಸಂಗತಿ.

ಇಲ್ಲಿಯ ಸತ್ಯ ಮತ್ತು ಸುಳ್ಳಿನ ಹುಡುಕಾಟಕ್ಕೆ ಯಾವುದೇ ಸರಕಾರಿ ಸಂಸ್ಥೆಗಳಿಂದ ತನಿಖೆ ಮಾಡುವುದು ಬೇಡ; ಹಲವು ವರ್ಷಗಳಿಂದ ಹೊಮ್ಮಿರುವ ಹೋ(ಹಾ)ರಾಟಗಾರರ



ಮಾತು, ಅವರ ದಿನಕ್ಕೊಂದು ಗೋಸುಂಬೆ ಆಟ, ಹಾವಭಾವ, ಅವರು ತೋರಿಸುವ ಸುಳ್ಳು ದಾಖಲೆಗಳು, ಒಂದೊಂದು ವಿಡಿಯೊಗಳಲ್ಲಿ ಒಂದೊಂದು ರೀತಿ ಮಾತನಾಡುವುದನ್ನು ನೋಡಿದರೆ ಸಾಕು, ಎಂಥವರಿಗೂ ಅವರ ಹಿನ್ನೆಲೆ ಮತ್ತು ಉದ್ದೇಶದ ಕುರಿತು ಗೊತ್ತಾಗುತ್ತೆ. ಆದರೆ ಏನೂ ಅರಿಯದ ಕೆಲವರು ಇವರ ಬಣ್ಣದ ಮಾತುಗಳಿಗೆ ಮರುಳಾಗಿ ಇವರಿಗೆ ಬೆಂಬಲ ನೀಡಿ, ತಲೆ ಅಲ್ಲಾಡಿಸುತ್ತಿರುವುದು ನೋವಿನ ಸಂಗತಿ. ದುಷ್ಟ ಉದ್ದೇಶಗಳಿಗಾಗಿ ಹುಟ್ಟಿಕೊಂಡ ಇಂಥ 'ಹಾರಾಟ'ಗಾರರಿಗೆ ಆ ಮಂಜುನಾಥನೇ ಶಿಕ್ಷೆ ನೀಡಬೇಕಿದೆ.

ಪೂಜ್ಯರೇ, ಒಂದಂತೂ ನಿಜ. ಸತ್ಯ ಸಾಯುವುದಿಲ್ಲ. ಆ ಮಂಜುನಾಥ ಸ್ವಾಮಿ ನಿಮ್ಮ ವ್ಯಕ್ತಿತ್ವ, ನಿಮ್ಮ ಪರಿಶುದ್ಧತೆಯನ್ನು ಈ ಜಗತ್ತಿಗೆ ತೋರಿಸುವುದಕ್ಕಾಗಿಯೇ ಈ ಪರೀಕ್ಷೆಗಳನ್ನು ಮಾಡುತ್ತಿದ್ದಾನೆ. ಈ ಪ್ರಕರಣವು ಭಾರತ ಭೂಮಿಯಲ್ಲಿನ ಎಲ್ಲ ಧರ್ಮಗಳನ್ನು ಒಂದುಗೂಡಿಸಿ ದುಷ್ಟರನ್ನು, ಧರ್ಮಕ್ಷೇತ್ರದ ವಿರೋಧಿಗಳನ್ನು ಮಟ್ಟಹಾಕುವ ಸನ್ನಿವೇಶ ಸನ್ನಿಹಿತವಾಗಿರುವುದರ ಸೂಚಕವಾಗಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 98

ಸಮಾಚಾರ ಸಣ್ಣದಲ್ಲ

ಟೈಮ್ಸ್‌ಸ್ಕ್ವೇರ್ ಗುಂಡಿನ ದಾಳಿ: 3 ಜನಕ್ಕೆ ಗಾಯ

ನ್ಯೂಯಾರ್ಕ್: ಅಮೆರಿಕದ ನ್ಯೂಯಾರ್ಕ್ ನಗರದ ಪ್ರಸಿದ್ಧ ಟೈಮ್ಸ್‌ಸ್ಕ್ವೇರ್‌ನಲ್ಲಿ ಭಾನುವಾರ ನಸುಕಿನ 1.20ರಲ್ಲಿ ಭಾರಿ ಗುಂಡಿನ ದಾಳಿ ನಡೆದಿದೆ. ಘಟನೆಯಲ್ಲಿ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗುಂಡಿನ ಸದ್ದು ಕೇಳುತ್ತಲೇ ಟೈಮ್ಸ್ ಸ್ಕ್ವೇರ್‌ನಿಂದ ಜನರು ಬೇರೆಡೆಗೆ ಓಡಿ ಹೋಗಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರ ತಂಡ, ಪ್ರದೇಶವನ್ನು ಸುತ್ತುವರೆದು ಒಬ್ಬ ಶಂಕಿತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದೆ. ಗಾಯಾಳುಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಘಟನೆಗೆ ಕಾರಣ ಇನ್ನಷ್ಟೇ ತಿಳಿದುಬರಬೇಕಿದೆ.

ಪಾಕ್‌ಗೆ 2 ತಿಂಗಳಲ್ಲಿ ರು.123 ಕೋಟಿ ನಷ್ಟ

ಇಸ್ಲಾಮಾಬಾದ್: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕಾರವಾಗಿ ಪಾಕಿಸ್ತಾನದ ವಿರುದ್ಧ ಭಾರತೀಯ ಸೇನಾಪಡೆಗಳು 'ಆಪರೇಷನ್ ಸಿಂದೂರ್' ಕಾರ್ಯಾಚರಣೆ ಆರಂಭಿಸಿದಾಗ ಭಾರತದ ವಿಮಾನಗಳಿಗೆ ತನ್ನ ವಾಯು ಮಾರ್ಗವನ್ನು ಪಾಕಿಸ್ತಾನ 2 ತಿಂಗಳ ಕಾಲ ಬಂದ್ ಮಾಡಿತ್ತು. ಅದರಿಂದ ಮುಸ್ಲಿಂ ರಾಷ್ಟ್ರ 123 ಕೋಟಿ ರು. ನಷ್ಟ ಅನುಭವಿಸಬೇಕಾಯಿತು. ಭಾರತದಲ್ಲಿ ನೋಂದ ಣಿಯಾದ ಸಂಸ್ಥೆಗಳ ವಿಮಾನಗಳಿಗೆ ಪಾಕ್ ವಾಯು ಪ್ರದೇಶದಲ್ಲಿ ಹಾರಾಟಕ್ಕೆ ಅನುಮತಿ ನಿರಾಕರಿಸಿತು. ನಿತ್ಯವೂ 150 ಭಾರತ ಮೂಲದ ವಿಮಾನಗಳು ಪಾಕ್ ವಾಯು ಪ್ರದೇಶವನ್ನು ಹಾದು ಹೋಗುತ್ತಿದ್ದವು. ಪಾಕ್ ವಾಯು ಪ್ರದೇಶದಲ್ಲಿನ ವಿಮಾನ ಹಾರಾಟದಲ್ಲಿ ಭಾರತ ಮೂಲದ ವಿಮಾನಗಳದ್ದೇ ಶೇ. 20ರಷ್ಟು ಪಾಲಿದೆ. ಏ.24ರಿಂದ ಜೂ.30 ರವರೆಗೆ ವಾಯು ಮಾರ್ಗದಲ್ಲಿ ಭಾರತದ ವಿಮಾನ ಗಳ ಹಾರಾಟ ನಿಷೇಧಿಸಿದ್ದಕ್ಕೆ ಪಾಕ್ ಭಾರೀ ನಷ್ಟ ಅನುಭವಿಸಿದೆ ಎಂದು ಪಾಕ್ ಮಾಧ್ಯಮದಲ್ಲಿ ವರದಿ ಯಾಗಿದೆ. 2019ರಲ್ಲಿಯೂ ಪಾಕ್ ವಾಯುಪ್ರದೇಶ ಮುಚ್ಚಿದ್ದರಿಂದ 228 ಕೋಟಿ ರು. ನಷ್ಟ ಅನುಭವಿಸಿತ್ತು.

ಮನೆಗೇ ಮದ್ಯ ಪೂರೈಕೆ: ಕೇರಳ!

ತಿರುವನಂತಪುರಂ: ಕೇರಳದಲ್ಲಿ ಮದ್ಯಪ್ರಿಯರ ಮನೆ ಬಾಗಿಲಿಗೇ ಅವರಿಷ್ಟದ ಮದ್ಯವನ್ನು ಪೂರೈಕೆ ಮಾಡುವ ಸೇವೆ ಆರಂಭಿಸುವ ಸಂಬಂಧ ರಾಜ್ಯ ಸರಕಾರಕ್ಕೆ ಪ್ರಸ್ತಾವನೆಯೊಂದು ಸಲ್ಲಿಕೆಯಾಗಿದೆ. 'ದಿ ಕೇರಳ ಸ್ಟೇಟ್ ಬಿವರೇಜಸ್(ಮಾರ್ಕೆಟಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್) ಕಾರ್ಪೊರೇಷನ್ ಲಿ.' (ಬಿಇವಿಸಿಒ) ಆನ್‌ಲೈನ್ ಮಾರಾಟದ ಈ ಪ್ರಸ್ತಾವನೆ ಸಲ್ಲಿಸಿದೆ. ಹೀಗೆ ಮಾಡುವುದರಿಂದ ಚಿಲ್ಲರೆ ಮದ್ಯ ಮಾರಾಟ ಮಳಿಗೆಯಲ್ಲಿ ಮದ್ಯಪ್ರಿಯರು ಸಾಲುಗಟ್ಟುವುದು ತಪ್ಪುತ್ತದೆ. ಅಲ್ಲದೇ, ರಾಜ್ಯದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಹೆಚ್ಚಿನ ವರಮಾನವೂ ಹರಿದುಬರಲಿದೆ. 23 ವರ್ಷ ಮೇಲ್ಪಟ್ಟವರಿಗಷ್ಟೇ ಈ ಸೌಲಭ್ಯ ಸೀಮಿತ ಎಂಬ ಷರತ್ತು ವಿಧಿಸಬಹುದು ಎಂದು ಪ್ರಸ್ತಾವನೆಯಲ್ಲಿ 'ಬಿಇವಿಸಿಒ' ಗಮನ ಸೆಳೆದಿದೆ. ಇದು ಕೈಗೂಡಬೇಕಾದರೆ ರಾಜ್ಯ ಅಬಕಾರಿ ಕಾಯಿದೆಗೇ ತಿದ್ದುಪಡಿ ತರಬೇಕಿದೆ.

ಮಣಿಪುರ: ನಿಷೇಧಿತ ಸಂಘಟನೆ ಉಗ್ರರ ಸೆರೆ

ಇಂಫಾಲ್: ಮಣಿಪುರದಲ್ಲಿ ಉಗ್ರರ ಧಮನ ಕಾರ್ಯಾಚರಣೆ ಮುಂದುವರಿದಿದ್ದು, ಭಾನುವಾರ ನಿಷೇಧಿತ ಸಂಘಟನೆಗಳಿಗೆ ಸೇರಿದ 6 ಉಗ್ರರನ್ನು ಜಂಟಿ ಭದ್ರತಾ ಪಡೆಗಳು ಬಂಧಿಸಿವೆ. ವಿಷ್ಣುಪುರ, ಇಂಫಾಲ್-ಪಶ್ಚಿಮ, ತೌಬಾಲ್ ಜಿಲ್ಲೆಗಳಲ್ಲಿ ಶುಕ್ರವಾರ-ಶನಿವಾರ ಪ್ರತ್ಯೇಕ ಕಾರ್ಯಾಚರಣೆ ನಡೆಸಿ, ಕಾಂಗ್ಲೈಪಾಕ್ ಕಮ್ಯುನಿಸ್ಟ್ ಪಕ್ಷದ ಒಬ್ಬಳು ಮಹಿಳಾ ಕೇಡರ್ ಸೇರಿದಂತೆ 6 ಜನರನ್ನು ಬಂಧಿಸಲಾಗಿದೆ.

ಆಂಧ್ರ: ವಿದ್ಯುತ್ ಶಾಕ್-ರ್‍ಯಾಗಿಂಗ್

ಪಲನಾಡು: ಆಂಧ್ರಪ್ರದೇಶದ ಪಲನಾಡಿನ ಕಾಲೇಜೊಂದರಲ್ಲಿ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗೆ ರ್‍ಯಾಗಿಂಗ್ ಮಾಡಿ ಚಿತ್ರಹಿಂಸೆ ಕೊಟ್ಟಿದ್ದಾರೆ. 2ನೇ ವರ್ಷದ ವಿದ್ಯಾರ್ಥಿಗಳು ಮೊದಲ ವರ್ಷದ ವಿದ್ಯಾರ್ಥಿಯನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಎಳೆದೊಯ್ದು ಚಿತ್ರಹಿಂಸೆ ನೀಡಿದ್ದಾರೆ. ಅದರ ವಿಡಿಯೊ ವೈರಲ್ ಆಗಿದೆ. ಹಾಸ್ಟೆಲ್ ಕೊಠಡಿಯಲ್ಲಿ ಕಿರಿಯ ವಿದ್ಯಾರ್ಥಿಯನ್ನು ಮೂವರು ಹಿರಿಯ ವಿದ್ಯಾರ್ಥಿಗಳು ಮನಬಂದಂತೆ ಥಳಿಸಿದ್ದಾರೆ. ಮುಖಕ್ಕೇ ಕಾಲಿನಿಂದ ಒದೆಯುವುದು, ಮುಷ್ಟಿ ಕಟ್ಟಿ ಗುದ್ದುವುದು ಮಾಡಿದ್ದಾರೆ. ಅಷ್ಟಕ್ಕೇ ಸುಮ್ಮನಾಗದ ರ್‍ಯಾಗಿಂಗ್ ಪ್ರಿಯರು, ಕಿರಿಯ ವಿದ್ಯಾರ್ಥಿಗೆ ವಿದ್ಯುತ್ ಶಾಕ್ ಕೊಟ್ಟು ಆತ ನೋವು ಪಡುವುದನ್ನು ಕಂಡು ಆನಂದಿಸಿದ್ದಾರೆ.

{ ರಾಜನಾಥ್ ಸಿಂಗ್ } ರಕ್ಷಣಾ ಸಚಿವ

ತನ್ನನ್ನು 'ಸಬ್ ಕಾ ಬಾಸ್' ಎಂದುಕೊಂಡಿರುವ ಅಮೆರಿಕಕ್ಕೆ ಭಾರತ ಜಾಗತಿಕ ಶಕ್ತಿಯಾಗುತ್ತಿರುವುದನ್ನು ಕಂಡು ಸಹಿಸಲಾಗುತ್ತಿಲ್ಲ. ಅದಕ್ಕೇ ಭಾರತದ ಉತ್ಪನ್ನಗಳು ಅಮೆರಿಕ ಮಾರುಕಟ್ಟೆಯಲ್ಲಿ ಬಹಳ ದುಬಾರಿ ಆಗುವಂತೆ ಮಾಡಲು ಅತ್ಯಧಿಕ ಸುಂಕ ಹೇರುತ್ತಿದೆ. ಆದರೆ, ವಿಶ್ವದ ಯಾವ ಶಕ್ತಿಗೂ ಭಾರತ ಪ್ರಮುಖ ಜಾಗತಿಕ ಶಕ್ತಿಯಾಗಿ ಬೆಳೆಯುವುದನ್ನು ತಡೆಯುವುದು ಅಸಾಧ್ಯ.



ಚುನಾವಣಾ ಆಯೋಗದ ವಿರುದ್ಧ ರಾಹುಲ್ ಹೊಸ ದಾಳಿ | ಸಾರ್ವಜನಿಕರಿಂದ ದೂರು ಸ್ವೀಕರಿಸಲು ವೆಬ್‌ಸೈಟ್ ಆರಂಭ | ಇಂಡಿ ಒಕ್ಕೂಟ ಸಂಸದರಿಗೆ ಇಂದು ಖರ್ಗೆ 'ಭೋಜನಕೂಟ'

ಡಿಜಿಟಲ್ ಮತದಾರರ ಪಟ್ಟಿ ಪ್ರಕಟಿಸಿ

ದೆಹಲಿ: 2024ರ ಲೋಕಸಭಾ ಚುನಾವಣೆ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ ದೊಡ್ಡ ಮಟ್ಟದಲ್ಲಿ ಮತ ಕಳವು ನಡೆದಿದೆ. ಚುನಾವಣಾ ಆಯೋಗ, ಆಡಳಿತಾರೂಢ ಪಕ್ಷವಾದ ಬಿಜೆಪಿ ಜತೆ ಸೇರಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಗೇ ಮೋಸ ಮಾಡಿದೆ ಎಂಬ ಗಂಭೀರ ಆರೋಪ ಮಾಡುತ್ತಿರುವ ಕಾಂಗ್ರೆಸ್ ನಾಯಕ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಆಯೋಗದ ವಿರುದ್ಧದ ಹೋರಾಟ ವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯಲು ಮುಂದಾಗಿದ್ದಾರೆ.

ಚುನಾವಣಾ ಆಯೋಗ ದೇಶಾದ್ಯಂತದ ಮತದಾರರ 'ಡಿಜಿಟಲ್ ಪಟ್ಟಿ'ಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು ಮತ್ತು ಪಾರದರ್ಶಕವಾಗಿ ವರ್ತಿಸಬೇಕು ಎಂದು ರಾಹುಲ್ ಗಾಂಧಿ ಭಾನುವಾರ ಆಗ್ರಹಿಸಿದ್ದಾರೆ.

ವೆಬ್‌ಸೈಟ್ ಆರಂಭ: ಇದಿಷ್ಟೇ ಅಲ್ಲದೇ, ದೇಶಾದ್ಯಂತದ ಮತದಾರರಿಂದ ಮತ ಕಳವು ಸಂಬಂಧಿಸಿದಂತೆ ವೈಯಕ್ತಿಕವಾಗಿ ದೂರುಗಳನ್ನು ಸ್ವೀಕರಿಸಲು ಕಾಂಗ್ರೆಸ್ ಪಕ್ಷದಿಂದಲೇ ಪ್ರತ್ಯೇಕವಾದ ವೆಬ್‌ಸೈಟ್ ಅನ್ನು ಭಾನುವಾರ ಆರಂಭಿಸಿದ್ದಾರೆ. ಜತೆಗೆ ದೂರು ನೀಡುವುದಕ್ಕೆ ಸುಲಭವಾಗಲಿ ಎಂಬ ಉದ್ದೇಶದಿಂದ ಮಿಸ್ಡ್‌ಕಾಲ್ ಸೌಲಭ್ಯವನ್ನೂ ಒದಗಿಸಿ ಪ್ರತ್ಯೇಕವಾದ 1 ಮೊಬೈಲ್ ಸಂಖ್ಯೆಯನ್ನೇ(96500 03420) ರಾಹುಲ್ ಚಾಲನೆಗೊಳಿಸಿದ್ದಾರೆ. ವೆಬ್ ತಾಣದಲ್ಲಿ ನಿಮ್ಮ ದೂರು ದಾಖಲಿಸಿ ಇಲ್ಲವೇ ಮಿಸ್ಡ್ ಕಾಲ್ ಕೊಟ್ಟು 'ಪ್ರಜಾಪ್ರಭುತ್ವ ರಕ್ಷಣೆ'ಯ ನಮ್ಮ ಹೋರಾಟದಲ್ಲಿ ಭಾಗಿಯಾಗಿ ಎಂದೂ ಕರೆ ನೀಡಿದ್ದಾರೆ. ಆ ಮೂಲಕ ಸಾರ್ವಜನಿಕರನ್ನೂ ಚುನಾವಣಾ ಆಯೋಗ ವಿರುದ್ಧದ ತಮ್ಮ ಹೋರಾಟಕ್ಕೆ ಸೇರಿಸಿಕೊಳ್ಳಲು ಮುಂದಾಗಿದ್ದಾರೆ.

http://votechori.in/ecdemand
http://votechori.in/ecdemand

ರಾಹುಲ್ ಪಾದಯಾತ್ರೆ ಇಂದು

ಬಿಹಾರ ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯನ್ನೇ ಇಡಿಯಾಗಿ ವಿರೋಧಿಸುತ್ತಿ ರುವ ಪ್ರತಿಪಕ್ಷಗಳು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಸೋಮವಾರ ದೆಹಲಿಯಲ್ಲಿ ಭಾರತೀಯ ಚುನಾವಣಾ ಆಯೋಗದ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿವೆ. ಇಂಡಿಯ ಒಕ್ಕೂಟದ ಮಿತ್ರ ಪಕ್ಷಗಳ ಎಲ್ಲಾ ಸಂಸದರು ಭಾಗಿಯಾಗಲಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ಇಂಡಿ ಮಿತ್ರರಿಗೆ ಔತಣ



ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ತ ಪರಿಷ್ಕರಣೆ'(ಎಸ್‌ಐಆರ್) ಮತ್ತು ಚುನಾವಣಾ ಅಕ್ರಮ ಆರೋಪ ವಿರುದ್ಧ ಪ್ರತಿಪಕ್ಷಗಳು ಸಂಘಟಿತ ಹೋರಾಟ ನಡೆಸುತ್ತಿರುವ ಮಧ್ಯೆಯೇ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ 'ಇಂಡಿ' ಒಕ್ಕೂಟದ ಮಿತ್ರಪಕ್ಷಗಳ ಸಂಸದರಿಗೆ ವಿಶೇಷ ಔತಣ ಕೂಟ ಆಯೋಜಿಸಿದ್ದಾರೆ. ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕರೂ ಆಗಿರುವ ಖರ್ಗೆ, ದೆಹಲಿಯ ಚಾಣಕ್ಯ ಪುರಿಯಲ್ಲಿರುವ ಹೋಟೆಲ್ ತಾಜ್ ಪ್ಯಾಲೇಸ್‌ನಲ್ಲಿ ಇಂಡಿ ಒಕ್ಕೂಟದ ಸಂಸದರಿಗೆ ವಿಶೇಷ ಆತಿಥ್ಯ ನೀಡ ಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ರಾಹುಲ್ ಗಾಂಧಿ ಅವರ ನಿವಾಸದಲ್ಲಿಯೂ ಇಂಡಿ ಒಕ್ಕೂಟದ ನಾಯಕರಿಗೆ ರಾತ್ರಿ ವಿಶೇಷ ಭೋಜನ ಕೂಟ ಆಯೋಜಿಸಲಾಗಿತ್ತು. ಅಲ್ಲಿಯೇ ವಿವಿಧ ಪಕ್ಷ ಗಳ ನಾಯಕರೆಲ್ಲರೂ ಬಿಹಾರದ ಮತದಾರರ ಪಟ್ಟಿ ವಿಶೇಷ ಕ್ಷಿಪ್ರ ಪರಿಷ್ಕರಣೆ ಪ್ರಕ್ರಿಯೆ ವಿರುದ್ಧ ಒಗ್ಗಟ್ಟಿ ನಿಂದ ಹೋರಾಟ ನಡೆಸುವುದಾಗಿ ಘೋಷಿಸಿದ್ದರು.

ಕರ್ನಾಟಕದ 12 ಸೇರಿ 334 ಪಕ್ಷಗಳು ರದ್ದು: ಆಯೋಗ

ದೆಹಲಿ: ಕರ್ನಾಟಕ ರಾಜ್ಯದಲ್ಲಿನ 12, ಸದ್ಯದಲ್ಲೇ ವಿಧಾನಸಭೆ ಚುನಾವಣೆ ಎದುರಿಸಲಿರುವ ಬಿಹಾರ ರಾಜ್ಯದ 17 ರಾಜಕೀಯ ಪಕ್ಷಗಳೂ ಸೇರಿದಂತೆ ಚುನಾವಣಾ ಆಯೋಗದಲ್ಲಿ ನೋಂದಣಿ ಮಾಡಿಕೊಂಡಿದ್ದ ಒಟ್ಟು 334 ಪಕ್ಷಗಳನ್ನು ಭಾರತೀಯ ಚುನಾವಣಾ ಆಯೋಗ 'ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು' ಪಟ್ಟಿಯಿಂದಲೇ ತೆಗೆದುಹಾಕಿದೆ.

ರಾಜಕೀಯ ಪಕ್ಷವಾಗಿ ನೋಂದಣಿ ಮಾಡಿಕೊಂಡ ಬಳಿಕ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಬೇಕು ಎಂಬ ಚುನಾವಣಾ ಆಯೋಗದ ಷರತ್ತನ್ನು 334 ಪಕ್ಷಗಳು ಪಾಲಿಸಿಯೇ ಇಲ್ಲ. 2019ರ ಬಳಿಕ ನಡೆದಿರುವ ಚುನಾವಣೆಗಳಲ್ಲಿ ಒಂದರಲ್ಲಿಯೂ ನೆಪ ಮಾತ್ರಕ್ಕೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿಲ್ಲ. ನೋಂದಣಿ ಮಾಡಿಕೊಂಡಾಗ ನೀಡಿದ್ದ ವಿಳಾಸದಲ್ಲಿ ಈ ಪಕ್ಷಗಳ ಕಚೇರಿಯೂ ಇಲ್ಲ. ಹಾಗಾಗಿ ಈ ಪಕ್ಷಗಳನ್ನು ಆಯೋಗದ ಮಾನ್ಯತೆ ಪಡೆದ ಪಕ್ಷಗಳ ಪಟ್ಟಿಯಿಂದಲೇ ತೆಗೆದುಹಾಕಲಾಗಿದೆ ಎಂದು ಆಯೋಗ ಹೇಳಿದೆ.

ಉತ್ತರ ಪ್ರದೇಶದಿಂದ (115) ಅತ್ಯಧಿಕ ಸಂಖ್ಯೆಯ ಪಕ್ಷಗಳು ರದ್ದಾಗಿವೆ. ದೆಹಲಿಯಲ್ಲಿನ 27ಮ ತಮಿಳುನಾಡಿನ 22, ಹರಿಯಾಣದ 21, ಮಧ್ಯಪ್ರದೇಶದ 15, ತೆಲಂಗಾಣದ 13, ಗುಜರಾತ್‌ನ 11 ಪಕ್ಷಗಳ ಮಾನ್ಯತೆ ರದ್ದುಗೊಂಡಿದೆ. ಈ ಪಕ್ಷಗಳು ದೇಣಿಗೆ ಸಂಗ್ರಹಿಸುವಂತಿಲ್ಲ. ಇವುಗಳ ಆಸ್ತಿ-ಆದಾಯದ ಮೇಲೆ ತೆರಿಗೆ ವಿನಾಯಿತಿ ಸೌಲಭ್ಯವೂ ಇರದು. 2854 ರಾಜಕೀಯ ಪಕ್ಷಗಳು ನೋಂದಣಿ ಮಾಡಿಕೊಂಡಿದ್ದವು. ಪರಿಷ್ಕರಣೆ ಬಳಿಕ 2520 ಪಕ್ಷಗಳಷ್ಟೇ ಪಟ್ಟಿಯಲ್ಲಿ ಉಳಿದಿವೆ. ಇವುಗಳಲ್ಲಿಯೂ ಪ್ರಮುಖವಾಗಿ 6 ರಾಷ್ಟ್ರೀಯ ಮತ್ತು 67 ಪ್ರಾದೇಶಿಕ ಮತ್ತು ರಾಜ್ಯ ಮಟ್ಟದ ಪಕ್ಷಗಳು ಮಾತ್ರ ಚುನಾವಣಾ ರಾಜಕೀಯದಲ್ಲಿ ನಿರಂತರ ಭಾಗಿಯಾಗುತ್ತಿವೆ ಎಂದು ಆಯೋಗ ಮಾಹಿತಿ ನೀಡಿದೆ.

ಡಜನ್ ವಜನ್!

1) ನಮ್ಮ ಕಾಂಗ್ರೆಸ್
2) ಭಾರತೀಯ ಪ್ರಜಾ ಪಕ್ಷ
3) ಮಹಿಳಾ ಪ್ರಧಾನ ಪಕ್ಷ
4) ಕಲ್ಯಾಣ ಕ್ರಾಂತಿ ಪಕ್ಷ
5) ಕರ್ನಾಟಕದ ಪ್ರಜಾವಿಕಾಸ್ ಪಕ್ಷ
6) ಕರ್ನಾಟಕ ಸ್ವರಾಜ್ಯ ಪಕ್ಷ
7) ಜನ ಸ್ವರಾಜ್ಯ ಪಕ್ಷ
8) ಅಂಬೇಡ್ಕರ್ ಜನತಾ ಪಕ್ಷ
9) ಪ್ರಜಾ ರೈತ ರಾಜ್ಯ ಪಕ್ಷ
10) ರಕ್ಷಕ ಸೇನಾ
11) ಸಮನ್ವಾ ಜನತಾ ಪಕ್ಷ(ಲೋಕತಾಂತ್ರಿಕ್)
12) ವಿಚಾರ ಜಾಗೃತಿ ಕಾಂಗ್ರೆಸ್ ಪಕ್ಷ

ನಟಿ ಶ್ವೇತ ಮೆನನ್ ವಿರುದ್ಧ ಎಫ್‌ಐಆರ್

ತಿರುವನಂತಪುರಂ: ಅಶ್ಲೀಲ ಚಿತ್ರಗಳಲ್ಲಿ ನಟನೆ ಮಾಡಿ, ಅದರ ದೃಶ್ಯಾವಳಿಗಳನ್ನು 'ಅಡಲ್ಟ್ ವೆಬ್ ಸೈಟ್'ಗಳಲ್ಲಿ ಹರಿಯ ಬಿಟ್ಟಿರುವ ಆರೋಪದಡಿ ಮಲಯಾಳಂ ಚಿತ್ರ ನಟಿ ಶ್ವೇತ ಮೆನನ್ ವಿರುದ್ಧ ಎರ್ನಾಕುಲಂ ಕೇಂದ್ರ ಠಾಣೆಯ ಪೋಲಿಸರು ಭಾನುವಾರ ಪ್ರಥಮ ಮಾಹಿತಿ ವರದಿ(ಎಫ್‌ಐಆರ್) ದಾಖಲಿಸಿ ದ್ದಾರೆ. ಎರ್ನಾಕುಲಂ ನಿವಾಸಿ ಮಾರ್ಟಿನ್ ಮೀನಾಥೇರಿ ಎಂಬವರು ದಾಖಲಿಸಿದ ದೂರಿನ ಅನುಸಾರ ಎರ್ನಾಕುಲಂ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನೀಡಿದ ನಿರ್ದೇಶನದ ಮೇರೆಗೆ ಪೊಲೀಸ್ ಠಾಣೆಯಲ್ಲಿ 'ಎಫ್‌ಐಆರ್' ದಾಖಲಾಗಿದೆ.

ಹಣಕ್ಕಾಗಿ ಅಶ್ಲೀಲ ಚಿತ್ರಗಳಲ್ಲಿ ನಟನೆ ಮಾಡುವ ಮೂಲಕ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವ ಆರೋಪದಡಿ ಇಮ್ಮಾರಲ್ ಟ್ರಾಫಿಕಿಂಗ್(ಪ್ರಿವೆನ್ಷನ್) ಸೆಕ್ಷನ್ 5 ಮತ್ತು 3 ಹಾಗೂ ಮಾಹಿತಿ ತಂತ್ರಜ್ಞಾನ ಕಾಯಿದೆ-2000ರ ಸೆಕ್ಷನ್ 67ಎ ಅಡಿಯಲ್ಲಿ ಅಪರಾಧ ಪ್ರಕರಣ ದಾಖಲಿಸಲಾಗಿದೆ.

ಕಾಶ್ಮೀರಕ್ಕೆ ಮೊದಲ ಸರಕು ಸಾಗಣೆ ರೈಲು

ಶ್ರೀನಗರ: ಸಾವಿರಾರು ಸಿಮೆಂಟ್ ಚೀಲಗಳನ್ನು ಹೊತ್ತ 21 ಬೋಗಿಗಳನ್ನು ಜೋಡಿಸಿದ ಸರಕು ಸಾಗಣೆ ರೈಲು ಇದೇ ಮೊದಲ ಬಾರಿಗೆ ಜಮ್ಮು-ಕಾಶ್ಮೀರವನ್ನು ಶನಿವಾರ ತಲುಪಿದೆ. ಉಧಂಪುರ-ಶ್ರೀನಗರ-ಬಾರಾಮುಲ್ಲಾ' ರೈಲು ಮಾರ್ಗದ ನಿರ್ಮಾಣಕ್ಕಾಗಿ 'ಉತ್ತರ ರೈಲ್ವೆ ಇಲಾಖೆ'ಯು ಅನಂತನಾಗ್ ಜಿಲ್ಲೆಯಲ್ಲಿ ಮೊಟ್ಟ ಮೊದಲ ಗೂಡ್ಸ್ ಶೆಡ್ ತೆರೆದಿದೆ. ಪಂಜಾಬ್‌ನ ರೂಪ್‌ನಗರದಿಂದ ಸಿಮೆಂಟ್ ಚೀಲಗಳನ್ನು ಹೊತ್ತು ತೆರಳಿದ ಮೊದಲ ಸರಕು ಸಾಗಣೆ ರೈಲು ನೂತನ ಗೂಡ್ಸ್ ಶೆಡ್‌ಗೆ ಸರಕು ತಲುಪಿಸಿದೆ. 600 ಕಿಮೀಗಳಷ್ಟು ಅಂತರದ ಈ ಪಯಣವನ್ನು ಸರಕು ಸಾಗಣೆ ರೈಲು 18 ಗಂಟೆಗಳಲ್ಲಿ ಪೂರ್ಣಗೊಳಿಸಿದೆ. ಸರಕು ಸಾಗಣೆ ರೈಲಿನ ಸಂಚಾರ ಆರಂಭದಿಂದಾಗಿ ಜಮ್ಮು-ಕಾಶ್ಮೀರದಲ್ಲಿ ಅಭಿವೃದ್ಧಿ ಯೋಜನೆಗಳು ಮತ್ತು ದೊಡ್ಡ ಕಾಮಗಾರಿಗಳಿಗೆ ಅಗತ್ಯವಾದ ಸರಕುಗಳ ಸಾಗಣೆಗೆ ಅನುಕೂಲವಾಗಲಿದೆ. ಈವರೆಗೂ ಕಡಿದಾದ ನೂರಾರು ತಿರುವು ರಸ್ತೆಗಳಿರುವ ಕಣಿವೆ ಪ್ರದೇಶಕ್ಕೆ ದೊಡ್ಡ ಟ್ರಕ್‌ಗಳಲ್ಲಷ್ಟೇ ಸರಕು ಸಾಗಣೆ ನಡೆಯುತ್ತಿತ್ತು.

ಕಿಶ್ತ್ವಾರ್‌ನಲ್ಲಿ ಭದ್ರತಾ ಪಡೆ-ಉಗ್ರರ ಚಕಮಕಿ

ಕಿಶ್ತ್ವಾರ್: ಜಮ್ಮು-ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಡೂರ್ ಪ್ರದೇಶದಲ್ಲಿ ಉಗ್ರರು ಅಡಗಿರುವ ಮಾಹಿತಿ ಆಧರಿಸಿ ಜಂಟಿ ಭದ್ರತಾ ಪಡೆಗಳು ಭಾನುವಾರ ನಸುಕಿನಲ್ಲೇ ತೆರಳಿ ಪ್ರದೇಶವನ್ನು ಸುತ್ತುವರಿದು ಭಯೋತ್ಪಾದಕರ ಧಮನ ಕಾರ್ಯಾಚರಣೆ ಆರಂಭಿಸಿವೆ. ಅಡಗಿ ಕುಳಿತಿದ್ದ ಉಗ್ರರೂ ಯೋಧರತ್ತ ಗುಂಡಿನ ದಾಳಿ ನಡೆಸಿದ್ದಾರೆ.

ಸ್ಥಳದಲ್ಲಿ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಭಾರೀ ಗುಂಡಿನ ಕಾಳಗ ನಡೆಯುತ್ತಿದೆ ಎಂದು ವರದಿಯಾಗಿದೆ.ಉಗ್ರರ ಗುಂಡಿನ ದಾಳಿಗೆ ಜಂಟಿ ಭದ್ರತಾ ಪಡೆಗಳೂ ದಿಟ್ಟ ಉತ್ತರ ನೀಡಿವೆ. ಉಗ್ರರು ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಪ್ರದೇಶವನ್ನು ಸುತ್ತುವರೆದಿರುವ ಭದ್ರತಾ ಪಡೆಗಳ ಯೋಧರು, ಉಗ್ರರ ಹುಟ್ಟಡಗಿಸಲು ತೀವ್ರ ಹೋರಾಟ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಭಾರತೀಯ ಸೇನೆಯ 'ವೈಟ್ ನೈಟ್ ಕಾರ್ಪ್ಸ್' ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

10ನೇ ದಿನಕ್ಕೆ ಕುಲ್ಗಾಂ: ಜಮ್ಮು-ಕಾಶ್ಮೀರದ ಮತ್ತೊಂದೆಡೆ ಕುಲ್ಗಾಂ ಜಿಲ್ಲೆಯ ಅಖಲ್ ಅರಣ್ಯ ಪ್ರದೇಶದಲ್ಲಿ ಕಳೆದ 10 ದಿನಗಳಿಂದ ಜಂಟಿ ಭದ್ರತಾ ಪಡೆಗಳು ಮತ್ತು ಅರಣ್ಯದಲ್ಲಿ ಅಡಗಿಕೊಂಡಿರುವ 6-7 ಉಗ್ರರ ನಡುವೆ ಗುಂಡಿನ ಚಕಮಕಿ ನಡೆಯುತ್ತಿದೆ. ಲ್ಯಾನ್ಸ್ ನಾಯಕ್ ಸೇರಿದಂತೆ ಇಬ್ಬರು ಸೇನಾ ಯೋಧರು ಶನಿವಾರದ ಕಾರ್ಯಾಚರಣೆಯಲ್ಲಿ ಹುತಾತ್ಮರಾಗಿದ್ದರು.

ಮೇಘಾಲಯದ ಗ್ರಾಮಕ್ಕೆ ಬಾಂಗ್ಲಾದೇಶೀ ದಾಳಿ-ಸೆರೆ

ಶಿಲ್ಲಾಂಗ್: ಗಡಿ ಭಾಗದಲ್ಲಿರುವ ಮೇಘಾಲಯ ರಾಜ್ಯದ ರೊಂಗ್ಗೊಂಗ್ರೈ ಗ್ರಾಮಕ್ಕೆ ಬಾಂಗ್ಲಾದೇಶಿ ನುಸುಳುಕೋರರ ತಂಡವೊಂದು ನುಗ್ಗಿ ಗ್ರಾಮದ ವ್ಯಕ್ತಿಯೊಬ್ಬರ ಮೇಲೆ ಮಾರಣಾಂತಿಕ ದಾಳಿ ನಡೆಸಿದೆ. ಗ್ರಾಮಸ್ಥನನ್ನುಗಡಿ ಭಾಗದವರೆಗೂ ಎಳೆದುಕೊಂಡು ಹೋಗಲು ಯತ್ನಿಸಿದೆ. ಆದರೆ ಗ್ರಾಮಸ್ಥ ಕತ್ತಲಲ್ಲಿ ತಪ್ಪಿಸಿಕೊಂಡಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಳಿಕ ಪ್ರಕರಣ ಸಂಬಂಧ ನಾಲ್ವರು ಬಾಂಗ್ಲಾದೇಶದ ನುಸುಳು ಕೋರರನ್ನು ಬಂಧಿಸಲಾಗಿದೆ.

ಬಾಂಗ್ಲಾದೇಶದ 8-9 ಜನರ ಶಸ್ತ್ರಧಾರಿ ತಂಡ ಭಾರತಕ್ಕೆ ಅಕ್ರಮವಾಗಿ ನುಸುಳಿ ಗಡಿಯಿಂದ ಕೆಲವೇ ಮೀಟರ್ ದೂರದಲ್ಲಿರುವ ರೋಂಗ್ಗೊಂಗ್ರೈ ಗ್ರಾಮಕ್ಕೆ ನುಗ್ಗಿ ಅಂಗಡಿ ಮಾಲೀಕ ಬಾಲ್‌ಸಂಗ್ ಎ ಮಾರಕ್ ಎಂಬವರನ್ನು ಗುರಿಯಾಗಿಸಿ ದಾಳಿ ಮಾಡಿದೆ. ಬಾಲ್‌ಸಂಗ್ ನಿದ್ರಿಸುತ್ತಿದ್ದಾಗ ಅಂಗ ಡಿಗೆ ನುಗ್ಗಿದ ಬಾಂಗ್ಲಾ ತಂಡ ಕೈಕೋಳ ಹಾಕಿ ಗಡಿಯತ್ತ ಎಳೆದೊಯ್ಯಲು ಯತ್ನಿಸಿದೆ. ಕಡೆಗೆ ಬಾಲ್‌ಸಂಗ್ ದುಷ್ಕರ್ಮಿಗಳಿಂದ ತಪ್ಪಿಸಿಕೊಂಡು ಜೀವ ಉಳಿಸಿಕೊಂಡಿದ್ದಾರೆ. ಈ ಘಟನೆ ಈ ಭಾಗದಲ್ಲಿ ಆತಂಕಕ್ಕೆ ಕಾರಣವಾಗಿದೆ. ಗಡಿ ನುಸುಳಿ ಬಂದಿದ್ದ ಬಾಂಗ್ಲಾದೇಶೀಯರ ಗುಂಪು ಚಾಕು, ಬಂದೂಕು ಹೊಂದಿತ್ತು. ಅವರಲ್ಲಿ ನಾಲ್ವರನ್ನು ಗಡಿ ಭದ್ರತಾ ಪಡೆ (ಬಿಎಸ್ ಎಫ್) ಮತ್ತು ಮೇಘಾಲಯ ರಾಜ್ಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ತೈಲ ಸಂಸ್ಕರಣೆ-ರಫ್ತು ವಹಿವಾಟಿಗೂ ಹೊಡೆತ, ಆದಾಯ ಖೋತ | ರಷ್ಯಾ ತೈಲ ಖರೀದಿ ನಿಲ್ಲಿಸಿ, ಇಲ್ಲವೇ ದಂಡ ಸುಂಕ ಕಟ್ಟಿ: ಟ್ರಂಪ್

ಅಮೆರಿಕ ಮಾತು ಕೇಳಿದರೆ ಪೆಟ್ರೋಲ್-ಡೀಸೆಲ್ ತುಟ್ಟಿ

ದೆಹಲಿ: ಭಾರತ-ಅಮೆರಿಕ ಮಧ್ಯೆ ಸುಂಕ ಸಮರ ನಡೆದಿದ್ದು, ಎರಡೂ ದೇಶಗಳ ಸಂಬಂಧದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಇನ್ನೊಂದೆಡೆ, ಕಚ್ಚಾತೈಲ ಖರೀದಿ ವಿಚಾರವಾಗಿಯೂ ಭಾರತ-ರಷ್ಯಾ-ಅಮೆರಿಕ ನಡುವೆ ಹೊಸದಾಗಿ ತಿಕ್ಕಾಟ ಶುರುವಾಗಿದೆ. ರಷ್ಯಾದಿಂದ ಭಾರೀ ಪ್ರಮಾಣದಲ್ಲಿ ಭಾರತ ಕಚ್ಚಾತೈಲ ಖರೀದಿಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟಂಪ್, ತಕ್ಷಣವೇ ರಷ್ಯಾ ತೈಲ ಖರೀದಿ ನಿಲ್ಲಿಸಿ ಎಂದು ಭಾರತದ ಮೇಲೆ ಭಾರೀ ಒತ್ತಡ ಹಾಕಿದ್ದಾರೆ. ಒತ್ತಡಕ್ಕೆ ಮಣಿದರೆ ಭಾರತದಲ್ಲಿ ಇಂಧನ ದರ ತುಟ್ಟಿಯಾಗುತ್ತದೆ.

ಮೊದಲಿಗೆ ಭಾರತದ ಮೇಲೆ ಶೇ.25ರಷ್ಟು ಪ್ರತಿಸುಂಕ ವಿಧಿಸಿದ್ದ ಟ್ರಂಪ್, ಭಾರತ ರಷ್ಯಾದಿಂದ ಕಚ್ಚಾತೈಲ ಖರೀದಿ ಮುಂದುವರಿಸಿರುವುದಕ್ಕೆ ಹೆಚ್ಚುವರಿಯಾಗಿ ಮತ್ತೆ ಶೇ.25ರಷ್ಟು ಪ್ರತಿಸುಂಕ ವಿಧಿಸಿ ಭಾರತದ ಸರಕುಗಳ ಮೇಲಿನ ಸುಂಕ ಪ್ರಮಾಣ ಶೇ.50ಕ್ಕೆ ಏರಿಸಿದ್ದಾರೆ. ಇದರಲ್ಲಿ ಶೇ.25ರಷ್ಟು ಪ್ರತಿಸುಂಕ ಆ.7ರಿಂದ ಜಾರಿಯಾಗಿದ್ದರೆ, ದಂಡ ರೂಪದ ಶೇ.25 ಹೆಚ್ಚುವರಿ ಸುಂಕ ಮಾಸಾಂತ್ಯ ಜಾರಿಗೆ ಬರಲಿದೆ.

ಭಾರತ ಕಚ್ಚಾತೈಲ ಖರೀದಿಯಲ್ಲಿ ವಿಶ್ವದಲ್ಲೇ ಮೂರನೇ ಅತಿದೊಡ್ಡ ಗ್ರಾಹಕ ರಾಷ್ಟ್ರವಾಗಿದೆ. ರಷ್ಯಾ-ಉಕ್ರೇನ್ ಯುದ್ಧ ಆರಂಭಗೊಂಡಾಗ ಯೂರೋಪ್ ದೇಶಗಳು ರಷ್ಯಾ ವಿರುದ್ಧ ನಿರ್ಬಂಧ ವಿಧಿಸಿದ ಬಳಿಕ ರಷ್ಯಾದ ಕಚ್ಚಾತೈಲಕ್ಕೆ ಖರೀದಿದಾರರೇ ಇಲ್ಲದಂತಾಗಿದ್ದರಿಂದ ರಷ್ಯಾ ಬೆಲೆ ತಗ್ಗಿಸಿತು. ಆಗ ರಷ್ಯಾ ಕಚ್ಚಾತೈಲಕ್ಕೆ ಭಾರತದ ಮಾರುಕಟ್ಟೆ ದೊಡ್ಡದಾಗಿ ತೆರೆದುಕೊಂಡಿದೆ. ರಷ್ಯಾ ಕಡಿಮೆ ಬೆಲೆ ಕಚ್ಚಾತೈಲ ಕೊಡಲೊಪ್ಪಿದ್ದರಿಂದ ಭಾರತ ಭಾರೀ ಪ್ರಮಾಣದಲ್ಲಿ ಖರೀದಿಸಲಾರಂಭಿಸಿತು. ಪರಿಣಾಮ ಭಾರತದ ತೈಲ ಸಂಸ್ಕರಣಾ ಕಂಪನಿಗಳಿಗೆ ಭಾರೀ ಲಾಭವಾಯಿತು. ಈ ಅಂಶಗಳೇ ಅಮೆರಿಕದ ಕಣ್ಣು ಕೆಂಪಾಗುವಂತೆ ಮಾಡಿತು. ಅದೇ ಕಾರಣವಾಗಿ ಭಾರತದ ಮೇಲೆ ಟ್ರಂಪ್ ದಂಡ ರೀತಿಯಲ್ಲಿ ಸುಂಕ ವಿಧಿಸಿದ್ದಾರೆ.

ಈಗೇನಾದರೂ ಭಾರತ ಅಮೆರಿಕದ ಒತ್ತಡಕ್ಕೆ ಮಣಿದು ಕಡಿಮೆ ಬೆಲೆ ಕಚ್ಚಾತೈಲ ನೀಡುವ ರಷ್ಯಾದಿಂದ ತೈಲ ಆಮದು ಸ್ಥಗಿತಗೊಳಿಸಿದರೆ ಬಳಿಕ ಹೆಚ್ಚಿನ ಬೆಲೆ ಕೊಟ್ಟು ಇರಾನ್ ಮತ್ತಿತರ ಕೊಲ್ಲಿ ರಾಷ್ಟ್ರಗಳಿಂದ ಕಚ್ಚಾತೈಲ ಖರೀದಿಸಬೇಕಾಗುತ್ತದೆ. ಅದರಿಂದ ದೇಶದ ತೈಲ ಮಾರುಕಟ್ಟೆ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಆಗ ಭಾರತದಲ್ಲಿ ಚಿಲ್ಲರೆ ವಹಿವಾಟಿನಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಭಾರೀ ಏರಿಕೆ ಆಗಿಬಿಡುತ್ತದೆ ಎಂದು ಮಾರುಕಟ್ಟೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಇಂಧನ ಬೆಲೆ ಏರಿಕೆಯಿಂದ ಜನರ ಜೀವನ ವೆಚ್ಚ ಹೆಚ್ಚಾಗಿ ರಾಜಕೀಯ ಒತ್ತಡವೂ ಉಂಟಾಗಬಹುದು. ಇದನ್ನು ಸರಿದೂಗಿಸಲು ಭಾರತವು ದೇಶೀಯ ತೈಲ ಉತ್ಪಾದನೆ ಮತ್ತು ಪರಿಶೋಧನೆಯಲ್ಲಿ ಹೂಡಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಜತೆಗೆ ಮಧ್ಯಪ್ರಾಚ್ಯ, ಗಯಾನಾ ಮತ್ತು ಕೆನಡಾ ಮತ್ತಿತರ ದೇಶಗಳಿಂದ ತೈಲ ಆಮದು ಹೆಚ್ಚಿಸಬೇಕಾಗುತ್ತದೆ ಎಂಬ ವಿಶ್ಲೇಷಣೆಗಳೂ ಹೊರಬಿದ್ದಿವೆ.

ಕಚ್ಚಾತೈಲ ಸಂಸ್ಕರಿಸಿ ವಿದೇಶಕ್ಕೆ ಭಾರತ ರಫ್ತು

ಭಾರತ ಈಗ ಕಚ್ಚಾತೈಲ ಆಮದು ರಾಷ್ಟ್ರವಾಗಿಯಷ್ಟೇ ಉಳಿದಿಲ್ಲ, ಕಚ್ಚಾತೈಲ ಸಂಸ್ಕರಣಾ ಶಕ್ತಿ ಕೇಂದ್ರವಾಗಿ ಬದಲಾಗಿದೆ. ರಷ್ಯಾದಿಂದ ಕಡಿಮೆ ಬೆಲೆ ಸಿಗುವ ಕಚ್ಚಾತೈಲವನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿ ಅದರಲ್ಲೊಂದು ಭಾಗವನ್ನು ಪೆಟ್ರೋಲ್, ಡೀಸೆಲ್ ಮತ್ತು ಜೆಟ್ ಇಂಧನವಾಗಿ ಪರಿವರ್ತಿಸಿ ಏಷ್ಯಾ, ಆಫ್ರಿಕಾ ಮತ್ತು ಯುರೋಪ್ ಖಂಡಗಳ ವಿವಿಧ ದೇಶಗಳಿಗೆ ರಫ್ತು ಮಾಡಲಾರಂಭಿಸಿದೆ. ಅದರಿಂದ ದೇಶದ ಬೊಕ್ಕಸಕ್ಕೆ ಭಾರೀ ಪ್ರಮಾಣದಲ್ಲಿ ವಿದೇಶಿ ವಿನಿಮಯಯೂ ಹರಿದು ಬರುತ್ತಿದೆ, ತೈಲ ಸಂಸ್ಕರಣಾ ಕಂಪನಿಗಳಿಗೆ ಹೇರಳ ಲಾಭವೂ ಸಿಗುತ್ತಿದೆ. 2020ರಲ್ಲಿ ಭಾರತದ ಒಟ್ಟಾರೆ ಕಚ್ಚಾತೈಲ ಆಮದಿನಲ್ಲಿ ಕೇವಲ ಶೇ.1.7ರಷ್ಟಿದ್ದ ರಷ್ಯಾ ತೈಲದ ಪಾಲು, 2022ರಲ್ಲಿ ರಷ್ಯಾ-ಉಕ್ರೇನ್ ಯುದ್ಧಾರಂಭ ಬಳಿಕ ಏರಿಕೆ ಕಾಣಲಾರಂಭಿಸಿತು. 2025ರ ವೇಳೆಗೆ ಶೇ.35.1ಕ್ಕೆ ಜಿಗಿದಿದೆ. ಈ ವರ್ಷದಲ್ಲಿ ಭಾರತ ಈವರೆಗೆ ಒಟ್ಟು 24.50 ಕೋಟಿ ಮೆಟ್ರಿಕ್ ಟನ್ ಕಚ್ಚಾ ತೈಲ ಆಮದು ಮಾಡಿಕೊಂಡಿದ್ದು, ಅದರಲ್ಲಿ ರಷ್ಯಾದಿಂದಲೇ 8.80 ಕೋಟಿ ಮೆಟ್ರಿಕ್ ಟನ್ ಬಂದಿದೆ. ಒಂದೊಮ್ಮೆ ರಷ್ಯಾದಿಂದ ಕಚ್ಚಾತೈಲ ಖರೀದಿ ನಿಲ್ಲಿಸಿದರೆ ತೈಲ ಸಂಸ್ಕರಣೆ-ರಫ್ತು ವಹಿವಾಟಿಗೆ ದೊಡ್ಡ ಪೆಟ್ಟು ಬೀಳುತ್ತದೆ.

ಅಮೆರಿಕದ ಇಬ್ಬಗೆ ನೀತಿ!

ರಷ್ಯಾದಿಂದ ಅಮೆರಿಕವೂ ಯುರೇನಿಯಂ ಮತ್ತು ರಾಸಾಯನಿಕ ಪದಾರ್ಥಗಳನ್ನು ಖರೀದಿಸುತ್ತಿದೆ. ರಷ್ಯಾದಿಂದ ದೊಡ್ಡ ಮಟ್ಟದಲ್ಲಿ ಕಚ್ಚಾತೈಲ ಖರೀದಿಸುವ ಚೀನಾ ಮತ್ತು ಟರ್ಕಿ ದೇಶಗಳ ಮೇಲೆ ಅಮೆರಿಕ ಯಾವುದೇ ಕ್ರಮ ಕೈಗೊಂಡಿಲ್ಲ, ದಂಡ ಸುಂಕವನ್ನೂ ವಿಧಿಸಿಲ್ಲ. ಆದರೆ, ಭಾರತದ ವಿಚಾರದಲ್ಲಿ ಟ್ರಂಪ್ ತಾರತಮ್ಯ ಧೋರಣೆ ಕೈಗೊಂಡಿದ್ದಾರೆ. ಇದೇ ವಿಚಾರವಾಗಿ ಅಮೆರಿಕದ ಆರ್ಥಿಕ ತಜ್ಞರು, ಚಿಂತಕರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಭಾರತ 1998ರಲ್ಲಿ ಪೋಖ್ರಾನ್‌ನಲ್ಲಿ ಪರಮಾಣು ಪರೀಕ್ಷೆಗಳನ್ನು ನಡೆಸಿದಾಗ ಅಮೆರಿಕ ಆರ್ಥಿಕ ನಿರ್ಬಂಧ ವಿಧಿಸಿ ಭಾರತ ಸಂಕಷ್ಟಕ್ಕೀಡುಗುವಂತೆ ಮಾಡಿತ್ತು. ಅಮೆರಿಕ 200ಕ್ಕೂ ಹೆಚ್ಚು ಭಾರತದ ಸಂಸ್ಥೆಗಳ ಮೇಲೆ ನಿರ್ಬಂಧ ವಿಧಿಸಿತ್ತು.

ಭಾರತದಲ್ಲೀಗ ಏಷ್ಯಾ ಸಿಂಹಗಳ ಸಂಖ್ಯೆ 891

ದೆಹಲಿ: ಭಾರತದಲ್ಲಿ ಸದ್ಯ ಏಷ್ಯಾ ಮೂಲದ ಸಿಂಹಗಳ ಸಂತತಿ ನಿರಂತರ ವೃದ್ಧಿಯಾಗುತ್ತಿದೆ. ಪ್ರಸ್ತುತ ದೇಶದಲ್ಲಿ 891 ಏಷ್ಯಾಟಿಕ್ ಸಿಂಹಗಳು ಇವೆ ಎಂದು ಕೇಂದ್ರದ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ.

'ವಿಶ್ವ ಸಿಂಹ ದಿನ'ವಾದ(ಆ.10) ಭಾನುವಾರ ಸುದ್ದಿಗೋಷ್ಠಿ ನಡೆಸಿದ ಸಚಿವ ಭೂಪೇಂದ್ರ ಯಾದವ್ ಅವರು, 2020ನೇ ಸಾಲಿನಲ್ಲಿ ಭಾರತದಲ್ಲಿ 674 ಏಷ್ಯಾ ಮೂಲದ ಸಿಂಹಗಳಿದ್ದವು. ಈಗ ಐದು ವರ್ಷಗಳಲ್ಲಿ ದೇಶದಲ್ಲಿನ 'ಕೇಸರಿ'(ಸಿಂಹ)ಗಳ ಸಂತತಿಯಲ್ಲಿ 217 ಸಿಂಹಗಳ ಸಂಖ್ಯೆ ಹೆಚ್ಚಿದೆ. ಅಂದರೆ, ಐದು ವರ್ಷಗಳಲ್ಲಿ ಸಿಂಹ ಸಂತತಿಯಲ್ಲಿ ಶೇ.32ರಷ್ಟು ವೃದ್ಧಿಯಾಗಿದೆ. ಇದು ಪರಿಸರ ಸಮತೋಲನದಲ್ಲಿನ ಅತ್ಯುತ್ತಮ ಬೆಳವಣಿಗೆ. ಅಲ್ಲದೇ, ಜಾಗತಿಕ ಮಟ್ಟದಲ್ಲಿನ ವನ್ಯಜೀವಿ ಸಂರಕ್ಷಣಾ ಕಾರ್ಯದಲ್ಲಿನ ದೊಡ್ಡ ಯಶಸ್ಸು ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಒಂದು ದಶಕದ ಬೆಳವಣಿಗೆ ಲೆಕ್ಕಹಾಕಿದರೆ ಶೇ.70ರಷ್ಟು ಹೆಚ್ಚಳ ಕಂಡುಬಂದಿದೆ. 2015ರಲ್ಲಿ ದೇಶದಲ್ಲಿ ಕೇವಲ 523 ಸಿಂಹಗಳಿದ್ದವು. 1990ನೇ ಇಸವಿಯಲ್ಲಿ ದೇಶದಲ್ಲಿ ಕೇವಲ 284 ಏಷ್ಯಾಟಿಕ್ ಸಿಂಹಗಳಿದ್ದವು. ಈಗ ಇರುವ 891 ಸಿಂಹಗಳ ಸಂಖ್ಯೆಗೆ ಹೋಲಿಸಿದರೆ, 'ಪ್ಯಾಂಥೆರಾ ಲಿಯೊ ಪರ್ಸಿಕಾ'(ಏಷ್ಯಾಟಿಕ್ ಲಯನ್ಸ್) ಸಂಖ್ಯೆಯು 3.14 ಪಟ್ಟು ಅಧಿಕವಾಗಿದೆ ಎಂದು ಸಚಿವರು ಅಂಕಿ ಅಂಶ ನೀಡಿದರು.ಸಿಂಹಗಳ ಸಂತತಿಯನ್ನು ಇನ್ನಷ್ಟು ಹೆಚ್ಚಿಸುವ ಸಲುವಾಗಿ 180 ಕೋಟಿ ರು. ವೆಚ್ಚದಲ್ಲಿ 'ಬಾರ್ದಾ ವೈಲ್ಡ್‌ಲೈಫ್ ಸ್ಯಾಂಕ್ಚುವರಿ' ಯೋಜನೆ ಹಮ್ಮಿಕೊಳ್ಳಲಾಗಿದೆ. ಆ ಮೂಲಕ ಸಿಂಹಗಳ ಸಂತತಿ ವೃದ್ಧಿಗೆ ಅನುಕೂಲಕರವಾದ ಪ್ರದೇಶ- ಪರಿಸರ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ವಿವರಿಸಿದರು.



ಯಾವುದೇ ದೇಶ ಅರಣ್ಯ ಮತ್ತು ವನ್ಯಪ್ರಾಣಿಗಳಿಂದ ಸಮೃದ್ಧವಾಗಿದ್ದರೆ ಅದುವೇ ಪರಿಸರ ಸಮತೋಲನ ಮತ್ತು ಸರಿಯಾದ ಪ್ರಗತಿಯ ಹಾದಿಯ ಚಿತ್ರಣವಾಗಿರುತ್ತದೆ. ಪರಿಸರ ಸಮತೋಲನದಲ್ಲಿ ಸಿಂಹಗಳ ಪಾತ್ರವೂ ಬಹಳ ಪ್ರಮುಖ. ಹಾಗಾಗಿ, 'ಸಿಂಹಗಳು ಇದ್ದರೇ ನಾವು, ನಮ್ಮಿಂದಲೇ ಸಿಂಹಗಳ ಸಂತತಿ ವೃದ್ಧಿ' ಎಂಬುದೇ ನಮ್ಮ ಮಂತ್ರವಾಗಬೇಕು.

-ನರೇಂದ್ರ ಮೋದಿ ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ವನ್ಯಜೀವಿಗಳ ಸಂರಕ್ಷಣೆ ವಿಚಾರದಲ್ಲಿ ಬಹಳ ಆದ್ಯತೆ ನೀಡಿ ವಿಭಿನ್ನ ಯೋಜನೆಗಳನ್ನು ವಿನ್ಯಾಸಗೊಳಿಸಿದೆ. ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗಲೇ 'ಪ್ರಾಜೆಕ್ಟ್ ಲಯನ್' ಆರಂಭಿಸಿದರು. ಅದೇ ಕಾರಣವಾಗಿ ದೇಶದಲ್ಲಿ ಕಳೆದೊಂದು ದಶಕದಲ್ಲಿ ಸಿಂಹಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗಿದೆ. ವಿಶ್ವದಲ್ಲೇ ಅತ್ಯಧಿಕ ಏಷ್ಯಾಟಿಕ್ ಸಿಂಹಗಳು ಇರುವ ಪ್ರದೇಶವೆಂದರೆ ಅದು ಭಾರತದ ಗುಜರಾತ್ ರಾಜ್ಯದ ಸೌರಾಷ್ಟ್ರ ವಲಯದ 'ಗಿರ್' ಅರಣ್ಯವಾಗಿದೆ. ಇದು ಇಡೀ ಭಾರತ ದೇಶಕ್ಕೆ ಬಹಳ ಹೆಮ್ಮೆಯ ಸಂಗತಿಯಾಗಿದೆ.

-ಭೂಪೇಂದರ್ ಯಾದವ್ ಕೇಂದ್ರ ಪರಿಸರ ಸಚಿವ

ನಿತ್ಯ ಕಾಯಕ ದಾಸೋಹಿ ನುಲಿಯ ಚಂದಯ್ಯ

ಬಳ್ಳಾರಿಯಲ್ಲಿ ನಡೆದ ಕಾಯಕಯೋಗಿ ನುಲಿಯ ಚಂದಯ್ಯ ಜಯಂತಿಗೆ ಲಿಡ್ಕರ್ ಅಧ್ಯಕ್ಷ ನಾಗರಾಜ್ ಚಾಲನೆ

ಬಳ್ಳಾರಿ: 12ನೇ ಶತಮಾನದ ಅನುಭವ ಮಂಟಪದಲ್ಲಿ ವಚನಕಾರರಾಗಿದ್ದ ನುಲಿಯ ಚಂದಯ್ಯ ಅವರು ಕಾಯಕ ದಾಸೋಹಿಗಳಾಗಿದ್ದರು ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್ ಹೇಳಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಿದ್ದ ಕಾಯಕ ಯೋಗಿ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದ ವಚನಕಾರರ ಕಾಲದ ಕಾಯಕಜೀವಿಗಳು ಯಾವ ಸಮುದಾಯವೂ ನಮ್ಮವರೆಂದು ಗುರುತಿಸಿಕೊಳ್ಳಲಾಗದ ರೀತಿಯಲ್ಲಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದವರಲ್ಲಿ ನುಲಿಯ ಚಂದಯ್ಯ ಒಬ್ಬರು ಎಂದು ಹೇಳಿದರು.

ಸಮಾಜ ಹಾಗೂ ಜನ ಸಾಮಾನ್ಯರ ಏಳ್ಗೆಗಾಗಿ ಪರಿತಪಿಸಿದ ವಿವಿಧ ಮಹನೀಯರ ವಿಚಾರಧಾರೆಗಳನ್ನು ನಾವೆಲ್ಲರು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಜೀವನ ನಡೆಸಬೇಕು. ಎಲ್ಲರೂ ಸಂಘಟಿತರಾಗಿ ದುಶ್ಚಟಗಳಿಂದ ದೂರವಿದ್ದು, ಸರಕಾರದ ಯೋಜನೆಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಕಲ್ಯಾಣದಲ್ಲಿ 1160ರ ವೇಳೆಯಲ್ಲಿ ನಡೆಯುತ್ತಿದ್ದ ಅನುಭವ ಗೋಷ್ಠಿಗಳಲ್ಲಿ ಇವರು ಚಂದೇಶ್ವರ ಲಿಂಗ ಎಂಬ ಅಂಕಿತನಾಮದಲ್ಲಿ ಸುಮಾರು 48 ವಚನ ರಚಿಸಿದ್ದಾರೆ ಎಂದರು. ಮೆರವಣಿಗೆಯು ನಗರದ ಕೊರವ ಸಮುದಾಯ ಭವನ ಆವರಣದಿಂದ ಆರಂಭವಾಗಿ ಕೊರವ ಬೀದಿ-ಸುಂಕ್ಲಮ್ಮ ದೇವಸ್ಥಾನ-ಕೌಲ್ ಬಜಾರ್ ಮುಖ್ಯರಸ್ತೆ-ವಾಲ್ಮೀಕಿ ಭವನ-ಡಾ.ಬಾಬು ಜಗಜೀವನರಾಂ ಭವನದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಕೊರವ ಸಮಾಜದ ಜಿಲ್ಲಾಧ್ಯಕ್ಷ ಶ್ರೀರಾಮುಲು, ಗೌರವಾಧ್ಯಕ್ಷ ಶಂಕರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್ ಸೇರಿದಂತೆ ಸಮುದಾಯದ ಮುಖಂಡರು, ಮಹಿಳೆಯರು ಹಾಗೂ ಇತರರು ಉಪಸ್ಥಿತರಿದ್ದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಿದ್ದ ಕಾಯಕಯೋಗಿ ನುಲಿಯ ಚಂದಯ್ಯ ಜಯಂತಿಯನ್ನು ಉದ್ಘಾಟಿಸಿದರು.

> **ನುಲಿಯ ಚಂದಯ್ಯನವರು ಸುಮಾರು ಕ್ರಿ.ಶ.1,130 ರಲ್ಲಿ ವಿಜಯಪುರ ಜಿಲ್ಲೆಯ ಶಿವಣಗೆ ಗ್ರಾಮದಲ್ಲಿ ಜನಿಸಿದರು. ನಂತರ ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣಕ್ಕೆ ಬಂದರು. ಕಲ್ಯಾಣದ ಕೆರೆಗಳಲ್ಲಿ ಸಿಗುವ ಹೊಡಕೆ, ಚೇಣಿ ಮುಂತಾದ ನಾರುಗಳಿಂದ ಹಗ್ಗ ಹೊಸೆದು ಮಾರಾಟ ಮಾಡಿ ಬಂದ ಹಣದಿಂದ ಜಂಗಮ ದಾಸೋಹ ನಡೆಸುತ್ತಿದ್ದರು. ಈ ರೀತಿ ನುಲಿಯ ಕಾಯಕದಿಂದಾಗಿ ಮುಂದೆ ನುಲಿಯ ಚಂದಯ್ಯನೆಂದು ಹೆಸರಾದರು.**
>
> -ಡಾ.ಗಂಗಾಧರ.ಎಲ್, ಅಕ್ಕಮಹಾದೇವಿ ಮಹಿಳಾ ವಿವಿ ಉಪನ್ಯಾಸಕ

> **ನುಲಿಯ ಚಂದಯ್ಯ ಅವರು ಶ್ರೇಷ್ಠ ಕಾಯಕ ಯೋಗಿಯಾಗಿದ್ದರು, ತಮ್ಮ ವೃತ್ತಿಯ ಬಗ್ಗೆ ಅಪಾರ ಗೌರವ ಹೊಂದಿದ್ದವರು. ವೃತ್ತಿಯಿಂದ ಬಂದಂತಹ ಆದಾಯದಲ್ಲಿ ತಮ್ಮ ಜೀವನಕ್ಕೆ ಅಲ್ಪ ವ್ಯಯಮಾಡಿಕೊಂಡು ಉಳಿದ ಹಣದಲ್ಲಿ ಜಂಗಮರ ದಾಸೋಹಕ್ಕಾಗಿ ಮೀಸಲಿಟ್ಟಿದ್ದು, ಅವರ ನಿಸ್ವಾರ್ಥ ಸೇವೆಗೆ ಸಾಕ್ಷಿಯಾಗಿದೆ.**
>
> - ಕೆ.ಇ. ಚಿದಾನಂದಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ಅಂಕಲಿ ಶ್ರೀಗಳಿಂದ ಹಂಪಿಯಲ್ಲಿ ಪೂಜೆ

ಮುದಗಲ್: ಪಟ್ಟಣ ಸಮೀಪದ ಸುಕ್ಷೇತ್ರ ಅಂಕಲಿ ಮಠದ ಶ್ರೀಗಳಿಂದ ಇತಿಹಾಸಿಕ ಹಂಪಿಯಲ್ಲಿ ಕುಟುಂಬ ಪರಿವಾರ ಸಮೇತ ತೆರಳಿ ಪೂಜೆ ಸಲ್ಲಿಸಿದರು. ಪ್ರತಿ ವರ್ಷದಂತೆ ಈ ವರ್ಷ ಕೂಡ ದಾಸೋಹ ರತ್ನ ಪರಮ ಪೂಜ್ಯ ಶ್ರೀ ವೀರಭದ್ರ ಮಹಾಸ್ವಾಮಿಗಳ ರವರ ನೇತೃತ್ವದಲ್ಲಿ ತುಂಗಭದ್ರ ನದಿಗೆ ಬಾಗಿನ ಅರ್ಪಿಸಿ ನಂತರ ಮನೆದೇವರಾದ ಶ್ರೀ ವಿರುಪಾಕ್ಷೇಶ್ವರರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಕುಟುಂಬ ಪರಿವಾರ ಸಮೇತ ದರ್ಶನ ಪಡೆದುಕೊಂಡರು. ಈ ಸಂದರ್ಭದಲ್ಲಿ ಅಂಕಲಿಮಠ ಶ್ರೀಗಳಾದ ಶ್ರೀ ಫಕೀರೇಶ್ವರ ಮಹಾಸ್ವಾಮಿಗಳು, ಶ್ರೀ ಬಸವರಾಜ ಮಹಾಸ್ವಾಮಿಗಳು ಸೇರಿದಂತೆ ಸಾವಿರಾರು ಭಕ್ತರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರೀರಾಘವೇಂದ್ರ ಸ್ವಾಮಿ ಪೂರ್ವಾರಾಧನೆ

ಹೊಸಪೇಟೆ: ನಗರ ಸೇರಿದಂತೆ ತಾಲೂಕಿನಾದ್ಯಂತ ವಿವಿಧ ಭಾಗಗಳಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆ ನಡೆಯಿತು.

ಕಮಲಾಪುರ ಪಟ್ಟಣದ ರಾಯರ ಮಠದಲ್ಲಿ ರಾಯರ ಪೂರ್ವಾರಾಧನೆ ಪ್ರ ಯುಕ್ತ ವಿಶೇಷ ಫಲ ಪಂಚಾಮೃತಾಭಿಷೇಕ, ಸರ್ವ ಸೇವಾ, ಕನಕಾಭಿಷೇಕ, ಹಸ್ತೋದಕ, ನೈವೇದ್ಯ, ಮಹಾ ಮಂಗಳಾರತಿ ನಡೆಯಿತು. ನಂತರ ಬಂದ ಭಕ್ತರಿಗೆ ಪ್ರಸಾದ ವಿತರಣೆ ನಡೆಯಿತು. ವ್ಯವಸ್ಥಾಪಕ ಟೀಕಾಚಾರ್ಯ ಗುಂಜಳ್ಳಿ, ಪ್ರಮುಖರಾದ ಶೀರೆಕೊಳ್ಳ ಗುರು ರಾಜ್, ಹರಿಗೌಡ, ಗೋಪಾಲ್, ಪ್ರವೀಣ್, ರಘುನಾಥ, ವಿಜಯೇಂದ್ರ, ಸಂತೋಷ್, ಶ್ರೀನಿಧಿ ಇತರರಿದ್ದರು.

ಕೊಪ್ಪಳದಲ್ಲಿ ರಾಯರ ಪೂರ್ವಾರಾಧನೆ

ಕೊಪ್ಪಳ: ನಗರದ ರಾಘವೇಂದ್ರಸ್ವಾಮಿ ಮಠದಲ್ಲಿ ರಾಯರ 354ನೇ ಆರಾಧನಾ ಮಹೋತ್ಸವ ಹಿನ್ನೆಲೆ ಭಾನುವಾರ ಪೂರ್ವಾರಾಧನೆಯ ಸಂಭ್ರಮ ಮನೆ ಮಾಡಿತ್ತು. ಆರಾಧನೆ ಹಿನ್ನೆಲೆ ರಾಯರ ಮಠದ ಒಳಗೆ,

ಹೊರಗೆ ಮತ್ತು ಸಮೀಪದ ಮುಖ್ಯರಸ್ತೆಯಲ್ಲಿ ವಿವಿಧ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದೆ. ಸುತ್ತಲಿನ ವಾತಾವರಣ ದೀಪಗಳಿಂದ ಕಂಗೊಳಿಸುತ್ತಿ ರುವುದು ಜನರ ಗಮನ ಸೆಳೆಯುತ್ತಿದೆ. ಆರಾಧನೆಯ ಮೊದಲ ದಿನ ಬೆಳಗಿನ ಜಾವದಿಂದಲೇ ಕಾರ್ಯಕ್ರ ಮಗಳು ನಡೆದವು. ಸುಪ್ರಭಾತ, ಅಷ್ಟೋತ್ತರ, ಪಂಚಾಮೃತ ಅಭಿಷೇಕ, ನೈವೇದ್ಯ, ಹಸ್ತೋದಕ, ಅಲಂಕಾರ, ತೀರ್ಥಪ್ರಸಾದ ಜರುಗಿದವು. ಮಧ್ಯಾಹ್ನ ಮಠಕ್ಕೆ ಬಂದಿದ್ದ ಸಾವಿರಾರು ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಮಠದ ಆವರಣದಲ್ಲಿ ಸಂಜೆ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಕೊಪ್ಪಳದ ಅನನ್ಯಾ ದೇಸಾಯಿ ಅವರಿಂದ ಭಕ್ತಿ ಗೀತೆಗಳ ಕಾರ್ಯಕ್ರಮ ಮತ್ತು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿತ್ತು. ಮಠದ ಪ್ರಧಾನ ಅರ್ಚಕ ರಘು ಪ್ರೇಮಾಚಾರ್ಯ ಮುಳಗುಂದ ಅವರು ಪ್ರವಚನ ಹೇಳಿದರು. ರಾತ್ರಿ ರಥೋ ತ್ಸವ, ಸ್ವಸ್ತಿವಾಚನ, ತೊಟ್ಟಿಲು ಪೂಜೆ, ಫಲ ಮಂತ್ರಾ ಕ್ಷತೆಯನ್ನು ಭಕ್ತರಿಗೆ ನೀಡಲಾಯಿತು. ಸೋಮವಾರ ಮಧ್ಯಾರಾಧನೆ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ಬಾಲ್ಯವಿವಾಹ ನಿಷೇಧ, ಆರೋಗ್ಯ ಜಾಗೃತಿ

ಕೊಪ್ಪಳ: ಕಾರಟಗಿ: ಪಟ್ಟಣದ ಸಿಎಂಎನ್ ಪದವಿ ಪೂರ್ವ ಕಾಲೇಜು ಕಸಭಾ ಭವನದಲ್ಲಿ ಬಾಲ್ಯವಿವಾಹ ತಡೆಯುವದು ಮತ್ತು ಹದಿ-ಹರೆಯದವರ ಆರೋಗ್ಯ ರಕ್ಷಿಸುವ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮ ನಡೆಯಿತು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ ಮಾತನಾಡಿ, ಬಾಲ್ಯವಿವಾಹ ಸಮಾಜದ ಎದುರಿರುವ ಮಹತ್ವದ ಸವಾಲುಗಳಲ್ಲೊಂದಾಗಿದೆ ಎಂದು ಅಭಿಪ್ರಾಯಪಟ್ಟರು. ಬಾಲ್ಯ ವಿವಾಹ ಎಂದರೆ ಯಾವುದೇ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಅಥವಾ 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆ ಮಾಡುವುದಕ್ಕೆ ಬಾಲ್ಯ ವಿವಾಹ ಎಂದು ಕರೆಯುತ್ತಾರೆ. ಬಾಲ್ಯ ವಿವಾಹ ನಿಯಂತ್ರಣ ಸಂಖ್ಯೆಗೆ 1098 ಕರೆ ಮಾಡುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಸಾವಿತ್ರಿ, ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳಾದ ಕ್ಷಯರೋಗ ನಿರ್ಮೂಲನೆ, ಕುಷ್ಟರೋಗ ನಿರ್ಮೂಲನೆ, ಡೆಂಘೀ, ಚಿಕನ್‌ಗುನ್ಯಾ, ಮಲೇರಿಯಾ, ಮೆದುಳು ಜ್ವರ, ಸ್ನೇಹ ಕ್ಲಿನಿಕ್ ಸೇವೆಗಳ ಕುರಿತು ಮಾಹಿತಿ ನೀಡಿದರು. ಕಾಲೇಜು ಪ್ರಾಂಶುಪಾಲ ರಮೇಶ ನಾಯಕ ಅಧ್ಯಕ್ಷತೆ ವಹಿಸಿದ್ದರು.

{ಬಸನಗೌಡ ಪಾಟೀಲ ಯತ್ನಾಳ} ಶಾಸಕ

ರಾಜ್ಯದಲ್ಲಿ ಮುಸ್ಲಿಂ ವ್ಯಕ್ತಿ ಕೊಲೆಯಾಗಿದ್ದರೆ ರಾಜ್ಯ ಸರಕಾರ ಯಾವ ಮಾನದಂಡ ಆಧರಿಸಿ ಪರಿಹಾರ ಹಾಗೂ ನೌಕರಿ ಕೊಡುತ್ತಿತ್ತು, ಅದೇ ರೀತಿ ಹಿಂದೂ ವ್ಯಕ್ತಿ ಕೂಡ ಹತ್ಯೆಯಾದಾಗ ಪರಿಹಾರ ನೀಡಬೇಕು.

ತುರ್ವಿಹಾಳ ಸಹೋದರರಿಂದ ಅಕ್ರಮ ಚಟುವಟಿಕೆ ಆರೋಪ

ಮಸ್ಕಿಯ ಪತ್ರಿಕಾ ಭವನದಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಪತ್ರಕರ್ತರ ಜತೆ ಮಾತನಾಡಿದರು.

ಮಸ್ಕಿ: ಶಾಸಕ ಬಸನ ಗೌಡ ತುರ್ವಿಹಾಳ ಅವರ ಸಹೋದರರು ಕ್ಷೇತ್ರದಲ್ಲಿ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಮಾಜಿ ಶಾಸಕ ಪ್ರತಾಪ ಗೌಡ ಪಾಟೀಲ್ ಆರೋಪಿಸಿದರು. ಇಲ್ಲಿಯ ಪತ್ರಿಕಾ ಭವನದಲ್ಲಿ ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ಶಾಸಕರ ಸಹೋದರರ ಕುಮ್ಮಕ್ಕಿನಿಂದ ಕ್ಷೇತ್ರದಲ್ಲಿ ಇಸ್ಪೇಟ್, ಮಟಕಾ, ಮರಳು ಅಕ್ರಮ ಸಾಗಣಿಕೆ ಎಗ್ಗಿಲ್ಲದ ನಡೆದಿವೆ ಎಂದು ಆರೋಪಿಸಿದರು. ತುಂಗಭದ್ರಾ ಎಡ ದಂಡೆ ಕಾಲುವೆ ಮೂಲಕ ಕೆರೆಯಲ್ಲಿ ನೀರು ಸಂಗ್ರಹಿಸಿ ಸುಮಾರು 500 ಎಕರೆ ಅಚ್ಚುಕಟ್ಟು ಪ್ರದೇಶದ ರೈತರಿಗೆ ಶಾಸಕರು ನೀರು ಮಾರಾಟ ಮಾಡಿ ರೈತರಿಂದ ಎಕರೆಗೆ ಇಂತಿಷ್ಟು ಭತ್ತದ ಮೂಟೆಗಳನ್ನು ಪಡೆಯುತ್ತಿದ್ದಾರೆ ಎಂದು ಮಾಜಿ ಶಾಸಕ ಪ್ರತಾಪ ಗೌಡ ಪಾಟೀಲ್ ಗಂಭೀರ ಆರೋಪ ಮಾಡಿದರು. ನಾನು ಶಾಸಕನಾಗಿದ್ದ ಅವಧಿಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳು ಕ್ಷೇತ್ರದಲ್ಲಿ ನಡೆದಿವೆ. ಕ್ಷೇತ್ರಕ್ಕೆ ಶಾಸಕರ ಕೊಡುಗೆ ಶೂನ್ಯ ಎಂದರು. ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು ಅನುಷ್ಠಾನ ಗೊಳ್ಳುತ್ತಿಲ್ಲ ನಂದವಾಡಗಿ ಏತ ನೀರಾವರಿ, 5ಎ ನೀರಾವರಿ ಕಾಲುವೆ, ಕ್ಷೇತ್ರದ 22 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಇನ್ನು ನಡೆದಿಲ್ಲ. ಅಭಿವೃದ್ಧಿ ಬಗ್ಗೆ ಚರ್ಚೆ ನಡೆಸಲು ಶಾಸಕರ ಬಳಿ ತಾಕತ್ತು ಇದ್ದರೆ ಬಹಿರಂಗ ಚರ್ಚೆಗೆ ಬರಲು ನಾನು ಸಿದ್ದನಿದ್ದೆನೆ ಎಂದು ಮಾಜಿ ಶಾಸಕ ಪ್ರತಾಪ ಗೌಡ ಪಾಟೀಲ್ ಶಾಸಕ ಬಸನ ಗೌಡ ತುರ್ವಿ ಹಾಳ ಅವರಿಗೆ ಬಹಿರಂಗ ಸವಾಲು ಹಾಕಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಮಂಡಲ ಅಧ್ಯಕ್ಷ ಶರಣಯ್ಯ ಸೊಪ್ಪಿಮಠ, ಮೌನೇಶ ನಾಯಕ, ಶರಣೇ ಗೌಡ ತಿಡಿಗೋಳ ಇದ್ದರು.

ಬಳ್ಳಾರಿಯಲ್ಲಿಯೇ ಮೆಗಾಡೇರಿ ನಿರ್ಮಾಣ: ಹಿಟ್ನಾಳ್

ಬಳ್ಳಾರಿ: ಬಳ್ಳಾರಿ ಜಿಲ್ಲೆಯಲ್ಲಿಯೇ ಮೆಗಾಡೇರಿ ನಿರ್ಮಿಸಲಾಗುವುದು ಎಂದು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ನೂತನ ಅಧ್ಯಕ್ಷ ಹಾಗೂ ಶಾಸಕ ರಾಘವೇಂದ್ರ ಹಿಟ್ನಾಳ್ ಹೇಳಿದರು.

ನಗರದ ಕೆಎಂಎಫ್‌ನ ಡೈರಿ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮೆಗಾಡೇರಿ ನಿರ್ಮಾಣಕ್ಕೆ ಬಳ್ಳಾರಿ ತಾಲೂಕಿನ ಕೊಳಗಲ್ಲು ಗ್ರಾಮದ ಬಳಿಯ 15 ಎಕರೆ ಪ್ರದೇಶವನ್ನು ಈಗಾಗಲೇ ಗುರುತಿಸಲಾಗಿದ್ದು, ಈಗಾಗಲೇ ಜಿಲ್ಲಾಡಳಿತಕ್ಕೆ ನೀಡಬೇಕಿರುವ 2.92 ಕೋಟಿ ರು. ಹಣ ನೀಡುವ ಬಗ್ಗೆ ನಿರ್ದೇಶಕ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದೆ. ದೇಶದಲ್ಲಿಯೇ ಮಾದರಿ ಮೆಗಾಡೇರಿಯನ್ನಾಗಿ ಬಳ್ಳಾರಿಯಲ್ಲಿ ಸ್ಥಾಪಿಸಲಾಗುವುದು ಎಂದರು.

ರಾಬಕೊವಿ ವ್ಯಾಪ್ತಿಯಲ್ಲಿ ಹಾಲು ಉತ್ಪಾದನೆಗೆ ಹೆಚ್ಚಿನ ಸಹಕಾರ ನೀಡಲಾಗುವುದು. ಈಗಾಗಲೇ ಕೆಎಂಎಫ್ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಪಶು ವೈದ್ಯಾಧಿಕಾರಿಗಳನ್ನು ನೇಮಿಸಿ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ ಎಂದರು.

ಪ್ರಸ್ತುತ ರಾಬಕೊವಿ ಜಿಲ್ಲಾ ಹಾಲು ಒಕ್ಕೂಟವು 2.43 ಲಕ್ಷ ಲೀ. ಹಾಲು ಉತ್ಪಾದನೆ ಇದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯು 10 ಸಾವಿರ ಲೀ., ವಿಜಯನಗರ ಜಿಲ್ಲೆಯು 1.12 ಲಕ್ಷ ಲೀ., ಕೊಪ್ಪಳ ಜಿಲ್ಲೆಯು 70 ಸಾವಿರ ಲೀ ಮತ್ತು ರಾಯಚೂರು ಜಿಲ್ಲೆಯು 26 ಸಾವಿರ ಲೀ. ಉತ್ಪಾದನೆ ಇದೆ ಎಂದು ತಿಳಿಸಿದ ಅವರು, ನಾಲ್ಕು ಜಿಲ್ಲೆಗಳಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು ಹಲವಾರು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ ಎಂದರು. ರಾಬಕೊವಿ ಜಿಲ್ಲಾ ಹಾಲು ಒಕ್ಕೂಟಗಳ ಡೇರಿಗಳ ನಿರ್ವಹಣೆಗೆ ಅನುದಾನ ಮೀಸಲಿರಿಸಲಾಗಿದೆ. ಬಳ್ಳಾರಿ ಡೇರಿಗೆ 1 ಕೋಟಿ ರು., ಕೊಪ್ಪಳದ ಬೂದುಗುಂಪಾ ಡೇರಿಗೆ ಸುಮಾರು 4 ರಿಂದ 5 ಕೋಟಿ ರು. ಹಾಗೂ ರಾಯಚೂರಿಗೆ ಡೇರಿಗೆ ಕೆಕೆಆರ್‌ಡಿಬಿಯ ಮ್ಯಾಕ್ರೋ ಯೋಜನೆಯಡಿ ರು.10 ಕೋಟಿ ಮನವಿ ಸಲ್ಲಿಸಲಾಗಿದೆ ಎಂದರು.

ರಾಬಕೊವಿ ಒಕ್ಕೂಟದ ಕಚೇರಿಯಲ್ಲಿ ಮೊದಲ ಬಾರಿಗೆ ಆಡಳಿತ ಮಂಡಳಿಯ ನಿರ್ದೇಶಕರ ಸಭೆ ನಡೆಸಲಾಗಿದೆ. ರೈತರಿಗೆ ಅನುಕೂಲವಾಗುವಂತಹ ಹಲವಾರು ಅಭಿವೃದ್ಧಿದಾಯಕ ವಿಷಯಗಳನ್ನು ಚರ್ಚಿಸಲಾಗಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಸೇರಿದಂತೆ ಇತರರೊಡನೆ ಕೊಳಗಲ್ಲು ಗ್ರಾಮದಲ್ಲಿ ಮೇಗಾಡೇರಿ ಸ್ಥಾಪಿಸಲು ಗುರುತಿಸಿದ ಸ್ಥಳವನ್ನು ಪರಿಶೀಲನೆ ಮಾಡಿದರು.

ಈ ಸಂದರ್ಭದಲ್ಲಿ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಉಪಾಧ್ಯಕ್ಷ ಕಾರಟಗಿಯ ಎನ್.ಸತ್ಯನಾರಾಯಣ, ವ್ಯವಸ್ಥಾಪಕ ನಿರ್ದೇಶಕ ಬಿ.ಆರ್.ಪ್ರಭುಶಂಕರ್ ಹಾಗೂ ಇತರರಿದ್ದರು.

ನಗರದ ಕೆಎಂಎಫ್‌ನ ಡೈರಿ ಆಡಳಿತ ಮಂಡಳಿಯ ಸಭಾಂಗಣದಲ್ಲಿ ರಾಘವೇಂದ್ರ ಹಿಟ್ನಾಳ್ ಮಾತನಾಡಿದರು.

> **2.43ಲಕ್ಷ ಲೀ ನಿಂದ 5 ಲಕ್ಷ ಲೀ ಗೆ ಹಾಲು ಉತ್ಪದಾನೆ.**
>
> **ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ 860 ಸೊಸೈಟಿಗಳಿವೆ. ಇದರಲ್ಲಿ ಹಲವು ಸೊಸೈಟಿಗಳು ಕಾರ್ಯನಿರ್ವಹಿಸುತ್ತಿಲ್ಲ. ಮುಂಬರುವ ದಿನಗಳಲ್ಲಿ ಪ್ರತಿ ತಾಲೂಕಿನಲ್ಲಿ ಮೂರು ಸೊಸೈಟಿಗಳನ್ನು ಸ್ಥಾಪಿಸಲಾಗುವುದು. ಒಟ್ಟಾರೆಯಾಗಿ ಹಾಲಿನ ಉತ್ಪಾದನೆಯನ್ನು 2.43 ಲಕ್ಷ ಲೀಟರ್ ನಿಂದ 5 ಲಕ್ಷ ಲೀಟರ್ ಗೆ ಹೆಚ್ಚಿಸುವ ಗುರಿಯನ್ನು ಒಂದಲಾಗಿದೆ ಎಂದರು.**

ಮೃತ ಗವಿ ಮನೆಗೆ ಯತ್ನಾಳ, ಈಶ್ವರಪ್ಪ ಭೇಟಿ

ಮುಸ್ಲಿಂ ಯುವತಿ ಪ್ರೀತಿಸಿದ್ದಕ್ಕೆ ಕೊಲೆ | ಇಂದು ಕೊಪ್ಪಳದಲ್ಲಿ ಪ್ರತಿಭಟನೆ

ಕೊಪ್ಪಳ: ಮುಸ್ಲಿಂ ಯುವತಿ ಪ್ರೀತಿಸಿದ್ದಕ್ಕೆ ಕೊಲೆಯಾಗಿರುವ ಮೃತ ಗವಿಸಿದ್ದಪ್ಪ ನಾಯಕ ಮನೆಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹಾಗೂ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಭಾನುವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಒಂದೇ ಕಾರಿನಲ್ಲಿ ಬಂದ ಈಶ್ವರಪ್ಪ ಹಾಗೂ ಬಸನಗೌಡ ಪಾಟೀಲ್ ಯತ್ನಾಳ, ಕೊಪ್ಪಳದ ಕುರುಬರ ಓಣಿಯಲ್ಲಿನ ಗವಿಸಿದ್ದಪ್ಪ ಮನೆಗೆ ಭೇಟಿ ನೀಡಿದರು. ಈ ವೇಳೆ ಕುಟುಂಬಸ್ಥರು, ಮೃತ ಗವಿಸಿದ್ದಪ್ಪ ಬಸನಗೌಡ ಪಾಟೀಲ್ ಜೊತೆಗೆ ತೆಗೆಸಿಕೊಂಡಿದ್ದ ಫೋಟೋ ಹಿಡಿದುಕೊಂಡು ಅಳಲು ತೋಡಿಕೊಂಡರು. ಮೃತ ಗವಿಸಿದ್ದಪ್ಪ ತಂದೆ-ತಾಯಿ. ತಮ್ಮ ಮಗ ಯತ್ನಾಳ ಜೊತೆ ಇದ್ದ ಫೋಟೋ ತೋರಿಸಿ ನ್ಯಾಯಕ್ಕಾಗಿ ಆಗ್ರಹಿಸಿದರು.

ಮಸೀದಿ ಮುಂದೆ ಕೊಲೆ ಮಾಡಿದ್ದಾರೆ. ನನ್ನ ಮಗನ ಹೆಣ ಇದ್ದರೂ ಅಲ್ಲೇ ನಮಾಜ್ ಮಾಡಿದ್ದಾರೆ. ಹಿಂದೂ ಯುವಕ ಮುಸ್ಲಿಂ ಯುವತಿ ಪ್ರೀತಿಸಿದ್ದಾನೆ ಎಂಬ ಕಾರಣಕ್ಕೆ ಕೊಲೆ ಮಾಡಿದ್ದಾರೆ. ನಮಗೆ ಹಣ ಬೇಡ. ಕಲೆ ಮಾಡಿದವರಿಗೆ ಶಿಕ್ಷೆ ಆಗಬೇಕೆಂದು ಎಂದು ಗವಿಸಿದ್ದಪ್ಪ ತಂದೆ-ತಾಯಿ ಯತ್ನಾಳ್ ಮುಂದೆ ಕೈ ಮುಗಿದು ಬೇಡಿಕೊಂಡರು.

ವಿವಿಧ ನಾಯಕರ ಭೇಟಿ: ಗವಿಸಿದ್ದಪ್ಪ ನಾಯಕ ಅವರ ಮನೆಗೆ ಭಾನುವಾರ ಅನೇಕ ನಾಯಕರು ಹಾಗೂ ವಿವಿಧ ಸಮುದಾಯಗಳ ಮುಖಂಡರು ಭೇಟಿ ನೀಡಿ ಸಾಂತ್ವನ ಹೇಳಿದರು.

ನಗರ ಪ್ರಾಧಿಕಾರದ ಸದಸ್ಯರಾದ ಮಾರ್ಕಂಡಪ್ಪ ಕಲ್ಲನ್ನವರ, ಅಜ್ಜಪ್ಪಸ್ವಾಮಿ ಚನ್ನವಡೆಯರಮಠ, ಖತೀಬ್ ಬಾಷು ಸಾಬ, ಕಾಂಗ್ರೆಸ್ ಮುಖಂಡ ಶರಣಪ್ಪ ಚಂದನಕಟ್ಟಿ, ನಗರಸಭೆ ಸದಸ್ಯರಾದ ಅರುಣ ಅಪ್ಪುಶೆಟ್ಟಿ, ಚನ್ನಪ್ಪ ಕೊಟ್ಯಾಳ, ಓಂ ಪ್ರಕಾಶ, ನಾಗರಾಜ ಕಂದಾರಿ, ರತನ್ ಪುರೋಹಿತ್, ಬಾಬುಲಾಲ್ ಪುರೋಹಿತ್ ಸೇರಿ ಇತರರು ಇದ್ದರು.

> **ಗವಿ ಕೊಲೆ ವಿರೋಧಿಸಿ ಪ್ರತಿಭಟನೆ ಇಂದು**
>
> **ಕೊಪ್ಪಳ: ನನ್ನ ಮಗನ ಸಾವಿಗೆ ನ್ಯಾಯ ದೊರಕಿಸಿಕೊಡಲು ಆಗ್ರಹಿಸಿ ಸೋಮವಾರ ಪ್ರತಿಭಟನೆ ನಡೆಸಲಿದ್ದು, ಹೋರಾಟಕ್ಕೆ ಬೆಂಬಲ ನೀಡುವಂತೆ ವರ್ತಕರು ಸೇರಿ ನಗರದ ಎಲ್ಲ ಜನರಿಗೆ ಮನವಿ ಮಾಡಿದ್ದೇವೆ. ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಕೊಲೆಯಾದಯುವಕ ಗವಿಸಿದ್ದಪ್ಪ ನಾಯಕ ತಂದೆ ನಿಂಗಜ್ಜ ಹೇಳಿದರು. ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿ, ನಗರದಲ್ಲಿನ ಪ್ರತಿ ಅಂಗಡಿಗೆ ಹೋಗಿ ಮನವಿ ಮಾಡಿಕೊಂಡಿದ್ದೇವೆ. ನಾವೆಲ್ಲರೂ ಬೆಂಬಲ ನೀಡುತ್ತೇವೆ. ಅಂಗಡಿ ಬಂದ್ ಮಾಡಿ ಹೋರಾಟಕ್ಕೆ ಬರುತ್ತೇವೆ ಎಂದು ವರ್ತಕರು ತಿಳಿಸಿದ್ದಾರೆ. ಕನಿಷ್ಠ 20 ಸಾವಿರ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ನನ್ನ ಮಗನ ಸಾವಿಗೆ ಕಾರಣರಾದ ಎಲ್ಲರನ್ನೂ ಬಂಧಿಸಬೇಕು ಎಂದು ಪೊಲೀಸರಿಗೆ ಒತ್ತಾಯಿಸಿದ್ದೇನೆ. ಅನೇಕ ನಾಯಕರು ಮನೆಗೆ ಭೇಟಿ ನೀಡಿ ನ್ಯಾಯ ಒದಗಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.**

ಮುಸ್ಲಿಂ ಯುವತಿರನ್ನ ಮದುವೆಯಾದರೆ 5 ಲಕ್ಷ

ಕೊಪ್ಪಳ: ಮುಸ್ಲಿಂ ಯುವತಿಯರನ್ನು ಮದುವೆಯಾದರೆ 5 ಲಕ್ಷ ಕೊಡುವ ಅಭಿಯಾನ ಆರಂಭಿಸುತ್ತೇವೆ. ಈ ಮೂಲಕ ಹಿಂದೂಗಳನ್ನು ಕೊಲೆ ಮಾಡುವ ಮನಸ್ಥಿತಿಯ ಮುಸ್ಲಿಂಮರಿಗೆ ಉತ್ತರ ನೀಡಬೇಕಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹೇಳಿದರು.

ನಗರದ ಕುರುಬರ ಓಣಿಯಲ್ಲಿನ ಕೊಲೆಯಾದ ಗವಿಸಿದ್ದಪ್ಪ ಮನೆಗೆ ಭೇಟಿ ನೀಡಿದ ನಂತರ ಮಾಧ್ಯಮಗಳೊಂದಿಗೆ ಭಾನುವಾರ ಮಾತನಾಡಿದರು. ಮಸೀದಿ ಮುಂದೆಯೇ ಗವಿಸಿದ್ದಪ್ಪ ನಾಯಕ ಕೊಲೆಯಾಗಿದೆ. ಕೊಲೆ ಮಾಡುವಾಗ ತಡೆಯುವ ಕೆಲಸ ಅಲ್ಲಿದ್ದವರು ಮಾಡಿಲ್ಲ, ಕೊಲೆ ಮಾಡಿದ ಆರೋಪಿ ರಿಲ್ಸ್ ನಲ್ಲಿ ಮಚ್ಚು ತೋರಿಸಿದ್ದಾನೆ. ಈಗ ಪೊಲೀಸರು ನಾಲ್ಕು ಜನರನ್ನು ಬಂಧಿಸಿದ್ದಾರೆ. ಆ ಹುಡುಗಿಯನ್ನೂ ಅರೆಸ್ಟ್ ಮಾಡಬೇಕು.

ಮಚ್ಚು ಹಿಡಿದು ಓಡಾಡುವವರಿಗೆ ಸರಕಾರದ ಬೆಂಬಲ ನೀಡುತ್ತದೆ. ಲವ್ ಜಿಹಾದ್ ಮಾಡಿದಾಗ ಸರಕಾರ ಅಲ್ಪಸಂಖ್ಯಾತ ರಿಗೆ ರಕ್ಷಣೆ ಕೊಡುತ್ತದೆ. ಸರಕಾರ ಮುಸ್ಲಿಂರಿಗೆ ಮಾತ್ರ ರಕ್ಷಣೆ ನೀಡುತ್ತದೆ. ಈ ಸರಕಾರದಲ್ಲಿ ಹಿಂದುಗಳಿಗೆ ರಕ್ಷಣೆ ಇಲ್ಲ. ಅಧಿವೇಶನದಲ್ಲಿ ಈ ಕುರಿತು ಪ್ರಶ್ನಿಸುತ್ತೇನೆ. ಆ.11ರ ಪ್ರತಿಭಟನೆಗೆ ಎಲ್ಲರೂ ಸಹಕರಿಸಬೇಕು. ಇದೇ ನೆಪದಲ್ಲಿ ಗಣೇಶ ಹಬ್ಬಕ್ಕೆ ಅಡ್ಡಿ ಪಡಿಸಬಾರದು ಎಂದು ಆಗ್ರಹಿಸಿದರು.

ಮುಸ್ಲಿಂರು ಅಪರಾಧಿಗಳಲ್ಲ ಎಂದು ಬಿಂಬಿಸದಂತೆ ಪೊಲೀಸರಿಗೆ ಒತ್ತಡವಿದೆ. ಡ್ರಗ್ಸ್ ಗಾಂಜಾ ದ ಬಗ್ಗೆ ಗೃಹ ಸಚಿವರು ಉಡಾಫೆ ಮಾತನಾಡುತ್ತಾರೆ. ಸದ್ಯ ರಾಜ್ಯದಲ್ಲಿ ಸಾಬರ ಸರಕಾರವಿದೆ. ಸಿಎಂ ಸಿದ್ದರಾಮಯ್ಯ ಮುಸ್ಲಿಂರಿಗೆ ಏನಾದರೂ ತೊಂದರೆಯಾದರೆ ಮಾತ್ರ ಪ್ರತಿಕ್ರಿಯಿಸುತ್ತಾರೆ. ಜಿಲ್ಲಾ ಉಸ್ತುವಾರಿ ಸಚಿವರು ಕೇವಲ ಸಾಂತ್ವಾನ ಹೇಳಿದರೆ ಸಾಲದು. ಕುಟುಂಬದ ನೆರವಿಗೆ ಬರಬೇಕು ಎಂದು ವಾಗ್ದಾಳಿ ಮಾಡಿದರು.

> **ಗೃಹ ಮಂತ್ರಿ ಕೆಲಸ ಮಾಡುತ್ತಿಲ್ಲಲ್ಲ. ಇಡೀ ಸರಕಾರವೇ ಮುಸ್ಲಿಂರ ರಕ್ಷಣೆಗೆ ನಿಂತಿದೆ. ಕರ್ನಾಟಕ ದಲ್ಲಿ ಮುಸ್ಲಿಂರ ಸರಕಾರ ಇದೆ. ರಾಜ್ಯದಲ್ಲಿ ಹಿಂದೂಗಳು ಸುರಕ್ಷಿತ ಇಲ್ಲ. ಕೊಲೆಯಾದ ಗವಿಸಿದ್ದಪ್ಪನ ಮನೆಗೆ ಸರಕಾರ ರಕ್ಷಣೆ ಕೊಡಬೇಕು. ನಾಳೆ ಕೇವಲ ವಾಲ್ಮೀಕಿ ಸಮುದಾಯ ಮಾತ್ರ ಅಲ್ಲ. ಸಮಸ್ತ ಹಿಂದೂ ಸಮುದಾಯದ ಜನ ಹೋರಾಟದಲ್ಲಿ ಭಾಗಿಯಾಗಬೇಕು.**
>
> -ಬಸನಗೌಡ ಪಾಟೀಲ್ ಯತ್ನಾಳ, ಶಾಸಕ

ದಮ್ಮೂರು ಗ್ರಾಮದಲ್ಲಿ ಬೈಕ್ ರ‍್ಯಾಲಿ

ಬಳ್ಳಾರಿ: ಕೇಂದ್ರ ಸರಕಾರದ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯದ ಅಡಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಮಾದರಿ ಸಮೀಕ್ಷಾ ಕಚೇರಿ (ಕ್ಷೇತ್ರ ಕಾರ್ಯ ವಿಭಾಗ), ಉಪಪ್ರಾದೇಶಿಕ ಕಚೇರಿ ಬಳ್ಳಾರಿ ಇವರ ಸಹಯೋಗದಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆಯ (ಎನ್‌ಎಸ್‌ಒ) ರಾಷ್ಟ್ರೀಯ ಅಂಕಿ ಅಂಶ ಕಚೇರಿಯ 75ನೇ ವರ್ಷಾಚರಣೆಯ ಅಂಗವಾಗಿ ದಮ್ಮೂರು ಗ್ರಾಮದಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು.

ರಾಷ್ಟ್ರೀಯ ಅಂಕಿ ಅಂಶ ಕಚೇರಿಯ ಸಮೀಕ್ಷೆಗಳ ಮಹತ್ವ ಮತ್ತು ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಬಳ್ಳಾರಿ ಉಪಪ್ರಾದೇಶಿಕ ಕಚೇರಿಯಿಂದ ದಮ್ಮೂರು ಗ್ರಾಮದವರೆಗೆ ಬೈಕ್ ರ‍್ಯಾಲಿ ಆಯೋಜಿಸಲಾಗಿತ್ತು. ಬಳಿಕ ಜಾಗೃತಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಂಕಿ ಅಂಶ ಕಚೇರಿ ಅಧಿಕಾರಿಗಳು ಸಮೀಕ್ಷೆಗಳ ಮೂಲಕ ರಾಷ್ಟ್ರದ ಯೋಜನೆ ಮತ್ತು ನೀತಿ ರೂಪಣೆಗೆ ಅಗತ್ಯವಾದ ವಿಶ್ವಾಸಾರ್ಹ ಸಾಮಾಜಿಕ-ಆರ್ಥಿಕ ಮಾಹಿತಿಯನ್ನು ಸಂಗ್ರಹಿಸುವಲ್ಲಿ ರಾಷ್ಟ್ರೀಯ ಅಂಕಿ ಅಂಶ ಕಚೇರಿ ಪಾತ್ರವನ್ನು ದೃಶ್ಯ ಪ್ರದರ್ಶನದ ಮೂಲಕ ಗ್ರಾಮಸ್ಥರಿಗೆ ವಿವರಿಸಿದರು.

ದಮ್ಮೂರು ಗ್ರಾಮದ ದುರ್ಗಮ್ಮ ದೇವಾಲಯದ ಆವರಣ, ಗ್ರಾಮ ಪಂಚಾಯತಿ ಕಚೇರಿ ಮತ್ತು ದಮ್ಮೂರು ವೆಂಕಪ್ಪ ತಾತ ಮಠದ ಆವರಣದಲ್ಲಿ ವೃಕ್ಷಾರೋಪಣಾ ಅಭಿಯಾನ ನಡೆಸಿ ಪರಿಸರ ಸಂರಕ್ಷಣೆ ಉಪಕ್ರಮದ ಅಂಗವಾಗಿ ದಮ್ಮೂರು ಗ್ರಾಮದ ನಿವಾಸಿಗಳಿಗೆ 200 ಸಸಿಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಅಂಕಿ ಅಂಶ ಕಚೇರಿ (ಕ್ಷೇತ್ರ ಕಾರ್ಯ ವಿಭಾಗ) ಅಧಿಕಾರಿಗಳು, ಹುಬ್ಬಳ್ಳಿ ಪ್ರಾದೇಶಿಕ ಕಚೇರಿಯ ನಿರ್ದೇಶಕ ಹರೀಶ್ವರನ್, ಜಿಲ್ಲಾ ಅಂಕಿಅಂಶಾಧಿಕಾರಿ ಪತ್ರಿಬಸಪ್ಪ ಸೇರಿದಂತೆ ಉಪಪ್ರಾದೇಶಿಕ ಕಚೇರಿಯ ಹಿರಿಯ ಅಂಕಿಅಂಶಾಧಿಕಾರಿಗಳು ಹಾಗೂ ಸಿಬ್ಬಂದಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಶ್ರೀರಾಘವೇಂದ್ರ ಆರಾಧನೆ ಮಹೋತ್ಸವ

ಲಿಂಗಸುಗೂರು: ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿಗಳವರ ವಿದ್ಯಾ ಮಠದಲ್ಲಿ ಪೂರ್ವರಾಧನೆ ಮಹೋತ್ಸವ ವಿಜೃಭಂಣೆಯಿಂದ ಜರುಗಿತು. ಆ 10 ರಿಂದ 12ರವರಗೆ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆ ಮೊಹೋತ್ಸವ ಜರುಗಲಿದ್ದು. ಆ 10 ರಂದು ಪೂರ್ವಾರಾಧನೆ ಬೆಳ್ಳಗೆ

8 ಗಂಟಗೆ ಸಾಮೂಹಿಕ ಅಷ್ಟೋತ್ತರ ಪಂಚಾಮೃತ ಅಭಿಷೇಕ್, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ನೂತನ ಗಜವಾಹನೋತ್ಸವ ಕಾರ್ಯಕ್ರಮಗಳು ಅದ್ದೂರಿಯಾಗಿ ಜರುಗಿದವು. ಆ 11 ರಂದು ಸೋಮವಾರ ಮದ್ಯಾರಾಧನೆ ಜರುಗಲಿದ್ದು ಅಂದು ಬೆಳಗ್ಗ ಸಾಮೂಹಿಕ ಆಷ್ಟೋತ್ತರ, 108 ಲೀಟರ ಕ್ಷೀರಾಭಿಷೇಕ, ಮಧ್ಯಾಹ್ನ ಅನ್ನಸಂತರ್ಪಣೆ ಸಂಜೆ ನೂತನ ಹಂಸವಾಹನೋತ್ಸವ. ಆ 12 ರಂದು ಮಂಗಳವಾರ ಉತ್ತರಾರಾಧನೆ ಬೆಳಗ್ಗ 8 ಗಂಟಗೆ ಸಾಮೂಹಿಕ ಆಷ್ಟೋತ್ತರ, ಪಂಚಾಮೃತ ಅಭಿಷೇಕ್, ಬೆಳ್ಳಗೆ 11 ಗಂಟಗೆ ಮಹಾರಥೋತ್ಸವ, ಅನ್ನಸಂತರ್ಪಣೆ, ಶೇಷಾವಸ್ತ್ರಗಳ ವಿತರಣೆ ಜರುಗಲಿವೆ. ಸಂಜೆ 6.30 ರಿಂದ 7.30 ರ ವರಗೆ ಶ್ರೀ ರಾಘವೇಂದ್ರ ವಿಜಯ ಪ್ರವಚನ ಜರುಗಲಿದೆ. ರಾಯರ ಆರಾಧನ ಮಹೋತ್ಸವದ ಅಂಗವಾಗಿ 3 ಲಕ್ಷ ರೂ ವೆಚ್ಚದಲ್ಲಿ ಕಟ್ಟಿಗೆಯ ನೂತನ ಗಜವಾಹನೋತ್ಸವ, ಹಂಸವಾಹನೋತ್ಸವ ಹಾಗೂ ಉತ್ಸವ ಮೂರ್ತಿ ಮತ್ತು ತೊಟ್ಟಿಲನ್ನು ಭಕ್ತರು ದೇಣಿಗೆ ನೀಡಿದ್ದು. ಕಾರ್ಯಕ್ರಮದಲ್ಲಿ ಗುರುರಾಯರ ಅಪಾರ ಭಕ್ತ ಸಮೂಹ ರಾಯರ ದರ್ಶನ ಪಡೆದರು.

ಖಾಸಗಿ ಶಿಕ್ಷಣ ಸಂಸ್ಥೆಯಿಂದ ಪ್ರತಿಭಟನೆ ನಾಳೆ

ರಾಯಚೂರು: ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಆಡಳಿತಾತ್ಮಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ಒತ್ತಾಯಿಸಿ ಆ.12 ರಂದು ಜಿಲ್ಲಾ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ಜಾಥಾವನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನಾಗರಾಜ ಮಸ್ಕಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯ ವಿವಿಧ ತಾಲೂಕುಗಳಿಂದ ಶಾಲಾ ಆಡಳಿತ ಮಂಡಳಿಗಳ ಪದಾಧಿಕಾರಿಗಳು, ಖಾಸಗಿ ಶಾಲೆಗಳ ಶಿಕ್ಷಕರು, ಉಪನ್ಯಾಸಕರು ನಗರದ ಮಹಾತ್ಮಗಾಂಧಿ ಪುತ್ಥಳಿಯಲ್ಲಿ ಸಮಾವೇಶಗೊಂಡು ಅಲ್ಲಿಂದ ಕಾಲ್ನಡಿಗೆ ಜಾಥಾ ನಡೆಸಲಾಗುತ್ತದೆ. ಡಾ.ಬಿ.ಆರ್.ಅಂಬೇಡ್ಕರ ವೃತ್ತ, ಕೇಂದ್ರ ಬಸ್ ನಿಲ್ದಾಣ, ಟಿಪ್ಪು ಸುಲ್ತಾನ ರಸ್ತೆ ಮೂಲಕ ಹಳೆ ಜಿಲ್ಲಾಧಿಕಾರಿಗಳವರೆಗೆ ಜಾಥಾ ನಡೆಸಲಾಗುತ್ತದೆ. ನಂತರ ಜಿಲ್ಲಾಧಿಕಾರಿ ಮೂಲಕ ಸಿಎಂ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಗುತ್ತದೆ.ಡಾ. ರಜಾಕ ಉಸ್ತಾದ ಮಾತನಾಡಿ, 371 (ಜೆ) ಕಾಯ್ದೆಯಡಿ ಕಲ್ಯಾಣ ಕರ್ನಾಟಕ ಭಾಗದ ಶಾಲಾ ಕಾಲೇಜುಗಳನ್ನು ವೇತಾನುದಾನಕ್ಕೆ ಒಳಪಡಿಸುವ ಅವಕಾಶವಿದೆ. ಕಲ್ಯಾಣ ಕರ್ನಾಟಕ ಮಂಡಳಿ ಈ ಕುರಿತು ನಿರ್ಧರಿಸಬೇಕಿದೆ ಎಂದರು. ಸುದ್ದಿಗೋಷ್ಟಿಯಲ್ಲಿ ಎಲ್. ಕೇಶವರೆಡ್ಡಿ, ಬಸವರಾಜ ಪಾಟೀಲ್ ದರೂರು, ಮಲ್ಲಪ್ಪ, ರಾಜಾ ಶ್ರೀನಿವಾಸ, ಥಾಮಸ ಬೆಂಜಮಿನ್, ರವಿ ಮನ್ಸಲಾಪುರು, ಜಂಗ್ಲೆಪ್ಪಗೌಡ ಉಪಸ್ಥಿತರಿದ್ದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾಗರಾಜ ಅವರು ಮಾತನಾಡಿದರು.

> **ಖಾಸಗಿ ಶಿಕ್ಷಣ ಸಂಸ್ಥೆಗೆ ವೇತಾನುದಾನಕ್ಕೆ ಸೇರ್ಪಡೆ**
>
> **ಶಾಲಾ ಕಾಲೇಜುಗಳ ಮಾನ್ಯತೆ ನವೀಕರಣ ವಿಧಿಸಿರುವ ಷರತ್ತಗಳನ್ನು ಸರಳೀಕರಣಗೊಳಿಸುವುದು, ಅಗ್ನಿ ಶಾಮಕ ಸುರಕ್ಷತಾ ಪ್ರಮಾಣ ಪತ್ರ ಪಡೆಯುವ ಕಠಿಣ ನಿಯಮಗಳ ಸಡಿಲಿಕೆ, ಶೈಕ್ಷಣಿಕವಾಗಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ವೇತಾನುದಾನಕ್ಕೆ ಸೇರ್ಪಡೆ ಮಾಡುವದು, ಖಾಸಗಿ ಶಾಲಾ ಕಾಲೇಜುಗಳ ಸಿಬ್ಬಂದಿಗಳಿಗೆ ಆರೋಗ್ಯ ವಿಮೆ ಯೋಜನೆ ವ್ಯಾಪ್ತಿಗೆ ಒಳಪಡಿಸಿ, ಭೂ ಪರಿವರ್ತನೆಗೆ ಇರುವ ಷರತ್ತ ತೆಗೆದುಹಾಕಬೇಕೆಂದು ಒತ್ತಾಯಿಸಿದರು.**

ಬೆಳೆ ವಿಮೆ ಯೋಜನೆ ನೋಂದಣಿಗೆ ಆಹ್ವಾನ

ಬಳ್ಳಾರಿ: ಜಿಲ್ಲೆಯಲ್ಲಿ ಪ್ರಸ್ತಕ ಸಾಲಿಗೆ ಮುಂಗಾರು ಹಂಗಾಮು ಅವಧಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಹ ರೈತರು ತಮ್ಮ ಬೆಳೆಗಳ ವಿಮೆಗೆ ನೋಂದಾಯಿಸಿಕೊಳ್ಳಬಹುದು ಎಂದು ಜಿಪಂ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ ಸಪ್ಪಂಡಿ ತಿಳಿಸಿದ್ದಾರೆ. ಪ್ರಕೃತಿ ವಿಕೋಪಗಳು, ಹವಾಮಾನ ವೈಪರೀತ್ಯಗಳಾದ ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ, ಆಲಿಕಲ್ಲು ಮಳೆ, ಪ್ರವಾಹ, ಸಿಡಿಲಿನಿಂದ ಉಂಟಾಗುವ ಬೆಂಕಿ ಅವಘಡ ಇತ್ಯಾದಿ ಕಾರಣಗಳಿಂದ ಸಂಭವಿಸಬಹುದಾದ ಬೆಳೆಹಾನಿಯ ನಷ್ಟದ ಪರಿಹಾರವನ್ನು ಬೆಳೆ ವಿಮೆ ಘಟಕ(ಗ್ರಾಮಪಂಚಾಯಿತಿ) ವಾರು ನಿರ್ಧರಿಸಿ ಬೆಳೆ ನಷ್ಟದ ಪರಿಹಾರವನ್ನು ನೀಡುವುದರ ಮೂಲಕ ರೈತರಿಗೆ ನೆರವಾಗುವುದು ಮರುವಿನ್ಯಾಸಗೊಳಿಸಿದ ಹವಾಮಾನಾಧಾರಿತ ಬೆಳೆವಿಮೆ ಯೋಜನೆ ಮುಖ್ಯ ಉದ್ದೇಶವಾಗಿದೆ. ಹಸಿ ಮೆಣಸಿನಕಾಯಿ: ಬಳ್ಳಾರಿ, ಕಂಪ್ಲಿ, ಕುರುಗೋಡು, ಸಿರುಗುಪ್ಪ, ಸಂಡೂರು ತಾಲೂಕುಗಳ ಎಲ್ಲಾ ಗ್ರಾಪಂ ಗಳು ವಿಮೆಗೆ ಒಳಪಡುವ ಪ್ರದೇಶಗಳಾಗಿದ್ದು, ಪ್ರತಿ ಹೆಕ್ಟರ್‌ಗೆ ವಿಮಾ ಮೊತ್ತ ರು.71 ಸಾವಿರ ಹಾಗೂ ರೈತರು ಪಾವತಿಸಬೇಕಾದ ವಿಮಾ ಕಂತಿನ ದರ ರು.3550 ಆಗಿರುತ್ತದೆ. ರೈತರು ಅಗತ್ಯ ದಾಖಲೆಗಳೊಂದಿಗೆ ಎರಡು ಬೆಳೆಗಳ ವಿಮೆಗೆ ನೋಂದಾಯಿಸಿಕೊಳ್ಳಲು ಆಗಸ್ಟ್ 11 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರ(ಜಿಪಂ) ದೂ: 08392-278177 ಸಂಪರ್ಕಿಸಿ.

ಏನೈತಿ, ಪುಸ್ತಕದ ಒಳಗ ಏನೇನೆಲ್ಲಾ ಐತಿ...?!

'ವಿಶ್ವವಾಣಿ ಪುಸ್ತಕ' ಪ್ರಕಾಶನದ ವತಿಯಿಂದ ಜುಲೈ ತಿಂಗಳ ಕೊನೆಯ ಶನಿವಾರದಂದು 8 ಕೃತಿಗಳು ಲೋಕಾರ್ಪಣೆಗೊಂಡಿದ್ದು ನಿಮಗೆ ಈಗಾಗಲೇ ಗೊತ್ತು. ಅವುಗಳಲ್ಲಿರುವ 'ಹೂರಣ' ಎಂಥದ್ದು ಎಂಬ ಕುತೂಹಲ ನಿಮ್ಮಲ್ಲಿದೆ ಎಂಬುದೂ ನಮಗೆ ಗೊತ್ತು. ಅದನ್ನು ತಣಿಸಲೆಂದು ಒಂದಷ್ಟು ಕೃತಿಗಳ ಹೂರಣದ 'ಸ್ಯಾಂಪಲ್' ಅನ್ನು ಇಲ್ಲಿ ನೀಡಲಾಗಿದೆ. ಇದು ಟೇಸ್ಟ್ ನೋಡಲಿಕ್ಕೆ ಅಷ್ಟೇ. 'ಸಂಪೂರ್ಣ ಸುಗ್ರಾಸ ಭೋಜನ'ವೇ ಬೇಕು ಎಂದಾದಲ್ಲಿ ನಿಮ್ಮಿಷ್ಟದ ಪುಸ್ತಕ ನಿಮ್ಮ ಮಡಿಲು ಸೇರಲೇಬೇಕು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲವಷ್ಟೇ?! ಹಾಂ, ತಲಾ ಕೃತಿಯ ಬೆಲೆ 250 ರುಪಾಯಿ ಮಾತ್ರ...

ಆಸ್ಕ್ ದಿ ಎಡಿಟರ್-3

- **ಕೃತಿಕಾರರು: ವಿಶ್ವೇಶ್ವರ ಭಟ್**
- **ಪ್ರಶ್ನಿಸಿದವರು: ವೇಣುಗೋಪಾಲ ಕಂಚಿತೋಟ, ಕಡೂರು**

ಪ್ರಶ್ನೆ: ಭಟ್ರೇ, 'ಆಸ್ಕ್ ದಿ ಎಡಿಟರ್' ಅಂಕಣದಲ್ಲಿ ನೀವು ಓದುಗರ ಎಲ್ಲ ಪ್ರಶ್ನೆಗಳಿಗೂ, ಸಮಸ್ಯೆಗಳಿಗೂ ಉತ್ತರಿಸುತ್ತೀರಿ. ನಿಮ್ಮ ಸಮಸ್ಯೆಗಳಿಗೆ ಯಾರು ಉತ್ತರಿಸುತ್ತಾರೆ? ಅಥವಾ ನಿಮಗೆ ಸಮಸ್ಯೆಗಳೇ ಇಲ್ಲವಾ?

ಉತ್ತರ: ವೇಣುಗೋಪಾಲ ಅವರೇ, ಜಗತ್ತಿನಲ್ಲಿ ಸಮಸ್ಯೆಗಳು ಇಲ್ಲದವರು ಯಾರಿದ್ದಾರೆ? ಮನುಷ್ಯರಿಗೊಂದೇ ಅಲ್ಲ, ದೇವರಿಗೂ ಸಮಸ್ಯೆಗಳಿವೆ. ಹೀಗಿರುವಾಗ ನಾನು ಯಾವ ಮರದ ತೊಪ್ಪಲು? ನನ್ನ ಓದುಗರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಕಾರಣ, ಅವರಿಗೊಂದು ವೇದಿಕೆ ('ಆಸ್ಕ್ ದಿ ಎಡಿಟರ್' ಅಂಕಣ) ಇದೆ. ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು, ಭಾವನೆಗಳನ್ನು ತೋಡಿಕೊಳ್ಳಲು ಅವರಿಗೊಬ್ಬ ಸಂಪಾದಕನಿದ್ದಾನೆ.

ನನಗೆ ಯಾರಿದ್ದಾರೆ? ನಾನು ಯಾವ ಸಂಪಾದಕನ ಮುಂದೆ ಹೇಳಿಕೊಳ್ಳಬೇಕು? ಯಾವ ಸಂಪಾದಕ 'ಆಸ್ಕ್ ದಿ ಎಡಿಟರ್' ಎಂಬ ವೇದಿಕೆ ತೆರೆದಿಟ್ಟುಕೊಂಡು ಕುಳಿತಿದ್ದಾನೆ? ನಾನು ನನ್ನ ಸಮಸ್ಯೆಗಳನ್ನು ಹೇಳಿಕೊಂಡರೆ ಯಾವ ಸಂಪಾದಕ ಅದಕ್ಕೆ ಪರಿಹಾರ ಸೂಚಿಸುತ್ತಾನೆ? ದಯವಿಟ್ಟು ಹೇಳಿ. ನನಗೂ ನನ್ನದೇ ಆದ ಸಮಸ್ಯೆಗಳಿವೆ. ನನಗೂ ಯಾರಾದರೂ ಸಂಪಾದಕನ ಮುಂದೆ ಹೇಳಿಕೊಳ್ಳೋಣ ಅನಿಸುತ್ತದೆ. ಆದರೆ ಹೇಳಿಕೊಳ್ಳಲು ಸಂಪಾದಕರೇ ಇಲ್ಲವಲ್ಲ?

ಯಾರಿಗೆ ಹೇಳೋಣ ನನ್ನ ಪ್ರಾಬ್ಲಮ್ಮು?!

ಸಂಪಾದಕರ ಸದ್ಯಶೋಧನೆ-8

- **ಕೃತಿಕಾರರು: ವಿಶ್ವೇಶ್ವರ ಭಟ್**
- **ಅಧ್ಯಾಯ: ಅನುವಾದಕನ ಜಾಣ್ಮೆ**

ಕರ್ನಾಟಕದಲ್ಲಿ ಚುನಾವಣೆ ನಡೆಯುವಾಗ ರಾಷ್ಟ್ರ ನಾಯಕರು ಭಾಷಣ ಮಾಡಲು ಬರುವುದುಂಟು. ಅವರು ಹಿಂದಿ ಅಥವಾ ಇಂಗ್ಲಿಷಿನಲ್ಲಿ ಭಾಷಣ ಮಾಡುವುದರಿಂದ ಅದನ್ನು ಕನ್ನಡಕ್ಕೆ ಅನುವಾದ ಮಾಡುವುದು ಅನಿವಾರ್ಯ. ಅನುವಾದ ಮಾಡದಿದ್ದರೆ ಅದು ಮತದಾರರಿಗೆ ಅರ್ಥವಾಗಲಿಕ್ಕಿಲ್ಲ. ಹಿಂದಿ ಅಥವಾ ಇಂಗ್ಲಿಷ್ ಭಾಷಣವನ್ನು ತಕ್ಷಣ ಕನ್ನಡಕ್ಕೆ ಭಾಷಾಂತರ ಮಾಡುವುದು ಒಂದು ಜಾಣ್ಮೆಯ ಕಲೆ.



ಇದು ಎಲ್ಲರಿಗೂ ದಕ್ಕುವಂಥದ್ದಲ್ಲ. ಒಮ್ಮೆ ತುಮಕೂರಿಗೆ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಆಗಮಿಸಿದ್ದರು. ಅವರದೇ ಕೊನೆಯ ಭಾಷಣ. ವಂದನಾರ್ಪಣೆಗೂ ಜನ ಕಾಯಲಿಲ್ಲ. 'ಈಗ ರಾಷ್ಟ್ರಗೀತೆ' ಎಂದು ಹೇಳಲಾಯಿತು. 'ಜನಗಣ ಮನ' ಆರಂಭವಾಗುತ್ತಿದ್ದಂತೆ, ಸಭೆಯಲ್ಲಿದ್ದ ಜನ ತಮ್ಮ ತಮ್ಮ ಆಸನ ಬಿಟ್ಟು ಎದ್ದು ಹೊರಡಲು ಅನುವಾದರು. ಇದನ್ನು ಗಮನಿಸಿದ ನೆಹರು ತಕ್ಷಣ ಕೆರಳಿದರು. ರಾಷ್ಟ್ರಗೀತೆಗೆ ಆ ರೀತಿ ಅಗೌರವ ಸೂಚಿಸುವುದನ್ನು ಅವರು ಸಹಿಸದಾದರು. ವೇದಿಕೆಯ ಮೇಲಿಂದಲೇ ಅವರು ಜನರನ್ನುದ್ದೇಶಿಸಿ 'ಯೂ ಫೂಲ್' ಎಂದು ಕೂಗಾಡಿದರು. ಇದನ್ನು ಗಮನಿಸಿದ ಪೊಲೀಸರು ಜನರನ್ನು ಕುಳ್ಳಿರಿಸಲು ವಿಫಲಯತ್ನ ಮಾಡಿದರು. ನೆಹರು ಅವರು ತಾವು 'ಫೂಲ್' ಎಂದು ಬೈದಿದ್ದನ್ನು ಕನ್ನಡದಲ್ಲಿ ಅನುವಾದ ಮಾಡಿ ಮೈಕಿನಲ್ಲಿ ಹೇಳುವಂತೆ ತಮ್ಮ ಜತೆ ವೇದಿಕೆಯಲ್ಲಿದ್ದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರಿಗೆ ಸೂಚಿಸಿದರು.

'ಪ್ರಧಾನಿಯವರು ನಿಮ್ಮನ್ನೆಲ್ಲ ಮೂರ್ಖರು ಎಂದು ಬೈಯುತ್ತಿದ್ದಾರೆ' ಅಂತ ನಿಜಲಿಂಗಪ್ಪನವರು ಅನುವಾದ ಮಾಡಿ ಹೇಳಬಹುದಿತ್ತು. ಹಾಗೆ ಹೇಳಿದರೆ ಆಭಾಸವಾಗುತ್ತದೆ, ಸಭೆಗೆ ಅಗೌರವ ಸೂಚಿಸಿದಂತಾಗುತ್ತದೆ ಎಂದು ನಿಜಲಿಂಗಪ್ಪನವರಿಗೆ ಅನಿಸಿರಬೇಕು. ತಕ್ಷಣ ಅವರು, 'ಸಾರ್ವಜನಿಕರು ರಾಷ್ಟ್ರಗೀತೆಗೆ ಗೌರವ ಕೊಡುತ್ತಿಲ್ಲ ಎಂದು ಪ್ರಧಾನಿ ನೆಹರು ಅವರು ಬೇಸರ ವ್ಯಕ್ತಪಡಿಸುತ್ತಿದ್ದಾರೆ' ಅಂತ ಹೇಳಿ ಸಮಯಪ್ರಜ್ಞೆ ಮೆರೆದರು. ಆಗ ಇಡೀ ಸಭೆ ಶಾಂತವಾಯಿತು. ಜನ ರಾಷ್ಟ್ರಗೀತೆಯನ್ನು ಹಾಡಿದರು.

ಉಭಯದೇಶವಾಸಿ

- **ಕೃತಿಕಾರರು: ಕಿರಣ್ ಉಪಾಧ್ಯಾಯ**
- **ಅಧ್ಯಾಯ: ಕಲ್ಲು ತೂರುವ ಕೈಗಳಿಗೆ ಕೆಲಸ**

ನಮ್ಮ ಜೀವಿತಾವಧಿಯಲ್ಲಿ ಈ ದಿನವನ್ನು ನೋಡುತ್ತೇವೆ ಎಂದು ಖಂಡಿತ ಎಣಿಸಿರಲಿಲ್ಲ. ಭಾರತದ ಉತ್ತರದ ಕಣಿವೆ ರಾಜ್ಯ ಪ್ರತಿನಿತ್ಯವೂ ಭಯೋತ್ಪಾದನೆ, ಆತಂಕ, ಹತ್ಯೆ, ಗುಂಡು, ಸಾವು ಇತ್ಯಾದಿಗಳಿಂದ ಸಾಕಷ್ಟು ಘಾಸಿಗೊಳಗಾಗಿತ್ತು. ಉಗ್ರರ, ಪ್ರತ್ಯೇಕತಾವಾದಿಗಳ, ಆತಂಕವಾದಿಗಳ ಆರ್ಭಟಕ್ಕೆ ರಾಜ್ಯ ಸಾಕಷ್ಟು ನಲುಗಿ ಜರ್ಜರಿತವಾಗಿತ್ತು. ಒಮ್ಮೆ ಪಂಜಾಬ್‌ನಲ್ಲಿ ಖಲಿಸ್ತಾನದ ಕೂಗು ಕೇಳಿದ್ದು ಬಿಟ್ಟರೆ, ಸ್ವಾತಂತ್ರ್ಯನಂತರದಲ್ಲಿ ಭಾರತದ ಯಾವ ಪ್ರದೇಶವೂ ಜಮ್ಮು-ಕಾಶ್ಮೀರದಷ್ಟು ಸಂಕಷ್ಟ-ಸಂಘರ್ಷಕ್ಕೆ ಸಾಕ್ಷಿಯಾಗಲಿಲ್ಲ ಎಂದರೆ ತಪ್ಪಿಲ್ಲ. ಕಾಶ್ಮೀರದ ನೆಲ ಅದಕ್ಕೆ ಅರ್ಹವೂ ಆಗಿರಲಿಲ್ಲ. ಅಲ್ಲಿಯ ಬಹುತೇಕ ಜನ ನಿತ್ಯವೂ ಬಾಂಬ್, ಗುಂಡಿನ ದಾಳಿಯ ಬೇಗೆಯಲ್ಲಿ ಬೇಯುತ್ತಿದ್ದರು.

ನೋಡ ನೋಡುತ್ತಿದ್ದಂತೆ ಕಾಶ್ಮೀರದ ಪರಿಸ್ಥಿತಿ ಹೇಗಾಯಿತು ಎಂದರೆ, ಅಲ್ಲಿಯ ಸರಕಾರವಷ್ಟೇ ಅಲ್ಲ, ಕೇಂದ್ರ ಸರಕಾರವೂ ಕುಮಟಿ ಬೀಳುವಂತಾಯಿತು. ಕಾಶ್ಮೀರದಲ್ಲಿ ಆರಿಸಿ ಬಂದು ಸರಕಾರ ರಚಿಸಿದ ಪಕ್ಷಗಳು ಭಾರತದ ಪರವಾಗಿವೆಯೋ, ಪಾಕಿಸ್ತಾನದ ಪರವಾಗಿವೆಯೋ ಅಥವಾ ಕಾಶ್ಮೀರದ ಪರವಾಗಿವೆಯೋ ಎನ್ನುವುದೇ ಅರ್ಥವಾಗುತ್ತಿರಲಿಲ್ಲ. ಆ ಕಾಲದಲ್ಲಿ ಕಾಶ್ಮೀರ ಭಾರತದ ಕೈತಪ್ಪಿ ಹೋಗುತ್ತಿದೆ ಎಂದು ಭಾವಿಸಿದವರೇ ಹೆಚ್ಚು. ಆದರೆ ಇತ್ತೀಚೆಗೆ ಆಗುತ್ತಿರುವ ಬದಲಾವಣೆ ಮತ್ತು ಬರುತ್ತಿರುವ ವಿದ್ಯಮಾನ ಕೇಳಿದಾಗ ಯಾವುದೋ ನೆಮ್ಮದಿ, ಸಮಾಧಾನ.

ಒಂದು ಕಾಲದಲ್ಲಿ ಜಮ್ಮು-ಕಾಶ್ಮೀರವನ್ನು ಭೂಮಿಯ ಮೇಲಿನ ಸ್ವರ್ಗ ಎಂದು ಕರೆಯುತ್ತಿದ್ದರು. ಹಸಿರು ಕಣಿವೆ, ಹಿಮಾಚ್ಛಾದಿತ ಪರ್ವತ, ಪ್ರಕೃತಿದತ್ತ ಸರೋವರ, ಝರಿ-ಜಲಪಾತ, ಹಚ್ಚ ಹಸಿರ ಹುಲ್ಲುಗಾವಲು, ಮೈತುಂಬ ಹೂ ಹೊದ್ದ ಭೂಮಿ, ನೈಸರ್ಗಿಕ ಉದ್ಯಾನ, ಕಣ್ಣು ತೂರಿದಷ್ಟೂ ಕಾಣುವ ರಮಣೀಯ ಸೌಂದರ್ಯದ ಅದ್ಭುತ ದೃಶ್ಯ, ಅಮೂಲ್ಯ ಔಷಧಿಯುಕ್ತ ಗಿಡಮೂಲಿಕೆಗಳು, ಒಂದೇ ಎರಡೇ! 'ಸ್ವಿಜರ್ಲ್ಯಾಂಡಿಗೆ ಕಿಚ್ಚು ಹಚ್ಚೆಂದ...' ಎನ್ನುವಂತಿತ್ತು. ಭೌಗೋಳಿಕವಾಗಿ ಆ ಪ್ರದೇಶ ಇಂದಿಗೂ ಹಾಗೆಯೇ ಇದೆ. ಆದರೆ ಯಾವ ಕುಯೋಗವೋ ಗೊತ್ತಿಲ್ಲ, ಪಕ್ಕದಲ್ಲಿರುವ ಕುಹಕ ಕುತ್ಸಿತ ದೇಶದಿಂದಾಗಿ ಕಾಶ್ಮೀರ ಎಂದರೆ ಆತಂಕವಾದಿಗಳ ಮೈದಾನ, ಸೈನಿಕರ ಮೇಲೆ ಕಲ್ಲುತೂರುವ ರಾಜ್ಯವೆಂದೇ ಹೆಸರಾಯಿತು....

ಗೆದ್ದವರ ಕಥೆಗಳು

- **ಕೃತಿಕಾರರು: ರಾಜು ಅಡಕಳ್ಳಿ** • **ಅಧ್ಯಾಯ: ವ್ಯಕ್ತಿ ಮೀರಿದ ಶಕ್ತಿ- ಸ್ವರ್ಣವಲ್ಲಿ ಶ್ರೀ**

ಹವ್ಯಕರು, ರಾಮಕ್ಷತ್ರಿಯರು, ಸಿದ್ಧಿ, ಮರಾಠಿ, ಕುಣಬಿ, ಶೀಲಿಗ ಮುಂತಾದ ಹಲವು ಜನಾಂಗಗಳ ಶಿಷ್ಯಕೋಟಿಗೆ ಸ್ವರ್ಣವಲ್ಲಿ ಮಠವೆಂದರೆ ತವರುಮನೆಯಷ್ಟೇ ಅಪಾರ ಪ್ರೀತಿ. ಕಾರಣ, ತಾಯಿಪ್ರೀತಿ ನೀಡುವಂಥ, ಜೀವನಕ್ಕೆ ಮಾರ್ಗದರ್ಶನ ನೀಡುವಂಥ ಗುರುಗಳು ಇಲ್ಲಿದ್ದಾರಲ್ಲ. ಹೀಗೆ ಸ್ವರ್ಣವಲ್ಲಿಯನ್ನು ಸ್ವರ್ಣಸದೃಶವಾಗಿ ಬದಲಾಯಿಸಿ ಬೆಳಗಿಸಿದ ಶ್ರೇಯಸ್ಸು ಈ ಮಠದ್ದು. ಈ ಸತ್ಸಂಪ್ರದಾಯವನ್ನು ಅಷ್ಟೇ ಸಮರ್ಥವಾಗಿ ಮುಂದುವರಿಸಿಕೊಂಡು ಹೋಗುತ್ತಿರುವ ತಪಸ್ಸು, ತಪಸ್ವಿಗಳಾದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅವರದ್ದು. ಪೀಠಾರೋಹಣವಾಗಿ ಈಗಾಗಲೇ 34 ವರ್ಷಗಳಾದರೂ ತಮ್ಮ ಮೇಲೆ ಸ್ವಲ್ಪವೂ ಕಪ್ಪುಚುಕ್ಕೆ ಇಲ್ಲದಂತೆ ಶುದ್ಧ ಚಾರಿತ್ರ್ಯ ಕಾಪಾಡಿಕೊಂಡು, ವ್ಯಕ್ತಿ ಮೀರಿ ಪ್ರಾಂಜಲ ಶಕ್ತಿಯಾದವರು ಇವರು. ಈ ಮಠವನ್ನು ಯಾವುದೇ ರಾಜಕೀಯ ಪಕ್ಷದ ಅರಲುಗದ್ದೆಯ ಬೇಲಿಗೂಟವನ್ನಾಗಿಸದೇ, ಸಮಚಿತ್ತ ಕಾಪಾಡಿಕೊಂಡು ಬಂದಿರುವುದು ಇವರಲ್ಲಿನ ಮತ್ತೊಂದು ಅನುಕರಣೀಯ ಗುಣ.



ಎಷ್ಟೋ ಮಠಗಳಲ್ಲಿ ಸ್ವಾಮೀಜಿಗಳಿಗೂ ಮತ್ತು ಭಕ್ತರಿಗೂ ದೊಡ್ಡ ಅಂತರವಿರುತ್ತದೆ. ಆದರೆ ಇಲ್ಲಿ ಹಾಗಿಲ್ಲ. ಶ್ರೀ ಗಂಗಾಧರೇಂದ್ರರೇ ಸ್ವತಃ ಹಳ್ಳಿ ಮೂಲೆಗಳಲ್ಲಿರುವ ತಮ್ಮ ಶಿಷ್ಯರ ಮನೆಮನೆಗಳಿಗೂ ತೆರಳಿ, ಭಕ್ತರ ಕಷ್ಟ ಸಂಕಷ್ಟಗಳಿಗೆ ಸ್ಪಂದಿಸಿರುವುದು ವಿಶೇಷ. ಹೀಗೆ ಶ್ರೀಗಳ ಬಹುಮುಖ ಕ್ರಿಯಾಶೀಲತೆಯನ್ನು ಹೇಳುವುದೆಂದರೆ ಅದು ಮುಗಿಯದ ಕಥೆ. ಸೂರ್ಯ ಪ್ರತಿನಿತ್ಯ ಎಷ್ಟು ಬೆಳಕಿನ ಕಿರಣಗಳನ್ನು ಸೂಸುತ್ತಾನೆಂದು ಲೆಕ್ಕವಿಡಲು ಸಾಧ್ಯವೇ? ಇತ್ತೀಚೆಗೆ ಇವರ ಶಿಷ್ಯರಾಗಿ ನಿಯುಕ್ತಿಗೊಂಡ ಶ್ರೀ ಆನಂದ ಬೋಧೇಂದ್ರ ಸರಸ್ವತಿ ಸ್ವಾಮೀಜಿಯವರು ಕೂಡ ಶ್ರೀ ಮಠದ ಭರವಸೆಯ ಬೆಳಕಾಗಿದ್ದಾರೆ.

ಕೊನೆಗೊಂದು ಜೋಕ್: ಕೆಲವರು 'ಬ್ರಾಂಡಿ ಮುಹೂರ್ತ'ಕ್ಕಾಗಿ ಸಂಜೆ ಕಾದುಕೊಂಡಿರುತ್ತಿದ್ದವರು, ಈಗ 'ಬ್ರಾಹ್ಮೀ ಮುಹೂರ್ತ'ದಲ್ಲೇ ಎದ್ದು ಪೂಜೆ-ಪುನಸ್ಕಾರ ಕೈಗೊಳ್ಳುವಂಥ ದೊಡ್ಡ ಬದಲಾವಣೆಯಾಗಿರುವುದರ ಹಿಂದೆ ಶ್ರೀ ಮಠದ ಸತ್ಸಂಗದ ಪ್ರಭಾವವಿದೆ ಎಂಬುದು ಶಿರಸಿ, ಯಲ್ಲಾಪುರ, ಸಿದ್ದಾಪುರ ಸೀಮೆಗಳ ಎಷ್ಟೋ ಅಕ್ಕಯ್ಯಂದಿರ, ಅತ್ತಿಗೆಯರ ಅಭಿಪ್ರಾಯವಂತೆ.

ಯಶಸ್ವಿ ಬದುಕಿಗೆ ಸರಳ ಸೂತ್ರಗಳು

- **ಕೃತಿಕಾರರು: ಎಸ್.ಷಡಕ್ಷರಿ**

– ಮಾರ್ಕ್ ಟ್ವೈನ್ ಅವರು, 'ನನ್ನ ಕಾರ್ಯಕ್ರಮವನ್ನು ಮೆಚ್ಚಿಕೊಂಡು ಯಾರಾದರೂ ಒಳ್ಳೆಯ ಪ್ರಶಂಸೆಯ ಮಾತು ಹೇಳಿದರೆ, ನನ್ನ ಎರಡು ತಿಂಗಳ ಸಂಬಳವನ್ನು ಬಿಟ್ಟುಬಿಡಬಲ್ಲೆ' ಎಂದಿದ್ದರಂತೆ. ಪ್ರಾಮಾಣಿಕ ಪ್ರಶಂಸೆಯ ಮಾತಿನ ಮಹತ್ವ ಅವರ ಮಾತುಗಳಲ್ಲಿ ಅಡಗಿದೆ. ನಾವು ಯಾರಿಂದಾದರೂ ಕೆಲಸ ಮಾಡಿಸಿಕೊಂಡು ಕೊಡುವ ಸಂಭಾವನೆ ದಿನಗಟ್ಟಲೆ ಅಥವಾ ತಿಂಗಳುಗಟ್ಟಲೆ ಉಳಿಯಬಹುದು. ಆದರೆ ಪ್ರಾಮಾಣಿಕ ಪ್ರಶಂಸೆಯ ಮಾತು ಬದುಕಿನುದ್ದಕ್ಕೂ ಉಳಿಯುತ್ತದೆ! ಈ ಪ್ರಶಂಸೆಯನ್ನು ಕೊಡುವುದು ಕಷ್ಟವೇನಲ್ಲ, ಆದರೆ ಅದು ಪ್ರಾಮಾಣಿಕವಾಗಿರಬೇಕು. ಅಲ್ಲವೇ?



– ಒಮ್ಮೆ ಲಿಯೋ ಟಾಲ್‌ಸ್ಟಾಯ್ ಅವರು ರಸ್ತೆಯಲ್ಲಿ ವಾಕ್ ಮಾಡುತ್ತಿರುವಾಗ ಭಿಕ್ಷುಕನೊಬ್ಬ, 'ಏನಾದರೂ ಕೊಡಿ' ಎಂದು ಕೈಚಾಚಿದ. ಅಂದು ಟಾಲ್‌ಸ್ಟಾಯ್ ಅವರು ಪರ್ಸ್ ತರಲು ಮರೆತಿದ್ದರು. ಅವರು ಭಿಕ್ಷುಕನನ್ನು ಕುರಿತು, 'ತಮ್ಮಾ! ಇಂದು ನಾನು ಪರ್ಸ್ ತರಲು ಮರೆತಿದ್ದೇನೆ. ನಿನಗೇನೂ ಕೊಡುವುದಿಲ್ಲ, ತಪ್ಪು ತಿಳಿಯಬೇಡ' ಎಂದರು. ಭಿಕ್ಷುಕ ಅಳತೊಡಗಿದ. ಏಕೆಂದು ಕೇಳಿದಾಗ, 'ಎಲ್ಲರೂ ನನ್ನನ್ನು ಭಿಕ್ಷುಕ ಎಂದು ಹೀಗಳೆಯುತ್ತಿದ್ದರು. ಆದರೆ ನೀವು ತಮ್ಮಾ ಎಂದು ಕರೆದಿರಿ. ನನಗಷ್ಟೇ ಸಾಕು. ನೀವು ನನಗೇನೂ ಕೊಡದಿದ್ದರೂ ಚಿಂತೆಯಿಲ್ಲ' ಎಂದನಂತೆ. ನಮ್ಮೊಂದಿಗೆ ವ್ಯವಹರಿಸುವವರೊಂದಿಗೆ ನಾವೂ ಇಂಥ ಒಳ್ಳೆಯ ಮಾತುಗಳನ್ನು ಬಳಸಬಹುದಲ್ಲವೇ?

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ
ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್ ಗೆ ಶೇರ್ ಮಾಡಿ
63623 93966

10 ತಿಂಗಳಲ್ಲಿ 1,563 ಬಾಲ ಗರ್ಭಿಣಿಯರು

ಆಟವಾಡುವ ಸಮಯದಲ್ಲಿ ಹಸೆಮಣೆ ಏರುವ ಬಾಲಕಿಯರು

ಜಿಲ್ಲಾ ನೋಟ

ರಂಗನಾಥ ಕೆ. ಹೊನ್ನಮರಡಿ ತುಮಕೂರು

ಜಿಲ್ಲೆಯಲ್ಲಿ 2024 ಏಪ್ರಿಲ್ ತಿಂಗಳಿಂದ 2025 ಫೆಬ್ರವರಿ ಮಾಹೆಯವರೆಗೆ 1563 ಬಾಲ ಗರ್ಭಿಣಿಯರು ಪತ್ತೆ ಆಗಿರುವುದು ಆತಂಕ ಮೂಡಿಸಿದ್ದು, ರಾಜ್ಯದಲ್ಲಿ ಜಿಲ್ಲೆ 5ನೇ ಸ್ಥಾನದಲ್ಲಿದೆ.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರು ಗರ್ಭಧರಿಸಿ ಸಂಸಾರದ ಜವಾಬ್ದಾರಿ ಹೊರುತ್ತಿರುವುದು ಹೆಣ್ಣು ಮಕ್ಕಳ ಭವಿಷ್ಯ ಕಮರುವಂತೆ ಮಾಡುತ್ತಿದೆ.

ಕಳೆದ ಹತ್ತು ತಿಂಗಳಲ್ಲಿ 14 ವರ್ಷದ 9 ಬಾಲಕಿಯರು, 15 ವರ್ಷದ 22, 16 ವರ್ಷದ 69, 17 ವರ್ಷದ 267, 18 ವರ್ಷದ 1196 ಬಾಲಕಿಯರು ಸೇರಿದಂತೆ 1563 ಮಂದಿ ಗರ್ಭಿಣಿಯರಾಗಿದ್ದಾರೆ.

ಬಾಲ್ಯ ವಿವಾಹಕ್ಕೆ ಕಾರಣಗಳು

ಬಡತನ, ಅನಕ್ಷರತೆ, ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕಾರಣ, ಕಾನೂನಿನ ಅರಿವಿನ ಕೊರತೆ, ಇಲಾಖೆಯ ನಿರ್ಲಕ್ಷ್ಯ ಸೇರಿದಂತೆ ಇತರೆ ಕಾರಣಗಳಿಂದಾಗಿ ಬಾಲ್ಯ ವಿವಾಹಗಳು ಎಂದಿಗೂ ನಡೆಯುತ್ತಿವೆ.

ಕೆಲವು ಪ್ರಕರಣಗಳು ದಾಖಲಾಗುವುದಿಲ್ಲ

ಜಿಲ್ಲೆಯಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಕೆಲವು ಪ್ರಕರಣಗಳು ದಾಖಲಾಗುವುದಿಲ್ಲ. ಮಹಿಳಾ ಇಲಾಖೆ, ಪೊಲೀಸ್ ಇಲಾಖೆಯ ಗಮನಕ್ಕೂ ಬಾರದೆ ಬಾಲ್ಯ ವಿವಾಹಗಳು ನಡೆಯುತ್ತಿವೆ. ಜಿಲ್ಲೆಯ ಪ್ರತಿ ಗ್ರಾಮಗಳಲ್ಲಿ ಅರಿವು ಮೂಡಿಸುವಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವಿಫಲವಾಗಿದೆ.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ಮದವೆಯಾದರೆ ಬಾಲಕಿಯರು ಗರ್ಭಿಣಿ ಆಗುವುದನ್ನು ತಡೆಯಲು ಸಾಧ್ಯವಿಲ್ಲ. ಇದರಿಂದಾಗಿ ಬಾಲಕಿಯರ ಆರೋಗ್ಯ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ.

ಶಾರೀರಿಕ ಮತ್ತು ಬೌದ್ಧಿಕವಾಗಿ ಬೆಳವಣಿಗೆ ಆಗದೇ ವಿವಾಹವಾಗುವ ಬಾಲಕಿಯರಿಗೆ ಹಲವು ಸ್ವರೂಪಗಳಲ್ಲಿ ಅನಾರೋಗ್ಯ ಸಮಸ್ಯೆ ಕಾಡುತ್ತದೆ. ಗರ್ಭಿಣಿಯರಾದರೆ ರಕ್ತಹೀನತೆ ಮತ್ತು ಪೌಷ್ಟಿಕಾಂಶದ ಕೊರತೆ ತಲೆದೋರುತ್ತದೆ. ತಾಯಿ ಮತ್ತು ಮಗು ಸಾವನ್ನಪ್ಪುವ ಸಾಧ್ಯತೆ ಇರುತ್ತದೆ. ಅಪೌಷ್ಟಿಕತೆಯಿಂದ ಕೂಡಿದ ಮಕ್ಕಳು ಜನಿಸುವ ಸಾಧ್ಯತೆ ಇರುತ್ತದೆ.

ಬಾಲಕಿಯರು ಗರ್ಭ ಧರಿಸಿದ ವೇಳೆ ಗರ್ಭಪಾತ, ಅವಧಿ ಪೂರ್ವ ಪ್ರಸವ , ದೈಹಿಕ ನ್ಯೂನತೆ ಹೊಂದಿರುವ ಶಿಶು ಜನನ ಸೇರಿದಂತೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಮಗು ಜನನದ ಬಳಿಕ ಬಾಲ ಬಾಣಂತಿಯರು ರಕ್ತ ಹೀನತೆ, ಅಧಿಕ ರಕ್ತದೊತ್ತಡ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಭೀತಿ ಇರುತ್ತದೆ.

ಬಾಲ ಗರ್ಭಿಣಿಯರಿಗೆ ಜನಿಸುವ ಶಿಶುಗಳು ಅತಿ ಕಡಿಮೆ ತೂಕ ಹೊಂದಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಜತೆಯಲ್ಲೇ ಶಿಶುಗಳಿಗೆ ಜನನದಲ್ಲೇ ಹಲವು ಆರೋಗ್ಯ ಸಮಸ್ಯೆಗಳು ಇರುತ್ತವೆ.

ಬಾಲ ಗರ್ಭಿಣಿಯರಿಗೆ ಸೂಕ್ತ ಸಮಯಕ್ಕೆ ವೈದ್ಯಕೀಯ ನೆರವು ಕೂಡಾ ಸಿಗುತ್ತಿಲ್ಲ. ಅವರಿಗೆ ಸೂಕ್ತ ರೀತಿಯಲ್ಲಿ ಆರೈಕೆಯನ್ನೂ ಮಾಡಲಾಗುತ್ತಿಲ್ಲ. ಮಗು ಜನಿಸಿದ ಬಳಿಕ ತಾಯಿ, ಮಗು ಎರಡಕ್ಕೂ ಸೂಕ್ತ ಸೌಲಭ್ಯ ಸಿಗುತ್ತಿಲ್ಲ. ಇನ್ನು ಬಹುತೇಕ ಸಂದರ್ಭಗಳಲ್ಲಿ ಗರ್ಭಪಾತ ಆಗುತ್ತಿದೆ. ಈ ವೇಳೆ ಕೂಡಾ ಬಾಲ ಬಾಣಂತಿಯರು ಮಾನಸಿಕ ಹಾಗೂ ದೈಹಿಕ ಆಘಾತಕ್ಕೆ ತುತ್ತಾಗುತ್ತಾರೆ.

ಬಾಲ್ಯದಲ್ಲೇ ಗರ್ಭ ಧರಿಸುವ ಬಾಲಕಿಯರು ಸಹಜವಾಗಿಯೇ ತಮ್ಮ ಶಿಕ್ಷಣ ಪೂರ್ಣಗೊಳಿಸಲು ಸಾಧ್ಯ ಆಗಿರೋದಿಲ್ಲ. ಹೀಗಾಗಿ, ಅವರು ವಯಸ್ಕರಾದ ಬಳಿಕ ಒಳ್ಳೆಯ ಉದ್ಯೋಗಕ್ಕೆ ಸೇರುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ, ಜೀವನ ಪರ್ಯಂತ ಆರ್ಥಿಕವಾಗಿಯೂ ಹಿಂದುಳಿಯುವ ಸಾಧ್ಯತೆಗಳು ದಟ್ಟವಾಗಿರುತ್ತದೆ. ಬಾಲ್ಯ ವಿವಾಹ ಹಾಗೂ ಇನ್ನಿತರ ಕಾರಣಗಳಿಂದ ಬಾಲಕಿಯರು ಅಪ್ರಾಪ್ತ ವಯಸ್ಸಿನಲ್ಲೇ ಗರ್ಭ ಧರಿಸುವ ಪ್ರಕರಣಗಳು ಸಾಮಾಜಿಕ ಪಿಡುಗಾಗಿ ಪರಿವರ್ತನೆಯಾಗಿದ್ದು, ಸಮಾಜಿಕ ವ್ಯವಸ್ಥೆ ಮೇಲೂ ದುಷ್ಪರಿಣಾಮ ಬೀರುತ್ತಿದೆ.

ಪೋಷಕರು ಅಪ್ರಾಪ್ತ ವಯಸ್ಸಿನ ಬಾಲಕಿಯರಿಗೆ ಮದುವೆ ಮಾಡಿ ಅವರ ಭವಿಷ್ಯವನ್ನು ಹಾಳು ಮಾಡಬಾರದು. ಈ ಬಗ್ಗೆ ಸಂಬಂಧಿಸಿದ ಇಲಾಖೆಗಳು ಹೆಚ್ಚಿನ ಅರಿವು ಮೂಡಿಸಿ ಬಾಲ್ಯ ವಿವಾಹವನ್ನು ಸಂಪೂರ್ಣವಾಗಿ ಕೊನೆಗೊಳಿಸಲು ಕ್ರಮ ಕೈಗೊಳ್ಳಬೇಕು.

–ತಿಪ್ಪೇಸ್ವಾಮಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಯೋಜನೆಗೆ ದಶಕಗಳ ಹೋರಾಟ, ಸುಮಾರು 79 ಕಿ.ಮೀ.ಉದ್ದದ ಮಾರ್ಗ

ಸ್ಥಗಿತಗೊಂಡ ಶಿವಮೊಗ್ಗ-ಹರಿಹರ ನಡುವಿನ ನಿರೀಕ್ಷಿತ ರೈಲ್ವೆ ಯೋಜನೆ

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ ಶಿವಮೊಗ್ಗ

ಜಿಲ್ಲೆಯ ಬಹುನಿರೀಕ್ಷಿತ ಶಿವಮೊಗ್ಗ-ಹರಿಹರ ರೈಲ್ವೆ ಯೋಜನೆಗೆ ಅಧಿಕೃತವಾಗಿಯೇ ಎಳ್ಳು ನೀರು ಬಿಟ್ಟಂತಾಗಿದೆ. ಈ ಕುರಿತು ಕೇಂದ್ರ ರೈಲ್ವೆ ಸಚಿವರೇ ಲೋಕಸಭೆಯಲ್ಲಿ ಹೇಳಿಕೆ ನೀಡಿರುವುದರಿಂದ ಅಲ್ಲಿಗೆ ಈ ಯೋಜನೆ ಮುಗಿದಂತಾಗಿದೆ.

ಶಿವಮೊಗ್ಗ ರೈಲು ಯೋಜನೆಗೆ ರಾಜ್ಯ ಸರಕಾರ ಭೂಮಿ ಮಂಜೂರು ಮಾಡದ ಕಾರಣ ಯೋಜನೆ ಸ್ಥಗಿತಗೊಂಡಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಹರಿಹರ-ಶಿವಮೊಗ್ಗ ರೈಲು ಯೋಜನೆಯನ್ನು ಶೇ.50ರ ಅನುಪಾತದಲ್ಲಿ ಮಂಜೂರು ಮಾಡಲಾಗಿತ್ತು. ಆದರೆ ರಾಜ್ಯ ಸರಕಾರ ಇದಕ್ಕೆ ಅವಕಾಶ ನೀಡಿಲ್ಲ ಎಂಬ ಆರೋಪ ಕೇಳಿ ಬಂದಿದೆ. ರಾಜ್ಯ ಸರಕಾರ 832 ಕೋಟಿ ವೆಚ್ಚದಲ್ಲಿ ಭೂಮಿ ವಶಪಡಿಸಿಕೊಳ್ಳಬೇಕಿತ್ತು. ಆದರೆ, ಸರಕಾರ ಆಸಕ್ತಿ ತೋರದಿದ್ದರಿಂದ ಯೋಜನೆ ಸ್ಥಗಿತಗೊಂಡಿದೆ ಎಂಬುದು ಕೇಂದ್ರದ ಹೇಳಿಕೆ.



ಒಟ್ಟು 488 ಹೆ. ಭೂಮಿಯನ್ನು ಒದಗಿಸಲು ರೈಲ್ವೆ ಇಲಾಖೆ ಕರ್ನಾಟಕ ಸರಕಾರವನ್ನು ಕೋರಿತ್ತು. ಆದರೆ ಈ ವೆಚ್ಚವನ್ನು ಹಂಚಿಕೊಳ್ಳಲು ಮತ್ತು ಉಚಿತವಾಗಿ ಭೂಮಿಯನ್ನು ಒದಗಿಸಲು ಕರ್ನಾಟಕ ಸರಕಾರ ಯಾವುದೇ ಮನಸ್ಸು ಮಾಡಲಿಲ್ಲ ಈ ಕಾರಣದಿಂದ ಯೋಜನೆಯಿಂದ ಹಿಂದೆ ಸರಿಯುತ್ತಿರುವುದಾಗಿ ಕೇಂದ್ರ ಸರಕಾರ ಹೇಳುತ್ತಿದೆ.

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಸೇರಿದಂತೆ ಈಗಿನ ಸಂಸದರು ಕೂಡ ಕೇಂದ್ರ ಸರಕಾರದ ರೈಲ್ವೆ ಇಲಾಖೆಯ ಗಮನ ಸೆಳೆದಿದ್ದರು. ಆದರೆ ಈ ಯೋಜನೆ ಬದಲು ರೈಲ್ವೆ ಇಲಾಖೆ ರಾಣೆಬೆನ್ನೂರು ವಯಾ ಶಿಕಾರಿಪುರ ಶಿವಮೊಗ್ಗ ಕೈಗೆತ್ತಿಕೊಂಡಿತ್ತು. ಹಾಗಾಗಿ ಈ ಯೋಜನೆ ಅನುಷ್ಠಾನ ಸಾಧ್ಯವಿಲ್ಲ ಎಂದು ಭಾವಿಸಲಾಗಿತ್ತು. ಆದರೀಗ ಈ ಎರಡೂ ಯೋಜನೆಗಳು ಭೂ ಸ್ವಾಧೀನ ಸಮಸ್ಯೆಗೆ ರಾಜ್ಯ ಸರಕಾರ ಸ್ಪಂದಿಸದೆ ಸ್ಥಗಿತವಾಗಿವೆ ಎಂದು ಸಚಿವರು ಹೇಳಿಕೆ ನೀಡಿರುವುದು ಕುತೂಹಲ ಮೂಡಿಸಿದೆ.

ಶಿವಮೊಗ್ಗ-ರಾಣೆಬೆನ್ನೂರು ಯೋಜನೆಗೆಂದು ಕೈಬಿಡಲಾಯಿತೆ

ಶಿವಮೊಗ್ಗ-ಹರಿಹರ ಮಾರ್ಗ ಯೋಜನೆ ದಶಕಗಳಿಂದ ಹೋರಾಟ ಮಾಡಲಾಯಿತು. ಸುಮಾರು 79 ಕಿ.ಮೀ. ಉದ್ದದ ಈ ಮಾರ್ಗದಿಂದ ಅನೇಕ ಸಾರಿಗೆ ಸಂಪರ್ಕ ಸಾಧ್ಯ ಎಂಬ ವಾದವೂ ಇತ್ತು. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಒಳನಾಡಿನ ಪ್ರದೇಶದ ನೇರ ಸಂಪರ್ಕ ಈ ರೈಲಿನ ಮಾರ್ಗದಿಂದ ಸಾಧ್ಯವಾಗುತ್ತದೆ ಎಂಬ ನಂಬಿಕೆ ಎಲ್ಲರಲ್ಲೂ ಇತ್ತು. ಇದರ ನಡುವೆಯೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ ಕ್ಷೇತ್ರ ಶಿಕಾರಿಪುರಕ್ಕೆ ರೈಲ್ವೆ ಮಾರ್ಗ ಬೇಕು ಆ ಮೂಲಕ ನಾವು ರಾಣೆಬೆನ್ನೂರು ಸಂಪರ್ಕ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ ಎಂಬ ಆಲೋಚನೆಯಲ್ಲಿ ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು ಮಾರ್ಗಕ್ಕೆ ಪ್ರಸ್ತಾವನೆ ಸಲ್ಲಿಸಿದ ಮೇಲೆ ಶಿವಮೊಗ್ಗ-ಹರಿಹರ ಮಾರ್ಗದ ಮೇಲೆ ಆಸಕ್ತಿ ಕಡಿಮೆಯಾಯಿತು.

ಸಂಸದ ರಾಘವೇಂದ್ರ, ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು ಹರಿಹರ ಮಾರ್ಗಕ್ಕೆ ಬದಲಾಗಿ ಶಿವಮೊಗ್ಗ ರಾಣೆಬೆನ್ನೂರು ಮಾರ್ಗವೇ ಉತ್ತಮ ಎಂಬರ್ಥದಲ್ಲಿ ಪ್ರತಿಕ್ರಿಯೆ ಕೊಟ್ಟಿದ್ದರಿಂದ ಹರಿಹರ ಮಾರ್ಗವನ್ನು ಕೈ ಬಿಡಲಾಯಿತೆ ಎಂಬ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಬಿಜೆಪಿ ಸರಕಾರವಿದ್ದಾಗಲೇ ಆಸಕ್ತಿ ತೋರಲಿಲ್ಲ

ಈ ಹಿಂದಿನ ಬಿಜೆಪಿ ಸರಕಾರವೇ ಶಿವಮೊಗ್ಗ ಹರಿಹರ ರೈಲ್ವೆ ಮಾರ್ಗಕ್ಕೆ ಭೂಮಿ ನೀಡುವ ಪ್ರಸ್ತಾವಕ್ಕೆ ಆಸಕ್ತಿ ತೋರಲಿಲ್ಲ. ಬದಲಾಗಿ ಶಿವಮೊಗ್ಗ ರಾಣೆಬೆನ್ನೂರು ರೈಲ್ವೆ ಮಾರ್ಗಕ್ಕೆ ಬೇಕಾದ ಭೂಮಿಯನ್ನು ತಕ್ಷಣ ಸ್ವಾಧೀನ ಪಡಿಸಿಕೊಳ್ಳುವ ಎಲ್ಲ ಸಾಧ್ಯತೆಗಳನ್ನ ತೆರೆದಿಟ್ಟಿತ್ತು.

ಸಂಸದ ರಾಘವೇಂದ್ರ, ಅವರಿಗೆ ಶಿಕಾರಿಪುರದ ಮಾರ್ಗವಾಗಿ ರಾಣೆಬೆನ್ನೂರಿಗೆ ರೈಲ್ವೆ ಮಾರ್ಗ ಆದರೆ, ಉತ್ತರ ಕರ್ನಾಟಕ ಭಾಗವನ್ನು ಇನ್ನಷ್ಟು ವೇಗವಾಗಿ ತಲುಪಬಹುದು ಹಾಗೂ ಉತ್ತರ ಕನ್ನಡದ ಒಂದಷ್ಟು ಭಾಗವನ್ನು ತಲುಪಿದಂತೆ ಆಗುತ್ತದೆ ಎಂಬ ಆಲೋಚನೆ ಇದ್ದರಿಂದ ವೇಗವಾಗಿ ಶಿವಮೊಗ್ಗ-ರಾಣೆಬೆನ್ನೂರು ಮಾರ್ಗಕ್ಕೆ ಅವಕಾಶ ಮಾಡಿಕೊಂಡರು.

ನಿರಂತರ ಪ್ರಯತ್ನದಿಂದಾಗಿ ಶಿವಮೊಗ್ಗ-ರಾಣೆಬೆನ್ನೂರು ಮಾರ್ಗ ಕೆಲಸ ಆರಂಭವಾಯಿತು. ಆದರೆ, ಹರಿಹರ ಮಾರ್ಗದ ಯೋಜನೆಗೆ ಭೂಮಿ ಸ್ವಾಧೀನ ಪ್ರಸ್ತಾವ ನೆನಗುದಿಗೆ ಬಿತ್ತು. ಅಂದಿನ ಸಂಸದ ಸಿದ್ದೇಶ್ವರ ಅವರೂ ಆ ಬಗ್ಗೆ ಗಮನಹರಿಸಲಿಲ್ಲ. ಅಥವಾ ಹರಿಹರ, ಹೊನ್ನಾಳಿ ಭಾಗದ ಜನಪ್ರತಿನಿಧಿಗಳು ತಮ್ಮೂರ ಮೂಲಕ ರೈಲು ಮಾರ್ಗ ಇರಲಿ ಎಂಬ ಒತ್ತಾಯವನ್ನು ಮಾಡಲಿಲ್ಲ. ಇದೇ ಸುಸಂದರ್ಭ ಎಂಬ ಕಾರಣಕ್ಕೆ ಹರಿಹರ ಮಾರ್ಗದ ಮೇಲೆ ಅಧಿಕಾರಿಗಳು ಆಸಕ್ತಿಯನ್ನು ಕಳೆದುಕೊಂಡರು.

ಅನುಮೋದನೆಯಾದ ಯೋಜನೆಯೇ ಹೈಜಾಕ್

ಅಚ್ಚರಿಯ ವಿಚಾರವೆಂದರೆ ಕೇಂದ್ರ ಸರಕಾರದಿಂದ ಅನುಮೋದನೆಗೊಂಡು ಸರ್ವೆ ಕಾರ್ಯ ಮುಗಿಸಿದ ಯೋಜನೆಯೊಂದನ್ನು ಹೀಗೆ ದಿಢೀರನೇ ಹೈಜಾಕ್ ಮಾಡಿದ ಪ್ರಸಂಗಗಳು ರಾಜ್ಯದಲ್ಲಿ ಕಡಿಮೆಯೇ.

ಶಿವಮೊಗ್ಗ-ಹರಿಹರ ಮಾರ್ಗವನ್ನು ರಾಣೆಬೆನ್ನೂರು ಮಾರ್ಗಕ್ಕೆ ತಿರುಗಿಸಿದ ಪ್ರಸ್ತಾಪದಲ್ಲಿ ರಾಜಕೀಯ ಹಿತಾಸಕ್ತಿ ಇತ್ತೆ ಹೊರತು. ಎರಡೂ ಮಾರ್ಗಗಳು ಜನರಿಗೆ ಅನುಕೂಲವಾಗುವಂತಹದ್ದೇ ಇತ್ತು. ಹರಿಹರ ಅಥವಾ ರಾಣೆಬೆನ್ನೂರು ನಡುವೆ ಅಂತಹ ವ್ಯತ್ಯಾಸವಾಗುವುದಿಲ್ಲ. ಈಗಾಗಲೇ ಹರಿಹರಕ್ಕೆ ಸಾಕಷ್ಟು ಸಂಪರ್ಕ ಸಾಧ್ಯವಿದ್ದರಿಂದ ಶಿಕಾರಿಪುರದ ಮಾರ್ಗವಾಗಿ ರಾಣೆಬೆನ್ನೂರು ಮಾರ್ಗ ಮಾಡಿದರೆ ಉತ್ತರ ಕನ್ನಡದ ಕೆಲವು ಭಾಗಗಳಿಗೂ ಅನುಕೂಲವಾಗುತ್ತದೆ ಎಂಬ ವಾದಕ್ಕೆ ಹೆಚ್ಚು ಮನ್ನಣೆ ಸಿಕ್ಕಿದ್ದರಿಂದ ಹರಿಹರ ಯೋಜನೆಯೇ ಹೈಜಾಕ್ ಆದಂತೆ ಆಯಿತು.

ದಿಢೀರ್‌ನೆ ಕುಗ್ಗಲಿದೆಯೇ ರಿಯಲ್ ಎಸ್ಟೇಟ್

ಹೊನ್ನಾಳಿ-ಮಲೆಬೆನ್ನೂರು ಮಾರ್ಗವಾಗಿ ರೈಲು ಬರುತ್ತದೆ ಎಂಬ ಕಾರಣಕ್ಕೆ ಆ ಮಾರ್ಗದಲ್ಲಿ ಭೂಮಿ ಬೆಲೆ ಗಗನಕ್ಕೆ ಏರಿದ ದಿನಗಳು ಇದ್ದವು. ಎಲ್ಲೆಲ್ಲಿ ಸರ್ವೆ ಕಾರ್ಯ ಆಗಿತ್ತೋ ಅಲ್ಲಲ್ಲಿ ರಿಯಲ್ ಎಸ್ಟೇಟ್ ಮೇಲೆದ್ದಿತ್ತು. ಭೂಮಿಯ ಬೆಲೆ ಕೋಟಿ ರು.ಗಳನ್ನು ತಲುಪಿತ್ತು. ಯಾವಾಗ ಯೋಜನೆ ಮೇಲೇಳುವ ಸಾಧ್ಯತೆಗಳು ಕ್ಷೀಣವಾಗತೊಡಗಿದವೋ ಅಲ್ಲಿಗೆ ಆ ಭಾಗದ ಅಭಿವೃದ್ಧಿಯ ಕನಸು ಕಮರುತ್ತಾ ಬಂತು.

ಅಲ್ಲಿ ಭೂಮಿ ಕೊಂಡವರೆಲ್ಲ ಅದನ್ನು ಮಾರಲು ಆಗದೇ ಇಟ್ಟುಕೊಳ್ಳಲು ಆಗದೆ ಪರದಾಡುವಂತಹ ಸ್ಥಿತಿಯಲ್ಲಿ ಇದ್ದಾರೆ. ಆದರೆ, ದೂರದ ಆಸೆಇಟ್ಟುಕೊಂಡವರಿಗೆ ಕೇಂದ್ರ ಸರಕಾರ ಯೋಜನೆಯನ್ನು ರದ್ದು ಮಾಡಿರುವ ಮೂಲಕ ದೊಡ್ಡ ಶಾಕ್ ನೀಡಿದೆ.

ಯೋಜನೆಗೆ ಅಗತ್ಯವಿರುವ 488 ಹೆಕ್ಟರ್ ಜಾಗವನ್ನು ರಾಜ್ಯ ಸರಕಾರ ಉಚಿತವಾಗಿ ಸ್ವಾಧೀನ ಪಡಿಸಿ ಹಸ್ತಂತರಿಸಬೇಕು ಬರಿಸಬೇಕು ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು ಈಗ ರಾಜ್ಯ ಸರಕಾರ ಒಪ್ಪಂದದಿಂದ ಹಿಂದಕ್ಕೆ ಸರದಿದೆ.

–ಅಶ್ವಿನಿ ವೈಷ್ಣವ್ ರೈಲ್ವೆ ಸಚಿವ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಪ್ರಶಂಸೆಯಿಂದ ಉನ್ನತಿ

ಸಕಾರಾತ್ಮಕ ವಿಚಾರಗಳಿಗೆ ಬುದ್ಧಿ ಉಪಯೋಗಿಸಿ ಸ್ಪಂದಿಸುತ್ತಾ, ನಕಾರಾತ್ಮಕ ವಿಚಾರಗಳಿಗೆ ಹೃದಯದಿಂದ ಸ್ಪಂದಿಸುವುದೇ, ಇಂದು ಹೆಚ್ಚಿನ ಜನರ ಸಾಮಾನ್ಯ ವರ್ತನೆಯಾಗಿಬಿಟ್ಟಿದೆ. ನೋವುಗಳು, ತಪ್ಪುಗಳು, ಅವಘಡಗಳನ್ನು ಉತ್ಪ್ರೇಕ್ಷಿಸಿ ಹೇಳುವವರು, ಸಾತ್ವಿಕ ವಿಚಾರಗಳನ್ನು ಅತ್ಯಂತ ನೀರಸವಾಗಿ, ನಿರಾಸಕ್ತಿಯಿಂದ ಹೇಳುತ್ತಿರುತ್ತಾರೆ. ಬೇರೆಯವರಲ್ಲಿರುವ ಒಂದು ಚಿಕ್ಕ ಸದ್ಗುಣವಾದರೂ ಅದನ್ನು ಗಮನಿಸಿ, ಹೊಗಳಿ, ಪ್ರೋತ್ಸಾಹಿಸುತ್ತಾ ಹೋದರೆ, ಅವರು ಅದೇ ದಿಕ್ಕಿನಲ್ಲಿ ಮುಂದುವರೆಯುತ್ತಾ, ತಮ್ಮಲ್ಲಿರುವ ದುರ್ಗುಣಗಳನ್ನು ಕಳೆದುಕೊಳ್ಳುತ್ತಾ ಸಾಗುತ್ತಾರೆ. ಹಾಗೆಯೇ ಸದ್ಗುಣಗಳನ್ನು ಪ್ರೋತ್ಸಾಹಿಸಿದವರ ಮನಸ್ಸು ಉಲ್ಲಸಿತವಾಗಿ, ತಾವು ಅಂತಹುದೇ ಗುಣಗಳಿಗೆ ಆಶ್ರಯ ನೀಡುತ್ತಾ, ಸದ್ಗುಣಿಗಳೇ ಆಗುತ್ತಾ ಹೋಗುತ್ತಾರೆ. ಹಾಗೆಯೇ ಇನ್ನೊಬ್ಬರ ತಪ್ಪುಗಳನ್ನು ಹುಡುಕಿ, ನಿಂದಿಸಿ, ಅವಮಾನಿಸುತ್ತಾ ಹೋದರೆ, ಅವರ ಮನಸ್ಸು ಮತ್ತಷ್ಟು ಕಾಠಿಣ್ಯ ತಾಳಿ, ರೊಚ್ಚಿಗೆದ್ದು, ದ್ವೇಷಭಾವ ದಿಂದಲೇ, ಅಂತಹುದೇ ದುರ್ಗುಣಗಳನ್ನು ಮೈದಳೆಯುತ್ತಾ ಸಾಗುತ್ತದೆ. ಜೊತೆಗೆ ನಿಂದಿಸುವವರೂ, ಹೊರಗಿನ ಕಲ್ಮಶಗಳನ್ನೆಲ್ಲ ತಮ್ಮೊಳಗೆ ತೆಗೆದು ಕೊಂಡು, ತಮ್ಮ ಮನಸ್ಸೆಂಬ ಸರೋವರವನ್ನು ಕಲಕಿ, ರಾಡಿಗೊಳಿಸಿಕೊಳ್ಳುತ್ತಾರೆ.

ಹಾಗೆಂದು ಹೊರಗಿನ ತಪ್ಪುಗಳನ್ನು ಕಂಡೂ ಕಾಣದಂತಿರಲು ಮನೋ ಬುದ್ಧಿಗಳಿಗೆ ಸಾಧ್ಯವಿಲ್ಲ. ಒಬ್ಬರಲ್ಲಿ ದೋಷಗಳು ಕಂಡು ಬಂದರೆ, ಅದಕ್ಕೆ ಭಾವನಾತ್ಮಕವಾಗಿ ಪ್ರತಿಕ್ರಿಯಿಸದೆ, ಬುದ್ಧಿ ಉಪಯೋಗಿಸಿ ವಿಚಾರ ಮಾಡಿದರೆ, ಆ ದುರ್ಗುಣದ ಹಿಂದಿರಬಹುದಾದ ಕಾರಣ ಅರ್ಥವಾಗುತ್ತದೆ. ಆ ದೋಷದ ಹಿಂದಿರುವ ಮಾನಸಿಕ ಒತ್ತಡ, ಪರಿಸರದ ಪ್ರಭಾವ, ದೊರೆತ ಸಂಸ್ಕಾರ ಎಲ್ಲವೂ ಗೋಚರವಾಗಲಾರಂಭಿಸುತ್ತದೆ. ಹೀಗೆ ಅರ್ಥ ಮಾಡಿಕೊಂಡಾಗ ಸಂಪೂರ್ಣವಾಗಿ ವ್ಯಕ್ತಿಯನ್ನೇ ನಿರಾಕರಿಸುವ ಮನಸ್ಥಿತಿಯಿಂದ ಹೊರಬರಲು ಸಾಧ್ಯ. ಹಾಗೆಯೇ ಮನದಲ್ಲಿ ಆ ವ್ಯಕ್ತಿಯ ಬಗ್ಗೆ ಅನುಕಂಪ ಮೂಡಲು ಸಾಧ್ಯ. ಅನುಕಂಪ, ಕರುಣೆಗಳಿಂದ ತುಂಬಿದ ಮನಸ್ಸು ಉದಾತ್ತವಾಗುತ್ತಾ ಹೋಗುತ್ತದೆ. ಒಳ್ಳೆಯ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಹೊಗಳುತ್ತಾ ನಡೆದಂತೆ, ಮನ, ಬುದ್ಧಿ, ಹೃದಯವೆಲ್ಲವೂ ಪ್ರಶಂಸೆಯಿಂದ ತುಂಬಿ, ಸಾತ್ವಿಕ ಭಾವ ನೆಲೆಸಿ, ದೈವತ್ವದ ಉದಯಕ್ಕೆ ಕಾರಣವಾಗುತ್ತದೆ. ಈ ಪ್ರಶಂಸೆ ಎನ್ನುವುದು ಕೇವಲ ಮುಖಸ್ತುತಿಯಾಗದೆ, ಹೃದಯದಿಂದ ಮೂಡಿ ಬಂದ ಮಾತಾದರೆ ಮಾತ್ರ, ಕೇಳಿಸಿಕೊಳ್ಳುತ್ತಿರುವವರು ಹಾಗೂ ಹೇಳಿದವರು ಔನ್ನತ್ಯವನ್ನು ಪಡೆಯಲು ಸಾಧ್ಯ.

• ಮಾಯಾ ಬಾಲಚಂದ್ರ

ಪುರಾತನ ಸಂಸ್ಕೃತಿಯ ಪಳೆಯುಳಿಕೆಗಳು

ಬೀದಿಗಳಲ್ಲಿ ಆಗಾಗ ಕಾಣಸಿಗುವ ಕೋಲೆ ಬಸವ ಬಹು ಅಲಂಕೃತ ಎತ್ತು. ಅದನ್ನು ಓಡಾಡಿಸುವವರಿಗೆ, ಈ ಎತ್ತುಗಳೇ ಆದಾಯ ತಂದುಕೊಡುವ ಜೀವಿಗಳು; ಜನಪದ ಆಚರಣೆಯೂ ಆಗಿರುವ ಕೋಲೆ ಬಸವಗಳು ನಿಧಾನವಾಗಿ ಕಡಿಮೆಯಾಗುತ್ತಿವೆ.

• ಮಂಜುನಾಥ ಡಿ.ಎಸ್.

ಉದರ ನಿಮಿತ್ತಂ ಬಹುಕೃತ ವೇಷಃ ಎಂಬ ಉಕ್ತಿಯನ್ನು ಆದಿ ಶಂಕರರು ರಚಿಸಿರುವ ಭಜ ಗೋವಿಂದಂ ಸ್ತೋತ್ರದಲ್ಲಿ ಕಾಣುತ್ತೇವೆ. ಗೊರವಯ್ಯ, ದಾಸಯ್ಯ, ಕೊರವಂಜಿ, ಹನುಮಂತ, ಹೀಗೆ ಹಲವಾರು ವೇಷಗಳನ್ನು ಧರಿಸಿ ಹೊಟ್ಟೆ ತುಂಬಿಸಿಕೊಳ್ಳುವವರು ವಾಚ್ಯಾರ್ಥದಲ್ಲಿ ಈ ಮಾತಿಗೆ ಪುರಾವೆ ಒದಗಿಸುತ್ತಾರೆ. ನನ್ನ ಎಳವೆಯಲ್ಲಿ ಸರ್ವೇಸಾಮಾನ್ಯವಾಗಿದ್ದ, ನಂತರದ ದಶಕಗಳಲ್ಲಿ ವಿರಳವಾಗಿದ್ದ (ಕೌಲೆತ್ತು ಮತ್ತು ಗಂಗೆತ್ತು ಎಂದೂ ಕರೆಯಲ್ಪಡುತ್ತಿದ್ದ) ಕೋಲೆ ಬಸವ ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ ಬಡಾವಣೆಗಳಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಿದೆ.

ಅಲಂಕೃತ ಎತ್ತುಗಳನ್ನು ಬಳಸಿಕೊಂಡು ಪ್ರದರ್ಶನ ನೀಡುವ ಒಂದು ಜಾನಪದ ಕಲೆ ಕೋಲೆ ಬಸವ. ಸಾಮಾನ್ಯವಾಗಿ ಎತ್ತಿಗೆ ಒಂದು ಹೆಸರಿಟ್ಟಿರುತ್ತಾರೆ. ಅದರ ಕೊಂಬುಗಳನ್ನು ವರ್ಣಮಯ ರಿಬ್ಬನ್ನುಗಳಿಂದ ಸುತ್ತಿ ತುದಿಯಲ್ಲಿ ಕುಚ್ಚು ಕಟ್ಟಿರುತ್ತಾರೆ. ಅಂದವಾದ ಹಣೆಪಟ್ಟಿಯ ಹಾಸಿನಲ್ಲಿ ದೇವರ ಬಿಲ್ಲೆಗಳನ್ನು ಅಳವಡಿಸಿರುತ್ತಾರೆ. ಅವುಗಳಿಗೆ ಅರಿಶಿನ, ಕುಂಕುಮ ಲೇಪಿಸಿರುತ್ತಾರೆ. ಬೆನ್ನಮೇಲೆ ಸೀರೆ, ಪಂಚೆ, ಶಲ್ಯ, ಶಾಲು, ಮುಂತಾದ ಬಣ್ಣಬಣ್ಣದ ವಸ್ತ್ರಗಳನ್ನು ಹೊದಿಸಿ ಅಲಂಕರಿಸಿರುತ್ತಾರೆ. ಕೊರಳಿಗೆ ಗಂಟೆ ಮತ್ತು ಕಾಲುಗಳಿಗೆ ಕುಚ್ಚು, ಗೆಜ್ಜೆ ಕಟ್ಟಿರುತ್ತಾರೆ.

ಬೆಂಗಳೂರಿನಲ್ಲಿ ಕಾಣಸಿಗುವ ಕೋಲೆ ಬಸವ ಕಲಾವಿದರು ಸಾಮಾನ್ಯವಾಗಿ ತೆಲುಗು ಭಾಷಿಕರು, ಮೂಲತಃ ಆಂಧ್ರ ಪ್ರದೇಶದವರು. ಈಗ ಕರ್ನಾಟಕದವರೇ ಆಗಿದ್ದಾರೆ; ಅವರು ಊರೂರು ಸುತ್ತುತ್ತಾರೆ. ಓಲಗದಂತಹ ವಾದ್ಯದಲ್ಲಿ ಜನಪ್ರಿಯ ಭಕ್ತಿಗೀತೆಗಳನ್ನು ನುಡಿಸುತ್ತಾ ಮನೆ ಮನೆಗೆ ಸಾಗಿ ಬಸವನಿಗೆ ಏನಾದರೂ ಕೊಡುವಂತೆ ವಿನಂತಿಸಿಕೊಳ್ಳುತ್ತಾರೆ. ಇಂತಹ ಕಲಾವಿದರೊಬ್ಬರು ನುಡಿಸಿದ ಭಾಗ್ಯಾದ ಲಕ್ಷ್ಮಿ ಬಾರಮ್ಮ, ಶಂಕರಾನಾದ ಶರೀರಾ ಪರ, ಮೊದಲಾದ ಗೀತೆಗಳಿಗೆ ಕೆಲ ದಿನಗಳ ಹಿಂದೆ ನಾನು ಕಿವಿಗೊಟ್ಟಿದ್ದೆ.

ಶಿವನ ವಾಹನ ನಂದಿ ದೈವಸ್ವರೂಪ ಎಂದು ಭಾವಿಸುವ ಶ್ರದ್ಧಾವಂತರು ಬಸವನಿಗೆ ಅರಿಶಿನ ಕುಂಕುಮ ಹಚ್ಚಿ ಅಕ್ಕಿ, ಬೆಲ್ಲ, ಕಾಯಿ, ಹಣ್ಣು ಸಮರ್ಪಿಸುತ್ತಾರೆ. ಕೆಲವರು ವಸ್ತ್ರವನ್ನು, ಇತರ ವಸ್ತುಗಳನ್ನು ನೀಡುತ್ತಾರೆ. ಜೊತೆಗೆ ಬಸವನಿಂದ ಬದುಕು ಕಟ್ಟಿಕೊಂಡವರಿಗೆ ಹಣ ಕೊಡುತ್ತಾರೆ.

ವಾಹನಗಳ ನಡುವೆ ಕೋಲೆಬಸವ!

ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ, ಜನನಿಬಿಡ ಪ್ರದೇಶಗಳಲ್ಲಿ, ವಾಹನಗಳು ಶರವೇಗದಿಂದ ಸಂಚರಿಸುವ ರಸ್ತೆಗಳಲ್ಲಿ ಕೋಲೆ ಬಸವಗಳನ್ನು ಹಿಡಿದು ಓಡಾಡುವ ಜನರು ಕಾಣಸಿಗುವುದು ಸಣ್ಣ ಅಚ್ಚರಿಯೂ ಹೌದು. ವಾಹನಗಳು ಚಲಿಸುವ ರಸ್ತೆಯಲ್ಲೇ ಕೋಲೆ ಬಸವ ಗಳನ್ನು ಚಲಿಸುವಂತೆ ಮಾಡುವುದು, ಅವುಗಳ ಜೀವಕ್ಕೂ ಸಣ್ಣ ರಿಸ್ಕ್ ಎನ್ನಬಹುದು. ಪುರಾತನ ಜನಪದ ಆಚರಣೆಯಾಗಿದ್ದ ಕೋಲೆ ಬಸವಗಳು, ಇಂದು ಅವುಗಳ ಒಡೆಯರ ಹೊಟ್ಟೆ ತುಂಬುವ ಜೀವಿಗಳಾಗಿ ಮಾರ್ಪಟ್ಟಿವೆ.

ಇತ್ತೀಚೆಗೆ ಮನೆಯ ಮುಂದೆ ಬಂದಿದ್ದ ಬಸವನ ಹೆಸರು ರಾಮ. ಹಣೆಪಟ್ಟಿಯಲ್ಲಿ ಹನುಮಂತ ಹಾಗು ಶ್ರೀನಿವಾಸ ದೇವರ ಬಿಲ್ಲೆಗಳಿದ್ದವು. ದೊಡ್ಡ ದೇಹದ, ರಾಜಗಾಂಭೀರ್ಯದ ಈ ಎತ್ತನ್ನು ಕಂಡು ಕುತೂಹಲದಿಂದ ಅದರ ಒಡೆಯರನ್ನು ವಿಚಾರಿಸಿದಾಗ, ಅದು ಐದು ವರ್ಷ ವಯಸ್ಸಿನ ಒಂಗೋಲ್ ತಳಿಯ ಎತ್ತೆಂದು ತಿಳಿಯಿತು.

ಒಂಗೋಲ್ ಹೋರಿಗಳು ಸಾಮಾನ್ಯವಾಗಿ ದೃಢವಾದ ದೇಹ, ವಿಶಾಲವಾದ ಹಣೆ, ಕಪ್ಪು ಕಣ್ಣುಗಳು, ಅವುಗಳ ಸುತ್ತ ಕಡುಗಪ್ಪು ವರ್ತುಲ, ದಪ್ಪ ಕೋಡುಗಳು, ಉದ್ದ ಕಿವಿಗಳು, ಚಿಕ್ಕ ಕುತ್ತಿಗೆ, ನೀಳ ಕಾಲುಗಳನ್ನು ಹೊಂದಿರುತ್ತವೆ ಎಂದು ತಿಳಿಯಿತು. ಇವೆಲ್ಲಕ್ಕಿಂತಲೂ ಮಿಗಿಲಾಗಿ ಈ ತಳಿಗೆ ರಾಜಗಾಂಭೀರ್ಯ ತಂದುಕೊಟ್ಟಿರುವುದು ದೊಡ್ಡ ಡುಬ್ಬ ಎಂಬ ಅಂಶವೂ ಅರಿವಿಗೆ ಬಂದಿತು. ಒಂಗೋಲ್ ಎತ್ತುಗಳು ಬಲಶಾಲಿಗಳಾಗಿದ್ದು ಉಳುಮೆಗೆ ಉಪಯುಕ್ತವಾಗಿರುವ ವಿಚಾರವೂ ತಿಳಿಯಿತು. ಹಿಂದೊಮ್ಮೆ ನಮ್ಮ ಜಾನಪದ ಸಾಂಸ್ಕೃತಿಕ ಪರಂಪರೆಯ ಭಾಗವಾಗಿದ್ದ ಕೋಲೆ ಬಸವ ಈಗ ಉದರಂಭಣಕ್ಕೆ ಸೀಮಿತವಾಗಿರುವುದು ವಿಷಾದದ ವಿಷಯ ಎನಿಸಿತು. ಮುಂದಿನ ದಿನಗಳಲ್ಲಿ ಕೋಲೆ ಬಸವಗಳು, ಅವುಗಳನ್ನು ಮನೆ ಮನೆಗೆ ಕೊಂಡೊಯ್ಯುವ ಸಂಸ್ಕೃತಿ ಕಡಿಮೆಯಾಗಬಹುದು.

ಯುವಜನರ ಭವಿಷ್ಯಕ್ಕಾಗಿ..

• ಶ್ರೀನಿವಾಸಮೂರ್ತಿ ಎನ್ ಸುಂಡ್ರಹಳ್ಳಿ

ವ್ಯಕ್ತಿಯಲ್ಲಿ ಟೀನೇಜ್ ಮುಗಿಯುತ್ತಿದ್ದ ಹಾಗೆ ತನ್ನ ಬದುಕು ಮತ್ತು ಭವಿತವ್ಯದ ಬಗ್ಗೆ ಜವಾಬ್ದಾರಿ ಬರಬೇಕು. ಆ ಜವಾ ಬ್ದಾರಿ ಕೆಲವರಲ್ಲಿ ಬರುತ್ತದೆ. ಇನ್ನು ಕೆಲವರಲ್ಲಿ ಅದೇ ಉಡಾಫೆ ಮತ್ತು ಅದೇ ತಿಕ್ಕಲುತನ ಮುಂದುವರೆಯುತ್ತಿ ರುತ್ತದೆ. ಯುವಜನತೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಒಂದಿಷ್ಟು ಗುಣಗಳನ್ನು ಮೈಗೂಡಿಸಿಕೊಳ್ಳಬೇಕು.

1 ಆಫೀಸ್ ಪೊಲಿಟಿಕ್ಸ್ ಎದುರಿಸುವುದನ್ನು ಕಲಿಯಿರಿ. ಕಿರುಚುವುದರಿಂದ ಅಥವಾ ಕಠಿಣವಾಗಿ ವರ್ತಿಸುವುದರಿಂದ ಅದನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಗಟ್ಟಿಯಾದ ಅಥವಾ ದೃಢ ವ್ಯಕ್ತಿತ್ವ ಹೊಂದಿರಿ.

2 ಅನವಶ್ಯಕವಾಗಿ ಯಾರ ಜೊತೆಗೂ ವಾಗ್ವಾದ, ಚರ್ಚೆ ಮಾಡುತ್ತಾ ಸಮಯ ವ್ಯರ್ಥ ಮಾಡಬೇಡಿ.

3 ನಿಮ್ಮಿಂದಾಗುವ ಕೆಲಸಕ್ಕೆ ಮಾತ್ರವೇ ಮುಂದಾಗಿ. ಇತಿಮಿತಿಗಳನ್ನು ಅರಿತಿರಿ.

4 ಆಗುವ ಅನಾಹುತಗಳಿಗೆ ಯಾರನ್ನೂ ದೂರಬೇಡಿ.

5 ತಳ ಸೀಯುತ್ತಿದ್ದರೂ ಖುಷಿಯಾಗಿರುವುದನ್ನು ಬಿಡಬೇಡಿ.

6 ಹೊಗಳಿಕೆಗೆ ಹಿಗ್ಗಬೇಡಿ, ತೆಗಳಿಕೆಗೆ ಕುಗ್ಗಬೇಡಿ.

7 ನಿಮ್ಮ ಕೆಲಸದ ಮೇಲಷ್ಟೇ ನಿಮ್ಮ ಗಮನವಿರಲಿ. ಯಾರೋ ಗಮನಿಸುತ್ತಿದ್ದಾರೆ ಎಂದು ಯಾವತ್ತಿಗೂ ಕೆಲಸ ಮಾಡಬೇಡಿ.

8 ಯಾರ ಮುಂದೆಯೂ ಸೊಂಟ ಬಗ್ಗಿಸಬೇಡಿ; ಗುಲಾಮರಾಗಬೇಡಿ.

9 ಭೂತ ಮತ್ತು ಭವಿಷ್ಯದ ಬಗ್ಗೆ ಚಿಂತಿಸದೇ ವರ್ತಮಾನದಲ್ಲಿ ಜೀವಿಸುವುದನ್ನು ಕಲಿಯಿರಿ.

10 ನಿಮ್ಮ ಶಕ್ತಿಯೆಲ್ಲಾ ಬದುಕುವುದರ ಕಡೆಗಿರಲಿ. ವಿನಾ ಕಾರಣ ಇನ್ನೊಬ್ಬರ ಬಗ್ಗೆ ಯೋಚಿಸುತ್ತಾ ಸಮಯ ವ್ಯಯಿಸಬೇಡಿ.

11 ನಿಮ್ಮಿಂದ ತಪ್ಪುಗಳಾದಾಗ, ಆ ತಪ್ಪನ್ನು ಒಪ್ಪಿಕೊಳ್ಳಿ.

12 ಎಲ್ಲರ ಗೆಲುವನ್ನೂ ಸಂಭ್ರಮಿಸಿ. ನಿಮ್ಮ ವಿರೋಧಿಗಳ ಗೆಲುವಿಗೂ ಮೆಚ್ಚುಗೆ ಕೊಡಿ.

13 ಏಕಾಂತವನ್ನು ಅನುಭವಿಸಿ. ಏಕಾಂತದಲ್ಲಿ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಇದೆ.

14 ಕೆಟ್ಟ ಯೋಚನೆಗಳಲ್ಲಿ ಮುಳುಗುವುದರಿಂದ ಮನಸ್ಸಷ್ಟೇ ಅಲ್ಲ ದೇಹವೂ ಕೊಳಕಾಗುತ್ತದೆ. ಬೇಡದ ವಿಷಯಗಳ ಬಗ್ಗೆ ಯೋಚನೆಯೂ ಬೇಡ. ಮಾತನಾಡುವುದೂ ಬೇಡ.

15 ಹೋದೆಡೆಯಲ್ಲೆಲ್ಲಾ, ನೀರಿನಂತೆ ಹೊಂದಿಕೊಂಡುಬಿಡಿ.

16 ಯಾವುದಕ್ಕೂ ಡಿಮ್ಯಾಂಡ್ ಮಾಡಬೇಡಿ. ಕಮ್ಯಾಂಡ್ ಮಾಡಿ!

17 ಸವಾಲುಗಳನ್ನೆದುರಿಸುವ ಜಾಣ್ಮೆ ಇರಲಿ. ಯೋಚನೆ ಮಾಡಿ. ಯೋಜನೆ ರೂಪಿಸಿ. ನಂತರವೇ ಕಾರ್ಯಾಚರಣೆ ಇರಲಿ.

18 ತಾಳ್ಮೆ ಹೊಂದಿರಿ. ಯಶಸ್ಸು ಸಿಗುವವರೆಗೂ ಕೆಲಸ ಮಾಡುತ್ತಲೇ ಇರಿ.

19 ಸೋಲುವುದಕ್ಕೆ ಸದಾ ಸಿದ್ಧರಿರಿ. . ಸೋಲನ್ನು ಅರಗಿಸಿಕೊಳ್ಳುವುದೂ ಕೂಡ ಗೆಲುವಿನ ಭಾಗ ಎಂಬುದನ್ನು ನೆನಪಿಡಿ.

20 ಉನ್ನತ ಹುದ್ದೆಯಲ್ಲಿದ್ದರೂ, ಜೊತೆಗಿರುವವರನ್ನು ಸಹೋದ್ಯೋಗಿಗಳೆಂದೇ ಭಾವಿಸಿ ಮತ್ತು ಅವರನ್ನು ಜೊತೆಗೇ ಕರೆದೊಯ್ಯಿರಿ. ಅಧೀನದಲ್ಲಿ ಕೆಲಸ ಮಾಡುವವರು ಎಂದು ಕೀಳಾಗಿ ಕಾಣದಿರಿ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಆತನಲ್ಲೇನೋ ಕಂಡಿತು ನಾವೀನ್ಯ (4)
6. ಪುತ್ರಿ, ತನಯೆ (3)
7. ವಿರಳವಾಗಿ ಬಂದಿರುವ ಹೋಮ (3)
8. ಜಗಲಿಯಲ್ಲಿ ಕುಳಿತು ಹಿಡಿದ ಬೊಗಸೆ (3)
9. ಕಬ್ಬು ಇರುವುದು ಓರೆಕೋರೆ (4)
10. ಕವಿಯು ಬರೆದಿರುವ ಪದ್ಯ (3)
12. ಚಿನ್ನವಲ್ಲ, ಬೆಳ್ಳಿ (3)
14. ಎರಡು ಕಡೆಯಿಂದ ನೋಡಿದರೂ ವಂದನೆ (3)
15. ಮತ್ತು ಬರಿಸಿದಂತಿದೆ ಕೈಚಳಕ (4)
16. ಹಿಂದೆ ಬಳಕೆಯಲ್ಲಿದ್ದ ನಾಣ್ಯ (3)
18. ಸಾರ ಹೀನವಾದದ್ದು (3)
20. ಸಡಗರ, ಹಬ್ಬ (3)
21. ಯುದ್ಧದ ಭೂಮಿ (4)

ಮೇಲಿಂದ ಕೆಳಕ್ಕೆ

1. ಕೈಗೆ ಎಟುಕದ ಹೂ! (6)
3. ಸ್ವಾಭಾವಿಕ (3)
4. ನೆಲದ ಮೇಲ್ಮೈ ನುಣುಪು (2)
5. ಸ್ವಾಭಿಮಾನಿಗೆ ಮತ್ತೊಂದು ಹೆಸರು (4)
8. ಬೀಜದಿಂದಾದ ಮೊಳಕೆ (3)
11. ಈ ಉತ್ಸವದಲ್ಲಿ ಆಭರಣವೂ ಇದೆ! (6)
13. ಕಲಿಯುವಾಗ ತಂದ ನೂಲನ್ನು ತೆಗೆಯುವ ಉಪಕರಣ (3)
14. ಹೊಸದಾಗಿ ತಂದ ಬೆಣ್ಣೆ (4)
17. ಹೆಬ್ರಿಯ ಬಳಿಯಿರುವ ದೇಗುಲ ಕೆರೆಯ ನಡುವೆ ಇದೆ (3)
19. ಮಾಲೆ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ದಾಖಲೆ ಓಟ!

• ಪುರುಷೋತ್ತಮ್ ವೆಂಕಿ

ಬಡತನ, ಅಂಗವಿಕಲತೆ, ಅವಹೇಳನ, ಮಾನಸಿಕ ಹಿಂಜರಿಕೆ ಇವುಗಳೆಲ್ಲವನ್ನು ಮೆಟ್ಟಿನಿಂತು ಅರ್ಜುನ ಪ್ರಶಸ್ತಿ ಪಡೆದ ಯುವತಿ ಅವರೇ ದೀಪ್ತಿ ಜೀವನ್‌ಜಿ. ತೆಲಂಗಾಣದ ವರಂಗಲ್ ಜಿಲ್ಲೆಯ ಕಲ್ಲೆಡ ಎಂಬ ಪುಟ್ಟ ಗ್ರಾಮದಲ್ಲಿ ಸೆಪ್ಟಂಬರ್ 27, 2003ರಂದು ಜನಿಸಿದ ದೀಪ್ತಿಯವರದ್ದು ಬಡತನದ ಕುಟುಂಬ; 9ನೇ ತರಗತಿ ಓದುವಾಗ ಶಾಲೆಯ ಶಿಕ್ಷಕರು ದೀಪ್ತಿಯವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರು. ತರಬೇತುದಾರ ನಾಗಪುರಿ ರಮೇಶ್ ಅವರಿಂದ ತರಬೇತಿ ಪಡೆದರು. ಹೈದರಾಬಾದಿನ ಬೌದ್ಧಿಕ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ಸಬಲೀಕರಣಕ್ಕಾಗಿರುವ ರಾಷ್ಟ್ರೀಯ ಸಂಸ್ಥೆಯಲ್ಲಿ ಪರೀಕ್ಷೆ ಮಾಡಿಸಿಕೊಂಡು, ಮಾನಸಿಕ ಅಂಗವಿಕಲರ ವರ್ಗದ ಅಡಿಯಲ್ಲಿ ಪ್ಯಾರಾ ಅಥ್ಲೀಟ್ ಆಗಿ ಭಾಗವಹಿಸಲು ಅವಕಾಶ ಪಡೆದರು. ಈ ವಿಭಾಗದ ದೇಶದ ಮೊದಲ ಕ್ರೀಡಾಪಟು ದೀಪ್ತಿ ಜೀವನ್‌ಜಿ. 2022 ರ ಹ್ಯಾಂಗ್ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಸ್ಪರ್ಧಿಸಲು ದೀಪ್ತಿ ಅವರು ಆಯ್ಕೆಯಾಗಿ, ಏಷ್ಯನ್ ಪ್ಯಾರಾ ರೆಕಾರ್ಡ್ ಜತೆ ಚಿನ್ನದ ಪದಕವನ್ನು ಗೆದ್ದರು. ಅಕ್ಟೋಬರ್ 24, 2023 ರಂದು ನಡೆದ ಟಿ20 ಸ್ಪರ್ಧೆಯಲ್ಲಿ 400 ಮೀ ಓಟದಲ್ಲಿ, 56.69 ಸೆಕೆಂಡುಗಳ ಸಾಧನೆಯೊಂದಿಗೆ ಚಿನ್ನದ ಪದಕ ಪಡೆದರು. ಭುವನೇಶ್ವರದಲ್ಲಿ ನಡೆದ ವಿಶ್ವವಿದ್ಯಾಲಯ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನದ ಪದಕ ಪಡೆದು ಜಪಾನಿನಲ್ಲಿ ನಡೆದ 2024 ರ ವಿಶ್ವ ಪ್ಯಾರಾಲಿಂಪಿಕ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲು ಆಯ್ಕೆಯಾದರು.

ಜಪಾನಿನಲ್ಲಿ ನಡೆದ 2024 ರ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಮೊದಲ ಕ್ರೀಡಾಪಟು ದೀಪ್ತಿ ಜೀವನ್‌ಜಿ; ಮಹಿಳೆಯರ 400 ಮೀಟರ್ ಸ್ಪರ್ಧೆಯಲ್ಲಿ, 55.07 ಸೆಕೆಂಡುಗಳಲ್ಲಿ ಓಡಿ, ಚಿನ್ನದ ಪದಕ ಗೆದ್ದು ವಿಶ್ವ ದಾಖಲೆಯನ್ನು ಸ್ಥಾಪಿಸಿದರು.

ದೀಪ್ತಿಯವರ ಸಾಧನೆಯನ್ನು ಗುರುತಿಸಿದ ಕೇಂದ್ರ ಸರ್ಕಾರವು ದೀಪ್ತಿ ಜೀವನ್‌ಜಿ ಅವರಿಗೆ 2024 ರ ಸಾಲಿನ ಅರ್ಜುನ ಪ್ರಶಸ್ತಿಯನ್ನು ನೀಡಿತು. ಜೀವನದಲ್ಲಿ ಸಾಧನೆ ಮಾಡುವ ಛಲವಿದ್ದರೆ, ಬಡತನದ ಸವಾಲಿದ್ದರೂ, ಸಾಧ್ಯವಿದೆ ಎಂಬುದನ್ನು ದೀಪ್ತಿಯವರು ತೋರಿಸಿಕೊಟ್ಟಿದ್ದಾರೆ.

ಇಕಿಗಾಯ್



ಜಪಾನಿನ ಗ್ರಾಮೀಣ ಪ್ರದೇಶದಲ್ಲಿ ಹಲವು ಶತಾಯುಷಿಗಳು, ನೆಮ್ಮದಿಯಿಂದಿದ್ದಾರೆ. ಅವರ ನೆಮ್ಮದಿಯ ರಹಸ್ಯವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಗೊತ್ತಾದ ಹಲವು ಸಂಗತಿಗಳಲ್ಲಿ ಒಂದು ಎಂದರೆ 'ಇಕಿಗಾಯ್'. ದೀರ್ಘ ಮತ್ತು ನೆಮ್ಮದಿಯ ಬದುಕಿನ ರಹಸ್ಯವೇ ಇಕಿಗಾಯ್ ಎಂದು ಗುರುತಿಸಲಾಗಿದ್ದು, ಈ ಕುರಿತು 'ಇಕಿಗಾಯ್' ಎಂಬ ಪುಸ್ತಕವೂ ಬಂದಿದೆ. ಆನ್‌ಲೈನ್‌ನಲ್ಲಿ ದೊರಕುವ ಈ ಪುಸ್ತಕದಲ್ಲಿ ನೆಮ್ಮದಿಯ ಬದುಕಿಗೆ ಹಲವು ಸಲಹೆಗಳಿವೆ.

ಬಡಿದಾಟದಲ್ಲೂ ಅರ್ಥ ಅಡಗಿದೆ!

ವ್ಯರ್ಥವೀ ಜೀವನದ ಬಡಿದಾಟವೆನ್ನದಿರು
ಅರ್ಥವಹುದದು ನಿನಗೆ ಪೂರ್ಣದರ್ಶನದಿಂ
ನರ್ತಿಪನು ಜಡಜೀವರೂಪಂಗಳಲಿ ಬೊಮ್ಮ
ಪೂರ್ತಿಯಿದನರಿಯೆ ಸೊಗ – ಮಂಕುತಿಮ್ಮಂ

ಈ ಜೀವನವನ್ನು ನಡೆಸಲು ಮಾಡುವ ಹೋರಾಟ, ಹಾರಾಟಗಳನ್ನು ಎಂದಿಗೂ ವ್ಯರ್ಥ ಎನ್ನಬಾರದು. ನಮ್ಮಯ ಬದುಕನ್ನು ನಾವುಗಳು ಪೂರ್ಣ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಮಾತ್ರವೇ ನಮಗೆ ಈ ಜೀವನದ ಪೂರ್ಣ ದರ್ಶನ ವಾಗುವುದು. ಆ ಪರವಸ್ತುವು ಈ ಜಗತ್ತಿನಲ್ಲಿಯ ಎಲ್ಲಾ ಚರಾಚರವಸ್ತುಗಳಲ್ಲಿ ಇದ್ದವನಾಗಿದ್ದುದರ ಸತ್ಯವನ್ನು ಅರಿಯುವಂತಾಗಬೇಕು. ಅಂತಹ ಪರಮಸತ್ಯವನ್ನು ನಾವು ಅರಿತಾಗಲೇ ಈ ಬದುಕು, ಈ ಜೀವನ ಎಂಬುದು ಬಲು ಸೊಗ ಸಾಗಿ ಕಾಣುವುದು ಎಂದು ಈ ಕಗ್ಗದಲ್ಲಿ ಹೇಳಿದ್ದಾರೆ.



ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಇಲ್ಲಿ ಹುಟ್ಟಿದ ಮೇಲೆ ಹೋರಾಟ, ಹಾರಾಟ, ಚೀರಾಟವೆಲ್ಲವೂ ಬದುಕಿಗಾಗಿ ಇರುವಂತಹುದೇ ಆಗಿವೆ. ಇಲ್ಲಿ ಹುಟ್ಟಿದ ಮೇಲೆ ನಮ್ಮ ಬದುಕನ್ನು ಕಟ್ಟಿಕೊಳ್ಳಲು ಹೋರಾಟ ಮಾಡುವುದು ಅನಿವಾರ್ಯವೂ ಆಗಿರುತ್ತದೆ. ಅಂಥಹ ಹೋರಾಟಗಳು ಎಂದಿಗೂ ವ್ಯರ್ಥವೆನಿಸಬಾರದು. ಇಲ್ಲಿ ಹುಟ್ಟಿದ ಮೇಲೆ ನೀಗಲೇ ಬೇಕು; ಈಸಬೇಕು ಇದ್ದು ಜಯಿಸಬೇಕು ಎಂಬುದು ಸರ್ವವಿಧಿತವೂ ಹೌದು.

ಹಾಗಾಗಿ ಇಲ್ಲಿ ನಡೆಸುವ ಬಡಿದಾಟ, ಹೋರಾಟ, ಹಾರಾಟ, ಚೀರಾಟಗಳೆಲ್ಲವೂ ವ್ಯರ್ಥವಲ್ಲ, ನಾವು ಏನೇ ಮಾಡಿದರೂ ಅವು ನಮ್ಮ ಮನಸ್ಸಿನ ಆಟಗಳು. ಈ ಮನಸ್ಸು ಎಂಬುದು ಈ ಜಗದೊಂದಿಗಿನ ಸಮಬಂಧವನ್ನು ಏರ್ಪಡಿಸುವುದು ಪಂಚೇಂದ್ರಿಯಗಳ ಮೂಲಕವೇ ಎಂಬುದೂ ಸಹ ಸತ್ಯವೇ ಆಗಿದೆ. ಈ ಜಗತ್ತು ಅಪರಿಮಿತವಾಗಿದ್ದು ನಾವು ನಮ್ಮ ಪಂಚೇಂದ್ರಿಯಗಳಿಗೆ ಎಷ್ಟು ಎಟಕುವುದೋ ಅಷ್ಟನ್ನು ಮಾತ್ರವೇ ನೋಡುತ್ತೇವೆ. ಆ ಭಗವಂತನು ಜಡ ರೂಪದ ಈ ದೇಹಕ್ಕೆ ಚೈತನ್ಯ ಭರಿತವಾದ ಚೇತನವನ್ನಿಟ್ಟು ಈ ಜಗತ್ತಿನ್ನು ನೋಡಲು, ಜೀವಿಸಲು ನಮಗೆ ಅವಕಾಶ ಕೊಟ್ಟಿದ್ದಾನೆ.

ಅದೇ ರೀತಿ ಆ ಪರಬೊಮ್ಮನು ಜಡವಸ್ತುಗಳಲ್ಲೂ, ಜೀವಿಗಳಲ್ಲೂ ಹೀಗೆ ಚರಾಚರ ವಸ್ತುಗಳಲ್ಲೂ ತುಂಬಿ ಕೊಂಡಿದ್ದು ಅಂತಹ ಪರಾಶಕ್ತಿಯ ಪರವಸ್ತುವನ್ನು ನಾವು ನೋಡುವಂತಾಗಬೇಕು. ಹೀಗೆ ಚರಾಚರವಸ್ತು ಗಳಲ್ಲೂ ಅದಮ್ಯವಾಗಿರುವ ಶಕ್ತಿಯನ್ನು, ಸೌಂದರ್ಯವನ್ನ, ಸೊಬಗನ್ನು ನಾವು ಕಾಣಲು ಯತ್ನಿಸಿದರೆ ಮಾತ್ರವೇ ಈ ಬದುಕು, ಈ ಜೀವನದ ಸಾಕ್ಷಾತ್ಕಾರವಾಗುವುದು. ಅಂತಹ ಪರಿಸ್ಥಿತಿಯಿಂದಲೇ ನಮ್ಮ ಜೀವನ ಔನತ್ಯಕ್ಕೆ ಏರುವುದು. ಅಂತಹ ಮನಸ್ಥಿತಿ ಏರ್ಪಟ್ಟಾಗಲೇ ಈ ಬದುಕು ಎಂಬುದು ಸೊಬಗಾಗಿ ನಮಗೆ ಕಾಣಿಸುವಂತಾಗುವುದು. ಆದುದರಿಂದ ಈ ಬಾಳನ್ನು ನಮ್ಮ ವ್ಯಾಪ್ತಿಗನುಗುಣವಾಗಿ ಕೇವಲ ಪಂಚೇಂದ್ರಿಯಗಳ ಮುಖಾಂತರ ನೋಡದೆ, ಅಂತರಂಗದ ಇಂದ್ರಿಯಗಳನ್ನು ತೆರೆದು ನೋಡಿ ದಾಗ ಮಾತ್ರ ಆ ಭಗವಂತನ ಅಗಾಧತೆ, ಆತನ ಅಪರಿಮಿತತೆ, ಆತನ ಅದಮ್ಯತೆಯು ನಮ್ಮ ಅರಿವಿಗೆ ಬರುತ್ತದೆ. ಕೇವಲ ಕುಬ್ಜ ಮನಸ್ಸಿನಿಂದ ಈ ಜಗತ್ತನ್ನು ನೋಡದೆ ಈ ಜಗದ ಎಲ್ಲಾ ಜೀವ ಸಂಕುಲಗಳಲ್ಲೂ, ಎಲ್ಲಾ ವಸ್ತು ಗಳಲ್ಲೂ ಆ ಪರವಸ್ತು ಇರುವುದನ್ನು ಗಮನಿಸುವ ಮನಸ್ಥಿತಿ ಬಂದಾಗ ಮಾತ್ರವೇ ಈ ಬದುಕು, ಈ ಜೀವನ ಬಲು ಸೊಗಸಾಗಿ ಕಾಣುತ್ತದೆ. ಆದುದರಿಂದ ಕೇವಲ 'ಬಹಿರಂಗ ಶುದ್ಧಿಯೊಟ್ಟಿಗೆ ಅಂತರಂಗದ ಶುದ್ಧೀಕರಣ ಮಾಡಿಕೊಂಡು, ಎಲ್ಲರೊಳಗಿಂದಾಗಿ, ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ' ಎಂಬ ಭಾವ ಮೊಳೆತಾಗ ಮಾತ್ರವೇ ಈ ಜಗತ್ತು ಬಲು ಸುಂದರವಾಗಿ ನಮ್ಮ ಬದುಕು ಸೊಗಸಿನಿಂದ ಕೂಡಿರುತ್ತದೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ. ಇಲ್ಲಿ ಯಾವುದೂ ವ್ಯರ್ಥವಂತೂ ಅಲ್ಲವೇ ಅಲ್ಲ, ಎಲ್ಲದಕ್ಕೂ ಒಂದು ಅರ್ಥವಿದೆ ಎನ್ನುವ ಈ ಭಾವ ಮನದಲ್ಲಿ ಮೊಳೆಯುವುದು ನಮ್ಮಲ್ಲಿ ಎಲ್ಲವನ್ನೂ ಪ್ರೀತಿಸುವ ಗುಣ ಇದ್ದಾಗ ಮಾತ್ರ. ನಮ್ಮಲ್ಲಿ ಪ್ರೀತಿಸುವ ಹಂಬಲತೆ ಉತ್ಕಟವಾಗಿ ದ್ದಾಗ ನಾವು ಯಾರನ್ನೂ ದ್ವೇಷಿಸುವ ಪ್ರಮೇಯವೇ ಇರುವುದಿಲ್ಲ.

ಅಂತರಂಗದ ಶುದ್ಧತೆ, ಎಲ್ಲವನ್ನೂ ಪ್ರೀತಿಸುವ ಮನೋಭಾವ ಇದ್ದಾಗ ಈ ಜಗತ್ತಿನಲ್ಲಿ ನಡೆಸುವ ನಮ್ಮಯ ಯಾವುದೇ ಕೆಲಸಗಳೂ ಸಹ ವ್ಯರ್ಥ ಎನ್ನಿಸುವುದಿಲ್ಲ ಎಂಬುದು ಈ ಪದ್ಯದ ಅರ್ಥವಾಗಿದೆ.

ನಂಬುವುದಾದರೆ ಸಂಪೂರ್ಣ ನಂಬು ಎನ್ನುವ ಶ್ರೀಕೃಷ್ಣ

ಒಂದೆಡೆ ಶ್ರೀಕೃಷ್ಣ ಹೇಳುತ್ತಾನೆ 'ನನ್ನನ್ನು ನಂಬುತ್ತೀಯಾ? ನಂಬುವುದಾದರೆ ಪೂರ್ತಿಯಾಗಿ ನಂಬು. ಅನುಮಾನವಿಲ್ಲದೆ, ಶುದ್ಧ ಮನಸ್ಸಿನಿಂದ ಮಗು ತಾಯಿಯನ್ನು ಅಪ್ಪುವ ಹಾಗೆ ನಂಬು.ಹಾಗಿದ್ದಲ್ಲಿ ಮಾತ್ರ ನಾನು ನಿನಗೆ ಸಿಗುತ್ತೇನೆ.'

ಶ್ರೀಕೃಷ್ಣ ಹುಟ್ಟುವ ಮೊದಲೇ ಆತನ ಸಾವು ಆತನಿಗಾಗಿ ಕಾಯುತ್ತಿತ್ತು, ಸೋದರ ಮಾವನ ರೂಪದಲ್ಲಿ. ಹೆತ್ತ ತಾಯಿಗೆ ಆತ ದಕ್ಕಲಿಲ್ಲ. ಸಲುಹಿದ ತಾಯಿಗೆ ಆತ ಸಿಗಲಿಲ್ಲ. ಪ್ರೀತಿಸಿದ ರಾಧೆಯ ಪ್ರೀತಿ ಪೂರ್ತಿ ಆಗಲಿಲ್ಲ. ಆತ ತನಗೆ ಸಿಕ್ಕಿದ ಅಂತ ಅಂದು ಕೊಂಡವರಿಗೆ ಸುಳ್ಳಾದ. ಒಟ್ಟಿನಲ್ಲಿ ಶ್ರೀಕೃಷ್ಣ ಒಂದು ಚೌಕಟ್ಟಿನಲ್ಲಿ ಸಿಗದ ವ್ಯಕ್ತಿತ್ವ ಆದರೂ ಪ್ರತಿಯೊಂದೂ ಸಂಬಂಧ ಬಾಂಧವ್ಯವನ್ನೂ ಸಮರ್ಥವಾಗಿ ನಿಭಾಯಿಸಿದ ಆದರ್ಶ ಶ್ರೀಕೃಷ್ಣ.

ಕೃಷ್ಣನ ಕಥೆ ಓದಿದ ಮೇಲೆ ನಮಗೆ ಅಲ್ಲಿ ಸಿಗುವುದೇನು? ಪ್ರೀತಿಸಿ ಮುದ್ದಿಸಬೇಕಾದ ಮಾವನಾದ ಕಂಸ ಪ್ರೀತಿ ನಮಗೂ ಸಿಗಬಹುದು. ತಾಯಿಯಂತೆ ಬಂದು ಮೊಲೆಯುಣಿಸುವ ಪೂತನಿಯೂ ನಮಗೆ ಸಿಗಬಹುದು. ಏನೂ ಬಯಸದ ಶುದ್ಧ ಹೃದಯದ ಪ್ರೀತಿ ಕೊಡುವ ರಾಧೆಯೂ ನಮಗೆ ಭೇಟಿಯಾಗಬಹುದು. ಕೃಷ್ಣ ಸಾಹಸವಂತ, ಲೋಕ ವಿಖ್ಯಾತ ಎಂದು ಮದುವೆಯಾದ ರುಕ್ಮಿಣಿ. ಪ್ರೀತಿಸಿ ಹಠ ಮಾಡಿ ಮದುವೆಯಾದ ಸತ್ಯಭಾಮೆ. ಅಪ್ಪ, ಅಮ್ಮನಾದರೂ ಅನಿವಾರ್ಯವಾಗಿ ಪ್ರೀತಿ ಮಾಡಲಾಗದ ಜೊತೆಯಾಗಿ ಇರಲಾಗದ ಮುಗ್ಧ ದೇವಕಿ ವಸುದೇವರು. ಯಾರದ್ದೋ ಮಗುವನ್ನು ತನ್ನದೆಂದು ಮುದ್ದಿಸುವ ಯಶೋದೆ, ನಂದಗೋಪನಂಥವರೂ ನಮಗೆ ಸಿಗಬಹುದು.

ಪ್ರತಿಕ್ಷಣವೂ ಧ್ಯಾನಿಸುವ ಅರ್ಜುನ. ನೀನೇ ದೈವ ಎಂದು ನಂಬಿ ಪ್ರಾಣ ಕೊಡಲೂ ಸಿದ್ಧವಾಗಿರುವ ಕುಂತಿ ಮತ್ತು ಕುಂತಿ ಪುತ್ರರು ಮತ್ತು ಅವರ ಜವಾಬ್ದಾರಿಗಳು. ಸಖಿಯಂಥಹ ಸಹೋದರಿ ದ್ರೌಪದಿ. ಒಳಗೊಳಗೆ ದೈವವೆಂದು ಪ್ರಾರ್ಥಿಸುವ, ಎದುರಿಗೆ ಧರ್ಮಕ್ಕೆ ಗಂಟು ಬಿದ್ದು ವಿರೋಧಿಸುವ ಭೀಷ್ಮ, ದ್ರೋಣ, ಕೃಪಾಚಾರ್ಯ. ಅತ್ತಿಗೆ, ತಾಯಿಯೆಂದು ತಿಳಿದರೂ ಮಾನಭಂಗಕ್ಕೆ ಎದುರಾಗುವ ದುರುಳ ಕೌರವರು. 'ನಿನ್ನನ್ನು ನಂಬುವುದೇ ಇಲ್ಲ' ಎಂದು ಧಿಕ್ಕರಿಸಿ, ಎದುರಿಸುವ ಧುರ್ಯೋಧನ ಶಕುನಿ, ದುಶ್ಯಾಸನ, ಶಿಶುಪಾಲ, ಜರಾಸಂಧ. ಮಗುವಿನಂಥಹ ಗೆಳೆಯ ಸುಧಾಮ. ದೈವವೆಂದು ಪ್ರಾರ್ಥಿಸುವ ವಿಧುರ. ಸ್ವಲ್ಪ ಖ್ಯಾತಿ ಸಿಕ್ಕಿದರೆ ಸಾಕು, ತಾವು ದೈವ ವಂಶದವರು ಎಂದು ಹಾರಾಡುವ ಯದು ವಂಶದವರು, ಕಷ್ಟದ ಮಹತ್ವ ತಿಳಿಯದ ಮಕ್ಕಳು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಬದುಕಿನುದ್ದಕ್ಕೂ ನ್ಯಾಯ, ಧರ್ಮ ಸಂಸ್ಥಾಪನೆಗಾಗಿ ಹೋರಾಡಿ, ತಂತ್ರ, ಕಪಟ ನೀತಿಯನ್ನೂ ತನ್ನದಾಗಿಸಿ ಜಗತ್ತು ಬಿಟ್ಟು ಹೋಗುವಾಗ ಎಲ್ಲವನ್ನೂ ಇಲ್ಲಿಯೇ ಬಿಟ್ಟು ಏನನ್ನೂ ತನ್ನೊಡನೆ ಒಯ್ಯದ ಎಲ್ಲಾ ಐಹಿಕ, ಲೌಕಿಕ, ಲೋಕದೊಳಗಿದ್ದು, ಏನನ್ನೂ ಅಂಟಿಸಿಕೊಳ್ಳದೆ ಕೊನೆಯಲ್ಲಿ ತನ್ನ ಕುಲ, ವಂಶ ನಾಶ ಆಗುವುದನ್ನೂ ನೋಡಿ ಕೇವಲ ಬದುಕಿನ ಕರ್ತವ್ಯವನ್ನು ನಿಭಾಯಿಸುವ ಶ್ರೀಕೃಷ್ಣ.

ದುಷ್ಟರನ್ನು ನಿಗ್ರಹಿಸಲು ಧರ್ಮ ಸಂಸ್ಥಾಪನೆಗಾಗಿ ಕೃಷ್ಣನ ಬಾಳು, ದೇವರ ಅವತಾರವಷ್ಟೇ ಅಲ್ಲ ನಮ್ಮ ಪ್ರಸ್ತುತ ಬದುಕಿಗೂ ಉದಾಹರಣೆ ಮತ್ತು ಯಾವತ್ತಿಗೂ ನಮಗೆ ಆದರ್ಶ.

ನಮಗೂ ಸಹ ದುರ್ಯೋಧನ, ದುಶ್ಯಾಸನ, ಶಕುನಿ, ಕರ್ಣರು ಎದುರಾಗಬಹುದು; ನಮಗೆ ಸಿಕ್ಕ ಪ್ರತಿಯೊಬ್ಬರೊಡನೆ ನಾವು ಹೇಗಿರಬೇಕು? ಹೇಗೆ ವ್ಯವಹರಿಸ ಬೇಕು? ಎನ್ನುವುದಕ್ಕೆ ಶ್ರೀಕೃಷ್ಣ ಅತ್ಯುತ್ತಮ ಉದಾಹರಣೆ. ವೈರಿಯೊಡನೆ, ಸ್ನೇಹಿತರೊಡನೆ, ಸಹೋದರಿ ದ್ರೌಪದಿಯಂತವರೊಡನೆ, ಪ್ರೇಮಿ, ಮಡದಿ ಗೆಳೆಯರೊಡನೆ ಶ್ರೀಕೃಷ್ಣನ ನಡವಳಿಕೆಯೇ ಅನುಕರಣೀಯ.

ಸಂಬಂಧ...ಬಾಂಧವ್ಯ... ಬದುಕಿನ ರಾಜಕೀಯಗಳನ್ನು ಹೇಗೆ ನಿಭಾಯಿಸ ಬೇಕು? ಎನ್ನುವುದಕ್ಕೆ ಶ್ರೀಕೃಷ್ಣ... ನಮಗೆ ಅತ್ಯುತ್ತಮ ಆದರ್ಶ....ಅಂದಿಗೂ... ಇಂದಿಗೂ... ಎಂದೆಂದಿಗೂ... ಆತ ಒಂದು ಚೌಕಟ್ಟಿನೊಳಗೆ ಎಂದೂ ಸಿಗುವುದೇ ಇಲ್ಲ. ಶ್ರೀಕೃಷ್ಣ ಹೀಗೆ ಎಂದು ಯಾವತ್ತಿಗೂ ಹೇಳಲಾಗುವದಿಲ್ಲ. ನಮ್ಮ ಬುದ್ಧಿಮಟ್ಟ ಎಷ್ಟಿದೆಯೋ ಅಷ್ಟು ಮಾತ್ರ ಆತ ನಮಗೆ ದಕ್ಕುತ್ತಾನೆ. ಇಂತಹ ಭಗವಂತನ ಜೀವನ ಆದರ್ಶ ಬದುಕು ನಮಗೆ ನಿತ್ಯ ಪ್ರೇರಣೆ.

ಕೃಷ್ಣ ಒಂದೇ ಜಗದ್ಗುರುಂ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕರ್ನಾಟಕಕ್ಕೆ ಸೌರಾಷ್ಟ್ರ ಮೊದಲ ಎದುರಾಳಿ

ಬೆಂಗಳೂರು: ದೇಶಿ ಕ್ರಿಕೆಟ್ ರಾಜ ಎಂದೇ ಕರೆಸಿಕೊಳ್ಳುವ ರಣಜಿ ಟ್ರೋಫಿ ಟೂರ್ನಿಯು ಈ ಸಲ ಅಕ್ಟೋಬರ್ 15ರಿಂದ ಆರಂಭವಾಗಲಿದೆ. ಹೋದ ವರ್ಷದ ಮಾದರಿಯಲ್ಲಿಯೇ ಎರಡು ಹಂತಗಳಲ್ಲಿ ಟೂರ್ನಿಯು ಆಯೋಜನೆಗೊಳ್ಳಲಿದೆ. ಕರ್ನಾಟಕ ತಂಡವು ತನ್ನ ಮೊದಲ ಪಂದ್ಯದಲ್ಲಿ ಸೌರಾಷ್ಟ್ರದ ಎದುರು ಕಣಕ್ಕಿಳಿಯಲಿದೆ. ಪಂದ್ಯವು ಅ.15ರಿಂದ 18ರ ವರೆಗೆ ರಾಜ್‌ಕೋಟ್‌ನಲ್ಲಿ ನಡೆಯಲಿದೆ. ಎಲೈಟ್ ಹಂತದಲ್ಲಿ ಕರ್ನಾಟಕವು ಸೌರಾಷ್ಟ್ರ, ಗೋವಾ, ಕೇರಳ, ಮಹಾರಾಷ್ಟ್ರ, ಚಂಡೀಗಢ, ಮಧ್ಯಪ್ರದೇಶ ಮತ್ತು ಪಂಜಾಬ್ ತಂಡಗಳನ್ನು ಎದುರಿಸಲಿದೆ. ಟೂರ್ನಿಯ ಲೀಗ್ ವಿಭಾಗದ ಮೊದಲ ಹಂತವು ಅ.15ರಿಂದ ನವೆಂಬರ್ 19ರ ವರೆಗೆ ನಡೆಯಲಿದ್ದು, ಇದರಲ್ಲಿ ಐದು ಪಂದ್ಯಗಳು ಇರಲಿವೆ. ಎರಡನೇ ಹಂತವು 2026ರ ಜನವರಿ 22 ರಿಂದ ಫೆ.1ರ ವರೆಗೆ ನಡೆಯಲಿದೆ. ನಾಕೌಟ್ ಹಂತವು ಫೆ. 6ರಿಂದ 28ರವರೆಗೆ ಆಯೋಜನೆಗೊಳ್ಳಲಿದೆ.

ಪಾಕಿಸ್ತಾನದ ಶಾಹೀನ್ ಅಫ್ರಿದಿ ದಾಖಲೆ

ದೆಹಲಿ: ವೆಸ್ಟ್ ಇಂಡೀಸ್ ವಿರುದ್ಧ ಮೊದಲನೇ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ತಂಡದ ವೇಗಿ ಶಾಹೀನ್ ಅಫ್ರಿದಿ 4 ವಿಕೆಟ್‌ಗಳನ್ನು ಗಳಿಸುವ ಮೂಲಕ ಭಾರತ ತಂಡದ ಹಿರಿಯ ವೇಗಿ ಮೊಹಮ್ಮದ್ ಶಮಿ ಅವರ ವಿಶ್ವ ದಾಖಲೆಯನ್ನು ಮುರಿದಿದ್ದಾರೆ. ಶಾಹೀನ್ ಅಫ್ರಿದಿ ಅವರ ಮಾರಕ ಬೌಲಿಂಗ್ ಸಹಾಯದಿಂದ ಪಾಕಿಸ್ತಾನ ತಂಡ, ಮೊದಲನೇ ಏಕದಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಐದು ವಿಕೆಟ್‌ಗಳ ಗೆಲುವು ಪಡೆಯಿತು, ಆ ಮೂಲಕ ಏಕದಿನ ಸರಣಿಯಲ್ಲಿ 1-0 ಮುನ್ನಡೆಯನ್ನು ಪಡೆದಿದೆ. ತಮ್ಮ ಅದ್ಭುತ ಬೌಲಿಂಗ್ ಪ್ರದರ್ಶನದಿಂದ ಶಾಹೀನ್ ಅಫ್ರಿದಿ ಅವರು ಭಾರತದ ಮೊಹಮ್ಮದ್ ಶಮಿ ಅವರ ವಿಶ್ವ ದಾಖಲೆಯನ್ನು ಮುರಿದಿದ್ದಾರೆ. ಐಸಿಸಿ ಪೂರ್ಣ ಪ್ರಮಾಣದ ತಂಡಗಳ ಪೈಕಿ ಅತ್ಯುತ್ತಮ ಸ್ಟ್ರೈಕ್ ರೇಟ್‌ನಲ್ಲಿ 100 ಅಥವಾ ಅದಕ್ಕಿಂತ ಹೆಚ್ಚು ವಿಕೆಟ್ ಕಬಳಿಸಿದ ಬೌಲರ್ ಎಂಬ ದಾಖಲೆಯನ್ನು ಶಾಹೀನ್ ಅಫ್ರಿದಿ ಬರೆದಿದ್ದಾರೆ. ಮೊಹಮ್ಮದ್ ಶಮಿ ಆಡಿದ 108 ಏಕದಿನ ಪಂದ್ಯಗಳಲ್ಲಿ 25.85ರ ಸ್ಟ್ರೈಕ್ ರೇಟ್‌ನಲ್ಲಿ 206 ವಿಕೆಟ್‌ಗಳನ್ನು ಗಳಿಸಿದರೆ, ಶಾಹೀನ್ ಅಫ್ರಿದಿ 65 ಪಂದ್ಯಗಳಿಂದ 25.46ರ ಸ್ಟ್ರೈಕ್ ರೇಟ್‌ನಲ್ಲಿ 131 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಟ್ರಿನಿಡಾಡ್‌ನಲ್ಲಿ ನಡೆದಿದ್ದ ಮೊದಲನೇ ಏಕದಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ವೆಸ್ಟ್ ಇಂಡೀಸ್ ತಂಡವು 49 ಓವರ್‌ಗಳಿಗೆ 280 ರನ್‌ಗಳಿಗೆ ಆಲೌಟ್ ಆಗಿತ್ತು, ಆ ಮೂಲಕ ಪಾಕಿಸ್ತಾನ ತಂಡಕ್ಕೆ 281 ರನ್‌ಗಳ ಗುರಿ ನೀಡಿತ್ತು.

ಮೈದಾನಕ್ಕೆ ಇಳಿಯಲಿರುವ ರಾಜ್ಯದ 6 ತಂಡಗಳು | ಟಿ20 ಮಾದರಿಯ ಪಂದ್ಯಾವಳಿ

ಇಂದಿನಿಂದ ಮಹಾರಾಜ ಟ್ರೋಫಿ ಟೂರ್ನಿ

ಮೈಸೂರು: ಇಂದಿನಿಂದ ಇದೇ 27ನೇ ತಾರೀಕಿನ ವರೆಗೆ ನಡೆಯಲಿರುವ ಈ ಸಲದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿಗೆ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನ ಅಣಿಯಾಗಿದೆ. ರಾಜ್ಯದ 6 ತಂಡಗಳು ಈ ಟೂರ್ನಿಯಲ್ಲಿ ಕಣಕ್ಕಿಳಿಯಲು ಸಜ್ಜಾಗಿದೆ. ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ತಂಡವು ತವರಿನ ಲಾಭ ಪಡೆದು ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವ ತವಕದಲ್ಲಿದೆ.

ಕಳೆದ ಬಾರಿ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ಟೂರ್ನಿಯ ಎಲ್ಲಾ ಪಂದ್ಯಗಳೂ ನಡೆದಿತ್ತು, ಆದರೆ ಈ ಬಾರಿ ಪಂದ್ಯಾವಳಿಯು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಗೊಂಡಿದ್ದು, ಒಟ್ಟು ಆರು ತಂಡಗಳು ಈ ಸಲದ ಟೂರ್ನಿಯಲ್ಲಿ ಭಾಗವಹಿಸಲಿದೆ. ಮೈಸೂರು ವಾರಿಯರ್ಸ್, ಶಿವಮೊಗ್ಗ ಲಯನ್ಸ್, ಮಂಗಳೂರು ಡ್ರಾಗನ್ಸ್, ಹುಬ್ಬಳ್ಳಿ ಟೈಗರ್ಸ್, ಗುಲ್ಬರ್ಗಾ ಮಿಸ್ಟಿಕ್ ಮತ್ತು ಬೆಂಗಳೂರು ಬ್ಲಾಸ್ಟರ್ಸ್ ತಂಡಗಳು ಅಗ್ನಿಪರೀಕ್ಷೆಗೆ ಇಳಿಯಲಿವೆ. ಈ ಸಲದ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಕರ್ನಾಟಕದ ಅನೇಕ ಪ್ರತಿಭಾನ್ವಿತ ಆಟಗಾರರು ಆಡಲಿದ್ದಾರೆ. ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್ ಸೇರಿದಂತೆ ಮಯಾಂಕ್ ಅಗರ್ವಾಲ್, ಪ್ರಸಿದ್ಧ್ ಕೃಷ್ಣ, ಮನೀಶ್ ಪಾಂಡೆ, ದೇವದತ್ ಪಡಿಕ್ಕಲ್ ಸೇರಿದಂತೆ ಹಲವರು ಕಣಕ್ಕಿಳಿಯಲಿದ್ದಾರೆ.

ಮಹಾರಾಜ ಟ್ರೋಫಿಯ ನಾಲ್ಕನೇ ಆವೃತ್ತಿಯ ಲೀಗ್ ಹಂತದಲ್ಲಿ ಒಟ್ಟು 30 ಪಂದ್ಯಗಳು ನಡೆಯಲಿವೆ. ಅದರ ಬಳಿಕ ಆಗಸ್ಟ್ 26ರಂದು ಮೊದಲ ಕ್ವಾಲಿಫೈಯರ್ ಪಂದ್ಯ ನಡೆಯಲಿದೆ. ಈ ಪಂದ್ಯದಲ್ಲಿ ಗೆದ್ದ ತಂಡವು ನೇರವಾಗಿ ಫೈನಲ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಲಿದೆ. ಆಗಸ್ಟ್ 26ರಂದು ಮೂರನೇ ಮತ್ತು ನಾಲ್ಕನೇ ಶ್ರೇಯಾಂಕಿತ ತಂಡಗಳ ನಡುವೆ ಎಲಿಮಿನೇಟರ್ ಪಂದ್ಯವೂ ನಡೆಯಲಿದ್ದು, ಅದರಲ್ಲಿ ವಿಜೇತ ತಂಡವು ಕ್ವಾಲಿಫೈಯರ್-1 ಪಂದ್ಯದಲ್ಲಿ ಸೋತ ತಂಡದ ವಿರುದ್ಧ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಆಡಬೇಕಾಗುತ್ತದೆ. ನಾಲ್ಕನೇ ಸೀಸನ್‌ನ ಫೈನಲ್ ಪಂದ್ಯ ಆಗಸ್ಟ್ 28ರಂದು ನಡೆಯಲಿದೆ.

ಈ ಸಲದ, ನಾಲ್ಕನೇ ಆವೃತ್ತಿಯ ಮಹಾರಾಜ ಟ್ರೋಫಿ ಟೂರ್ನಿಯ ಲೀಗ್ ಹಂತದಲ್ಲಿ ಪ್ರತೀದಿನ 2 ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯ ಮಧ್ಯಾಹ್ನ 3.15ಕ್ಕೆ ಹಾಗೂ ಎರಡನೇ ಪಂದ್ಯ ರಾತ್ರಿ 7.15ಕ್ಕೆ ಆರಂಭವಾಗಲಿದೆ. ಈ ಆವೃತ್ತಿಯ ಎಲ್ಲಾ ಪಂದ್ಯಗಳನ್ನು ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಕನ್ನಡ ಟಿ.ವಿ ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ, ಹಾಗೆಯೇ ಫ್ಯಾನ್‌ಕೋಡ್ ಆ್ಯಪ್ ಮತ್ತು ವೆಬ್‌ಸೈಟ್ ಎರಡರಲ್ಲೂ ನೇರ ಪ್ರಸಾರ ಇರಲಿದೆ.

ಇಂದಿನ ಪಂದ್ಯಗಳು

ಗುಲ್ಬರ್ಗಾ ಮಿಸ್ಟಿಕ್ಸ್-ಮಂಗಳೂರು ಡ್ರಾಗನ್ಸ್, ಸಂಜೆ 3.15

ಬೆಂಗಳೂರು ಬ್ಲಾಸ್ಟರ್ಸ್-ಮೈಸೂರು ವಾರಿಯರ್ಸ್, ರಾತ್ರಿ 7.15

ಹುಬ್ಬಳ್ಳಿ ಟೈಗರ್ಸ್‌ಗೆ ಮಹಾರಾಣಿ ಟ್ರೋಫಿ

ಬೆಂಗಳೂರು: ಮೋನಿಕಾ ಪಟೇಲ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ವಾರಿಯರ್ಸ್ ತಂಡವು ಮೈಸೂರು ವಾರಿಯರ್ಸ್ ತಂಡವನ್ನು 11 ರನ್‌ಗಳಿಂದ ಸೋಲಿಸಿ ಮಹಾರಾಣಿ ಟ್ರೋಫಿಯನ್ನು ತನ್ನದನ್ನಾಗಿಸಿತು.

ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿ ತಂಡ 19.5 ಓವರ್‌ಗಳಲ್ಲಿ 107 ರನ್‌ಗಳಿಗೆ ಆಲೌಟ್ ಆಯಿತು. 17 ಬಾಲ್‌ಗಳಲ್ಲಿ 2 ಸಿಕ್ಸರ್ ಸಹಿತ 23 ರನ್ ಗಳಿಸಿದ ಮೋನಿಕಾ ಪಟೇಲ್ ತಂಡಕ್ಕೆ ಆಧಾರಸ್ತಂಭವಾದರು. ಬಿ.ಜಿ ತೇಜಸ್ವಿನಿ 17 ಬಾಲ್‌ಗಳನ್ನು ಎದುರಿಸಿ 22 ರನ್ ಗಳಿಸುವಲ್ಲಿ ಯಶಸ್ವಿಯಾದರು. ಭೂಮಿಕಾ ರೆಡ್ಡಿ 13 ಬಾಲ್‌ಗಳನ್ನು ಎದುರಿಸಿ 14 ರನ್ ಹಾಗೂ ಕೃಷಿಕ ರೆಡ್ಡಿ 13 ಬಾಲ್ ಎದುರಿಸಿ 13 ರನ್ ಗಳಿಸುವಲ್ಲಿ ಯಶಸ್ವಿಯಾದರು.

ಮೈಸೂರು ವಾರಿಯರ್ಸ್ ಪರ 27 ರನ್ ನೀಡಿ 4 ವಿಕೆಟ್ ಪಡೆದ ಪೂಜಾ ಕುಮಾರಿ ಯಶಸ್ವಿ ಬೌಲರ್ ಎನಿಸಿದರು. ವಂದಿತಾ ರಾವ್ 8 ರನ್ ನೀಡಿ 3 ವಿಕೆಟ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು.

108 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಮೈಸೂರು ವಾರಿಯರ್ಸ್ ತಂಡದ ಶಿಶಿರ ಗೌಡ 41 ಬಾಲ್‌ಗಳನ್ನು ಎದುರಿಸಿ 44 ರನ್ ಮತ್ತು ಯಾಶಿಕ ಗೌಡ 33 ಬಾಲ್ ಎದುರಿಸಿ 39 ರನ್ ಗಳಿಸಿದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ.

ಹುಬ್ಬಳ್ಳಿ ತಂಡದ ಪರ ಉತ್ತಮ ಬೌಲಿಂಗ್ ಮಾಡಿದ ಪ್ರಿಯಾ ಚೌಹಾಣ್ 10 ರನ್ ನೀಡಿ 3 ವಿಕೆಟ್ ಪಡೆದರು. ಆಲ್‌ರೌಂಡರ್ ಮೋನಿಕಾ ಪಟೇಲ್ 21 ರನ್ ನೀಡಿ 2 ವಿಕೆಟ್ ಪಡೆದರು. ರಾಮೇಶ್ವರಿ ಗಾಯಕ್‌ವಾಡ್ 22 ರನ್ ಕೊಟ್ಟು 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್ ಬ್ಯಾಟಿಂಗ್(19.5 ಓವರ್-107 ಆಲೌಟ್): ಮೋನಿಕಾ ಪಟೇಲ್: 23 ರನ್, ಬಿ.ಜಿ ತೇಜಸ್ವಿನಿ 22 ರನ್, ಭೂಮಿಕಾ ರೆಡ್ಡಿ 14 ರನ್, ಕೃಷಿಕಾ ರೆಡ್ಡಿ 13 ರನ್

ಮೈಸೂರು ವಾರಿಯರ್ಸ್ ಬೌಲಿಂಗ್: ಪೂಜಾ ಕುಮಾರಿ 27 ರನ್‌ಗೆ 4 ವಿಕೆಟ್, ವಂದಿತಾ ರಾವ್ 8 ರನ್‌ಗೆ 3 ವಿಕೆಟ್

ಮೈಸೂರು ವಾರಿಯರ್ ಬ್ಯಾಟಿಂಗ್(20 ಓವರ್-96/7): ಶಿಶಿರ ಗೌಡ: 41 ರನ್, ಯಾಶಿಕ ಗೌಡ: 33 ರನ್

ಹುಬ್ಬಳ್ಳಿ ಟೈಗರ್ಸ್ ಬೌಲಿಂಗ್: ಪ್ರಿಯಾ ಚೌಹಾಣ್ 10 ರನ್‌ಗೆ 3 ವಿಕೆಟ್, ಮೋನಿಕಾ ಪಟೇಲ್ 21 ರನ್‌ಗೆ 2 ವಿಕೆಟ್.

ಉತ್ತರ ಪ್ರದೇಶ ಟಿ-20 ಲೀಗ್ ಆವೃತ್ತಿಯಿಂದ ಆರ್‌ಸಿಬಿ ವೇಗಿಗೆ ಬಹಿಷ್ಕಾರ ಸಾಧ್ಯತೆ

ಯಶ್ ದಯಾಳ್‌ಗೆ ನಿಷೇಧ?

ಲಕ್ನೋ: ಅಪ್ರಾಪ್ತ ಬಾಲಕಿ ಮತ್ತು ಇಬ್ಬರು ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ, ಆರ್‌ಸಿಬಿ ತಂಡದ ವೇಗಿ ಯಶ್ ದಯಾಳ್ ಅವರನ್ನು ಆಗಸ್ಟ್ 17ರಿಂದ ಪ್ರಾರಂಭವಾಗುವ 2025ರ ಉತ್ತರ ಪ್ರದೇಶ ಟಿ-20 ಲೀಗ್ ಆವೃತ್ತಿಯಲ್ಲಿ ಪಾಲ್ಗೊಳ್ಳುವುದನ್ನು ಉತ್ತರ ಪ್ರದೇಶ ಕ್ರಿಕೆಟ್ ಸಂಸ್ಥೆ ನಿಷೇಧಿಸಿದೆ ಎಂದು ವರದಿಯಾಗಿದೆ.

ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಮಹಿಳೆಯೊಬ್ಬರಿಗೆ ಮದುವೆಯಾಗುವುದಾಗಿ ನಂಬಿಸಿ 5 ವರ್ಷ ಸಹಜೀವನ ನಡೆಸಿದ ಬಳಿಕ ದಯಾಳ್ ಮೋಸ ಮಾಡಿದ್ದಾರೆ ಎಂದು ಮಹಿಳೆ ಆರೋಪಿಸಿ ದಯಾಳ್ ಮೇಲೆ ಅತ್ಯಾಚಾರ ಆರೋಪ ಮಾಡಿದ್ದರು. ಸದ್ಯ ಮಹಿಳೆ ದಾಖಲಿಸಿರುವ ಪ್ರಕರಣದಲ್ಲಿ ದಯಾಳ್ ಬಂಧನಕ್ಕೆ ಹೈಕೋರ್ಟ್ ತಡೆ ನೀಡಿದೆ.

ಆದರೆ ಬಾಲಕಿ ಮೇಲೆ ಅತ್ಯಾಚಾರ ಆರೋಪದಡಿ ಯಶ್ ದಯಾಳ್ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತಾ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಬಂಧನಕ್ಕೆ ವಿಧಿಸಲಾಗಿದ್ದ ತಡೆಯಾಜ್ಞೆಯನ್ನು ರಾಜಸ್ಥಾನ ಹೈಕೋರ್ಟ್ ವಜಾಗೊಳಿಸಿದೆ. ಪ್ರಕರಣದಲ್ಲಿ ಅವರ ಬಂಧನಕ್ಕೆ ತಡೆ ನೀಡಲು ಅಥವಾ ಪೊಲೀಸ್ ವಿಚಾರಣೆಯನ್ನು ನಿಲ್ಲಿಸಲು ನ್ಯಾಯಾಲಯ ನಿರಾಕರಿಸಿದೆ, ಹೀಗಾಗಿ ಅವರು ಬಂಧನ ಭೀತಿಯಲ್ಲಿದ್ದಾರೆ.

ದೂರು ನೀಡಿರುವ ಸಂತ್ರಸ್ತೆ ಕ್ರಿಕೆಟ್ ಆಟಗಾರ್ತಿಯಾಗಿದ್ದು, 2023ರಲ್ಲಿ ತಾನು 17 ವರ್ಷದವಳಾಗಿದ್ದಾಗ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು. ಈ ವರ್ಷದ ಏಪ್ರಿಲ್‌ನಲ್ಲಿ ಸೀತಾಪುರ ಪ್ರದೇಶದ ಹೋಟೆಲ್‌ನಲ್ಲಿ ಮತ್ತೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ.

ತನ್ನ ಕ್ರಿಕೆಟ್ ವೃತ್ತಿಜೀವನಕ್ಕೆ ಸಹಾಯ ಮಾಡುವುದಾಗಿ ದಯಾಳ್ ಭರವಸೆ ನೀಡಿದ್ದರು. ಈ ವರ್ಷದ ಏಪ್ರಿಲ್‌ನಲ್ಲಿ ಐಪಿಎಲ್ ಪಂದ್ಯಕ್ಕಾಗಿ ಜೈಪುರಕ್ಕೆ ಬಂದಿದ್ದಾಗ ಮತ್ತೆ ತನ್ನನ್ನು ಹೋಟೆಲ್‌ಗೆ ಕರೆಸಿಕೊಂಡು ಅತ್ಯಾಚಾರ ಮಾಡಿದ್ದಾರೆ ಎಂದು ಸಂತ್ರಸ್ತೆ ದೂರಿನಲ್ಲಿ ಆರೋಪಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಟಿಮ್ ಡೇವಿಡ್ ಸಿಕ್ಸರ್ ದಾಖಲೆ

ಎಂಟು ಸಿಕ್ಸರ್ ಬಾರಿಸಿದ ಆಸೀಸ್ ಆಟಗಾರ

ಸಿಡ್ನಿ: ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾದ ತಂಡದ ಟಿಮ್ ಡೇವಿಡ್ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿ ಡೇವಿಡ್ ವಾರ್ನರ್ ಅವರ 6 ವರ್ಷಗಳ ಹಿಂದಿನ ದಾಖಲೆಯೊಂದನ್ನು ಮುರಿದಿದ್ದಾರೆ. 52 ಎಸೆತಗಳಲ್ಲಿ 83 ರನ್ ಗಳಿಸಿ ಎಂಟು ಸಿಕ್ಸರ್‌ಗಳನ್ನು ಬಾರಿಸಿದ ಟಿಮ್ ಡೇವಿಡ್ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಪಂದ್ಯದ ಇನಿಂಗ್ಸ್ ಒಂದರಲ್ಲಿ ಅತ್ಯಧಿಕ ಸಿಕ್ಸರ್ ಬಾರಿಸಿದ ಆಸ್ಟ್ರೇಲಿಯಾದ ಮೊದಲ ಬ್ಯಾಟರ್ ಎನಿಸಿಕೊಂಡರು.

ಇದುವರೆಗೂ ಈ ದಾಖಲೆ ಮಾಜಿ ಆಟಗಾರ ಡೇವಿಡ್ ವಾರ್ನರ್ ಹೆಸರಿನಲ್ಲಿತ್ತು. ವಾರ್ನರ್ 2009ರಲ್ಲಿ ಮೆಲ್ಬೋರ್ನ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ 6 ಸಿಕ್ಸರ್ ಬಾರಿಸಿದ್ದರಲ್ಲದೆ, ಪಂದ್ಯದಲ್ಲಿ 43 ಎಸೆತಗಳಿಂದ 89 ರನ್ ಗಳಿಸಿದ್ದರು. ವಾರ್ನರ್ ಹೊರತುಪಡಿಸಿ ಟ್ರಾವಿಡ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಕೂಡ ತಲಾ 6 ಸಿಕ್ಸರ್ ಬಾರಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಆಸ್ಟ್ರೇಲಿಯಾ ನಿಗದಿತ 20 ಓವರ್‌ಗಳಲ್ಲಿ 178 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 9 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಲಷ್ಟೇ ಶಕ್ತವಾಗಿ 17 ರನ್ ಅಂತರದ ಸೋಲು ಕಂಡಿತು. ರಯಾನ್ ರಿಕೆಲ್ಟನ್(71) ಮತ್ತು ಟ್ರಿಸ್ಟಾನ್ ಸ್ಟಬ್ಸ್(37) ರನ್ ಗಳಿಸಿದರು. ಉಳಿದವರಿಂದ ಉತ್ತಮ ಜತೆಯಾಟ ಸಿಗದ ಕಾರಣ ಪಂದ್ಯದಲ್ಲಿ ಧ. ಆಫ್ರಿಕಾ ಸೋಲು ಕಂಡಿತು. ನಾಯಕ ಐಡೆನ್ ಮಾರ್ಕ್ರಮ್(12) ಗಳಿಸಿದರು. ಆಸೀಸ್ ಪರ ಜೋಶ್ ಹೇಜಲ್‌ವುಡ್ ಮತ್ತು ಬೆನ್ ದ್ವಾರ್ಶುಯಿಸ್ ಯಶಸ್ವಿ ಬೌಲಿಂಗ್ ನಡೆಸಿ ತಲಾ 3 ವಿಕೆಟ್ ಕಿತ್ತು ಮಿಂಚಿದರು, ಉಳಿದಂತೆ ಜಾಂಪ 2 ವಿಕೆಟ್ ಪಡೆದರು.

ಏಳುಮಲೆಯ ಕಾಪಾಡೋ ದ್ಯಾವ್ರೇ

ತರುಣ್ ಸುಧೀರ್ ನಿರ್ಮಾಣದ ಏಳುಮಲೆ ಸಿನಿಮಾ ತನ್ನ ಕಂಟೆಂಟ್ ಮೂಲಕ ಸದ್ದು ಮಾಡುತ್ತಿದೆ. ಈಗಾಗಲೇ ಟೈಟಲ್ ಟೀಸರ್ ಮೂಲಕ ಪ್ರೇಕ್ಷಕರಲ್ಲಿ ನಿರೀಕ್ಷೆ ಮೂಡಿಸಿರುವ ಈ ಚಿತ್ರದಿಂದ ಇದೀಗ ಮತ್ತೊಂದು ಹಾಡು ಬಿಡುಗಡೆಯಾಗಿದೆ.

ಏಳುಮಲೆಯ ಕಾಪಾಡೋ ದ್ಯಾವ್ರೇ... ಎಂಬ ಗೀತೆ ಬಿಡುಗಡೆಯಾಗಿದೆ. ಹಿರಿಯ ನಟಿಯರಾದ ಶ್ರುತಿ, ಸುಧಾರಾಣಿ, ಹಾಗೂ ತಾರಾ ಅನುರಾಧಾ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಹಾಡು ನೋಡಿ ತುಂಬಾ ಖುಷಿಯಾಯ್ತು. ಇಲ್ಲಿ ಪ್ರೇಮಿಗಳನ್ನು ಕಷ್ಟವನ್ನು ಮನಸಿಗೆ ಮುಟ್ಟುವಂತೆ ತೋರಿಸಿದ್ದಾರೆ. ಇದು ಸತ್ಯಕಥೆ ಅಂದಾಗ ಅದು ಹಾಗೇಯೇ ತೋರಿಸಬೇಕು. ರಾಣಾ, ಪ್ರಿಯಾಂಕಾ ತುಂಬಾ ಚೆನ್ನಾಗಿ ಕಾಣಿಸುತ್ತಾರೆ. ತರುಣ್ ಸಿನಿಮಾ ಅಂದ ಮೇಲೆ ಚೆನ್ನಾಗಿಯೇ ಇರುತ್ತದೆ ಎಂದು ತಾರಾ ಹೇಳಿದರು.

ಕಾಪಾಡೋ ದ್ಯಾವ್ರೇ.... ಹಾಡು ಮೂರು ಭಾಷೆಯಲ್ಲಿ ಬಿಡುಗಡೆಯಾಗಿದೆ. ಕನ್ನಡ, ತಮಿಳು ಹಾಗೂ ತೆಲುಗು ಭಾಷೆಯಲ್ಲಿ ರಿಲೀಸ್ ಆಗಿದೆ. ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿರುವ ಈ ಹಾಡಿಗೆ ಮಂಗ್ಲಿ ಧ್ವನಿಯಾಗಿದ್ದು, ಡಿ ಇಮ್ಮಾನ್ ಸಂಗೀತ ಸಂಯೋಜಿಸಿದ್ದಾರೆ. ಪ್ರೀತಿಗಾಗಿ ಪರಿತಪಿಸುವ ಪ್ರೇಮಿಗಳ ನಡುವಿನ ಮಧುರ ಗೀತೆ ಇದಾಗಿದ್ದು, ರಾಣಾ ಹಾಗೂ ಪ್ರಿಯಾಂಕಾ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ಕರ್ನಾಟಕ-ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯಾಗಿರುವ ಏಳುಮಲೆ ಸಿನಿಮಾದಲ್ಲಿ ರಕ್ಷಿತಾ ಸೋದರ ರಾಣಾ ಕನ್ನಡದ ಹುಡುಗ ಹರೀಶ್ ಆಗಿ ನಟಿಸಿದ್ದಾರೆ. ರಿಯಾಲಿಟಿ ಶೋ ಮೂಲಕ ಮನಗೆದ್ದ ಮೈಸೂರಿನ ಹುಡುಗಿ ಪ್ರಿಯಾ ಆಚಾರ್ ತಮಿಳು ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜಗಪತಿ ಬಾಬು, ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ ಮುಂತಾದವರು ತಾರಾಗಣದಲ್ಲಿದ್ದಾರೆ.

ಕಾಟೇರ, ಗುರುಶಿಷ್ಯರು ಸೇರಿದಂತೆ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಪುನೀತ್ ರಂಗಸ್ವಾಮಿ ಏಳುಮಲೆ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ತರುಣ್ ಸುಧೀರ್ ಈ ಸಿನಿಮಾ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಈ ಚಿತ್ರವು ನೈಜ ಘಟನೆಯನ್ನು ಆಧರಿಸಿದ್ದು, ಲವ್ ಸ್ಟೋರಿಯ ಜತೆಗೆ ಭಾವನಾತ್ಮಕವಾದ ಕಥೆಯನ್ನು ಒಳಗೊಂಡಿದೆ.

ಚಾಮರಾಜನಗರ, ಸೇಲಂ, ಈರೋಡ್ ಸೇರಿದಂತೆ ಕರ್ನಾಟಕ-ತಮಿಳುನಾಡು ಗಡಿ ಭಾಗದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಅದ್ವೈತ್ ಗುರುಮೂರ್ತಿ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ನಾಗಾರ್ಜುನ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ, ಡಿ. ಚಿತ್ರಕ್ಕಿದೆ. ಏಳುಮಲೆ ತಮಿಳು, ತೆಲುಗು, ಕನ್ನಡದಲ್ಲಿ ರಿಲೀಸ್ ಆಗಲಿದೆ.

ಹಚ್ಚೆ ಟ್ರೇಲರ್ ರಿಲೀಸ್

ಯಶೋಧರ ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶಿಸಿರುವ, ಹಚ್ಚೆ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಹಚ್ಚೆಯಲ್ಲಿ ಅಪರೂಪದ ಪ್ರೇಮಕಥೆಯಿದ್ದು, ಅದಕ್ಕೆ ಎಮೋಷನ್ ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಅಭಿಮನ್ಯು ನಾಯಕನಾಗಿ ನಟಿಸಿದ್ದು, ವಿಭಿನ್ನ ಗೆಟಪ್ ನಲ್ಲಿ ಮಾಸ್ ಆಗಿ ಕಂಗೊಳಿಸಿದ್ದಾರೆ. ಅದ್ಯಾ ಪ್ರಿಯಾ ನಾಯಕಿಯಾಗಿ ನಟಿಸಿದ್ದು, ಉಳಿದಂತೆ ಅನುಪ್ರೇಮಾ, ಗುರುರಾಜ್ ಹೊಸಕೋಟೆ, ದುಷ್ಯಂತ್, ಶ್ರೀಮಂತ್ ಸುರೇಶ್, ಚಂದ್ರು, ಬಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಹಚ್ಚೆ ಚಿತ್ರಕ್ಕೆ ಇತಿಹಾಸದ ಶಕ್ತಿ ಎಂಬ ಅಡಿಬರಹವಿದೆ. ಲವ್ ಸ್ಟೋರಿಯ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಕರ್ನಾಟಕದ ಸುಂದರ ಸ್ಥಳಗಳಲ್ಲಿ ಐವತ್ತು ದಿನಗಳ ಚಿತ್ರೀಕರಣ ನಡೆಸಲಾಗಿದೆ.

ವಿವೇಕ್ ಚಕ್ರವರ್ತಿ ಸಂಗೀತ ನಿರ್ದೇಶನ, ಸುರೇಶ್ ಆರ್ಮುಗಂ ಸಂಕಲನ ಹಾಗೂ ಯಾಸಿನ್ ಛಾಯಾಗ್ರಹಣವಿರುವ ಈ ಚಿತ್ರಕ್ಕಿದೆ. ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರ ಅಶ್ವ ಫಿಲಂಸ್ ಲಾಂಛನದಲ್ಲಿ ನಿರ್ಮಾಣವಾಗಿದೆ. ಟ್ರೇಲರ್ ಗೆ ಮೆಚ್ಚುಗೆ ವ್ಯಕ್ತವಾಗುತ್ತಿದ್ದು, ಲಕ್ಷಾಂತರ ವೀಕ್ಷಣೆ ಕಂಡಿದೆ. ಆಗಸ್ಟ್ 22 ರಂದು ಹಚ್ಚೆ ಬಿಡುಗಡೆಯಾಗಲಿದೆ.

ಮೇರುನಟಿ ಸರೋಜಾದೇವಿಗೆ ಭಾವಪೂರ್ಣ ಶ್ರದ್ಧಾಂಜಲಿ

ನಮ್ಮನ್ನು ಅಗಲಿದ ಮೇರು ನಟಿ, ಅಭಿನಯ ಸರಸ್ವತಿ, ಪದ್ಮಭೂಷಣ ಬಿ.ಸರೋಜಾದೇವಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿಟ್ಟಿನಲ್ಲಿ ಕನ್ನಡ ಚಿತ್ರರಂಗದಿಂದ ನುಡಿ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಲಾವಿದರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ, ತೆಲುಗು, ತಮಿಳು ಚಿತ್ರರಂಗದ ಹಲವು ಕಲಾವಿದರು, ತಂತ್ರಜ್ಞರು ಭಾಗವಹಿಸಿದ್ದರು. ಕಲಾವಿದರ ಸಂಘದ ಈ ಕಟ್ಟಡ ನಿರ್ಮಾಣವಾಗಲು ಸರೋಜಮ್ಮ ಅವರ ಶ್ರಮ ಕೂಡ ತುಂಬಾ ಇದೆ. ಇಡೀ ಚಿತ್ರರಂಗ ಒಂದು ಕುಟುಂಬವಾಗಿ ಈ ಕಾರ್ಯಕ್ರಮ ನಡೆಸುತ್ತಿದ್ದೇವೆ. ಬೇರೆ ಬೇರೆ ಚಿತ್ರರಂಗದಿಂದ ನಟರಾದ ನಾಸರ್, ಕಲಾವತಿ ಆಗಮಿಸಿದ್ದಾರೆ ಎಂದು ರಾಕ್ ಲೈನ್ ವೆಂಕಟೇಶ್ ತಮ್ಮ ಹಾಗೂ ಸರೋಜಾದೇವಿ ಅವರ ಒಡನಾಟ ನೆನೆದರು.

ಸರೋಜಮ್ಮ ಅವರ ಬಗ್ಗೆ ಮಾತನಾಡಲು ನಾವು ಚಿಕ್ಕವರು. ಸರೋಜಾ ದೇವಿ ಅವರು ಚಿತ್ರರಂಗದಲ್ಲಿ ತಮ್ಮದೇಯಾದ ಛಾಪು ಮೂಡಿಸಿದವರು. ಇಂದಿಗೂ ದೇಶ ವಿದೇಶಗಳಲ್ಲೂ ಅವರ ಹಾಡುಗಳನ್ನು ಇಷ್ಟ ಪಡುತ್ತಾರೆ. ಅಂಬರೀಶ್ ಅವರನ್ನು ತಮ್ಮನಂತೆ ಕಾಣುತ್ತಿದ್ದರು. ಕಲಾವಿದರ ಸಂಘದ ನಿರ್ಮಾಣವಾಗಲು ಸರೋಜಾ ದೇವಿ ಅವರ ಶ್ರಮವಿದೆ ಎಂದು ಹಿರಿಯ ನಟಿ ಸುಮಲತಾ ಸ್ಮರಿಸಿದರು. ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ಅನು ಪ್ರಭಾಕರ್, ರಘು ಮುಖರ್ಜಿ, ಮುಖ್ಯಮಂತ್ರಿ ಚಂದ್ರು, ಸುಂದರರಾಜ್, ಗಿರಿಜಾ ಲೋಕೇಶ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸ್ವಾತಂತ್ರ್ಯ ದಿನಕ್ಕೆ ಡೆವಿಲ್ ಹಾಡು

ನಟ ದರ್ಶನ್ ಅಭಿನಯದ ಡೆವಿಲ್ ಚಿತ್ರ ಆರಂಭದಿಂದಲೂ ಸದ್ದು ಮಾಡುತ್ತಿದೆ. ಡೆವಿಲ್ ಸಿನಿಮಾ ಶೂಟಿಂಗ್ ಪೂರ್ಣಗೊಂಡಿದ್ದು ಡಬ್ಬಿಂಗ್ ಕೂಡ ಮುಕ್ತಾಯವಾಗಿದೆ. ಫಸ್ಟ್ ಲುಕ್ ಟೀಸರ್ ಹಾಗೂ ಪೋಸ್ಟರ್ ಮೂಲಕವೇ ಸದ್ದು ಮಾಡಿರುವ ಡೆವಿಲ್ ಸಿನಿಮಾದ ಮೊದಲ ಹಾಡಿನ ಬಿಡುಗಡೆಗೆ ದಿನಾಂಕ ನಿಗಧಿಯಾಗಿದೆ. ಸ್ವಾತಂತ್ರ್ಯ ದಿನದಂದು ಡೆವಿಲ್ ನ ಪವರ್ ಫುಲ್ ಗಾನ ರಿಲೀಸ್ ಆಗಲಿದೆ. ಈ ಕುರಿತಂತೆ ಸ್ವತಃ ದರ್ಶನ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ಡೆವಿಲ್ ರೂಲ್ ಸೆಟ್? ಮಾಡೋಕೆ ಬರ್ತಿದ್ದಾನೆ. ಡೆವಿಲ್ ಮೂವಿಯ ಮೊದಲ ಹಾಡು ಇದ್ರೆ, ನೆಮ್ದಿಯಾಗಿರಬೇಕು. ಆಗಸ್ಟ್ 15ರಂದು ಬೆಳಗ್ಗೆ ಹತ್ತು ಗಂಟೆಗೆ ರಿಲೀಸ್ ಆಗಲಿದೆ ಎಂದು ದರ್ಶನ್ ಬರೆದುಕೊಂಡಿದ್ದಾರೆ. ಇದನ್ನು ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ.

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಡೆವಿಲ್ ಮಾಸ್ ಹಾಗೂ ಕ್ಲಾಸ್ ಆಗಿ ಮೂಡಿಬಂದಿದೆ.

ಡೆವಿಲ್ ಸಿನಿಮಾದ ಎರಡು ಹಾಡುಗಳನ್ನು ಥೈಲ್ಯಾಂಡ್ ನಲ್ಲಿ ಚಿತ್ರೀಕರಿಸಿಕೊಳ್ಳಲಾಗಿದ್ದು, ಸಿನಿಮಾದ ಎಲ್ಲಾ ಹಾಡುಗಳು ಅದ್ದೂರಿಯಾಗಿ ಮೂಡಿಬಂದಿವೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದು, ಹಾಡಿಗೆ ಮಾಧುರ್ಯ ತುಂಬಿದ್ದಾರೆ. ನಮ್ಮ ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು ಸಿನಿಮಾ ಅಂದುಕೊಂಡಂತೆ ಅದ್ದೂರಿಯಾಗಿ ಮೂಡಿಬಂದಿದೆ. ಇನ್ನೆರಡು ತಿಂಗಳಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಪ್ಲಾನ್ ಇದೆ ಎಂದು ನಿರ್ದೇಶಕ ಪ್ರಕಾಶ್ ವೀರ್ ಹೇಳಿದ್ದಾರೆ. ದರ್ಶನ್ ಗೆ ನಾಯಕಿಯಾಗಿ ರಚನಾ ರೈ ಬಣ್ಣಹಚ್ಚಿದ್ದು, ಶ್ರೃಮಿಳಾ ಮಾಂಡ್ರೆ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜಗಪತಿ ಬಾಬು ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಅಕ್ಟೋಬರ್‌ನಲ್ಲಿ ಡೆವಿಲ್ ತೆರೆಗೆ ಬರುವ ನಿರೀಕ್ಷೆ ಇದೆ.



ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೇ



ಕರೆದಲ್ಲಿಗೆ ಬರುವ ಗುರುವೆಂದರಿವರಯ್ಯ...

ಓಂ ಶ್ರೀ

॥ ಯಾಮೃಷಯೋ ಮಂತ್ರಕೃತೋ ಮನೀಷಿಣಃ ॥

ರಿತ್ತಿ ರಾಘವೇಂದ್ರ ಎಸ್ ಕೆ
ಬೆಂಗಳೂರು

ಭಾರತೀಯ ಸನಾತನ ಸತ್ಪರಂಪರೆಯಲ್ಲಿ ಅತಿ ಎತ್ತರಕ್ಕೆ ಏರಿ ಆಧ್ಯಾತ್ಮ, ವಾಙ್ಮಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮುನಿಯಾಗಿ, ಮೌನ ಸಾತ್ವಿಕ ಕ್ರಾಂತಿಯನ್ನು ಸಾಧಿಸಿದ ಮಹಾನುಭಾವರು ಶ್ರೀ ರಾಘವೇಂದ್ರ ತೀರ್ಥರು. ತಮ್ಮ ಜೀವಿತಾವಧಿಯಲ್ಲಿ ದಕ್ಷಿಣ ಭಾರತದುದ್ದಕ್ಕೂ ಸಂಚರಿಸಿ ತಮ್ಮ ವ್ಯಕ್ತಿತ್ವದ ಮೂಲಕ ಪ್ರಭಾವವನ್ನು ಬೀರಿದರೆ, ಜೀವಿತಾನಂತರ ಬೃಂದಾವನದಲ್ಲಿ ನೆಲೆಸಿ ತಮ್ಮ ತಪಃ ಪ್ರಭಾವದಿಂದ ಮತ-ಸಿದ್ಧಾಂತ, ಜಾತಿ-ಪಂಗಡ, ದೇಶ -ಭಾಷೆ, ದ್ವೇಷ-ಅಸೂಯೆ, ಬಂಧು- ಬಾಂಧವರು ಎಂಬ ಬಂಧನಗಳನ್ನು ಮೀರಿ, ಸನ್ಯಾಸವೆಂಬ ಪದಕ್ಕೆ ಅನ್ವರ್ಥಕವಾಗಿ ಸುಮಾರು 350 ವರ್ಷಗಳ ದೀರ್ಘಕಾಲ ಪ್ರಪಂಚದಾದ್ಯಂತ ಕೋಟ್ಯಂತರ ಅರ್ಥಿಗಳನ್ನು, ಜಿಜ್ಞಾಸುಗಳನ್ನು ಉದ್ಧರಿಸುತ್ತಿರುವ ಅತೀ ಅಪರೂಪದ ವ್ಯಕ್ತಿತ್ವ ಶ್ರೀ ರಾಘವೇಂದ್ರರದ್ದು. ಹೀಗಾಗಿ ಅವರು ಕಾಮಧೇನು, ಕಲ್ಪತರು ಎಂಬ ಉಪಮೇಯಗಳಿಂದ ಗೀಯಮಾನರು. ಶ್ರಾವಣಮಾಸ, ಪ್ರಕೃತಿಯಲ್ಲಿ ಹೊಸ ಚೈತನ್ಯವನ್ನು ತರುವ ಪರ್ವಕಾಲ, ಹಾಗಾಗಿ ಸಲಾದ ಹಬ್ಬ ಉತ್ಸವಗಳು, ಉಪಾಸನಾ ದೃಷ್ಟಿಯಿಂದ ಅತ್ಯಮೂಲ್ಯ. ಈ ಸಾಲಿನಲ್ಲಿ ಸೇರುವ ರಾಯರ ಆರಾಧನಾ ಮಹೋತ್ಸವವು ಪ್ರಪಂಚದೆಲ್ಲೆಡೆಯ ಭಕ್ತ ಸಮೂಹದಲ್ಲಿ ವಿವಿಧ ರೀತಿಯಿಂದ ರಾಯರ ಅನುಗ್ರಹ ಸಂಪಾದಿಸುವ ಮತ್ತು ಆಧ್ಯಾತ್ಮ ಚೈತನ್ಯವನ್ನು ತುಂಬಿಕೊಳ್ಳುವ ಬಹುದೊಡ್ಡ ಯಜ್ಞ. ಈ ಸಮಯದಲ್ಲಿ ಶ್ರೀ ರಾಯರು ಬಂದ ಪರಂಪರೆ ಹಾಗೂ ಅವರ ಗುಣ ಸಾಧನೆಗಳ ಪಕ್ಷಿ ನೋಟವನ್ನು ತಿಳಿಸುವುದು ಈ ಕಿರು ಲೇಖನದ ಪ್ರಯತ್ನವಾಗಿದೆ.

ರಾಯರ ವ್ಯಕ್ತಿತ್ವದ ಗುಣ ಸಾಧನೆಗಳ ವಿಶ್ಲೇಷಣೆಯ ದೀರ್ಘ ಸ್ಮರಣೆಯೂ ಅನೇಕ ಶತಮಾನಗಳಿಂದ ವಿವಿಧ ರೀತಿಯಲ್ಲಿ ನಡೆದಿದೆ. ಅವರು ತಮ್ಮ ಸಾಧನೆಗೆ ಆಯ್ದ ಮಾರ್ಗ ಇತಿಹಾಸದಲ್ಲಿ ಅತಿ ವಿಶೇಷ ಹಾಗೂ ವಿರಳ. ಸಮಾಜದಲ್ಲಿ ಅವರು ತಮ್ಮ ಅನಿಸಿಕೆಗಳನ್ನು ತಿಳಿಸಲು ಸೈನ್ಯ, ಪಡೆ, ಪಂಗಡಗಳನ್ನು ಕಟ್ಟಿ- ಬೆಳೆಸಲಿಲ್ಲ, ತಾವು ಬಂದ ಪರಂಪರೆಯ ಆಚಾರ - ಸಂಪ್ರದಾಯಗಳನ್ನು ಧಿಕ್ಕರಿಸಲಿಲ್ಲ, ತಾವು ನಂಬಿದ ಶಾಸ್ತ್ರ-ಧರ್ಮಗಳ ಚೌಕಟ್ಟನ್ನು ಬದಲಿಸಲಿಲ್ಲ, ತಮ್ಮ ವಿಚಾರಗಳನ್ನಿಟ್ಟು ವಿತಂಡವಾದಗಳನ್ನು ಮಾಡಲಿಲ್ಲ. ಬುದ್ಧದೇವನಿಂದಾರಂಭಿಸಿ ಮಧ್ವಾಚಾರ್ಯರನ್ನೊಳಗೊಂಡು ಎಲ್ಲ ಪ್ರಸಿದ್ಧ ಪುರುಷರು ಮತ್ತು ದಾರ್ಶನಿಕರು ಅಂದಿನ ಪ್ರಚಲಿತ ಆಚಾರ-ವಿಚಾರಗಳನ್ನು ಪ್ರಶ್ನಿಸಿ, ತಮ್ಮದೇ ಆದ ಹೊಸ ವಿಚಾರ ಪರಂಪರೆಯನ್ನು ಹುಟ್ಟುಹಾಕಿದವರು. ಆದರೆ ರಾಯರ ಮಾರ್ಗ ತೀರಾ ವಿಭಿನ್ನ, ಎಲ್ಲದರಲ್ಲಿದ್ದು ಎಲ್ಲವನ್ನೂ ಪಾಲಿಸಿ ಎಲ್ಲವನ್ನೂ ಮೀರಿದ ಅಪರೂಪದ ಸಾಧಕರು. ಪ್ರಾಯಶಃ ಈ ರೀತಿಯ ಉದಾಹರಣೆ ಇತಿಹಾಸದಲ್ಲಿ ಸಿಗುವುದು ಬಲು ವಿರಳ. ಈ ದೃಷ್ಟಿಯಿಂದ ಅವರ ಜೀವನ, ಚರಿತ್ರೆ, ನಡೆ-ನುಡಿ, ಗ್ರಂಥಗಳು, ರಾಯರ ಮಹಿಮೆ, ಉಪದೇಶಗಳೆಲ್ಲವೂ ಮೌಲ್ಯಯುತ ಸಮಾಜದ ನಿರ್ಮಾಣಕ್ಕೆ ಅಧ್ಯಯನ ಯೋಗ್ಯ ಹಾಗೂ ಅನುಕರಣೀಯ.

ರಾಯರ ನಡೆ ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಮ್ ಎಂಬ ಶ್ರೀರಾಮನ ಸಾಂಪ್ರದಾಯಿಕ ಮಾರ್ಗದಂತೆ ಮತ್ತು 'ಯುಕ್ತ: ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕಮ್' ಎಂಬ ಶ್ರೀಕೃಷ್ಣನ ಸಮ್ಯಕ್ ದೃಷ್ಟಿಯುಳ್ಳದ್ದು. ಎಲ್ಲದ್ದರಲ್ಲಿದ್ದು ಎಲ್ಲವನ್ನೂ ತ್ಯಜಿಸಿ ಎಲ್ಲವನ್ನೂ ಮೀರುವುದೇ ಆಗಿದೆ.

ದ್ವೈತ ಸಿದ್ಧಾಂತದ ಉಗಮ

ಕ್ರಿಶ 11-13ನೇ ಶತಮಾನಗಳು ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕ ಪ್ರಾಂತ್ಯವು ಉತ್ತರದ ದಿಕ್ಕಿನಿಂದ ದಾಳಿಗಳನ್ನು ಕಂಡಿತು. ಈ ಘಟ್ಟದಲ್ಲಿ ರಾಜಕೀಯ, ವ್ಯಾವಹಾರಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮ ಹೀಗೆ ಎಲ್ಲ ಕ್ಷೇತ್ರಗಳು ಹಿಂದೆಂದೂ ಕಾಣದಂತ ಬದಲಾವಣೆಗಳನ್ನು ಕಂಡಂತಹ ಸಂಧಿ ಸಮಯ. ಸಾಮಾಜಿಕ ವ್ಯವಸ್ಥೆಯ ಚೌಕಟ್ಟು ಸಡಿಲಗೊಳ್ಳುವ ಹಂತವನ್ನುತಲುಪಿದ ಸಮಯ. ಈ ಸಂದರ್ಭದಲ್ಲಿ ಅನೇಕ ಮಹನೀಯರು ಸಂದರ್ಭಕ್ಕನು ಗುಣವಾಗಿ ತಮ್ಮ ಕ್ಷೇತ್ರಗಳಲ್ಲಿ ಸಮಾಜವನ್ನು ಬಲಪಡಿಸಲು ಮುಂದಾದರು. ವಿದ್ಯಾರಣ್ಯರ ನೇತೃತ್ವದಲ್ಲಿ ವಿಜಯನಗರದಂತಹ ಹೊಸ ಸಾಮ್ರಾಜ್ಯಗಳ ಉಗಮವಾಯಿತು. ಬಸವಣ್ಣನವರ ನೇತೃತ್ವದಲ್ಲಿ ಶೈವ ಪಂಥದ ಬಲೋತ್ಕರ್ಷದ ಜತೆಗೆ ವಚನ ಸಾಹಿತ್ಯದ ಉಗಮ ನಡೆಯಿತು. ಇವುಗಳ ನಡುವೆ 13ನೇ ಶತಮಾನದಲ್ಲಿ ಕರಾವಳಿಯ ಉಡುಪಿಯ ಪರಿಸರದಲ್ಲಿ ಆನಂದತೀರ್ಥ ಅಥವಾ ಮಧ್ವಾಚಾರ್ಯರಿಂದ ವೈಷ್ಣವಪಂಥವು ವೈದಿಕ ತತ್ತ್ವವಾದವೆಂಬ ಹೆಸರಿನಿಂದ ಪುನರುತ್ಥಾನಗೊಂಡಿತು. ಸುಮಾರು 37 ಗ್ರಂಥಗಳಲ್ಲಿ ಮಧ್ವರು ಹರಿಸರ್ವೋತ್ತಮತ್ತ್ವವೇ ವೇದ ಪುರಾಣ, ಇತಿಹಾಸಗಳ ಸಾರವೆಂದು ತೋರಿಸಿಕೊಟ್ಟು ಭಕ್ತಿಪಂಥದ ಹರಿಕಾರರಾದರು.

ಆ ಸಮಯದಲ್ಲೇ ಹರಿದಾಸ ಸಾಹಿತ್ಯವು ಉಗಮಗೊಂಡು ಸಮಾಜದಲ್ಲಿ ಸಂಚಲನವನ್ನುಂಟು ಮಾಡಿ ಬದಲಾವಣೆಯ ಪರ್ವವು ಪ್ರಾರಂಭವಾದವು. ಕಾಲಾಂತರದಲ್ಲಿ ತತ್ತ್ವವಾದವು ದ್ವೈತ ಸಿದ್ಧಾಂತ ಅಥವಾ ದ್ವೈತ ಮತವೆಂದು ಪ್ರಚಲಿತಗೊಂಡು ದಕ್ಷಿಣ ಭಾರತದೆಲ್ಲೆಡೆ ಪ್ರಮುಖವಾಗಿ ನೂತನ ಸಾಮ್ರಾಜ್ಯವಾಗಿ ನಿರ್ಮಾಣ ಹಂತದಲ್ಲಿದ್ದ ವಿಜಯನಗರ ಪ್ರಾಂತ್ಯದಲ್ಲಿ ಪಸರಿಸತೊಡಗಿತು.

ಶ್ರೀ ರಾಘವೇಂದ್ರತೀರ್ಥರ ಪೂರ್ವ ಪರಂಪರೆ

ಮಧ್ವಾಚಾರ್ಯರ ನಂತರದಲ್ಲಿ ಅವರ ಪ್ರಮುಖ ಶಿಷ್ಯರಾದ ಪದ್ಮನಾಭ ತೀರ್ಥರು, ನರಹರಿ ತೀರ್ಥರು, ಮಾಧವ ತೀರ್ಥರು ಹಾಗೂ ಅಕ್ಷೋಭ್ಯತೀರ್ಥರು ಹೊಸದಾದ ದ್ವೈತ ದರ್ಶನವನ್ನು ಪರಿಚಯಿಸುತ್ತಾ ಹಾಗೂ ವಿಜಯನಗರ ಸಾಮ್ರಾಜ್ಯ ನಿರ್ಮಾಣ ಮತ್ತು ವಿಕಸನದ ಕಾರ್ಯಗಳಲ್ಲಿ ತಮ್ಮ ವಿಶೇಷ ಕೊಡುಗೆಗಳನ್ನು ನೀಡಿ ಗೌರವ ಪ್ರಾಯರಾದರು. ನರಹರಿ ತೀರ್ಥರು ಕಾಣಿಕೆಯ ರೂಪದಲ್ಲಿ ತಂದು ಅರ್ಪಿಸಿದ ಚತುರ್ಯುಗ ಶ್ರೀಮೂಲರಾಮಚಂದ್ರ ಮೂರ್ತಿಯನ್ನು ಶ್ರೀಮದಾಚಾರ್ಯರು ಪರಂಪರೆಯ ಉಪಾಸನಾ ಪ್ರತೀಕವಾಗಿ ನಿಯೋಜಿಸಿದರು.

ಅಷ್ಟ ಮಠಗಳು ಉಡುಪಿ ಪ್ರಾಂತ್ಯದಲ್ಲಿ ಮಧ್ವರ ಸಂದೇಶ ಪ್ರಚಾರ ಕಾರ್ಯ ಮುನ್ನಡೆಸಿದವು. ಮುಂದೆ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು 14ನೇ ಶತಮಾನದಲ್ಲಿ ಮಧ್ವಾಚಾರ್ಯರ ಸಿದ್ಧಾಂತದ ಆಳ ಅಗಲಗಳನ್ನು ವಿಪುಲಗೊಳಿಸಿ ವಿದ್ವಾಂಸ ಮಂಡಳಿಗಳಲ್ಲಿ ಮಂಡಿಸುವ ಸಲುವಾಗಿ 23 ಅತ್ಯುತ್ತಮ ಗ್ರಂಥ ರತ್ನಗಳಲ್ಲಿ ವಿಸ್ತೃತಗೊಳಿಸಿ ಶಿಷ್ಯರುಗಳಾದ ವಿದ್ಯಾಧಿರಾಜರು, ರಾಜೇಂದ್ರತೀರ್ಥರು, ಕವೀಂದ್ರತೀರ್ಥರುಗಳಿಗೆ ತಮ್ಮ ಗ್ರಂಥಗಳ ಪೂರ್ಣ ಸ್ವರೂಪವನ್ನು ತಿಳಿಸಿ ದ್ವೈತ ಸಿದ್ಧಾಂತವನ್ನು ವಿಜಯನಗರದ ಹೊರ ದಿಕ್ಕುಗಳಲ್ಲಿ ವಿದ್ವಾಂಸಮಂಡಳಿಗಳಲ್ಲಿ ವಾದ ರೂಪವಾಗಿ ಮಂಡಿಸಲು ಆದೇಶಿಸಿದರು. ಹಾಗಾಗಿ ಜಯತೀರ್ಥರು ಟೀಕಾಚಾರ್ಯರೆಂದೇ ಖ್ಯಾತರಾದರು.

ರಾಜೇಂದ್ರತೀರ್ಥರು ಹೆಚ್ಚಾಗಿ ಪೂರ್ವಪ್ರಾಂತ್ಯವಾದ ನವದ್ವೀಪ (ಬಂಗಾಳ) ಮುಂತಾದ ಕಡೆಗಳಲ್ಲಿ ಹೆಚ್ಚು ಪ್ರಚಾರಗೊಳಿಸಿದ ಕಾರಣವಾಗಿ ಅವರ ಪರಂಪರೆ ಪೂರ್ವ ಮಠವೆಂದು ಪ್ರಖ್ಯಾತವಾಯಿತು. 15ನೇ ಶತಮಾನದಲ್ಲಿ ವ್ಯಾಸರಾಜರು ಪೂರ್ವಾದಿ ಪರಂಪರೆಯನ್ನು ಅಲಂಕರಿಸಿ, ವಿಜಯನಗರದ ಸಾಮ್ರಾಜ್ಯದ ರಾಜರುಗಳಿಗೆ ರಾಜಗುರುವಾಗಿ, ವಿದ್ವಾಂಸಮಂಡಳಿಯ ಜತೆಗೆ ಹರಿದಾಸಪರಂಪರೆಯನ್ನು ಹಿರಿದುಗೊಳಿಸಿ ಸಾಮಾನ್ಯ ಜನರಿಗೂ ಮಧ್ವಾಚಾರ್ಯರ ಸಿದ್ಧಾಂತವನ್ನು ಮುಟ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಅವರ ಕಾಲಾನಂತರ ಪೂರ್ವಾಧಿ ಮಠವು ಶ್ರೀವ್ಯಾಸರಾಜ ಮಠವೆಂದೇ ಖ್ಯಾತವಾಗಿ ಮುಂದೆ ಪೆನುಗೊಂಡ, ಸೋಸಲೆ, ಕುಂದಾಪುರ ಕ್ಷೇತ್ರಗಳಲ್ಲಿ ಕೇಂದ್ರೀಕರಣಗೊಂಡಿತು.

(2ನೇ ಪುಟಕ್ಕೆ)

ಧರ್ಮರಹಿತ ರಾಮರಾಜ್ಯ ಅಸಾಧು

ಸಂದರ್ಶನ
ನಂಜನಗೂಡು ಪ್ರದ್ಯುಮ್ನ

ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿಗಳ ಮಠದ 40ನೇ ಪೀಠಾಧಿಪತಿಗಳಾಗಿರುವ ಜಗದ್ಗುರು ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರದ್ದು ಆಪ್ತವ್ಯಕ್ತಿತ್ವ. ಸೂಜಿಗಲ್ಲಿನಂತಹ ಆಕರ್ಷಣೆ. 'ಸ್ಮಿತಪೂರ್ವಾ ಭಾಷಿತ್ವ' ಎಂಬಂತೆ ಮೊದಲು ಮಂದಹಾಸ, ನಂತರ ಶಿಷ್ಯ ಭಕ್ತರೊಂದಿಗೆ ಸಂಭಾಷಣೆ ಅವರದ್ದು. ಸಮಾಜಮುಖಿ ಚಿಂತಕರಾದ ಶ್ರೀಗಳು ತಮ್ಮ ಸರಳತೆ, ಸಹಜ ಶಿಸ್ತು, ಧಾರ್ಮಿಕ ನಾಯಕತ್ವ ಮತ್ತು ಭಕ್ತ ವಾತ್ಸಲ್ಯ ಮುಂತಾದ ಗುಣಗಳಿಂದ ಸ್ಫೂರ್ತಿಯಾಗಿದ್ದಾರೆ. ಮಠದೊಂದಿಗೆ, ಗುರುಸಾರ್ವಭೌಮರನ್ನು ಭಕ್ತರ ಮನೆ-ಮನಗಳಿಗೆ ಕೊಂಡೊಯ್ದ ಅಪರೂಪದ ಯತಿಶ್ರೇಷ್ಠರು ಇವರು. 'ಗುರವೋ ವಿರಲಾಸಂತಿ ಶಿಷ್ಯ ಚಿತ್ತಾಪಹಾರಕಾಃ' ಎಂಬಂತೆ ಶಿಷ್ಯನ ಮನಸ್ಸನ್ನು ಅಪಹರಿಸುವ ಗುರುಗಳು ಇಂದು ವಿರಳ. ಆದರೆ ಶ್ರೀ ಸುಬುಧೇಂದ್ರ ತೀರ್ಥರು ಅಪಾರ ಶಿಷ್ಯಕೋಟಿಯ ಜನಮಾನಸದ ಪ್ರೀತಿ ಗಳಿಸಿದ್ದಾರೆ. ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ಆರಾಧನೆ ಮಹೋತ್ಸವದ ಅಂಗವಾಗಿ ಪೂಜ್ಯರು 'ವಿಶ್ವವಾಣಿ'ಯೊಂದಿಗೆ ಮಾತನಾಡಿದ್ದಾರೆ.

- **ಪೂಜ್ಯರೇ, ಇಂದಿನ ಕಾಲಮಾನಕ್ಕೆ ಮಠದ ಪರಿಕಲ್ಪನೆ ಏನು ?**

'ಯಸ್ತು ಕೃತಯುಗೇ ಧರ್ಮೋ ನಕರ್ತವ್ಯಂ ಕಲೌಯುಗೇ' ಎಂಬುದಾಗಿ ಆದಿತ್ಯ ಪುರಾಣದಲ್ಲಿ ಹೇಳಿರುವಂತೆ ಕೃತಯುಗದ ಧರ್ಮ-ಸಿದ್ಧಾಂತವನ್ನು ಕಲಿಯುಗದಲ್ಲಿ ಸ್ವೀಕರಿಸಬಾರದು ಎಂಬ ಮಾತಿದೆ. ನಮ್ಮ ಹಿಂದಿನ ದಾರ್ಶನಿಕರು ಸಾವಿರಾರು ವರ್ಷಗಳ ಹಿಂದೆ ಮಠಮಾನ್ಯಗಳ ವ್ಯವಸ್ಥೆಯನ್ನು ಜನರ ಕಲ್ಯಾಣಕ್ಕಾಗಿ ಲೋಕಾರ್ಪಣೆ ಮಾಡಿದರು. ಆದರೆ ಪ್ರಸ್ತುತ ಕಾಲ,ದೇಶ, ವರ್ತಮಾನ ಬದಲಾಗಿದೆ. ಮಠ-ಮಂದಿರಗಳು ನೇರವಾಗಿ ಶ್ರೀಸಾಮಾನ್ಯನ ಭಕ್ತಿ, ಭರವಸೆಯ ಧಾರ್ಮಿಕ ಕೇಂದ್ರಗಳಾಗಿವೆ. ಇಂತಹ ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಮಠ ಮತ್ತು ಧಾರ್ಮಿಕ ಕೇಂದ್ರಗಳು ತಮ್ಮ ಆಚಾರ ,ವಿಚಾರ ಹಾಗೂ ಸತ್ಸಂಪ್ರದಾಯಗಳಿಗೆ ಲೋಪ ಬರದಂತೆ ಸಮಾಜಮುಖಿಯಾಗಿ ಸಾಗುವುದು ಇಂದು ಅತ್ಯವಶ್ಯ. ಖ್ಯಾತ ಬರಹಗಾರ ಚರ್ಚಿಲ್ ತಾಡ್ರೋಸ್ ಹೇಳುವಂತೆ, "Nothing in this world can survive and remain useful without an UPDATE. ..even Religion. ..especially RELIGION' .. ಶಾಶ್ವತವೆಂದು ಭಾವಿಸುವ ಧರ್ಮವೂ ಕೂಡ ಕಾಲಕಾಲಕ್ಕೆ Update ಆಗುತ್ತಿರಬೇಕು. ಇಲ್ಲದಿದ್ದರೆ Outdated ಆಗುವ ಸಾಧ್ಯತೆ ಹೆಚ್ಚು ಎಂಬುದಾಗಿ ವಿಶ್ವೇಶ್ವರ ಭಟ್ ಅವರು ತಮ್ಮ ಯಾವುದೋ ಅಂಕಣದಲ್ಲಿ ಬರೆದ ಮಾತುಗಳು ಪ್ರಸ್ತುತವಲ್ಲವೇ?

- **ಹಿಂದಿಗಿಂತಲೂ ಸಮಾಜದಲ್ಲಿ ಧಾರ್ಮಿಕ ಜಾಗೃತಿ ಇಂದು ಹೆಚ್ಚಾಗುತ್ತಿರಲು ಕಾರಣ ಏನು?**

ಜಗತ್ತಿನ ಮನುಜರೆಲ್ಲರೂ ಒಂದಲ್ಲಾ ಒಂದು ಧರ್ಮದ ಬಗ್ಗೆ ನಂಬಿಕೆ ಮತ್ತು ವಿಶ್ವಾಸದೊಂದಿಗೆ ಶತಶತಮಾನಗಳಿಂದ ಜೀವನ ಕಟ್ಟಿಕೊಂಡಿದ್ದಾರೆ. ಧರ್ಮವಿಲ್ಲದೆ 'ರಾಮರಾಜ್ಯ'ದ ಕಲ್ಪನೆ ಸಾಧ್ಯವೇ ಇಲ್ಲ. ಧರ್ಮ

(2ನೇ ಪುಟಕ್ಕೆ)

ನವ ಮಂತ್ರಾಲಯ ನಿರ್ಮಾಣ

ಬಸವರಾಜ ನಾಗಡದಿನ್ನಿ
ರಾಯಚೂರು

ಗುರುರಾಯರಿಗೆ ಭಕ್ತರ ದೊಡ್ಡ ದಂಡೇ ಇದೆ. ಲಕ್ಷಾಂತರ ಭಕ್ತರು ವಾರಕ್ಕೊಮ್ಮೆ ಬಂದು ಬೃಂದಾವನನ್ನು ನೋಡುವವರೂ ಇದ್ದಾರೆ. ಇಂತಹ ಭಕ್ತರಿಗೆ ಮಂತ್ರಾಲಯ ಸದಾ ಕೈಬೀಸಿ ಕರೆಯುತ್ತಿರುತ್ತದೆ. ರಾಯರ ದರ್ಶನ ಪಡೆಯಲು ಬರುವ ಭಕ್ತರಿಗೆ ಆಶೀರ್ವಾದ ದೊಂದಿಗೆ ಮೂಲಸೌಕರ್ಯದಲ್ಲಿಯೂ ಸಮಸ್ಯೆಯಾಗದಂತೆ ನವ ಮಂತ್ರಾಲಯದ ನಿರ್ಮಾಣ ಕಾಮಗಾರಿ ಸಾಗಿದೆ.

ಸುಬುಧೇಂದ್ರ ತೀರ್ಥರು, ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಯಾದ ನಂತರ ಮಂತ್ರಾಲಯ ಮಠದಲ್ಲಿ ಅಭಿವೃದ್ಧಿಯ ಮಹಾಪೂರವಾಗಿದೆ. ಸದಾ ಶ್ರೀಮಠದ ಪ್ರಗತಿಯ ಬಗ್ಗೆ ಚಿಂತಿಸುವ ಪೂಜ್ಯರು ನೂರಾರು ಕೋಟಿ ರು. ವೆಚ್ಚದಲ್ಲಿ ಹತ್ತಾರು ಕಾಮಗಾರಿ ಮುಗಿಸಿದ್ದು, ಎಲ್ಲಿ ನೋಡಿದರಲ್ಲಿ ಹೊಸತನ ಕಾಣಬಹುದಾಗಿದೆ. ರಾಘವೇಂದ್ರ ಸ್ವಾಮಿ ಬೃಂದಾವನವಿರುವ ಶಿಲಾ ಮಂಟಪವನ್ನು 8 ಕೋಟಿ ರು. ವೆಚ್ಚದಲ್ಲಿ ಆಧುನೀಕರಣ ಗೊಳಿಸಲಾಗಿದೆ. ಶ್ರೀಮಠವು ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳಿಗಾಗಿ 3 ಕೋಟಿ ರು.ವೆಚ್ಚದಲ್ಲಿ ರಾಜಾಂಗಣವನ್ನು ಸಿದ್ಧಗೊಳಿಸಲಾಗಿದೆ. ಹೊಸದಾಗಿ 3 ಕೋಟಿ ರು. ವಿನಿಯೋಗಿಸಿ ಮಠದಲ್ಲಿ ಡೋಲೋತ್ಸವ ಮಂಟಪವನ್ನು ಮತ್ತು ಯಾಗ ಶಾಲೆಯನ್ನು ಅನಾವರಣಗೊಳಿಸಲಾಗಿದೆ.

ಭಕ್ತರಿಗೆ ವಸತಿ ಗೃಹಗಳ ನಿರ್ಮಾಣ

ಸಂಕಷ್ಟ ಪರಿಹರಿಸುವಂತೆ ನಿತ್ಯವೂ ಸಾವಿರಾರು ಭಕ್ತರು ರಾಘವೇಂದ್ರ ಸ್ವಾಮಿಗಳ ಸನ್ನಿಧಿಗೆ ಧಾವಿಸುತ್ತಲೇ ಇರುತ್ತಾರೆ. ಬಂದ ಭಕ್ತರ ಹಿತ ರಾಯರು ಕಾಪಾಡಿದರೆ, ತಂಗಲು ಬೇಕಾಗುವ ವಸತಿ ನಿಲಯಗಳನ್ನು ಶ್ರೀಗಳು ಹೊಸದಾಗಿ ನಿರ್ಮಿಸಿ ಅನುಕೂಲ ಮಾಡಿ ಕೊಟ್ಟಿದ್ದಾರೆ. 16 ಕೋಟಿ ರು. ವೆಚ್ಚದಲ್ಲಿ ಪೂಜ್ಯ ಗುರುಗಳಾದ ಸುಯತೀಂದ್ರ ತೀರ್ಥರ ಹೆಸರಿನಲ್ಲಿ 200 ಕೊಠಡಿಗಳ ಸುಸಜ್ಜಿತ ವಸತಿ ಗೃಹ ನಿರ್ಮಿಸಿದ್ದು, ಇನ್ನೂ 18 ಕೋಟಿ ರು.ವಿನಿಯೋಗಿಸಿ 200 ಹೆಚ್ಚುವರಿ ಕೊಠಡಿಗಳನ್ನು ಕಟ್ಟಲಾಗಿದೆ. 100 ಕೊಠಡಿಗಳ ನರಹರಿ ವಸತಿ ಗೃಹವನ್ನು 14 ಕೋಟಿ ರು.ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಮಂತ್ರಾಲಯಕ್ಕೆ ಸಾಮಾನ್ಯ ಭಕ್ತರಲ್ಲದೇ, ಸಚಿವರು, ಉದ್ದಿಮೆದಾರರು ಸೇರಿದಂತೆ ವಿಐಪಿಗಳು ಆಗಮಿಸುವ ಹಿನ್ನೆಲೆ 4 ಕೋಟಿ ರು. ವೆಚ್ಚದಲ್ಲಿ ಪದ್ಮನಾಭ ತೀರ್ಥ ಗೆಸ್ಟ್ ಹೌಸ್‌ನ್ನು ಲೋಕಾರ್ಪಣೆ ಮಾಡಲಾಗಿದೆ. 100 ಕೊಠಡಿಗಳ ಸುಶೀಲೇಂದ್ರ ವಸತಿಗೃಹ ನಿರ್ಮಾಣ ಮಾಡಲಾಗಿದೆ. ಮೂಲರಾಮ ವಸತಿಗೃಹವು 100 ಕೊಠಡಿಗಳನ್ನು 15 ಕೋಟಿ ರು.ವೆಚ್ಚದಲ್ಲಿ ಕಟ್ಟುವ ಮೂಲಕ ಭಕ್ತರಿಗೆ ವಸತಿ ಸೌಕರ್ಯ ಒದಗಿಸಲಾಗುತ್ತಿದೆ.

ಸುಬುಧೇಂದ್ರ ತೀರ್ಥರ ಒತ್ತಾಸೆ ಮೇರೆಗೆ 60 ಕೋಟಿ ರು. ಪಿಲಿಗ್ರಿಂ ಎಮಿನಿಟಿ ಸೆಂಟರ್‌ನ್ನು ಮಂತ್ರಾಲಯ ಮಠದ ಮುಖ್ಯ ದ್ವಾರದ ಬಳಿ ನಿರ್ಮಿಸಲಾಗುತ್ತಿದ್ದು, 300 ಕೊಠಡಿಗಳು, ಡಾಲಮಟ್ರಿ, ರೆಸ್ಟೋರೆಂಟ್, ಸ್ವಾಗತ ಕೌಂಟರ್ ಸೇರಿದಂತೆ ಸಕಲ ಸೌಲಭ್ಯಗಳು ಈ ಕಟ್ಟಡ ಹೊಂದಿರಲಿದೆ.

ಭಕ್ತರಿಗೆ ಸಕಲ ಸೌಲಭ್ಯದ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣ

ತಿರುಪತಿಯಂತೆ ರಾಯಚೂರಿನ ಮಂತ್ರಾಲಯಕ್ಕೂ ನಿತ್ಯ ಸಹಸ್ರಾರು ಭಕ್ತರು ಆಗಮಿಸಿ, ಗುರು ಸಾರ್ವಭೌಮ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯುತ್ತಾರೆ. ಶ್ರೀ ಕ್ಷೇತ್ರಕ್ಕೆ ಬಂದಂತಹ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಶ್ರೀಮಠ ಸಕಲ ವ್ಯವಸ್ಥೆ ಮಾಡುತ್ತಾ ಬರುತ್ತಿದ್ದು, ಇದೀಗ ಮಲ್ಟಿ ಸ್ಟೋರ್ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸುವ ಮೂಲಕ ಭಕ್ತರಿಗೆ ಮತ್ತಷ್ಟು ಅನುಕೂಲ ಮಾಡಿಕೊಡಲಿದೆ. ಸಂಕಷ್ಟ ಪರಿಹಾರಕ್ಕಾಗಿ ರಾಯರ ಸನ್ನಿಧಿಗೆ ಬರುವ ಭಕ್ತರಿಗಾಗಿ ಮಂತ್ರಾಲಯದಲ್ಲಿ ಈಗಿರುವ ವ್ಯಾಸ ಮಂದಿರದ ಮ್ಯೂಸಿಯಂ ಹಿಂದೆ 10 ಕೋಟಿ ರು. ವೆಚ್ಚದಲ್ಲಿ ಶ್ರೀ ಮಠವು ಮಲ್ಟಿ ಸ್ಟೋರ್ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಮುಂದಾಗಿದ್ದು, ಆರಾಧನಾ ಹಿನ್ನೆಲೆಯಲ್ಲಿ ತಾತ್ಕಾಲಿಕ ಪ್ರಾಯೋಗಿಕವಾಗಿ ಟಿನ್‌ಗಳಿಂದ ನಿರ್ಮಿಸುವುದಕ್ಕೆ ಸುಬುಧೇಂದ್ರ ತೀರ್ಥರು ಚಾಲನೆ ನೀಡಲಿದ್ದಾರೆ. ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಒಂದೇ ಸೂರಿನಡಿ ಸಕಲ ಸೌಲಭ್ಯ ಸಿಗಲಿದೆ.

ಕ್ಯೂ ಕಾಂಪ್ಲೆಕ್ಸ್ ನಲ್ಲಿ ಸ್ನಾನಕೋಣೆ, ಶೌಚಾಲಯ, ಫ್ಯಾನ್‌ಗಳನ್ನು ಅಳವಡಿಸಿ ಯಾವುದೇ ಸಮಸ್ಯೆಯಾಗದಂತೆ ಸೌಕರ್ಯ ಒದಗಿಸುವ ಯೋಜನೆಯಾಗಿದೆ. ಯಾಕೆಂದರೆ ಮಂತ್ರಾಲಯಕ್ಕೆ ಬಂದಂತಹ ಭಕ್ತರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಬೇಕಿದೆ. ವಯೋವೃದ್ಧರು, ಮಹಿಳೆಯರು ಮತ್ತು ಚಿಕ್ಕ ಮಕ್ಕಳಿಗೆ ನದಿಯಲ್ಲಿ ಸ್ನಾನ ಮಾಡುವುದು ಕಷ್ಟದಾಯಕವಾಗಿದೆ. ಹಾಗಾಗಿ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಿ ಅಲ್ಲಿಯೇ ಎಲ್ಲ ಸೌಲಭ್ಯ ಒದಗಿಸುವ ಉದ್ದೇಶ ಶ್ರೀಗಳಾದ್ದಾಗಿದ್ದು, ಪ್ರಸ್ತುತ ಆರಾಧನಾ ಸಂದರ್ಭದಲ್ಲಿ ತಾತ್ಕಾಲಿಕ ಟಿನ್ ಶೆಡ್‌ನ್ನು ನಿರ್ಮಿಸಿ, ನಂತರ ಸುಸಜ್ಜಿತ ಕಟ್ಟಡ ನಿರ್ಮಿಸುವ ಮೂಲಕ ಕಾರ್ಯರೂಪಕ್ಕೆ ಬರಲಿದೆ.

4 ಕೋಟಿ ವೆಚ್ಚದಲ್ಲಿ ಪುಷ್ಕರಣಿ

ಮಂತ್ರಾಲಯದ ತುಂಗಾ ತೀರದಿ ನೆಲೆಸಿರುವ ಭಕ್ತರ ಪಾಲಿನ ಕಾಮಧೇನು ರಾಘವೇಂದ್ರ ಸ್ವಾಮಿಗಳ ಆರಾಧನೆ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ಕಾಗಿ ಶ್ರೀಮಠ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಅದರ ಫಲವಾಗಿ ಪುಷ್ಕರಣಿ ನಿರ್ಮಾಣಗೊಂಡಿದ್ದು, ರಾಯರ ಆರಾಧನೆಯ ಹಿಂದಿನ ದಿನ ಲೋಕಾರ್ಪಣೆಗೊಳ್ಳಲಿದೆ.

ತುಂಗಭದ್ರಾ ನದಿ ಇದ್ದರೂ, ಎಲ್ಲ ಕಾಲದಲ್ಲಿ ನದಿಯಲ್ಲಿ ನೀರಿರದೆ ನದಿ ಖಾಲಿ ಇರುವುದರಿಂದ ಧಾರ್ಮಿಕ ಕೈಂಕರ್ಯಗಳಿಗಾಗಿ ಮತ್ತು ತೆಪ್ಪೋತ್ಸವ ಮಾಡಲು ಸಮಸ್ಯೆಯಾಗಿ ಪುಷ್ಕರಣಿ ನಿರ್ಮಾಣ ಮಾಡುವುದು ಅವಶ್ಯಕವಾಗಿತ್ತು. ಇದು ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರ ಸಂಕಲ್ಪ ಕೂಡ ಆಗಿತ್ತು. ಹಾಗಾಗಿ ರಾಘವೇಂದ್ರ ಸ್ವಾಮಿ ಮಠದ ಮುಂಭಾಗದಲ್ಲಿರುವ ಮಂಚಾಲಮ್ಮ ದೇವಸ್ಥಾನದ ಈಶಾನ್ಯ ಭಾಗದಲ್ಲಿ ನಾಲ್ಕು ಕೋಟಿ ರು. ವೆಚ್ಚದಲ್ಲಿ 170 ಅಡಿ ಉದ್ದ ಮತ್ತು 64 ಅಡಿ ಅಗಲದ ಕಲ್ಯಾಣಿ ನಿರ್ಮಾಣಗೊಂಡಿದ್ದು, ಆ.10 ರಂದು ಸುಬುಧೇಂದ್ರ ತೀರ್ಥರು ಉದ್ಘಾಟನೆ ಮಾಡಲಿದ್ದಾರೆ. ನದಿಯಿಂದ ನೀರನ್ನ ಲಿಫ್ಟ್ ಮಾಡಿ ಪುಷ್ಕರಣಿ ತುಂಬಿಸಲಾಗುತ್ತಿದ್ದು, ಪ್ರಾಯೋಗಿಕವಾಗಿ ನೀರನ್ನು ಸಂಗ್ರಹಿಸಿ ಪರೀಕ್ಷಿಸಲಾಗಿದೆ. ಹುಣ್ಣಿಮೆ ದಿನ ಶ್ರೀಮಠದ ಉತ್ಸವದ ಸಂದರ್ಭದಲ್ಲಿ, ಕಾರ್ತಿಕ ಮಾಸದಲ್ಲಿ ಹಾಗೂ ರಾಘವೇಂದ್ರ ಸ್ವಾಮಿಗಳ ಆರಾಧನಾ ಸಮಯದಲ್ಲಿ ತೆಪ್ಪೋತ್ಸವ ಮಾಡಲು ಪುಷ್ಕರಣಿ ನಿರ್ಮಾಣ ಮಾಡಲಾಗಿದೆ.

(2ನೇ ಪುಟಕ್ಕೆ)

ಧರ್ಮರಹಿತ ರಾಮರಾಜ್ಯ ಅಸಾಧು

(1ನೇ ಪುಟದಿಂದ) ...

ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ಎಂದು ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳಿ ಧರ್ಮದ ಮಹತ್ವವನ್ನು ನಮಗೆಲ್ಲಾ ತಿಳಿಸಿಕೊಟ್ಟಿದ್ದಾನೆ. ಧರ್ಮ-ಅಧರ್ಮಗಳ ನಡುವಿನ ಹೋಯ್ದಾಟ ಅನಾದಿಕಾಲದಿಂದಲೂ ಇದ್ದದ್ದೆ, ಮುಂದೆಯೂ ಇರುವಂತದ್ದೆ. ಆದರೆ ಯಾವುದು ಧರ್ಮ, ಯಾವುದು ಅಧರ್ಮ ಎಂದು ಅರಿವು ಮೂಡಿಸುವುದು ಮಠಮಾನ್ಯಗಳ ಬಹುದೊಡ್ಡ ಗುರುತರ ಜವಾಬ್ದಾರಿ.

• ಧರ್ಮದ ಉಳಿವೇ ಮಠಮಾನ್ಯಗಳ ಸಂಕಲ್ಪವಾಗಿದ್ದಲ್ಲಿ ಮಠ-ಮಠಗಳ ನಡುವೆ ಭಿನ್ನಾಭಿಪ್ರಾಯ ಏಕೆ? ಕೋರ್ಟು ಕಚೇರಿಗಳ ವ್ಯಾಜ್ಯಗಳೇಕೆ?

ನಿಜ. ಅಂಥಹ ಬೆಳವಣಿಗೆಗಳು ನಮಗೂ ಬೇಸರ ಮೂಡಿಸಿದೆ. ನಾವು ಕೇವಲ ಸನ್ಯಾಸಿಯಾಗಿದ್ದರೆ ಇವೆಲ್ಲದ್ದರಿಂದ ದೂರವಿರಬಹುದಿತ್ತು. ಆದರೆ, ಪರಂಪರೆಯ ಪ್ರತಿಷ್ಠಿತ



ಪೀಠವೊಂದರ ಪೀಠಾಧಿಪತಿಗಳೂ ಆಗಿರುವ ಕಾರಣ ಕೆಲವು ಲೌಕಿಕ ವಿವಾದಗಳಿಗೂ ತಲೆ ಕೊಡಲೇ ಬೇಕಾಗುತ್ತದೆ. ಇಲ್ಲವಾದಲ್ಲಿ ಮಠದ ಲಕ್ಷಾಂತರ ಅನುಯಾಯಿಗಳು, ಭಕ್ತರ ಮತ್ತು ಶಿಷ್ಯರ ಭಾವನೆಗೆ ಘಾಸಿ ಮಾಡಿದಂತಾಗುತ್ತದೆ. ಆದರೆ ಧಾರ್ಮಿಕ ಶ್ರದ್ಧಾ ಕೇಂದ್ರಗಳು ವಿವಾದ ಮತ್ತು ಕೋರ್ಟು ಕಚೇರಿಯ ವ್ಯಾಜ್ಯಗಳಿಂದ ದೂರವಿರಬೇಕು ಎಂಬುದು ನನ್ನ ವೈಯಕ್ತಿಕ ನಿಲುವು. ಜೊತೆಗೆ ನಾವು ಅದಕ್ಕೆ ಬದ್ಧರೂ ಕೂಡ.

• ರಾಘವೇಂದ್ರ ತೀರ್ಥರು ಹೇಗೆ ಉಳಿದೆಲ್ಲಾ ಯತಿಗಳಿಗಿಂತ ಶ್ರೇಷ್ಠರು ಮತ್ತು ಮಾನ್ಯರು?

ರಾಘವೇಂದ್ರ ಸ್ವಾಮಿಗಳನ್ನು ಮತ್ತು ರಾಘವೇಂದ್ರ ಸ್ವಾಮಿಗಳ ಮಠವನ್ನು ಜಗದ್ಗುರು ಮತ್ತು ಜಗದ್ಗುರು ಪೀಠ ಎಂದು ಭಕ್ತಿಭಾವದಿಂದ ಮಾನ್ಯ ಮಾಡಲ್ಪಟ್ಟಿರುವುದು ಜಗತ್ತಿನಾದ್ಯಂತ ವ್ಯಾಪಿಸಿರುವ ಕೋಟ್ಯಂತರ ಭಕ್ತರು. ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿ ಈಗಲೂ ಮಂತ್ರಾಲಯದ ಮೂಲ ಬೃಂದಾವನದಲ್ಲಿ ಸನ್ನಿಹಿತರಾಗಿ ಮನುಕುಲದ ಒಳಿತಿಗಾಗಿ ಸುದೀರ್ಘ ತಪಸ್ಸಿನೊಂದಿಗೆ ತಮ್ಮ ಸರ್ವಸ್ವವನ್ನೂ ಧಾರೆ ಎರೆಯುತ್ತಾ ಭಕ್ತರ ಸಕಲ ಮನೋಭಿಷ್ಟಗಳನ್ನು ಅನುಗ್ರಹಿಸುತ್ತಿರುವ ಶ್ರೀಗುರುರಾಜರಿಗೆ ಗುರುರಾಜರೇ ಸಾಟಿ. ಶ್ರೇಷ್ಠ ಮಾನವೀಯ ಮೌಲ್ಯಗಳಾದ ಸತ್ಯ ಮತ್ತು ಧರ್ಮಗಳು ತಮ್ಮ ಉಸಿರೆಂದು ಜಗತ್ತಿಗೆ ಸಾರಿದವರು ರಾಘವೇಂದ್ರಸ್ವಾಮಿಗಳು. ಜಾತಿ, ಭಾಷೆ ಮತ್ತು ಪ್ರಾಂತ್ಯಾತೀತವಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಹಾಗಾಗಿಯೇ ಅವರನ್ನು ಕಲ್ಪವೃಕ್ಷ-ಕಾಮಧೇನು ಸದೃಷರು ಎಂದು ಕೊಂಡಾಡಲಾಗಿದೆ.

ಭಕ್ತರ ಧ್ಯಾನ-ಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ಇನ್ನು ಮುಂದೆ ವಿವಿಧ ಪ್ರದೇಶಗಳಲ್ಲಿ ಶಾಖಾ ಮಠಗಳ ಮಾದರಿಯಲ್ಲಿ ಧ್ಯಾನ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ. ರಾಯರ ಅಂತರಂಗ ಭಕ್ತರು ಈಗಾಗಲೇ ಈ ಸೇವಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಇದರಿಂದಾಗಿ ರಾಯರ ಮತ್ತು ಭಕ್ತರ ನಡುವಿನ ಸಂಬಂಧ ಮತ್ತಷ್ಟು ಹತ್ತಿರವಾಗಲಿದೆ.

ಮಂತ್ರಾಲಯ ಭವಿಷ್ಯ ಕುರಿತಂತೆ ನಿಮ್ಮ ಕನಸು ಏನು ?

ನವಮಂತ್ರಾಲಯ ನಿರ್ಮಾತೃರು, ನಮ್ಮ ಪೂರ್ವಾಶ್ರಮದ ತಾತಂದಿರೂ ಮತ್ತು ನಮ್ಮ ಪರಮೇಷ್ಠಿ ಗುರುಗಳಾದ ಶ್ರೀ ಸುಜಯೀಂದ್ರ ತೀರ್ಥರನ್ನು ನಾವು ಈ ಸಂದರ್ಭದಲ್ಲಿ ಭಕ್ತಿಯಿಂದ ಸ್ಮರಿಸಲೇಬೇಕು. ಮಂತ್ರಾಲಯವೆಂಬ ಕುಗ್ರಾಮವನ್ನು ಲೋಕವಿಖ್ಯಾತಗೊಳಿಸಿದವರು ನಮ್ಮ ಪರಮೇಷ್ಠಿಗುರುಗಳು. ಅವರ ದೂರಾಲೋಚನೆ, ಸಂಕಲ್ಪ, ಶ್ರದ್ಧೆಯೇ ನಮಗೆ ಸ್ಫೂರ್ತಿ ಮತ್ತು ದಾರಿದೀಪ. ಅವರು ಅಂದು ಕೈಗೊಂಡ ನಿರ್ಧಾರಗಳಿಂದಾಗಿ ಇಂದಿಗೂ ದ್ವೈತ ವೇದಾಂತ ಪ್ರಚಾರ, ಸಂಸ್ಕೃತ ಪಾಠಶಾಲೆ, ಗೋಶಾಲೆ, ಗ್ರಂಥ ಪ್ರಕಟಣೆ ಮುಂತಾದ ಕಾರ್ಯಗಳು ನಿರಾತಂಕವಾಗಿ ನಡೆಯುತ್ತಾ ಬಂದಿದೆ. ಇತ್ತೀಚಿನ ದಿನಗಳಲ್ಲಂತೂ ಯಾತ್ರಾರ್ಥಿಗಳಿಗೆ ವಸತಿ, ಅನ್ನಪ್ರಸಾದ ಮತ್ತು ದರ್ಶನ ವ್ಯವಸ್ಥೆ ಗಮನಾರ್ಹವಾಗಿ ಸುಧಾರಣೆಗೊಂಡಿದೆ. ಪರಿಣಾಮವಾಗಿ ದಿನೇ ದಿನೇ ಭಕ್ತರ ಪ್ರವಾಹ ಮಂತ್ರಾಲಯಕ್ಕೆ ಹರಿದು ಬರುತ್ತಿದೆ. ಜೊತೆಗೆ ಆದಾಯವೂ ಕೂಡ ಸಮೃದ್ಧವಾಗಿದೆ. ಒಂದು ರೀತಿಯಲ್ಲಿ ತಿರುಪತಿಯನ್ನು ಬಿಟ್ಟರೆ ಮಂತ್ರಾಲಯ ಪ್ರಮುಖ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಭಕ್ತರಿಗೆ ಕಿಂಚಿತ್ತೂ ಲೋಪ ಕಾಣದಂತೆ ಮಂತ್ರಾಲಯ ಕ್ಷೇತ್ರವನ್ನು ಸಿದ್ಧಗೊಳಿಸುವನಿಟ್ಟಿನಲ್ಲಿ ನಾವು ಹಲವಾರು ಯೋಜನೆಗಳನ್ನು ಸಮಯ ಮಿತಿಯಲ್ಲಿ ಕಾರ್ಯರೂಪಕ್ಕೆ ತರಲು ಸಂಕಲ್ಪಿಸಿದ್ದೇವೆ. ಎಲ್ಲವನ್ನೂ ಗುರುರಾಜರು ಸುಲಲಿತವಾಗಿ ನೆರವೇರಿಸುವರೆಂಬ ವಿಶ್ವಾಸ ಮತ್ತು ಅಪಾರ ನಂಬಿಕೆ ನಮಗಿದೆ.

ಭಕ್ತರ ಧ್ಯಾನ-ಸಾಧನೆಗೆ ಅನುಕೂಲವಾಗುವ ರೀತಿಯಲ್ಲಿ ಇನ್ನು ಮುಂದೆ ವಿವಿಧ ಪ್ರದೇಶಗಳಲ್ಲಿ ಶಾಖಾ ಮಠಗಳ ಮಾದರಿಯಲ್ಲಿ ಧ್ಯಾನ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ. ರಾಯರ ಅಂತರಂಗ ಭಕ್ತರು ಈಗಾಗಲೇ ಈ ಸೇವಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಇದರಿಂದಾಗಿ ರಾಯರ ಮತ್ತು ಭಕ್ತರ ನಡುವಿನ ಸಂಬಂಧ ಮತ್ತಷ್ಟು ಹತ್ತಿರವಾಗಲಿದೆ.

ಭವಿಷ್ಯದ ಮಂತ್ರಾಲಯ

- ಮಂತ್ರಾಲಯ ರಾಯಚೂರು ರಸ್ತೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀರಾಮಚಂದ್ರನ ಸನ್ನಿಧಾನ ಶೀಘ್ರದಲ್ಲಿ ಪೂರ್ಣಗೊಂಡು ಸದ್ಯದಲ್ಲೇ ಲೋಕಾರ್ಪಣೆಗೊಳ್ಳಲಿದೆ. ಇದರ ಸಮೀಪದಲ್ಲೇ ನೂರು ಎಕರೆ ಪ್ರದೇಶದಲ್ಲಿ ಬೃಹತ್ ಕೆರೆ ನಿರ್ಮಿಸಿ ಮಂತ್ರಾಲಯ ಮತ್ತು ಸುತ್ತಮುತ್ತಲ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ.
- ಭಕ್ತರಿಗೆ ಶೀಘ್ರ ಮತ್ತು ಅನಾಯಾಸ ದರ್ಶನಕ್ಕಾಗಿ ತಿರುಪತಿ ಮಾದರಿಯಲ್ಲಿ ಶಾಶ್ವತ ಕ್ಯೂ ಕಾಂಪ್ಲೆಕ್ಸ್ ನಿರ್ಮಿಸಲಾಗುತ್ತಿದೆ.
- ರಾಯರ ಬೃಂದಾವನ ಸನ್ನಿಧಾನದ ಹೊರ ಪ್ರಾಕಾರದ ಬಂಗಾರ ಕವಚ ಅಳಡಿಸುವ ಕೆಲಸ ಪ್ರಗತಿಯಲ್ಲಿದೆ.
- ಯಾತ್ರಾರ್ಥಿಗಳಿಗಳ ವಸತಿ ಸೌಲಭ್ಯಕ್ಕಾಗಿ ಶ್ರೀಮಠದವತಿಯಿಂದ ಒಂದು ಸಾವಿರ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಯೋಜನೆ ಕಾರ್ಯರೂಪದಲ್ಲಿದೆ.
- ಮಂಚಾಲಮ್ಮ ಗುಡಿಯ ಮುಂಭಾಗದಲ್ಲಿ ನಿರ್ಮಾಣಗೊಂಡಿರುವ ಪರಿಮಳ ತೀರ್ಥ ಕಲ್ಯಾಣಿಯಲ್ಲಿ ವಿಶೇಷ ದಿನಗಳಲ್ಲಿ ಗುರುರಾಜರ ತೆಪ್ಪೋತ್ಸವ ಭಕ್ತರ ಕಣ್ತುಂಬಿಸಲಿದೆ.
- ಮಂತ್ರಾಲಯ ಸಂಸ್ಕೃತ ಪಾಠಶಾಲೆಯಿಂದ ಸುಧಾಮಂಗಳ ಪೂರ್ಣಗೊಳಿಸಿದ ಯುವ ಪಂಡಿತರು ಶಾಸ್ತ್ರಪ್ರಚಾರದಲ್ಲಿ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಚಾರ.
- ಸುಮಾರು 15ಕೋಟಿ ರು.ಗಳಿಗೂ ಹೆಚ್ಚು ನಿರ್ಮಾಣ ವೆಚ್ಚದ ಮಂತ್ರಾಲಯ ಒಳಚರಂಡಿ ವ್ಯವಸ್ಥೆ ಯೋಜನೆ ಅಂತಿಮ ಹಂತದಲ್ಲಿದ್ದು ಅಕ್ಟೋಬರ್‌ನಲ್ಲಿ ಲೋಕಾರ್ಪಣೆಗೊಳ್ಳಲಿದೆ.
- ಸುಮಾರು 300 ಹಾಸಿಗೆ ಸೌಲಭ್ಯವುಳ್ಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾರ್ಯ ಚಾಲನೆಗೊಂಡಿದೆ.

ನವ ಮಂತ್ರಾಲಯ ನಿರ್ಮಾಣ

(1ನೇ ಪುಟದಿಂದ)

ಧಾರ್ಮಿಕ ಕಾರ್ಯಗಳ ಜತೆಗೆ ರಾಯರ ಸನ್ನಿಧಿಗೆ ಬರುವ ಭಕ್ತರ ಆಕರ್ಷಣೆಗೂ ಪುಷ್ಕರಣಿ ಒಳಗಾಗಲಿದೆ. ಶ್ರೀ ಮಠದ ಸದಾ ಒಂದಿಲ್ಲೊಂದು ಹೊಸತನಕ್ಕೆ ಮುಂದಡಿ ಇಡುವ ಮೂಲಕ ಭಕ್ತರನ್ನು ಮತ್ತಷ್ಟು ಸೆಳೆಯಲು ಕಾರಣವಾಗಿದೆ.

ಟೊಂಕ ಕಟ್ಟಿ ನಿಂತ ಸ್ವಯಂ ಸೇವಕರ ತಂಡ

ಕರುಣೆಯ ಸಾಕಾರ ಮೂರ್ತಿ, ನಂಬಿ ಬಂದವರ ಕೈ ಹಿಡಿದು ಕಾಪಾಡುವ ಆರಾಧ್ಯ ದೈವ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆ ಇನ್ನೇನು ಆರಂಭಗೊಳ್ಳಲಿದೆ. ಆರಾಧನಾ ವೈಭವ ಕಣ್ತುಂಬಿಕೊಳ್ಳಲು ದೇಶದ ಮೂಲೆ ಮೂಲೆಯಿಂದಲೂ ಲಕ್ಷಾಂತರ ಭಕ್ತರು ಸಾಗರೋಪಾದಿಯಲ್ಲಿ ಮಂತ್ರಾಲಯಕ್ಕೆ ಹರಿದು ಬರಲಿದ್ದಾರೆ. ಬಂದ ಲಕ್ಷಾಂತರ ಜನ ಸಮೂಹಕ್ಕೆ ಕಿಂಚಿತ್ತು ಲವಲೇಶದ ಲೋಪವಿಲ್ಲದಂತೆ ಕೆಲಸ ನಿರ್ವಹಿಸುವ ಸ್ವಯಂ ಸೇವಕರ ತಂಡವೇ ಟೊಂಕಕಟ್ಟಿ ನಿಂತಿರುತ್ತದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಮಹಿಳೆಯರು ಸೇರಿದಂತೆ 1400 ಸ್ವಯಂ ಸೇವಕರು ಏಳು ದಿನಗಳ ಕಾಲ ನಡೆಯುವ ಆರಾಧನಾ ಮಹೋತ್ಸವದಲ್ಲಿ ಶ್ರೀ ಮಠದ ಸ್ವಚ್ಛತೆ, ಮಠದ ಸುತ್ತ ಸ್ವಚ್ಛತೆ ಮತ್ತು ಮಧ್ವ ಮಾರ್ಗದ ಶುಚಿತ್ವ ಕಾಪಾಡುತ್ತಾ, ಪರಿಮಳ ಪ್ರಸಾದ ಪ್ಯಾಕೇಟ್ ಸಿದ್ಧತೆ, ಅಡುಗೆ ಸಿದ್ಧತೆಗೆ ಸಹಕರಿಸುವುದು, ಭಕ್ತಾದಿಗಳಿಗೆ ಊಟ ಬಡಿಸುವುದು, ರಾಯರ ದರ್ಶನಕ್ಕೆ ಸರದಿ ಸಾಲಿನ ಸುವ್ಯವಸ್ಥೆ ಅನುಕ್ಷಣವು ಲೋಪವಾಗದಂತೆ ಸ್ವಯಂ ಸೇವಕರ ತಂಡಗಳು ಹಗಲಿರಳು ಎನ್ನದೆ ಕರ್ತವ್ಯ ನಿರ್ವಹಿಸಿ ರಾಯರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಇನ್ಫೋಸಿಸ್ ಮುಖ್ಯಸ್ಥೆ ಸುಧಾ ಮೂರ್ತಿ ಅವರಂತಹ ಮಹಾನ್ ವ್ಯಕ್ತಿಗಳು ಯಾವುದೇ ಹಮ್ಮುಬಿಮ್ಮು ಇಲ್ಲದೇ ಸಾಮಾನ್ಯ ಮಹಿಳೆಯಂತೆ ಆರಾಧನಾ ಮಹೋತ್ಸವದ ಸಂದರ್ಭದಲ್ಲಿ ಭಾಗಿಯಾಗುತ್ತಾರೆ. ಭಕ್ತರಿಗಾಗಿ ಅಡುಗೆ ಮಾಡುವಾಗ ತರಕಾರಿ ಹೆಚ್ಚುವ ಕಾರ್ಯ ಮಾಡುತ್ತಾ ತಮ್ಮ ಅಳಿಲು ಸೇವೆಯನ್ನು ಗುರು ಸಾರ್ವಭೌಮರಿಗೆ ಸಮರ್ಪಿಸಿ ಧನ್ಯತೆ ಅನುಭವಿಸುತ್ತಾ ಬರುತ್ತಿದ್ದಾರೆ. ಲೆಕ್ಕಕ್ಕೆ ಸಿಗದಂತೆ ಹಲವರು ಸ್ವಯಂ ಪ್ರೇರಿತರಾಗಿ ಶ್ರೀ ಮಠದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಂತಸ ಪಡುವ ದೃಶ್ಯ ಆರಾಧನಾ ಸಂದರ್ಭದಲ್ಲಿ ಕಾಣ ಸಿಗುತ್ತದೆ. ಲಕ್ಷಾಂತರ ಭಕ್ತ ಸಾಗರವೇ ಮಂತ್ರಾಲಯಕ್ಕೆ ಹರಿದು ಬಂದರೂ, ರಾಯರ ಅನುಗ್ರಹದಿಂದ ಯಾವುದೇ ಲೋಪಗಳಾಗದಂತೆ ಎಲ್ಲವು ಸೂಸುತ್ರವಾಗಿ ನೆರವೇರುತ್ತಲೇ ಬಂದಿವೆ.

37 ಅಡಿ ಎತ್ತರ ಅಭಯಾಂಜನೇಯ ಮೂರ್ತಿ ಪ್ರತಿಷ್ಠಾಪನೆ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು ಪ್ರಾಣ ದೇವರನ್ನು ಬಿಟ್ಟು ಇರಲಾರರು ಎಂಬ ಪ್ರತೀತಿ ಇದೆ. ರಾಯರಿದ್ದಲ್ಲಿ ಹನುಮನಿರಲೇಬೇಕು. ಹಾಗಾಗಿ ಶ್ರೀಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು 37 ಅಡಿ ಎತ್ತರ ಅಭಯಾಂಜನೇಯ ಮೂರ್ತಿ ಪ್ರತಿಷ್ಠಾಪಿಸಿ, ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಮಂತ್ರಾಲಯವೆಂದರೆ ಕೇವಲ ಆಧ್ಯಾತ್ಮದ ನೆಲೆಯಾಗಿರದೆ, ಪ್ರವಾಸಿ ತಾಣವಾಗಿಯೂ ಜನಾಕರ್ಷಣೆಗೊಳಗಾಗಿದೆ. ನಿತ್ಯ ತನ್ನರಸಿ ಬರುವ ಭಕ್ತರ ಸಮಸ್ಯೆಗಳನ್ನು ಪರಿಹರಿಸೋ ಕರುಣಾಮಯಿ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ನಮಿಸಿ, ಪಡೆಯುವ ಭಕ್ತರು ನಂತರ ಪಂಚಮುಖಿ ಆಂಜನೇಯ ಮತ್ತು ಬಿಚ್ಚಾಲಿಯಲ್ಲಿ ರಾಯರ ತಪಸ್ಗೈದ ಸ್ಥಳದ ದರ್ಶನ ಪಡೆಯುವುದು ಸಾಮಾನ್ಯವಾಗಿತ್ತು. ಆದರೆ ಇತ್ತೀಚೆಗೆ ಮಂತ್ರಾಲಯ ಹೊರವಲಯದ ಮಾಧವರಂ ರಸ್ತೆಯಲ್ಲಿ 5 ಕೋಟಿ ರು.ವೆಚ್ಚದಲ್ಲಿ 37 ಅಡಿ ಎತ್ತರದ ಅಭಯಾಂಜನೇಯ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, 50 ಅಡಿ ಎತ್ತರದ ದೇವಸ್ಥಾನ ನಿರ್ಮಿಸಿದ್ದಾರೆ. ರಾಯರ ಸನ್ನಿಧಿಗೆ ಬಂದ ಭಕ್ತರು ಇಲ್ಲಿಗೆ ಭೇಟಿ ನೀಡಿ ಆಂಜನೇಯಸ್ವಾಮಿ ಕೃಪೆಗೆ ಪಾತ್ರರಾಗುತ್ತಾರೆ. ಅಭಯಾಂಜನೇಯ್ಯ ಮೂರ್ತಿ ಎದುರಿಗೆ 41 ಅಡಿ ಎತ್ತರದ ಏಕ ಶಿಲೆಯಲ್ಲಿ ಶ್ರೀರಾಮಚಂದ್ರ ಮೂರ್ತಿಯನ್ನು ತರಲಾಗಿದ್ದು, ದೇವಸ್ಥಾನ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಇದಕ್ಕಾಗಿ 8 ಕೋಟಿ ರು.ವ್ಯಯಿಸಲು ಶ್ರೀಮಠ ಮುಂದಾಗಿದೆ. ಮಂತ್ರಾಲಯಕ್ಕೆ ಬರುವ ಜನತೆಗೆ ಭಕ್ತಿಯ ಜತೆಗೆ ಪ್ರವಾಸ ಖುಷಿ ಅನುಭವಿಸುವಂತಾಗಿದೆ.

ರಾಘವೇಂದ್ರ ತೀರ್ಥರ ರಥೋತ್ಸವ ವಿಶೇಷತೆ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಸಪ್ತ ರಾತ್ರೋತ್ಸವ ಆರನೇ ದಿನ ಮಹಾ ರಥೋತ್ಸವ ಜರುಗುತ್ತಾ ಬಂದಿದೆ. ರಥೋತ್ಸವ 1925 ನೇ ಇಸ್ವಿ 2025ಕ್ಕೆ ನೂರು ವರ್ಷಗಳ ಹಿಂದೆ ಮಹಾ ರಥೋತ್ಸವವನ್ನು ಆರಂಭಿಸಲಾಗಿದೆ. ಹಂಸನೆಂಬ ಪರಮಾತ್ಮನ ಅನುಸಂಧಾನ ಪ್ರಕಾರ ಶ್ರೀಮಠದ 49ನೇ ಪೀಠಾಧಿಪತಿ ಅಥವಾ ಮಧ್ವಾಚಾರ್ಯರ ಕಾಲದ ಲೆಕ್ಕದಲ್ಲಿ 34ನೇ ಪೀಠಾಧಿಪತಿಯಾಗಿದ್ದ ಸುಶೀಲೇಂದ್ರ ತೀರ್ಥರಿಂದ ಮಹಾರಥೋತ್ಸವ ಆರಂಭಗೊಂಡಿದೆ. ಮಹಾರಥವು 37 ಅಡಿ ಎತ್ತರದ ನಾಲ್ಕು ಚಕ್ರಗಳನ್ನು ಹೊಂದಿದ್ದು, ಸಾಗುವಾನಿ ಕಟ್ಟಿಗೆಯಲ್ಲಿ ಕೆತ್ತನೆ ಮಾಡಲಾಗಿದೆ.

ಸಾಮಾನ್ಯವಾಗಿ ರಥೋತ್ಸವ ಎಂಬುವುದು ದೇವತೆಗಳ ಉತ್ಸವ ಮತ್ತು ಜಾತ್ರೆಗಳಲ್ಲಿ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ರಥೋತ್ಸವವನ್ನ ಯತಿಗಳಾದ ರಾಘವೇಂದ್ರ ಸ್ವಾಮಿಗಳವರಿಗೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಎದುರಾಗುತ್ತದೆ. ಆಗ ಮಠದ ಪೀಠಾಧಿಪತಿಯಾಗಿದ್ದ ಸುಶೀಲೇಂದ್ರ ತೀರ್ಥರು ವಿದ್ವಾಂಸರ ಗೋಷ್ಠಿಯನ್ನ ಕರೆದು ಚರ್ಚಿಸಿದಾಗ ರಾಘವೇಂದ್ರ ಸ್ವಾಮಿಗಳ ರಥೋತ್ಸವ ಆರಂಭದ ಬಗ್ಗೆ ಹಲವು ಅಭಿಪ್ರಾಯಗಳು ಕೇಳಿ ಬಂದವು. ರಾಘವೇಂದ್ರ ಸ್ವಾಮಿಗಳು ಮೂಲತಃ ಶಂಕು ಕರ್ಣನೆಂಬ ಕರ್ಮಜ ದೇವತೆ ಅವರು ಬ್ರಹ್ಮದೇವರ ಆದೇಶದಂತೆ ಪ್ರಲ್ಹಾದ ರಾಜರಾಗಿ, ಬಾಲಿಕ್ಯ ರಾಜರಾಗಿ, ಶ್ರೀ ವ್ಯಾಸರಾಜರಾಗಿ ಅವತರಿಸಿ, ಕಟ್ಟ ಕಡೆಯದಾಗಿ ಶ್ರೀಮದ್ ರಾಘವೇಂದ್ರ ತೀರ್ಥರಾಗಿ ಅವತಾರ ಮಾಡಿದ್ದಾರೆ ಎಂಬ ಹಿನ್ನೆಲೆ ಇದೆ. ಕರ್ಮಜ ದೇವತೆಯೆ ಅನೇಕ ರೂಪಗಳನ್ನ ತೆಗೆದುಕೊಂಡು ಅವತರಿಸಿದ ಹಿನ್ನೆಲೆಯಲ್ಲಿ ಹಾಗೂ ನರಸಿಂಹ ದೇವರ ಭಕ್ತನಾಗಿ, ಪ್ರಲ್ಹಾದ ರಾಜನಾಗಿ ಅವತಾರಗೈದದಕ್ಕಾಗಿ ಪ್ರಲ್ಹಾದರಾಜರ ವಿಗ್ರಹ ಮಾಡಿ ಅದರಿಂದಲೇ ವಿವಿಧ ಉತ್ಸವಗಳನ್ನ ಮಾಡಲು ನಿಶ್ಚಯ ಮಾಡಿದರು.

ಅಂಗಪೂಜೆ

ಯಾವುದೇ ಸನ್ನಿಧಾನಕ್ಕೆ ಮೂರು ವಿಧವಾದ ಪೂಜೆಗಳಿರುತ್ತವೆ. ಅಂಗಪೂಜೆ, ರಂಗಪೂಜೆ ಮತ್ತು ವೈಭವ ಪೂಜೆಗಳಾಗಿದ್ದು, ಅಂಗಪೂಜೆ ಎಂಬುವುದು ಆಯಾ ದೇವರುಗಳ, ಗುರುಗಳ ಶರೀರಕ್ಕೆ ಮಾಡುವ ಪೂಜೆಯಾಗಿದೆ. ರಾಯರ ಶರೀರವೆಂದರೆ ಅವರ ಬೃಂದಾವನ ಅದನ್ನ ಮುಟ್ಟಿ ಪೂಜೆ ಮಾಡುವ ಅಧಿಕಾರ, ಪದ್ಧತಿ ಇವೆಲ್ಲವು ಕೇವಲ ಅವರ ಪೀಠದಲ್ಲಿ ಕುಳಿತಿರುವ ಶ್ರೀಗಳವರಿಗೆ ಮತ್ತು ಅವರಿಂದ ಆಜ್ಞೋತ್ತರರಾಗಿರುವ ಅರ್ಚಕರಿಗೆ ಮಾತ್ರ ಇರುತ್ತದೆ. ಹಾಗಾಗಿ ಅಂಗಪೂಜೆ ಮಾಡಲು ಎಲ್ಲರಿಗೂ ಅವಕಾಶ ವಿರುವುದಿಲ್ಲ.

ರಂಗಪೂಜೆ

ಇನ್ನೂ ರಂಗ ಪೂಜೆ ಎಂಬುವುದು ಒಂದು ನಿರ್ದಿಷ್ಟವಾದ ವೇದಿಕೆಗೆ ಉತ್ಸವ ಮೂರ್ತಿಗಳನ್ನ ಕರೆತಂದು ಸೇವಾ ಕರ್ತರುಗಳಿಂದ ಸೇವೆಯನ್ನು ಮಾಡಿಸುವ ಪಾದಪೂಜೆ, ಕನಕಾಭಿಷೇಕ, ಅರ್ಚನೆ ಇತ್ಯಾದಿಗಳು ಇರುತ್ತವೆ. ಇದು ಸೇವಾಕರ್ತರಿಗೆ ಮಾತ್ರ ಮೀಸಲಾಗಿದ್ದು, ಸಾರ್ವಜನಿಕರಿಗೆ ಅವಕಾಶವಿಲ್ಲ.

ವೈಭವ ಪೂಜೆ

ವೈಭವ ಪೂಜೆಯು ಸಾರ್ವಜನಿಕವಾಗಿ ಭಕ್ತರಿಗಾಗಿ ಭಕ್ತರಿಂದಲೇ ನಡೆಯುವ ಪೂಜೆಯಾಗಿರುತ್ತದೆ. ಪ್ರತಿ ನಿತ್ಯದಲ್ಲಿ ನಡೆಯುವ ರಥೋತ್ಸವಗಳಾಗಲಿ ಅಥವಾ ಆರಾಧನಾ ದಿನಗಳಲ್ಲಿ ನಡೆಯುವ ಮಹಾ ರಥೋತ್ಸವವಾಗಲಿ ಎಲ್ಲರಿಗೂ ಮುಕ್ತ ಅವಕಾಶವಿರುವ ಉತ್ಸವವಾಗಿರುತ್ತದೆ. ಅಂದು ಅಭಿಷೇಕಾಧಿಗಳು ಮುಗಿದ ನಂತರ, ಉತ್ಸವ ಮೂರ್ತಿಯನ್ನ ಅಲಂಕರಿಸಿ, ವಸಂತೋತ್ಸವ ಮುಂತಾದ ಪ್ರಕ್ರಿಯೆಗಳನ್ನ ಮುಗಿಸಿದ ನಂತರ ರಾಜಬೀದಿಗೆ ಉತ್ಸವ ಮೂರ್ತಿಯನ್ನ ಕರೆದು ತರುತ್ತಾರೆ. ಉತ್ಸವ ವಿಗ್ರಹವನ್ನ ರಥದಲ್ಲಿ ಪ್ರತಿಷ್ಠಾಪಿಸಿ ಶ್ರೀಗಳು ಭಕ್ತರಿಗೆ ಧಾರ್ಮಿಕ ಸಂದೇಶ ನೀಡಿ ಮಹಾ ಮಂಗಳಾರತಿ ಮಾಡಿ ರಥೋತ್ಸವಕ್ಕೆ ಚಾಲನೆ ನೀಡುತ್ತಾರೆ. ಲಕ್ಷಾಂತರ ಭಕ್ತರ ಜೈಕಾರದ ನಡುವೆ ರಥೋತ್ಸವ ಮಧ್ವ ಮಾರ್ಗದಲ್ಲಿ ಸಾಗಲಿದೆ.

ಕರೆದಲ್ಲಿಗೆ ಬರುವ ಗುರುವೆಂದರಿವರಯ್ಯ...

(1ನೇ ಪುಟದಿಂದ)

ಕವೀಂದ್ರತೀರ್ಥರ ನಂತರ ಅವರ ಶಿಷ್ಯರಾದ ವಾಗೀಶ ತೀರ್ಥರು, ರಾಮಚಂದ್ರತೀರ್ಥರು ಹೆಚ್ಚಾಗಿ ದಕ್ಷಿಣ ಮುಖವಾಗಿ ಸಂಚರಿಸಿದ್ದರಿಂದ ಆ ಪರಂಪರೆಯು ದಕ್ಷಿಣಾದಿ ಮಠವೆಂದು ಪ್ರಸಿದ್ಧಿ ಪಡೆಯಿತು. 15ನೇ ಶತಮಾನದಲ್ಲಿ ರಾಮಚಂದ್ರತೀರ್ಥರ ನಂತರ ಅವರ ನೇರ ಶಿಷ್ಯರಾದ ವಿಭುದೇಂದ್ರತೀರ್ಥರು ಮೊದಲಬಾರಿಗೆ ದ್ವೈತ ಸಿದ್ಧಾಂತ ವನ್ನು ಭಾರತ ದೇಶದ ಉದ್ದಗಲಕ್ಕೂ ಪರಿಚಯಿಸಿದ ಕೀರ್ತಿಶಾಲಿಗಳು. ಕಾಶಿ, ಹಿಮಾಲಯ, ನವದ್ವೀಪ, ಮುಂತಾದ ವಿದ್ಯಾ ಕ್ಷೇತ್ರಗಳಲ್ಲಿ ಆ ಕಾಲದ ಉತ್ಕೃಷ್ಟ ವಿದ್ವಾಂಸರ ಮುಂದೆ ದ್ವೈತ ಸಿದ್ಧಾಂತವನ್ನು ಮಂಡಿಸಿ ಎಲ್ಲರಿಂದಲೂ ಮಾನ್ಯತೆಯನ್ನು ಪಡೆದವರು. ವಿಭುದೇಂದ್ರತೀರ್ಥರು ದ್ವೈತ ಸಿದ್ಧಾಂತಕ್ಕೆ ಬೇಕಾದ ಶಾಸ್ತ್ರೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಮನ್ನಣೆಗಳನ್ನು ಕಲ್ಪಿಸಿ ಭದ್ರ ಬುನಾದಿಯನ್ನು ಹಾಕಿಕೊಟ್ಟರು. ವಿಭುದೇಂದ್ರತೀರ್ಥರಿಂದ ಹೊರಟ ವಿದ್ಯಾ ಪರಂಪರೆಯು ಬ್ರಹ್ಮಣ್ಯತೀರ್ಥರು, ವಿಷ್ಣುದಾಸಾಚಾರ್ಯರು, ಶ್ರೀಪಾದರಾಜರು, ಅವರ ಮೂಲಕ ವ್ಯಾಸರಾಜರು, ವಿಜಯೀಂದ್ರತೀರ್ಥರು,ವಾದಿರಾಜರು, ಸುಧೀಂದ್ರತೀರ್ಥರ ಮುಖಾಂತರ ರಾಘವೇಂದ್ರತೀರ್ಥರಲ್ಲಿ ತಲುಪಿ ಅವರಿಂದ ಸಿದ್ಧಾಂತವು ಘನೀಕೃತಗೊಂಡಿತು. ಇವರ ಸಾಧನೆಯೇ ದ್ವೈತ ಸಿದ್ಧಾಂತದ ಉತ್ಕೃಷ್ಟತೆಗೆ ಕಾರಣೀಭೂತವಾದ ಕಾರಣ ದಕ್ಷಿಣಾದಿಮಠವು ವಿದ್ಯಾಮಠವೆಂದೇ ವಿಖ್ಯಾತಗೊಂಡಿತು. ಇವರ ಕಾಲದಲ್ಲಿ ದ್ವೈತ ಮಠ ಪರಂಪರಾ ವ್ಯವಸ್ಥೆಯಲ್ಲಿ ವಿದ್ಯಾನಿಧಿತೀರ್ಥರಿಂದ ಇನ್ನೊಂದು ಕವಲು ಪ್ರಚಲಿತಕ್ಕೆ ಬಂದು ಮುಂದೆ ಉತ್ತರಾಧಿಮಠವೆಂದು ಖ್ಯಾತವಾಯಿತು.

ವಿಭುದೇಂದ್ರತೀರ್ಥರ ತರುವಾಯ ಜಿತಾಮಿತ್ರತೀರ್ಥರು, ರಘುನಂದನತೀರ್ಥರು, ಸುರೇಂದ್ರತೀರ್ಥರು ದಕ್ಷಿಣಾದಿ ಪರಂಪರೆಯನ್ನು ಮುಂದುವರೆಸಿದರು. ರಘುನಂದನತೀರ್ಥರು ಕೈತಪ್ಪಿದ್ದ ಮೂಲರಾಮಚಂದ್ರ ಮೂರ್ತಿಯನ್ನು ಮರಳಿ ಪರಂಪರೆಯ ಉಪಾಸ್ಯ ಮೂರ್ತಿಯಾಗಿ ಪುನರ್ನಿಯುಕ್ತಿಗೊಳಿಸಿದರು.

ಸುರೇಂದ್ರತೀರ್ಥರ ನಂತರ 16ನೇ ಶತಮಾನದಲ್ಲಿ ದಕ್ಷಿಣಾದಿ ಕವೀಂದ್ರತೀರ್ಥ ಪರಂಪರೆಯನ್ನು ಅಲಂಕರಿಸಿ ಕುಂಭಕೋಣ ನಗರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು 64 ವಿದ್ಯೆಯಲ್ಲಿ ನಿಷ್ಣಾತರಾಗಿ, 104 ಗ್ರಂಥಗಳ ಕರ್ತೃಗಳಾಗಿ ಖ್ಯಾತರಾದವರು ಶ್ರೀವಿಜಯೀಂದ್ರತೀರ್ಥರು. ಈ ಕಾಲಘಟ್ಟವು ಸಹ ಸಾಮಾಜಿಕ,ರಾಜಕೀಯವಾಗಿ ಹಲವಾರು ಬದಲಾವಣೆಗಳನ್ನು ಕಂಡಂತಹ ಸಮಯ. ವಿಜಯನಗರದ ಅವನತಿಯ ಜತೆಗೆ ಹಲವಾರು ಕವಲುಗಳನ್ನೊಳಗೊಂಡ ದ್ವೈತ ಸಿದ್ಧಾಂತವು ವಿದ್ವಾಂಸ ಮಂಡಳಿಗಳಲ್ಲಿ ಅಗ್ನಿ ಪರೀಕ್ಷೆಗೆ ಒಳಪಟ್ಟು ಎಲ್ಲೆಡೆಯಿಂದ ವೈರುಧ್ಯ ,ವಿಮರ್ಶೆ,ಆಪಾದನೆ ಮತ್ತು ಕುಹಕಗಳನ್ನುಎದುರಿಸಿದ ಸಂದಿಗ್ಧ ಸಮಯ. ಈ ತಾತ್ತ್ವಿಕ ದಾಳಿಗಳನ್ನು ಚಾತುರ್ಯದಿಂದ ಸಮರ್ಥವಾಗಿ ಎದುರಿಸಿ ದ್ವೈತ ಸಿದ್ಧಾಂತವನ್ನಲ್ಲದೆ ಸನಾತನ ಸಂಪ್ರದಾಯಗಳನ್ನು ಸಂರಕ್ಷಿಸಿ ಕುಂಭಕೋಣಾಧೀಶರೆಂದು, ಅಜೇಯರೆಂದು ಘೋಷಿತರಾದ ಮಹಾನ್ ಕೀರ್ತಿವಂತರು ಹಾಗೂ ಜಗದ್ವಂದ್ಯರು ಶ್ರೀವಿಜಯೇಂದ್ರತೀರ್ಥರು. ಹಾಗಾಗಿ ವಿದ್ಯಾಮಠವು ಶ್ರೀವಿಜಯೀಂದ್ರ ಮಠವೆಂದು ಪ್ರಚಲಿತವಾಯಿತು.

ವಿಜಯೇಂದ್ರತೀರ್ಥರ ನಂತರ ಸುಧೀಂದ್ರತೀರ್ಥರು ದಕ್ಷಿಣಾದಿ ಪರಂಪರೆಯನ್ನಲಂಕರಿಸಿ ತಮ್ಮ ಗುರುಗಳಂತೆ ಸಮಾಜಮುಖಿಯಾಗಿ ರಾಜರುಗಳ ಮನ್ನಣೆಯನ್ನು ಸ್ವೀಕರಿಸಿ ಹರಿತತ್ತ್ವವನ್ನು ಸಾರುವ ಕಾರ್ಯ ಮುಂದುವರೆಸಿದರು. ಭಾರತೀಯ ತತ್ತ್ವಪ್ರಪಂಚಕ್ಕೆ ಸುಧೀಂದ್ರತೀರ್ಥರು ನೀಡಿದ ಅತ್ಯುತ್ಕೃಷ್ಟ ಕೊಡುಗೆಯೇ ರಾಘವೇಂದ್ರತೀರ್ಥರು.

ಕಿರಿಯ ಪ್ರಾಯದಲ್ಲೇ ವೆಂಕಟನಾಥರ ಪ್ರತಿಭೆಯನ್ನು ಗುರುತಿಸಿ ತಮ್ಮ ಗುರುಗಳಿಂದ ಪ್ರೇರಿತವಾದ ಸಕಲ ವಿದ್ಯೆಯನ್ನು ಧಾರೆಯೆರೆದು ಸಾಧ್ಯ ಸಾಧನ ಉಪಾಯಗಳನ್ನು ತಿಳಿಸಿ, ವ್ಯಕ್ತಿತ್ವದ ವಿಕಸನಕ್ಕೆ ಬೇಕಾದ ವೈರಾಗ್ಯವನ್ನು ಅಂಕುರಾರ್ಪಣ ಮಾಡಿ, ವೆಂಕಟನಾಥರಿಗೆ ಸನ್ಯಾಸದೀಕ್ಷೆ ಕೊಟ್ಟು ರಾಘವೇಂದ್ರತೀರ್ಥರೆಂದು ಅಭಿದಾನನೀಡಿ ತಮ್ಮ ಸ್ಥಾನವನ್ನೇ ಕೊಟ್ಟು ದಕ್ಷಿಣಾದಿ ಕವೀಂದ್ರ ಪರಂಪರೆಯ ಪೀಠಾಧಿಪತಿಯನ್ನಾಗಿ ನಿಯಮಿಸಿ ಸಮಾಜದ ಉದ್ಧಾರಕ್ಕೆ ಕಟ್ಟಿಹಾಕಿದ ಕ್ಷಣ ಭಾರತೀಯ ತತ್ತ್ವ ಇತಿಹಾಸದ ಇನ್ನೊಂದು ಪುಟವನ್ನೇ ತೆರೆಯಿತು. ಭಾರತೀಯ ಸನಾತನ ಧರ್ಮದ ಮೂಲ ಸೆಲೆಯಾದ ಅಧ್ಯಾತ್ಮ ಸಂಪತ್ತನ್ನು ಹಂಚುವ ಕಾರ್ಯದಲ್ಲಿ ತೊಡಗಿಸಿದರು.

ಭಾರತ ದೇಶದ ಅಧ್ಯಾತ್ಮ ಇತಿಹಾಸವೇ ಹಾಗೆ. ಕಾಲಕಾಲಕ್ಕೆ ಮಹಾತ್ಮರ ಅವತಾರವಾಗಿ ಅವರು ತಮ್ಮ ತಪಸ್ಸಿನ ಮೂಲಕ ಅಧ್ಯಾತ್ಮ ಸಂಪತ್ತನ್ನು ವೃದ್ಧಿ ಗೊಳಿಸಿದರೆ, ಕೆಲವು ಅವತಾರ ಪುರುಷರು ವೃದ್ಧಿಯಾದ ಸಂಪತ್ತನ್ನು ತ್ಯಾಗದ ಮೂಲಕ ಸಮಾಜದಲ್ಲಿ ಹಂಚುವ ಕಾರ್ಯವನ್ನು ನಿರಂತರವಾಗಿ ನಡೆಸಿರುವುದು ಸನಾತನ ಅಧ್ಯಾತ್ಮ ವ್ಯವಸ್ಥೆಯ ಭಾಗವೇ ಆಗಿದೆ. ಮೊದಲನೆಯ ವರ್ಗಕ್ಕೆ ಸೇರಿದ ಮಹನೀಯರು ನಿವೃತ್ತಿ ಮಾರ್ಗವನ್ನು ಹಿಡಿದು ಹಿಮಾಲಯ ಮುಂತಾದ ನಿರ್ಜನ ಪ್ರದೇಶಗಳಲ್ಲಿ ವಿಶೇಷ ಸಾಧನೆಗೈದರೆ, ಎರಡನೇ ವರ್ಗದ ಅವತಾರ ಪುರುಷರು ಪ್ರವೃತ್ತಿ ಮಾರ್ಗವನ್ನು ಅನುಸರಿಸಿ ಸಮಾಜದಲ್ಲಿ ಸಮತೋಲನ ಕಾಯುವ ಕಾರ್ಯದಲ್ಲಿ ತೊಡಗುವುದು ವಿಶೇಷ. ಆ ಹಿನ್ನೆಲೆಯಲ್ಲಿ ಸುಧೀಂದ್ರತೀರ್ಥರಂತಹ ಗುರುವಿನ ಮಾರ್ಗದರ್ಶನ ಮತ್ತು ಕರ್ತವ್ಯವು ಅತ್ಯವಶ್ಯಕ.

ಶ್ರೀರಾಘವೇಂದ್ರತೀರ್ಥರ ಕಾಲಘಟ್ಟ :

17ನೇ ಶತಮಾನದಂಚಿನಲ್ಲಿ (ಕ್ರಿಶ 1595) ತಿರುಪತಿ ಶ್ರೀವೆಂಕಟೇಶ್ವರನ ವರಪ್ರಸಾದದಿಂದ ತಮಿಳುನಾಡಿನ ಕಾವೇರಿ ತೀರದ ಭುವನಗಿರಿ ಗ್ರಾಮದಲ್ಲಿ ಷಾಷ್ಠಿಕ ಮನೆತನದ ಬೀಗಮುದ್ರಾ, ಮನೆತನದಲ್ಲಿ ಜನಿಸಿ, ವೆಂಕಟನಾಥ ಭಟ್ಟರೆಂಬ ನಾಮಧೇಯದಿಂದ ಅಂದಿನ ಶ್ರೇಷ್ಠ ವಿದ್ಯಾಕೇಂದ್ರಗಳಾದ ತಂಜಾವೂರು, ಕುಂಭಕೋಣಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಅಧ್ಯಯನವನ್ನು ಕೈಗೊಂಡು, ತಮ್ಮ ಮನೆತನದ ಪಾರಂಪರಿಕ ವಿದ್ಯೆಯಾದ ವೀಣಾ ಪರಿಣಿತಿಯನ್ನು ಹೊಂದಿ, ಅಸಾಧಾರಣ ತೇಜಸ್ಸಿನಿಂದ ಕುಡಿದವರಾಗಿ ವಿದ್ವತ್ ಸಭೆಗಳಲ್ಲಿ ಪ್ರೌಢ ವಾಕ್ಯಾರ್ಥಗಳಲ್ಲಿ ಪಾಲ್ಗೊಂಡು ಸಜ್ಜನರ ಪ್ರೀತಿ - ಗೌರವವನ್ನು ಸಂಪಾದಿಸಿ, ಷಾಷ್ಠಿಕ ಚಿನ್ನಬಂಡಾರಿ ಮನೆತನದ ಸಾಧ್ವಿಮಣಿ ಸರಸ್ವತಮ್ಮನವರನ್ನು ವರಿಸಿ ಗೃಹಸ್ಥ ಜೀವನದಲ್ಲಿನ ಸುಖ ದುಃಖಗಳ ಬಿರುಗಾಳಿಯನ್ನು ಶಾಂತವಾಗಿ, ಸಮಚಿತ್ತತೆಯಿಂದ ಸ್ವೀಕರಿಸಿ ಸಂತೃಪ್ತ ಜೀವನ ನಡೆಸಿದ ರೀತಿಯು ಸಮಸ್ತ ಗೃಹಸ್ಥರಿಗೆ ಆಚರಣೀಯ ಮಾದರಿಯೇ ಸರಿ.

ಈ ಸಂಧಿಸಮಯದಲ್ಲಿ ಸುಧೀಂದ್ರತೀರ್ಥರು ತಮ್ಮ ಉತ್ತರಾಧಿಕಾರಿಯ ಆಯ್ಕೆಯಲ್ಲಿದ್ದಾಗ ಅವರ ದೃಷ್ಟಿಯಲ್ಲಿ ಬಂದು, ವಾಗ್ದೇವತೆಯ ಪ್ರೇರಣೆಯೊಂದಿಗೆ, ಪ್ರಿಯ ಪತ್ನಿ ಸರಸ್ವತಮ್ಮನವರ ಅನುಮತಿಯೊಂದಿಗೆ 26ರ ಪ್ರಾಯದಲ್ಲೇ (ಕ್ರಿ.ಶ 1621 ರಲ್ಲಿ) ಗೃಹಸ್ಥಾಶ್ರಮವನ್ನು ತ್ಯಜಿಸಿ ಸುಧೀಂದ್ರತೀರ್ಥರಿಂದ ಸನ್ಯಾಸಾಶ್ರಮವನ್ನು ಪಡೆದು ಶ್ರೀಮದಾಚಾರ್ಯರ ಹಂಸನಾಮಕ ಪೀಠದ ಶ್ರೀ ಕವೀಂದ್ರತೀರ್ಥರ ಮೂಲ ಪರಂಪರೆಯ ಉತ್ತರಾಧಿಕಾರಿಗಳಾಗಿ ನಿಯುಕ್ತರಾದರು. ಗುರುಗಳ ಸೇವೆ ಮತ್ತು ಉಪದೇಶಗಳ ಅನುಷ್ಠಾನತತ್ಪರರಾದರು.

ನೂತನ ಯತಿಗಳೊಂದಿಗೆ ಸುಧೀಂದ್ರತೀರ್ಥರು ಸಂಚಾರದಲ್ಲಿ ತೊಡಗಿ ತಮ್ಮ ಪರಂಪರೆಯ ಮೂಲ ಸ್ಥಳವಾದ ವಿಜಯನಗರ ಪ್ರಾಂತವನ್ನು ತಲುಪಿ ಅಲ್ಲಿ ನೆಲೆಸಿರುವ ಪೂರ್ವ ಯತಿಗಳ ಬೃಂದಾವನಗಳನ್ನು ಸಂದರ್ಶಿಸಿದರು ಹಾಗು ಅಲ್ಲಿರುವ ಮಠದ ಸಂಪನ್ಮೂಲಗಳನ್ನು ಶಿಷ್ಯ ಸಮುದಾಯಕ್ಕೆ ನೂತನ ಪೀಠಾಧಿಪತಿಗಳನ್ನು ಪರಿಚಯಿಸಿ ಹಿತೋಪದೇಶಗಳನ್ನು ಅನುಗ್ರಹಿಸುವ ಸಮಯದಲ್ಲಿ ಸುಧೀಂದ್ರತೀರ್ಥರು ವಯೋಸಹಜದಿಂದ ದೇಹಾಲಸ್ಯಗೊಂಡು ತಮ್ಮ ಅಂತೇವಾಸಿಗಳಾದ ರಾಘವೇಂದ್ರತೀರ್ಥರಿಗೆ ಪರಂಪರಾ ಪ್ರಾಪ್ತವಾದ ಮಠದ ಸಕಲ ಸಂಪನ್ಮೂಲವನ್ನು ಹಸ್ತಾಂತರಿಸಿ, ಪೀಠಾಧಿಪತ್ಯವನ್ನು ನೀಡಿ ಕೊನೆಯ ಉಪದೇಶವೇಶವನ್ನು ಮಾಡಿ ತಮ್ಮ ಪರಂಪರೆಯ ಮೂಲ ಯತಿಗಳಾದ ಪದ್ಮನಾಭತೀರ್ಥರ ಸಹಿತ ಅಷ್ಟಯತಿಗಳ ಬೃಂದಾವನ ಸನ್ನಿಧಾನವಾಗಿದ್ದ ಆನೆಗೊಂದಿ ಸಮೀಪದ ನಡುಗಡ್ಡೆಯಲ್ಲಿ ಹರಿಪಾದವನ್ನೈದರು.

ರಾಘವೇಂದ್ರತೀರ್ಥರು ತಮ್ಮ ಗುರುಗಳ ಬೃಂದಾವನವನ್ನು 8 ಮಧ್ವ ಸಿದ್ಧಾಂತ ದಿಗ್ಗಜ ಯತಿ ಶ್ರೇಷ್ಠರ ನಡುವೆ 9ನೇಯ ಬೃಂದಾವನವಾಗಿ ಪ್ರತಿಷ್ಠಾಪನೆಗೊಳಿಸಿ ಸಂಪ್ರದಾಯ ರೀತ್ಯ ಪೂಜಾರಾಧನೆಯನ್ನು ನೆರವೇರಿಸಿ ತಮ್ಮ ಗುರುಗಳ ಗುಣಸಾಧನೆಯನ್ನು ಚರಮಶ್ಲೋಕದ ಮೂಲಕ ಸ್ಮರಿಸಿದರು. ಈ ಮೂಲಕವಾಗಿ ನಡುಗಡ್ಡೆಯು ಮುಂದಿನ ದಿನಗಳಲ್ಲಿದ್ದ'ನವಬೃಂದಾವನ' ವೆಂದೇ ಪ್ರಚಲಿತವಾಯಿತು.

ತಮ್ಮ ಗುರುಗಳು ಮತ್ತು ಪರಮಗುರುಗಳಂತೆ ಕುಂಭಕೋಣವನ್ನು ಕೇಂದ್ರವಾಗಿಸಿಕೊಂಡು ತಮ್ಮ ಆಶ್ರಮ ವಿಹಿತವಾದ ಸಂಕಲ್ಪಪೂರ್ವಕ ನಿತ್ಯ ನೈಮಿತ್ತಿಕ ಕಾರ್ಯಗಳಲ್ಲಿ ಸಮರ್ಪಣಾ ಭಾವದಿಂದ ತೊಡಗಿ, ತಮ್ಮ ಸಿಬ್ಬಂದಿ ಬಾಂಧವರಿಂದಲೂ ಶ್ರೀಹರಿ ಪ್ರೀತಿಗಳಿಕೆಯ ಕಾರ್ಯಗಳನ್ನು ಮಾಡಿಸಿ ಭಗವಂತನಿಗೆ ಸಮರ್ಪಿಸುವುದು ಶ್ರೀಗಳ ಮೊದಲ ಆದ್ಯತೆ. ವಿದ್ಯಾಪೀಠದಲ್ಲಿ ವಿಶೇಷ ವಿದ್ಯಾ ಪ್ರಸರಣ ಕಾರ್ಯವನ್ನು ಎಡಬಿಡದೆ ನಡೆಸಿ ಸುಮತೀಂದ್ರತೀರ್ಥರು, ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು, ಅಪ್ಪಣ್ಣಾಚಾರ್ಯರಂಥಹ ಅನೇಕ ಸನ್ಯಾಸ ಹಾಗು ಗೃಹಸ್ಥ ಪಂಡಿತ ರತ್ನಗಳನ್ನು ವಿದ್ಯಾ ಪ್ರಪಂಚಕ್ಕೆ ನೀಡಿ ವಿದ್ಯಾ ಪರಂಪರೆಯನ್ನು ಮುಂದುವರೆಸಿದರು. ಜತೆಯಲ್ಲಿ ನಿರಂತರ ಗ್ರಂಥರಚನಾ ಕಾರ್ಯವನ್ನು ನಡೆಸಿ ವಿದ್ವದ್ ಗೋಷ್ಠಿಗಳು, ಖಂಡನಾ ಮಂಡನೆಗಳು, ಚರ್ಚೆ, ಪಂಡಿತ ಘೋಷಣೆ ಮುಂತಾದವು ಎಡಬಿಡದೆ ಸಾಗಿದವು.

ಸಂಚಾರತ್ವೇನ ಮಧುರೈ, ತಂಜಾವೂರು, ಮೈಸೂರು, ಮಲಬಾರ್ , ಮರಾಠ ಮೊದಲಾದ ರಾಜ್ಯಗಳಲ್ಲಿನ ಪ್ರಮುಖ ಕ್ಷೇತ್ರಗಳನ್ನು ಸಂದರ್ಶಿಸಿ, ಚಾತುರ್ಮಾಸಾದಿ ವ್ರತಗಳನ್ನು ಕೈಗೊಂಡು ಶಿಷ್ಯ ಮತ್ತು ಭಕ್ತ ವರ್ಗಕ್ಕೆ ಯತೋಚಿತ ಉಪದೇಶ ನೀಡುತ್ತಾ, ಅರ್ಥಿಗಳಾಗಿ ಬಂದವರಿಗೆ ಕಾರುಣ್ಯ ಪೂರಕ ಸಾಂತ್ವನ ಮತ್ತು ಅನುಗ್ರಹ ನೀಡುತ್ತಾ ಅನೇಕ ಮಹಿಮೆಗಳನ್ನು ತೋರಿದರು. ರಾಜರುಗಳಿಂದ ಸನ್ಮಾನಗಳನ್ನು ಸ್ವೀಕರಿಸಿ ಸಮಾಜಮುಖಿಯಾಗಿ ಸರ್ವೋತೋಮುಖ ಅಭಿವೃದ್ಧಿಯನ್ನು ಮುಂದುವರೆಸಿದರು. ಉಡುಪಿ, ನಂಜನಗೂಡು ಮತ್ತು ಕಪಿಲೆಯ ಸೊಗಸು ಶ್ರೀಗಳ ವಿಶೇಷ ಗಮನ ಸೆಳೆದ ಕ್ಷೇತ್ರಗಳು.

ಶ್ರೀ ರಾಘವೇಂದ್ರತೀರ್ಥರು ತಾವು ರಚಿಸಿದ ಸುಮಾರು 45 ದೀರ್ಘ ಕೃತಿಗಳಲ್ಲಿ ಸಿಂಹಭಾಗವನ್ನು ತಮ್ಮ ಪೂರ್ವಾಚಾರ್ಯರುಗಳು ರಚಿಸಿದ ಗ್ರಂಥ ರಾಶಿಗಳ ಅಂತರಂಗವನ್ನು ತೆರೆದು ತಿಳಿಗೊಳಿಸಿ ಕ್ರೋಢೀಕರಣಕ್ಕೆ ಮೀಸಲಿಟ್ಟವರು. ಅವರ ಸ್ವತಂತ್ರ ಗ್ರಂಥಗಳು ಅತ್ಯಲ್ಪ, ಆದರೆ ಕೊಟ್ಟ ಉಪದೇಶಗಳು ಉಪನಿ ಷತ್ ಸಂದೇಶದಂತೆ ಅತ್ಯುತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಬಲ್ಲಷ್ಟು ಮೌಲ್ಯಯುತವಾದದ್ದು.

ಜಯತೀರ್ಥರ ನಂತರದ ಸುಮಾರು 250 ವರ್ಷಗಳ ಕಾಲ ದ್ವೈತ ಸಿದ್ಧಾಂತವು ಅನೇಕ ಕವಲುಗಳಲ್ಲಿ ಹರಿದು ಸಿದ್ಧಾಂತದಲ್ಲಿ ಅನೇಕ ಪ್ರಕ್ರಿಯೆಗಳಿಗೆ ಸಹಜವಾಗಿ ಅಭಿಪ್ರಾಯಬೇಧಗಳು ಅಥವಾ ಭಿನ್ನಾರ್ಥಗಳು ಕಾಣಿಸಿ ನಿಖರವಾದ ತತ್ತ್ವಾರ್ಥ ನಿಲುಕದಾದ ಸಂದರ್ಭವನ್ನು ಮನಗಂಡು ಅಂದಿನ ಹಂತದಲ್ಲಿ ಇದ್ದ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಶ್ರೀಮದಾಚಾರ್ಯರ ಹಾಗೂ ಜಯತೀರ್ಥರ ಹೃದಯಾಂತರ್ಯವನ್ನು ನಿಖರವಾಗಿ ತಿಳಿಸುವ ವಿಸ್ತೃತತವಾದ ಕೌಶಲ್ಯಪೂರ್ಣ ಗ್ರಂಥ ರಚನೆಯನ್ನು ಕೈಗೊಂಡು ತನ್ಮೂಲಕ ಸರಳತೆಯಿಂದ ಕೂಡಿದ ದ್ವೈತ ಸಿದ್ಧಾಂತವೆಂಬ ಹೆಮ್ಮರದಲ್ಲಿ ಸಜ್ಜನರು ಫಲವನ್ನು ಕಾಣುವಂತೆ ಮಾಡಿದ್ದು ಮತ್ತೊಂದು ಮಹಾನ್ ಕೊಡುಗೆ. ಹಾಗಾಗಿ ಶ್ರೀ ವಾದೀಂದ್ರತೀರ್ಥರು ತಮ್ಮ ಗುರುಗುಣಸ್ತವನ ಸ್ತೋತ್ರದಲ್ಲಿ ರಾಯರನ್ನು ಹೃದಯತುಂಬಿ ಸ್ತುತಿಸಿದ್ದಾರೆ.

ಮುಂದಿನ ಸುಮಾರು 50 ವರ್ಷಗಳು ಸನ್ಯಸ್ತರಾಗಿ ಶ್ರೀ ರಾಘವೇಂದ್ರರು ಸಮರ್ಪಣಾಭಾವದಿಂದ ಅಧ್ಯಯನ ಪ್ರಾಧ್ಯಾಪನಗಳನ್ನು, ವ್ರತ ನಿಯಮಗಳನ್ನು ಸರಿ ತೂಕದಲ್ಲಿ ನಡೆಸಿ, ಪೀಠಾಧಿಪತಿಗಳಾಗಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜತೆಗೆ ಸಮಾಜದ ಡೊಂಕುಗಳನ್ನು ಸರಿಪಡಿಸುವಲ್ಲಿ ಪ್ರವೃತ್ತರಾಗಿ ಸಮಯೋಚಿತ ಉಪದೇಶಗಳನ್ನು ನೀಡಿದರು. ಅರ್ಥಿಗಳಿಗೆ ಸಂದರ್ಭೋಚಿತ ಅನುಗ್ರಹವನ್ನು ನೀಡಿ ಭಗವದ್ ಪ್ರಸಾದ ಪೂರ್ವಕವಾಗಿ ಸ್ವರೂಪಾನಂದದಲ್ಲಿದ್ದು ಪಕ್ವಗೊಂಡರು. ಭಗವಂತನ ಸೂಚನೆಯಂತೆ ಸಮಾಜದಿಂದ ವಿಮುಖಗೊಂಡು ಪರಮ ವೈರಾಗ್ಯ ಶಾಲಿಗಳಾಗಿ ದೇಹಾಭಿಮಾನವನ್ನು ಸಂಪೂರ್ಣವಾಗಿ ತೊರೆದರು. ಯೋಗ ಸಾಧನೆಯ ಉತ್ಕೃಷ್ಟ ವಿಧಿಯಾದ ಸಮಾಧಿಸ್ಥಿತ ತಪಸ್ಸನ್ನು ಮುಂದುವರಿಸುವ ನಿರ್ಧಾರ ಕೈಗೊಂಡರು. ಅದಕ್ಕೆ ಬೇಕಾದ ಸಿದ್ಧತೆಗಾಗಿ ಮಂತ್ರಾಲಯವನ್ನು ತಮ್ಮ ತಪಃ ಕ್ಷೇತ್ರವನ್ನಾಗಿಸಿಕೊಂಡು, ಯೋಗೀಂದ್ರತೀರ್ಥರಿಗೆ ಪೀಠಾಧಿಪತ್ಯವನ್ನು ವಹಿಸಿ, ತಾವೇ ಸಿದ್ಧಗೊಳಿಸಿದ ಬೃಂದಾವನವನ್ನು 1672ನೇ ಶ್ರಾವಣ ಬಹುಳ ದ್ವಿತೀಯ ದಿನದಂದು ಪ್ರವೇಶಿಸಿ ಸಮಾಧಿಸ್ಥಿತರಾಗಿ ಮಂತ್ರಾಲಯಪ್ರಭುಗಳೆನಿಸಿ ಇಂದಿಗೂ ಸಶರೀರರಾಗಿ ಖ್ಯಾತಿವಂತರಾಗಿದ್ದಾರೆ.

ಮುಂದೆ ಬೃಂದಾವನದಲ್ಲಿ ನೆಲೆಸಿ ಸುಮಾರು 350 ವರ್ಷಗಳು ಕಳೆದರೂ ಕೋಟ್ಯಂತರ ಅರ್ಥಿಗಳಿಗೆ, ಜಿಜ್ಞಾಸುಗಳಿಗೆ ಆಧಾರವಾಗಿದ್ದು ಉದ್ಧರಿಸುವ ಲೋಕ ಗುರುವಾಗಿ, ಕರೆದಲ್ಲಿಗೆ ಬರುವ, ಬಂದಲ್ಲಿ ಕಷ್ಟ ನೀಗುವ, ಇಷ್ಟಾರ್ಥಗಳನ್ನು ನೆರವೇರಿಸುವ, ಕಾರುಣ್ಯ ಮೂರ್ತಿಯಾಗಿ ಜನಮಾನಸದಲ್ಲಿ ನೆಲೆಸಿ, ವಿಶ್ವದೆಲ್ಲೆಡೆ ಲೋಕೋದ್ಧಾರಕರೆಂದೇ ಮನೆ-ಮನಗಳಲ್ಲಿ ನೆಲೆಯಾಗಿದ್ದಾರೆ. ರಾಘವೇಂದ್ರರ ಅಪಾರ ಖ್ಯಾತಿಗೆ ಅನುಗುಣವಾಗಿ ಕವೀಂದ್ರತೀರ್ಥರ ಪರಂಪರೆಯ ದಕ್ಷಿಣಾದಿ ಮಠವು (ವಿದ್ಯಾ ಮಠ) ಶ್ರೀ ರಾಘವೇಂದ್ರ ಮಠವೆಂದೇ ಖ್ಯಾತಿಗೊಂಡಿದೆ.

ಶ್ರೀ ರಾಘವೇಂದ್ರತೀರ್ಥರ ಉತ್ತರ ಪರಂಪರೆ:

ಮುಂದೆ ಯೋಗೀಂದ್ರತೀರ್ಥರು, ಸೂರೀಂದ್ರತೀರ್ಥರು, ಸುಮತೀಂದ್ರತೀರ್ಥರು, ಉಪೇಂದ್ರತೀರ್ಥರು ರಂಗನಾಥನ ಕ್ಷೇತ್ರವಾದ ಶ್ರೀರಂಗವನ್ನು ತಮ್ಮ ಮಠದ ಕೇಂದ್ರವನ್ನಾಗಿಸಿಕೊಂಡು ಅಲ್ಲಿಯೇ ನೆಲೆಸಿದರು. 18ನೇ ಶತಮಾನದಲ್ಲಿ ಸುಮತೀಂದ್ರತೀರ್ಥರು ರಾಯರ ನಂತರ ಕಾಲದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ, ವಾಙ್ಮಯ ಕ್ಷೇತ್ರಗಳಲ್ಲಿ ಪ್ರತಿಭಾ ಯುಕ್ತ ಕೊಡುಗೆಗಳಿಂದ ಆದರಣೀಯರಾದರು. ಹಾಗಾಗಿ ಆ ಕ್ಷೇತ್ರದಲ್ಲಿ ವಿದ್ಯಾಮಠವು ಸುಮತೀಂದ್ರ ಮಠವೆಂದೇ ಖ್ಯಾತಿಯನ್ನು ಹೊಂದಿದೆ. ವಾದೀಂದ್ರತೀರ್ಥರು ರಾಯರ ಮಂತ್ರಿಗಳಂತೆ ಅವರ ವಾಙ್ಮಯದ ಸ್ಥೂಲ ಪರಿಚಯವನ್ನು ಲೋಕಕ್ಕೆ ನೀಡಿ ಮಠ ಪರಂಪರೆಯ ಆಚರಣಾ ಚೌಕಟ್ಟನ್ನು ಭದ್ರಪಡಿಸಿದರು. ವಸುಧೇಂದ್ರತೀರ್ಥರ ಶಿಷ್ಯರಾದ ವರದೇಂದ್ರತೀರ್ಥರು ಪೇಶ್ವೆಗಳ ರಾಜಧಾನಿ ಪೂನಾ ಕ್ಷೇತ್ರದಲ್ಲಿ ದ್ವೈತ ತತ್ತ್ವವನ್ನು ಪಂಡಿತಮಂಡಳಿಯಲ್ಲಿ ಪ್ರಸ್ತುತಪಡಿಸಿ ಬಹು ಪ್ರಶಂಸೆಗಳಿಂದ ಅಲ್ಲಿಯೇ ನೆಲೆಸಿದರು. ಹಾಗಾಗಿ ವಿದ್ಯಾಮಠವು ಆ ಪ್ರಾಂತ್ಯದಲ್ಲಿ ಶ್ರೀ ವರದೇಂದ್ರಮಠ ವೆಂದೇ ಖ್ಯಾತವಾಯಿತು.

ಧೀರೇಂದ್ರತೀರ್ಥರ ಕೊಡುಗೆಯು ದ್ವೈತ ಸಿದ್ಧಾಂತದಲ್ಲಿ ಮತ್ತೊಂದು ಮೈಲಿಗಲ್ಲು. ತಮ್ಮ ಸಾಹಸದಿಂದ ಹೊಸ ಪ್ರಯೋಗಗಳನ್ನು ಕೈಗೊಂಡು ನೇರ ವೇದ ವಾಙ್ಮಯಕ್ಕೆ ತತ್ತ್ವವಾದದ ಬೆಳಕಿನಲ್ಲಿ ಹೊಸ ಅರ್ಥಗಳನ್ನು ಪ್ರಚುರ ಪಡಿಸಿದ ಧೀರಯೋಗಿಗಳು. ಅವರು ರಿತ್ತಿ ಕ್ಷೇತ್ರದಲ್ಲಿ ನೆಲೆಸಿ ರಿತ್ತಿ ರಾಯರು ಎಂಬ ಖ್ಯಾತಿಯನ್ನು ಪಡೆದಿರುವರು. ಭುವನೇಂದ್ರತೀರ್ಥರು ಪೀಠಾಧಿಪತಿಗಳಾಗಿ ಪರಂಪರೆಯನ್ನು ಮುಂದುವರೆಸಿದರು.

19ನೆ ಶತಮಾನದಲ್ಲಿ ಯುದ್ಧಗಳ ಸಾಲಿನಿಂದ ಸಾಮಾಜಿಕ ಸ್ಥಿತಿಯು ಸಡಿಲಗೊಂಡ ಪರಿಸ್ಥಿತಿಯಲ್ಲಿ, ಚದುರಿದ ಸಮಾಜವನ್ನು ಚತುರತೆಯಿಂದ ಒಗ್ಗೂಡಿಸಿ ಮುನ್ನಡೆಸಿದ ಸೌಜನ್ಯಶೀಲರು ಸುಭೋದೇಂದ್ರತೀರ್ಥರು. ಪ್ರಿಯ ಶಿಷ್ಯರಾದ ಸುಜನೇಂದ್ರತೀರ್ಥರು ತಮ್ಮ ಅಸಾಧಾರಣ ಪ್ರತಿಭೆಯಿಂದ ಮೈಸೂರು ರಾಜ್ಯಕ್ಕೆ ಬಂದೊದಗಿದ ವಿಪತ್ತನ್ನು ಪರಿಹರಿಸಿ ಗೌರವಯುಕ್ತವಾಗಿ ಪಡೆದ ನಂಜನಗೂಡು ಕ್ಷೇತ್ರವನ್ನು ಶ್ರೀ ರಾಘವೇಂದ್ರಮಠದ ಕೇಂದ್ರವನ್ನಾಗಿಸಿಕೊಂಡರು. ಸುಜನೇಂದ್ರತೀರ್ಥರು ಧೀರೇಂದ್ರತೀರ್ಥರಂತೆ ಹೊಸ ಪ್ರಯೋಗಗಳನ್ನು ಕೈಗೊಂಡು ತತ್ತ್ವವಾದದ ವ್ಯಾಪ್ತಿಯನ್ನು ಹಿರಿದುಗೊಳಿಸಿದರು. ಸುಜ್ಞಾನೇಂದ್ರತೀರ್ಥರು ರಾಯರ ಕಾರುಣ್ಯವನ್ನು ಗಳಿಸಿ ತಾವಿದ್ದ ನಂಜನಗೂಡು ಕ್ಷೇತ್ರದಲ್ಲೇ ರಾಯರ ಏಕಮಾತ್ರ ಪ್ರತೀಕದ ಸಾನಿಧ್ಯವನ್ನು ಪಡೆದವರು. ಮುಂದಿನ ದಿನಗಳಲ್ಲಿ ಸುಧರ್ಮೇಂದ್ರತೀರ್ಥರು, ಸುಗುಣೇಂದ್ರತೀರ್ಥರು, ಸುಪ್ರಜ್ಞೇಂದ್ರತೀರ್ಥರು, ಸುಕೃತೀಂದ್ರತೀರ್ಥರು, ಸುಶಿಲೇಂದ್ರತೀರ್ಥರು, ಸುವ್ರತೀಂದ್ರತೀರ್ಥರು ನಂಜನಗೂಡನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ತಪೋನಿಷ್ಠರಾದರು. ಮುಂದಿನ ಕಾಲಘಟ್ಟದಲ್ಲಿ ಮತ್ತು ಪ್ರಸ್ತುತವಾಗಿ ನಂಜನಗೂಡು ಶ್ರೀ ರಾಘವೇಂದ್ರ ಮಠದ ಕೇಂದ್ರ ಸ್ಥಾನವಾಗಿ ಹರಿತತ್ತ್ವದ ಹಿರಿಮೆಯನ್ನು ಮತ್ತು ಫಲವನ್ನು ಪ್ರಪಂಚಕ್ಕೆ ಹಂಚುವ ಕಾರ್ಯದಲ್ಲಿ ನಿರತವಾಗಿದೆ.

20- 21ನೆ ಶತಮಾನದಲ್ಲಿ ಸುಯಮೀಂದ್ರತೀರ್ಥರು ಮತ್ತು ಸುಜಯೀಂದ್ರತೀರ್ಥರ ವಿಶೇಷ ಸಂಕಲ್ಪದಿಂದ ಆರಂಭವಾದ ಮಂತ್ರಾಲಯ ಕ್ಷೇತ್ರಾಭಿವೃದ್ಧಿಯು, ಸುಶಮೀಂದ್ರತೀರ್ಥರು ಹಾಗೂ ಸುಯತೀಂದ್ರತೀರ್ಥರ ಸತತ ಪರಿಶ್ರಮದಿಂದ ಮುಂದುವರೆದು ಇಂದು ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಪೂರ್ಣಾಭಿವೃದ್ಧಿಯ ಹಂತವನ್ನು ತಲುಪಿ ಆಧುನಿಕ ಸಮಾಜದ ಭಕ್ತಸಾಗರವು ಗುರುರಾಜರ ಸೇವೆಯಲ್ಲಿ ರತರಾಗುವಂತೆ ಮಾಡಿ, ತನ್ಮೂಲಕ ಶ್ರೀಹರಿ ಪ್ರೀತಿಯ ಸಂಪಾದನೆಯ ಸಾಧನ ಮಾರ್ಗವನ್ನು ಎಲ್ಲರಿಗೂ ಒದಗಿಸಿ, ಶತಮಾನಗಳ ಪರಂಪರೆಯಲ್ಲಿ ಮಹನೀಯರುಗಳಿಂದ ಸಾಧನರೂಪವಾಗಿ ಸಂಗ್ರಹಿತವಾದ ಆಧ್ಯಾತ್ಮ ಸಂಪತ್ತನ್ನು ಎಲ್ಲರಲ್ಲೂ ಹಂಚುವ ನಿರಂತರ ಕಾರ್ಯವು ನಡೆಯುತ್ತಿರುವುದು ಸನಾತನ ಯಜ್ಞ ಸ್ವರೂಪವೇ ಆಗಿದೆ.

ಉಪಸಂಹಾರ :

ಹೀಗೆ ಶ್ರೀಮದಾನಂದತೀರ್ಥರ ಆಂತರ್ಯದಲ್ಲಿ ಉಡುಪಿಯ ಸಮುದ್ರ ತಟದಲ್ಲಿ ಜನಿಸಿದ ಜ್ಞಾನದ ಬುಗ್ಗೆಯು, ತುಂಗಭದ್ರೆ ತಪ್ಪಲಿನ ಹಂಪೆಯ ಪರಿಸರದಲ್ಲಿ ಪುಷ್ಟಿಗೊಂಡು, ಕಾವೇರಿ ಮಡಿಲಿನ ಕುಂಭಕೋಣದಲ್ಲಿ ವಿದ್ಯಾಮಠವೆಂದು ಕೀರ್ತಿಹೊಂದಿ, ಶ್ರೀರಂಗ ಕ್ಷೇತ್ರದಲ್ಲಿ ವೃದ್ಧಿಗೊಂಡು, ಕಪಿಲೆಯ ದಡದಲ್ಲಿ ದಕ್ಷಿಣಕಾಶಿಯೆಂದೇ ಪ್ರಸಿದ್ಧವಾದ ನಂಜನಗೂಡಿನಲ್ಲಿ ರಾಜಮನ್ನಣೆಯೊಂದಿಗೆ ಶಾಶ್ವತವಾಗಿ ನೆಲೆಸಿತು. ಶ್ರೀಮದಾಚಾರ್ಯರ ಮೂಲ ಪರಂಪರೆಯು ಧೀರರಾದ ರಾಘವೇಂದ್ರತೀರ್ಥರ ನೇತೃತ್ವದಲ್ಲಿ ದಶ ದಿಕ್ಕುಗಳಲ್ಲೂ ಭವ್ಯವಾಗಿ ಅವ್ಯಾಹತವಾಗಿ ಶ್ರೀ ಹರಿಯ ಜ್ಞಾನ ಸೇವೆಯಲ್ಲಿ ತೊಡಗಿರುವುದು ಎಲ್ಲರ ಅನುಭವದಲ್ಲಿದೆಯೆಂದು ಸ್ಮರಿಸುತ್ತಾ, ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಪರಂಪರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಕಿರು ಪ್ರಯತ್ನ ಇದು.

ಶ್ರೀ ಕೃಷ್ಣಾರ್ಪಣ ಮಸ್ತು.

ಬಂದ ಭಕ್ತರ ಪೊರೆಯೋ ರಾಘವೇಂದ್ರ

ತುಂಗಾತೀರದಿ ನಿಂತ ಸುಯತಿ ವರನಾರೇ... ಪೇಳಮ್ಮಯ್ಯ..
ಸಂಗೀತಪ್ರಿಯ ಮಂಗಳ ಸುಗುಣತರಂಗ ಮುನಿಕುಲೋತ್ತುಂಗ.. ಕಾಣಮ್ಮ.. ಕಾಣಮ್ಮ....

ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಕುರಿತಾಗಿ, ಮಂತ್ರಾಲಯ ಮಹಾತ್ಮೆಯ ಕುರಿತಾಗಿ, ಆರಾಧನೆಯ ಕುರಿತಾಗಿ ಈ ದೇಶದ ಭಕ್ತಸಮೂಹ ಅರಿಯದೇ ಹೋದದ್ದು ಏನೂ ಇಲ್ಲ. ವರ್ಷಕ್ಕೊಮ್ಮೆ ನಡೆಯುವ ಮಂತ್ರಾಲಯದ ಗುರುರಾಘವೇಂದ್ರ ಸ್ವಾಮಿಗಳ ಆರಾಧನೆ ಶ್ರದ್ಧೆ ಮತ್ತು ಭಕ್ತಿಯ ಸಮಾಗಮ. ರಾಯರು ಅಂದರೆ ದೇವರು, ದೇವದೂತರು, ದೈವಾಂಶ ಸಂಭೂತರು.. ಏನೇ ಅಂದರೂ ಅದು ಸತ್ಯವೇ. ನಂಬಿದವರ ಭಾವಭಕುತಿಗೆ ತಕ್ಕಂತೆ ಕಂಡ ವಿಶ್ವವಂದಿತರು ಗುರುರಾಯರು. ಸಂಗೀತ, ಸಾಹಿತ್ಯವನ್ನು ಆವಾಹಿಸಿ ಕೊಂಡಿದ್ದ ಸರಸ್ವತಿಪುತ್ರರಾಗಿದ್ದರು ರಾಘವೇಂದ್ರಸ್ವಾಮಿಗಳು. ಮಧ್ವಮತವನ್ನು ದೇಶಾದ್ಯಂತ ಪ್ರಚಾರ ಮಾಡಿದ ರಾಯರು ಜನರಿಗೆ ಮುಕ್ತಿ ಮಾರ್ಗ ತೋರಿಸಲೆಂದೇ ಅವತರಿಸಿದ ಯತಿವರ್ಯರು. ವೀಣೆ ಹಿಡಿದೆ ಹಾಡಲು ಕುಳಿತರೆ ಇಡೀ ಜಗತ್ತು ತಲೆದೂಗಿ ಮೈಮರೆಯುತ್ತಿತ್ತು.

ರಾಯರು ಬೃಂದಾವನದಲ್ಲಿ ಐಕ್ಯರಾಗಿ ಮುನ್ನೂರಾ ಐವತ್ನಾಲ್ಕು ವರ್ಷಗಳು ಉರುಳಿವೆ. ರಾಘವೇಂದ್ರ ಸ್ವಾಮಿಗಳು ಇಂದಿಗೂ ಬೃಂದಾವನದಲ್ಲೇ ನೆಲೆಸಿದ್ದಾರೆ. ಇನ್ನೂ ಮುನ್ನೂರಾನಲವತ್ತಾರು ವರ್ಷಗಳನ್ನು ಅಲ್ಲಿಯೇ ಸವೆಸಲಿದ್ದಾರೆ. ಏಳುನೂರು ವರ್ಷಗಳು ಬೃಂದಾವನದಲ್ಲಿದ್ದು ಎಲ್ಲ ಜನರ ಸಂಕಷ್ಟಗಳನ್ನು ಪರಿಹರಿಸುವುದಾಗಿ ರಾಯರೇ ಹೇಳಿಕೊಂಡಿದ್ದರೆಂಬ ಮಾತಿದೆ. ಬೃಂದಾವನಸ್ಥರಾದ ನಂತರವೂ ರಾಯರು ಹಲವರಿಗೆ ದರ್ಶನ ಕೊಟ್ಟಿದ್ದು ರಾಯರ ಇರುವಿಕೆಗೆ ಸಾಕ್ಷಿಯಾಗಿದೆ. ವಿಶ್ವದ ಎಲ್ಲೆಡೆಯೂ ರಾಯರ ಭಕ್ತರಿದ್ದಾರೆ. ಮಂತ್ರಾಲಯಕ್ಕೆ ಬಂದು ಪಾವನರಾದವರಿದ್ದಾರೆ. ಬೃಂದಾವನ ದರ್ಶನದಿಂದ ಬದುಕಿನಲ್ಲಿ ಮಹತ್ತರ ಬದಲಾವಣೆ, ಏಳಿಗೆ, ನೆಮ್ಮದಿ ಶಾಂತಿ ಹೊಂದಿದವರಿದ್ದಾರೆ. ಭಕ್ತರ ಶಕ್ತಿ ಕೇಂದ್ರವೆನಿಸಿರುವ ಮಂತ್ರಾಲಯದ ಬೃಂದಾವನದಲ್ಲಿ ನಿಜಕ್ಕೂ ಅನೂಹ್ಯ ಶಕ್ತಿ ಇದೆ. ಹಾಗಂತ ಇದು ಕೇವಲ ಧಾರ್ಮಿಕ ಕೇಂದ್ರವಲ್ಲ. ಸಾಮಾಜಿಕ ಕೈಂಕರ್ಯಗಳಿಂದಲೂ ಸಮಾಜವನ್ನು ಮೇಲಕ್ಕೆತ್ತುತ್ತಾ, ಅಶಕ್ತರಿಗೆ ಶಕ್ತಿ ನೀಡುತ್ತಾ ಮುನ್ನಡೆದಿದೆ. ಪ್ರಸ್ತುತ ಗುರುಗಳಾಗಿರುವ ಶ್ರೀ ಸುಬುಧೇಂದ್ರ ತೀರ್ಥರ ಮಾರ್ಗದರ್ಶನದಲ್ಲಿ ಭಕ್ತರ ಕಷ್ಟ ಕಾರ್ಪಣ್ಯಗಳು ಕಳೆಯುತ್ತಿವೆ. ಅಶಕ್ತರಿಗೆ ಆತ್ಮಸ್ಥೈರ್ಯ ದೊರಕುತ್ತಿದೆ.

ಕಾಯೋ ಗುರುರಾಯ

ಭಾರತ ದೇಶದ ವೈದಿಕ ಸಿದ್ಧಾಂತ ತತ್ವಗಳ. ಧರ್ಮಗಳ ಪ್ರಚಾರಕ್ಕಾಗಿ ಲೋಕಮಾನ್ಯ ಗ್ರಂಥಗಳನ್ನು ರಚಿಸಿ, ಮಹದುಪಕಾರ ಮಾಡಿ ಮಾನವ ಜನಾಂಗದ ಕಲ್ಯಾಣ, ನಾಡು, ನುಡಿಗಳ ಬೆಳವಣಿಗೆ ಅಭಿವೃದ್ಧಿಗಾಗಿ, ಶಾಂತಿ ಸ್ಥಾಪನೆಗಾಗಿ ತಮ್ಮ ಅಖಂಡ ಪುಣ್ಯ ರಾಶಿಯನ್ನು ಕಾಮಧೇನು, ಕಲ್ಪವೃಕ್ಷದಂತೆ ಧಾರೆಯೆರೆಯುತ್ತಾ ಮಂತ್ರಾಲಯ ಮಹಾಕ್ಷೇತ್ರದಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದವರು ಶ್ರೀರಾಘವೇಂದ್ರ ಗುರುಸಾರ್ವಭೌಮರು. ಗುರುರಾಯರನ್ನು ನೆನೆದಾಗ ಮೊದಲು ನೆನಪಾಗುವುದೇ ರಾಯರ ಸನ್ನಿಧಿ ಮಂತ್ರಾಲಯ. ಯಾವುದೇ ಕಷ್ಟವಿದ್ದರೂ ರಾಯರನ್ನು ನೆನೆದರೆ, ರಾಯರ ದರ್ಶನ ಮಾಡಿದರೆ ಕಷ್ಟಗಳೆಲ್ಲಾ ನಿವಾರಣೆಯಾಗುತ್ತದೆ ಎಂಬುದು ಅಸಂಖ್ಯಾತ ಭಕ್ತರ ಆಗಾಧ ನಂಬಿಕೆ. ಆಂಧ್ರಪ್ರದೇಶದಲ್ಲಿದ್ದರೂ ಕರ್ನಾಟಕದ ಭಕ್ತಾದಿಗಳೇ ಹೆಚ್ಚು ಸಂದರ್ಶಿಸುವ ಕ್ಷೇತ್ರ ಅಂದರೆ ಅದು ಮಂತ್ರಾಲಯ. ಮಂತ್ರಾಲಯ ಕೇವಲ ಪುಣ್ಯಕ್ಷೇತ್ರ ಮಾತ್ರವೇ ಅಲ್ಲ, ಅಧ್ಯಾತ್ಮಿಕ ಮತ್ತು ದೈವಿಕ ಪ್ರವಾಸಿ ತಾಣವೂ ಹೌದು.

ಮಂತ್ರಾಲಯವು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಿಂದ 74 ಕಿ.ಮೀ ಮತ್ತು ಹೈದರಾಬಾದ್ ನಿಂದ 250 ಕಿ.ಮೀ ದೂರದಲ್ಲಿರುವ ಪವಿತ್ರ ಪಟ್ಟಣ. ಕರ್ನಾಟಕದ ಗಡಿಯ ಬಳಿ ಮತ್ತು ತುಂಗಭದ್ರಾ ನದಿಯ ದಡದಲ್ಲಿರುವ ಮಂತ್ರಾಲಯ ಕರ್ನಾಟಕದ್ದೇ ಅನಿಸುವ ಭಾವ ಕೊಡುತ್ತದೆ. ಹಿಂದೂ ಧಾರ್ಮಿಕ ಸ್ಥಳವಾಗಿರುವ ಮಂತ್ರಾಲಯದಲ್ಲಿರುವುದೇ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನ. ಶ್ರೀ ಗುರು ರಾಘವೇಂದ್ರ ಸ್ವಾಮಿ (1601–1671) ಹಿಂದೂ ಧರ್ಮದ ಅತ್ಯಂತ ಪೂಜನೀಯ ಸಂತರು. ವೈಷ್ಣವ ಸಂಪ್ರದಾಯ ಮತ್ತು ಶ್ರೀ ಮಧ್ವಾಚಾರ್ಯರ ದ್ವೈತ ತತ್ವವನ್ನು ಪ್ರತಿಪಾದಿಸಿದ ಧೀಮಂತ ಯತಿಗಳು.

ಭಕ್ತ ಪ್ರಹ್ಲಾದರ ಪುನರ್ಜನ್ಮ

ಶ್ರೀ ರಾಘವೇಂದ್ರ ಸ್ವಾಮಿ ತಮ್ಮ ಜೀವಿತಾವಧಿಯಲ್ಲಿ ಅನೇಕ ಅದ್ಭುತಗಳನ್ನು ಮಾಡಿದ್ದಾರೆ. ಇಂದಿಗೂ ತಮ್ಮ ಭಕ್ತರ ಬದುಕಲ್ಲಿ

ಪವಾಡ ನಡೆಸಿ ಆಶೀರ್ವದಿಸುತ್ತಾರೆ ಎಂದು ನಂಬಲಾಗಿದೆ. ಮಂತ್ರಾಲಯ ಕ್ಷೇತ್ರ ಸಂಪೂರ್ಣವಾಗಿ ಸಮರ್ಪಿತವಾಗಿರುವುದೇ ಗುರು ರಾಘವೇಂದ್ರ ಸ್ವಾಮಿಗಳಿಗೆ. ಅವರನ್ನು ನರಸಿಂಹ ಅವತಾರದಲ್ಲಿ ವಿಷ್ಣುವಿನಿಂದ ರಕ್ಷಿಸಲ್ಪಟ್ಟ ಭಕ್ತ ಪ್ರಹ್ಲಾದನ ಪುನರ್ಜನ್ಮ ಎಂದು ಕೂಡ ಪರಿಗಣಿಸಲಾಗಿದೆ.

ಪರಿಮಳ ಪ್ರಸಾದ

ಪ್ರತಿಯೊಬ್ಬ ರಾಯರ ಭಕ್ತರಿಗೂ ಸೇವೆಗೆ ಅವಕಾಶ ಕಲ್ಪಿಸಲಾಗಿದೆ. 50 ರು ಮೀರಿದ ಸೇವೆಗಳನ್ನು ನೀಡುತ್ತಿದ್ದರೆ, ಬೆ.8 ಗಂಟೆಯ ಮೊದಲು ಗರ್ಭಗುಡಿಯ ಬಲಭಾಗದಲ್ಲಿರುವ ಸೇವಾ ಹಾಲ್‌ನಲ್ಲಿ ಇರಬೇಕು. ಅದಕ್ಕೆ ನೀವು ಹಿಂದಿನ ದಿನವೇ ಸೇವಾ ಟಿಕೆಟ್‌ಗಳನ್ನು ಖರೀದಿಸಬೇಕಾಗುತ್ತದೆ. ಪರಿಮಳ ಪ್ರಸಾದ ಇಲ್ಲಿನ ವಿಶೇಷ ರೀತಿಯ ಪ್ರಸಾದಗಳಾಗಿವೆ. ಇದನ್ನು ಮಂತ್ರಾಲಯದಲ್ಲಿ ಬೃಂದಾವನಕ್ಕೆ ಸಮರ್ಪಿಸಲಾಗುತ್ತದೆ. ದೇಗುಲದ ಹೊರಗಿನ ಕೌಂಟರ್‌ಗಳಲ್ಲಿ ಮಾತ್ರ ಇದು ಲಭ್ಯವಿರುತ್ತದೆ. ರಾಯರು ಪರಿಮಳ ಎನ್ನುವ ಗ್ರಂಥವನ್ನು ಬರೆದಿದ್ದರು. ಇದು ನಾಡಿನಲ್ಲೆಡೆ ಪಸರಿಸಲಿ ಎನ್ನುವ ಕಾರಣಕ್ಕೆ ಈ ವಿಶೇಷ ಪ್ರಸಾದಕ್ಕೆ ಪರಿಮಳ ಎನ್ನುವ ಹೆಸರನ್ನು ಇಡಲಾಗಿದೆ. ಮಧ್ಯಾಹ್ನದ ಸಮಯದಲ್ಲಿ ಅನ್ನಪೂರ್ಣ ಭೋಜನಾ ದೊಡ್ಡ ಊಟದ ಹಾಲ್‌ನಲ್ಲಿ ಸಾಮೂಹಿಕ ಊಟ ನಡೆಯುತ್ತದೆ. ರಾತ್ರಿಯ ಸಮಯದಲ್ಲಿ ಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ.

ಪ್ರಮುಖ ಆಕರ್ಷಣೆ

ಇಲ್ಲಿನ ಪ್ರಮುಖ ಆಕರ್ಷಣೆ ದೇವಾಲಯ ಮತ್ತು ಮಠ ಸಂಕೀರ್ಣ. ದೇವಾಲಯದ ಸುತ್ತಲೂ ನಿತ್ಯ ದೇವರನ್ನು ಹೊತ್ತೊಯ್ಯುವ ದೇವಾಲಯದ ರಥಗಳು ಅದ್ಭುತ ದೃಶ್ಯವಾಗಿದ್ದರೆ, ತುಂಗಭದ್ರಾ ನದಿಯೂ ಸಹ ನೋಡಬೇಕಾದ ಆಕರ್ಷಣೆಯಾಗಿದೆ. ಜೊತೆಗೆ ಮಂತ್ರಾಲಯಕ್ಕೆ ಪ್ರವೇಶದ ದ್ವಾರದ ಬಳಿ ಬೃಹತ್ ಅಭಯಾಂಜನೇಯ ದೇಗುಲವಿದೆ. ಇಲ್ಲಿಗೆ ಪ್ರತಿಯೊಬ್ಬರೂ ಭೇಟಿ ನೀಡಿ ಕೆಲಸ ಸಮಯ ಧ್ಯಾನ ಮಾಡಿ ಫೋಟೊ ಕ್ಲಿಕಿಸಬಹುದು.

ಹಸಿರು ಮಂತ್ರಾಲಯ -ಸ್ವಚ್ಛತೆಗೆ ಪ್ರಾಶಸ್ತ್ಯ

ಮಂತ್ರಾಲಯದಲ್ಲಿ ವೃಕ್ಷ ಪ್ರಸಾದ ಎಂಬ ಹೆಸರಿನಲ್ಲಿ ಸಸಿಯನ್ನು ವಿತರಿಸುವ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿ ಮಕ್ಕಳಿಗಾಗಿಯೇ ಎಪ್ಪತ್ತು ಲಕ್ಷಕ್ಕೂ ಹೆಚ್ಚು ವೆಚ್ಚದ ಹಸಿರು ಉದ್ಯಾನ ನಿರ್ಮಾಣವಾಗಿದೆ. ಮಂತ್ರಾಲಯ ಎಂಬುದು ಕಟ್ಟಡಗಳ ಬೀಡಾಗಬಾರದು ಎಂಬ ಕನಸು ಶ್ರೀ ಸುಬುಧೇಂದ್ರ ತೀರ್ಥ ಪಾದಂಗಳವರದ್ದು. ಅವರ ಆಶಯದಂತೆ ರಾಯರ ಕ್ಷೇತ್ರವನ್ನು ಸ್ವಚ್ಛ ಮತ್ತು ಹಸಿರು ಮಂತ್ರಾಲಯವಾಗುವ ಸರ್ವ ಶ್ರಮ ನಡೆಯುತ್ತಲೇ ಇದೆ.

ಮರೆಯದೇ ಗೋಶಾಲೆ ಹೋಗಿಬನ್ನಿ

ಯಾತ್ರಾರ್ಥಿಗಳು ಮಂತ್ರಾಲಯದ ಗೋಶಾಲೆಗೆ ಭೇಟಿ ನೀಡದೇ ಬಂದಲ್ಲಿ ಕಾಮಧೇನುವಿನ ದರ್ಶನ ಕಳೆದುಕೊಂಡಂತೆ. ಇಲ್ಲಿ ಸುಸ್ಥಿತಿಯಲ್ಲಿರುವ ಗೋವುಗಳಿಗಿಂತ ಬರಪೀಡಿತ ಜಾಗಗಳಲ್ಲಿರುವ, ಬಡ ರೈತರಿಗೆ ಸೇರಿದ್ದ ಈ ವಾರಸುದಾರರಿಲ್ಲದ ಗೋವುಗಳಿಗೆ ಆದ್ಯತೆ ನೀಡು ಅವುಗಳೀಗೆ ಅನ್ನಾಹಾರ ನೀಡಿ ಸಲಹುವ ಕೆಲಸ ನಡೆಯುತ್ತದೆ. ಶ್ರೀಗಳು ಅತ್ಯಂತ ಆಪ್ತತೆಯಿಂದ ಗೋವುಗಳೊಂದಿಗೆ ಸಮಯ ಕಳೆದು ಅವುಗಳನ್ನು ಲಾಲಿಸುತ್ತಾರೆ.●

ಶ್ರೀಗುರು ರಾಯರ ಸಂಕ್ಷಿಪ್ತ ಪರಿಚಯ

- ಮೂಲರೂಪ: ಶಂಕುಕರ್ಣ
- ಅವತಾರಗಳು: ಪ್ರಹ್ಲಾದರಾಜರು, ಬಾಹೀಕರಾಜರು, ವ್ಯಾಸರಾಜರು
- ಮನೆತನ: ಪಾಷ್ಠಿಕ ವಂಶದ ಬೀಗಮುದ್ರೆ ಮನೆತನ
- ಗೋತ್ರ: ಗೌತಮ
- ಮುತ್ತಾತನ ಹೆಸರು: ಕೃಷ್ಣಭಟ್ಟರು
- ತಾತನ ಹೆಸರು: ಕನಕಾಚಲ ಭಟ್ಟರು
- ತಂದೆ ಹೆಸರು: ತಿಮ್ಮಣ್ಣ ಭಟ್ಟರು
- ತಾಯಿ : ಗೋಪಿಕಾಂಬ
- ಅಕ್ಕ: ವೆಂಕಟಾಂಬ
- ಅಣ್ಣನ ಹೆಸರು: ಗುರುರಾಜ ಆಚಾರ್ಯ
- ಜನನ: ಕ್ರಿಶ 1595ನೇ ಮನ್ಮಥನಾಮ ಸಂವತ್ಸರ, ಫಾಲ್ಗುಣ ಶುದ್ಧ ಸಪ್ತಮಿ, ಗುರುವಾರ
- ಜನ್ಮನಕ್ಷತ್ರ : ಮೃಗಶಿರ
- ಜನ್ಮಸ್ಥಳ: ಭುವನಗಿರಿ
- ಅಕ್ಷರಾಭ್ಯಾಸ : 1595
- ಉಪನಯನ : 1604
- ಪೂರ್ವಾಶ್ರಮದ ಹೆಸರು: ವೆಂಕಟನಾಥ
- ಪ್ರಾಥಮಿಕ ಗುರುಗಳು: ಲಕ್ಷ್ಮೀನರಸಿಂಹಾಚಾರ್ಯರು
- ಗುರುಕುಲ : ಕಾವೇರಿಪಟ್ಟಣಂ
- ಉನ್ನತ ವಿದ್ಯಾಭ್ಯಾಸ: ಶ್ರೀ ಸುಧೀಂದ್ರ ತೀರ್ಥರು, ಕುಂಭಕೋಣಂ
- ಪತ್ನಿ : ಸರಸ್ವತಿ
- ಪೂರ್ವಾಶ್ರಮದ ಪುತ್ರ ಲಕ್ಷ್ಮಿನಾರಾಯಣ
- ಆಶ್ರಮದ ಗುರುಗಳು: ಶ್ರೀ ಸುಧೀಂದ್ರ ತೀರ್ಥರು
- ಸನ್ಯಾಸ ಸ್ವೀಕಾರ : 1621
- ಆಶ್ರಮ ನಾಮ : ಶ್ರೀ ರಾಘವೇಂದ್ರ ತೀರ್ಥರು
- ವೃಂದಾವನ ಪ್ರವೇಶ : ಶ್ರಾವಣ ಬಹುಳ ಬಿದಿಗೆ, ವಿರೋಧಿ ಸಂವತ್ಸರ
- ವೃಂದಾವನ ಶಿಲೆ : ಕೃಷ್ಣವರ್ಣ
- ವೃಂದಾವನ ಸ್ಥಳ: ಮಂತ್ರಾಲಯದ ತುಂಗಭದ್ರಾ ನದಿ ತೀರ
- ಮಠದ ಪೂರ್ವನಾಮ : ವಿಭುದೇಂದ್ರ ತೀರ್ಥ ಮಠ
- ಬಿರುದು : ಬಹಾಭಾಷ್ಯಾಚಾರ್ಯ
- ರಾಯರ ಅಂಕಿತ : ಧೀರವೇಣುಗೋಪಾಲ
- ಆಶ್ರಮ ಶಿಷ್ಯರು: ಶ್ರೀ ಯೋಗೀಂದ್ರ ತೀರ್ಥರು
- ರಚಿಸಿದ ಗ್ರಂಥಗಳು: ಶ್ರೀಮನ್ ನ್ಯಾಯಸುಧಾ ಟಿಪ್ಪಣಿ, ಪರಿಮಳ ಸುಧಾ, ಸೂತ್ರ ಪ್ರಸ್ಥಾನ, ಋಗ್ ಮತ್ತು ಉಪನಿಷತ್ ಪ್ರಸ್ಥಾನ, ಗೀತಾ ಪ್ರಸ್ಥಾನ, ಶ್ರೀರಾಮಚರಿತ ಮಂಜರಿ, ಶ್ರೀಕೃಷ್ಣಚರಿತ ಮಂಜರಿ, ಪ್ರಾತಃ ಸಂಕಲ್ಪ ಗದ್ಯಾ, ಸೇರಿ ಒಟ್ಟು 48 ಗ್ರಂಥಗಳು

ಸುವರ್ಣ ಮಂತ್ರಾಲಯದ ನಿರ್ಮಾತೃ ಡಾ. ಸುಬುಧೇಂದ್ರ ತೀರ್ಥರು

ಆಚಾರ್ಯ ನಾಗರಾಜು ಹಾವೇರಿ
ಗುರು ವಿಜಯ ಪ್ರತಿಷ್ಠಾನ

ವೇದವೇದಾಂಗ ಚತುರಂ
ಮಧ್ವ ಸಿದ್ಧಾಂತ ಕೋವಿದಮ್ !
ಸುಯತೀಂದ್ರ ಸುತಂ ಶ್ರೇಷ್ಠಂ
ಸುಬುಧೇಂದ್ರ ಗುರುಂ ಭಜೇ

ಶ್ರೀ ಗುರುಗಳ ವಂಶ

ತಮ್ಮ ಮತ್ತು ನಿಮ್ಮ ನಮ್ಮೆಲ್ಲರ ಆರಾಧ್ಯ ಗುರುಗಳೂ, ಮಂತ್ರ ಮಂದಿರ ನಿಲಯರೂ, ತಮ್ಮನ್ನು ನಂಬಿ ಬಂದ ಭಕ್ತ / ಶಿಷ್ಯರ ಮನೋಭೀಷ್ಟ ಪೂರೈಸುತ್ತಾ ಕಲಿಯುಗ ಕಲ್ಪವೃಕ್ಷ ಕಾಮಧೇನುವೆಂದು ಹದಿನಾಲ್ಕು ಲೋಕಗಳಲ್ಲಿ ಪ್ರಸಿದ್ಧರೂ, ಅದ್ಯಪಿ ಶ್ರೀ ಕ್ಷೇತ್ರ ಮಂತ್ರಾಲಯದ ಮೂಲ ವೃಂದಾವನದಲ್ಲಿ ಸಶರೀರವಾಗಿ ಇದ್ದು ಬಂದ ಭಕ್ತರಿಗೆ ಪ್ರತ್ಯಕ್ಷವಾಗಿ ಕಾಣಿಸಿಕೊಂಡು ತಾಯಿಯಂತೆ ಮಾತನಾಡಿಸಿ ನಿರಂತರ ಅನುಗ್ರಹ ಮಾಡುತ್ತಿರುವವರು ಶ್ರೀ ರಾಘವೇಂದ್ರ ತೀರ್ಥರು.

ರಾಯರು ನೆಲೆಸಿರುವ ಗುರುಸಾರ್ವಭೌಮರ ಮೂಲ ಬೃಂದಾವನಕ್ಕೆ ಬಂಗಾರದ ಕವಚ, ವಜ್ರ ಕವಚ, ಬಂಗಾರದ ಪ್ರತೀಕ, ಗರ್ಭ ಗುಡಿಯ ಶಿಲಾ ಮಂಟಪದ ಕಂಬಗಳಿಗೆ ಬಂಗಾರದ ಕವಚ, ಶ್ರೀ ಪ್ರಹ್ಲಾದ ರಾಜರಿಗೆ ಬಂಗಾರ ಕವಚ ಮತ್ತು ವಿಧ ವಿಧವಾದ ಬಂಗಾರ ವಜ್ರದ ಆಭರಣಗಳೂ, ಶ್ರೀ ಚತುರ್ಮುಖ ಬ್ರಹ್ಮದೇವರ ಕರಾರ್ಚಿತ ಶ್ರೀ ಮೂಲ ರಾಮಚಂದ್ರ ದೇವರರಿಗೆ ಶ್ರೀ ಮಧ್ವಾಚಾರ್ಯರ ಕರಾರ್ಚಿತ ಶ್ರೀ ದಿಗ್ವಿಜಯ ರಾಮಚಂದ್ರ ದೇವರು ಶ್ರೀ ಜಯತೀರ್ಥ ಕರಾರ್ಚಿತ ಶ್ರೀ ಜಯರಾಮದೇವರಿಗೆ ಬಂಗಾರದ ಆಭರಣ, ವಿಧ ವಿಧವಾದ ನವರತ್ನ ಖಚಿತ ಹಾರಗಳೂ, ಶ್ರೀ ಮಠದ ಸಂಸ್ಥಾನ ಪೂಜೆಗೂ, ಶ್ರೀ ರಾಘವೇಂದ್ರ ಸ್ವಾಮಿಗಳ ಮತ್ತೂ ಎಲ್ಲಾ ಯತಿಗಳ ಬೃಂದಾವನ ಪೂಜೆಗೆ ಉಪಯೋಗಿಸುವ ಎಲ್ಲಾ ವಸ್ತುಗಳೂ (ಪರಿಕರಗಳೂ) ಬಂಗಾರದ್ದೇ ಆಗಿವೆ. ಇದೆಲ್ಲದಕ್ಕೂ ಕಾರಣಕರ್ತರು 'ಶ್ರೀ ಸ್ವರ್ಣತೀರ್ಥ' ಪರಮಪೂಜ್ಯ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು

ಶಿಲಾ ಮಂಟಪ ನಿರ್ಮಾಣ ಮತ್ತು ಬಂಗಾರ ಕವಚ

ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ತುಂಗಭದ್ರಾ ಪ್ರವಾಹ ದಿಂದ ಯಾವುದೇ ತೊಂದರೆ ಆಗಬಾರದೆಂದು ಶಿಲಾ ಮಂಟಪ (ಕಲ್ಲಿನ ಮಂಟಪ) ನಿರ್ಮಿಸಿ ಭಕ್ತರ ಸಹಾಯ ಸಹಕಾರದಿಂದ ಬಂಗಾರದ ಕವಚ ಮಾಡಿಸುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವು, ಬಂಗಾರದ ಮಠ -(Golden Matha) ವಾಗಿ ಪರಿವರ್ತನೆಯಾಗುತ್ತವುದಕ್ಕೆ ಲಕ್ಷ ಲಕ್ಷ ಶ್ರೀ ಮಠದ ಭಕ್ತರು, ಶಿಷ್ಯರು ಸಾಕ್ಷಿಯಾಗಲಿದ್ದಾರೆ.

ಪುಷ್ಕರಣಿ ನಿರ್ಮಾಣ

ಶ್ರೀ ಕ್ಷೇತ್ರ ಮಂತ್ರಾಲಯದ ಶ್ರೀ ಮಂಚಾಲಮ್ಮ ದೇವಸ್ಥಾನದ ಮುಂಭಾಗ ಬೃಂದಾವನ ಗಾರ್ಡನ್ಸ್ ಮುಂಭಾಗದಲ್ಲಿ ಸುಸಜ್ಜಿತ ಪರಿಮಳ ತೀರ್ಥ ಎಂಬ ಹೆಸರಿನ ಪುಷ್ಕರಣಿ ಈಗಾಗಲೇ ಲೋಕಾರ್ಪಣೆಗೊಂಡಿದೆ. ಇನ್ನು ಮುಂದೆ ಭಕ್ತರು ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ವಿಶೇಷ ದಿನಗಳಲ್ಲಿ ತೆಪ್ಪೋತ್ಸವ ಸೇವೆ ಸಲ್ಲಿಸಬಹುದಾಗಿದೆ.

ಅಭಿವೃದ್ಧಿ ಕಾರ್ಯಗಳು

ಪ್ರಾತಃ ಸ್ಮರಣೀಯ ಪರಮಪೂಜ್ಯ ಶ್ರೀ ಸುಜಯೀಂದ್ರ ತೀರ್ಥ ತೀರ್ಥರ ಪೂರ್ವಾಶ್ರಮದ ಮೊಮ್ಮಕ್ಕಳು ಶ್ರೀ ಸುಬುಧೇಂದ್ರ ತೀರ್ಥರು. ತಮ್ಮ ಪರಮೇಷ್ಠಿ ಗುರುಗಳಂತೆ ಶ್ರೀಗಳು ಸಹ, ಶ್ರೀ ಕ್ಷೇತ್ರ ಮಂತ್ರಾಲಯದ ಸರ್ವಾಂಗೀಣ ಅಭಿವೃದ್ಧಿ ಮಾಡುತ್ತಿರುವ ಹರಿಕಾರರು. ಶ್ರೀ ಕ್ಷೇತ್ರ ಮಂತ್ರಾಲಯಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಸುಮಾರು 1200 ಸುಸಜ್ಜಿತ ವಸತಿ ಸಮುಚ್ಚಯ, ಎರಡೂ ಹೊತ್ತು

ಭಕ್ತರಿಗೆ ತೀರ್ಥ ಪ್ರಸಾದದ (ಭೋಜನ) ವ್ಯವಸ್ಥೆ, ಸುಸಜ್ಜಿತ ಸ್ನಾನ ಘಟ್ಟಗಳ ವ್ಯವಸ್ಥೆ, ಕುಡಿಯಲು ಪರಿಶುದ್ಧವಾದ ನೀರಿನ ವ್ಯವಸ್ಥೆ, ನಾಡಿನ ಎಲ್ಲಾ ನಗರ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಿನ ಭಕ್ತರಿಗೆ ಅನುಕೂಲವಾಗಲೆಂದು ಸುಸಜ್ಜಿತ ದಿವ್ಯ ಭವ್ಯ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಮೃತ್ತಿಕಾ ವೃಂದಾವನ ಸನ್ನಿಧಾನ ಶಾಖಾ ಮಠಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ಧೀಮಂತ ಆಡಳಿತಗಾರರು.

ವಿದ್ಯಾ ಪಕ್ಷಪಾತಿಗಳು

ವಿದ್ವಜ್ಜನ ಪೋಷಣೆ, ವಿದ್ಯಾ ಸಂಸ್ಥೆಗಳ ನಿರ್ವಹಣೆ, ಪುಟ್ಟ ವಿದ್ಯಾರ್ಥಿ ಗಳನ್ನು ಮೊದಲ್ಗೊಂಡು ಸುಧಾ ಪಂಡಿತರ ವರೆಗೆ ಹಾಗೂ ನುರಿತ ಅಧ್ಯಾಪಕರನ್ನು ನೇಮಿಸಿ ಅವರೆಲ್ಲರಿಗೂ ಮತ್ತು ಶ್ರೀ ಕ್ಷೇತ್ರ ಮಂತ್ರಾಲಯ ಮತ್ತು ದೇಶದ ವಿವಿಧ ಭಾಗಗಳಲ್ಲಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿ ಆಶ್ರಯ ನೀಡಿರುವವರು ಸುಬುಧೇಂದ್ರ ತೀರ್ಥರು.

ಭಕ್ತರವಾರಿಧಿ

ಶ್ರೀ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ಬರುವ ಭಕ್ತರನ್ನು ಪ್ರೀತಿವಾತ್ಸಲ್ಯ ಅಂತಃಕರಣದಿಂದ ಮಾತನಾಡಿಸಿ ಅವರ ನೋವುಗಳಿಗೆ ಸ್ಪಂದಿಸಿ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಪ್ರಾರ್ಥಿಸಿ ಫಲ ಮಂತ್ರಾಕ್ಷತೆ ಕೊಟ್ಟು ನಿರಂತರವೂ ಅನುಗ್ರಹಿಸುತ್ತಿದ್ದಾರೆ ಶ್ರೀಪಾದಂಗಳವರು. ಶ್ರೀ ರಾಘವೇಂದ್ರ ಸ್ವಾಮಿಗಳಿಗೂ ಮತ್ತು ಅವರ ಅಂತರಂಗ ಭಕ್ತ / ಶಿಷ್ಯರ ನಡುವೆ ಸಂಪರ್ಕ ಕೊಂಡಿಯಾಗಿದ್ದಾರೆ ಈ ನಗುಮೊಗದ ಸಂತ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು.

ಶ್ರೀ ಸ್ವರ್ಣತೀರ್ಥ ಪ್ರಶಸ್ತಿ

ನಮ್ಮ ನಿಮ್ಮೆಲ್ಲರ ಪ್ರೀತಿಯ ಗುರುಗಳಾದ ಸುಬುಧೇಂದ್ರ ತೀರ್ಥರನ್ನು ಭಕ್ತರು 'ಸ್ವರ್ಣತೀರ್ಥರು' ಎಂದು ಪ್ರೀತಿಯಿಂದ ಕರೆಯುತ್ತಾರೆ. ಅಪ್ಪಟ ಬಂಗಾರದಂತೆ ನಿಷ್ಕಲ್ಮಶ ಮನಸ್ಸುಳ್ಳ , ವಿದ್ಯಾ ಪಕ್ಷಪಾತಿಗಳಾದ ಭಕ್ತ ಶಿಷ್ಯರ ಮೇಲೆ ವಾತ್ಸಲಿ ಹೊಂದಿರುವ ಪರಪಶ್ರೀಗಳನ್ನು ಸ್ವರ್ಣತೀರ್ಥ ಸುಬುಧೇಂದ್ರ ತೀರ್ಥರೆಂದು ಕರೆದರೆ ಶ್ರೀ ಹರಿ ವಾಯು ಗುರುಗಳು ಮತ್ತು ರಾಘವೇಂದ್ರ ಸ್ವಾಮಿಗಳಿಗೆ ಅತ್ಯಂತ ಸಂತೋಷವಾಗುತ್ತದೆ.

ಇಂಥಾ ಗುರುಗಳ ಕಾರುಣ್ಯ ಛತ್ರದಲ್ಲಿ ಇರುವ ನಾವೇ ಧನ್ಯರೂ – ಮಾನ್ಯರು!!
ನಾನು ಕಂಡಂತೆ ಸುಬುಧೇಂದ್ರ ತೀರ್ಥರು
ವೇದ ವೇದಾಂಗ ನಿಪುಣಂ
ಮಧ್ವ ಟೀಕಾರ್ಯ ಸೇವಕಂ !
ರಾಘವೇಂದ್ರ ಕೃಪಾ ಪಾತ್ರಂ
ಸುಬುಧೇಂದ್ರಗುರುಂಭಜೇ !! ಎಂದು ಪ್ರಾರ್ಥಿಸುತ್ತೇನೆ.●

ನಂಜನಗೂಡು ತಾಲೂಕು ಹೊಸಕೋಟೆ ಮೂಲದ ಬೆಂಗಳೂರು ನಿವಾಸಿ ಡಾ.ಎಚ್.ಎಸ್. ರಾಘವೇಂದ್ರ ಅವರ ಸಾಧನೆ ಎಲೆಮರೆಯ ಹಣ್ಣಿನಂತೆ. ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ರಾಘವೇಂದ್ರ ಅವರದ್ದು ಸದ್ದಿಲ್ಲದ ಸಾಧನೆ. ಕುಗ್ರಾಮದಿಂದ ಬಂದು ಸಂಸ್ಥೆಯೊಂದನ್ನು ಕಟ್ಟಿ ನೂರಾರು ಜನರಿಗೆ ಅನ್ನದಾತರಾಗಿರುವ ಅವರು, ದೇಶ ರಕ್ಷಣೆಯ ಸೇವೆಯೊಂದಿಗೆ, ಧಾರ್ಮಿಕ ಸೇವಾ ಕಾರ್ಯದಲ್ಲಿಯೂ ಮುಂಚೂಣಿಯಲ್ಲಿದ್ದಾರೆ.

ಹೊಸಕೋಟೆ ರಾಘಣ್ಣ ಅವರದ್ದು ರಕ್ಷಣೆ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಅಬ್ಬರವಿಲ್ಲದ ಸೇವೆ

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಹೊಸಕೋಟೆ ಗ್ರಾಮದಲ್ಲಿ 1878ರ ಆಸುಪಾಸಿನಲ್ಲಿದ್ದ ಎರಡೇ ಎರಡು ಮಾಧ್ವ ಬ್ರಾಹ್ಮಣ ಕುಟುಂಬವೊಂದಲ್ಲಿ ಶ್ರೀ ರಾಘವಯ್ಯನವರ ಮಗ ರಂಗಣ್ಣನವರು ಗ್ರಾಮದ ಶ್ಯಾನುಭೋಗರಾಗಿದ್ದರು. ರಂಗಣ್ಣನವರು ಆ ಕಾಲದಲ್ಲಿ ಮೈಸೂರು ಮಹಾರಾಜರ ಆಸ್ಥಾನದಲ್ಲಿ ಬಂಗಾರದ ಕಲಶ ಕಳುವಾಗಿದ್ದಾಗ ಕಳ್ಳರನ್ನು ಹಿಡಿದುಕೊಟ್ಟು ಶ್ರೀಮನ್ ಮಹಾರಾಜರಿಂದ ಪ್ರಶಂಸೆ, ಬೆಳ್ಳಿ ಕಡಗ ಮತ್ತು ಐವತ್ತೆರಡು ಎಕರೆ ರತ್ನಕಲ್ಲುಮುಟ್ಟಿ ಬೋರೆ ಹೊಲವನ್ನು ಬಳುವಳಿಯಾಗಿ ಪಡೆದವರು. ಇವರಿಗೆ ಸುಬ್ಬರಾಯರು ಎಂಬ ಏಕೈಕ ಪುತ್ರ. ಸುಮಾರು ಕ್ರಿ.ಶ.1924/25 ರಲ್ಲಿ ಟಿ. ನರಸೀಪುರ ತಾಲೂಕು ಸೋಸಲೆಗ್ರಾಮದ ಸುತ್ತಮುತ್ತ ಭೀಕರ ಪ್ಲೇಗ್ ರೋಗ ವ್ಯಾಪಿಸಿಕೊಂಡಿತ್ತು. ಆಗ ಸೋಸಲೆ ವ್ಯಾಸರಾಯರ ಮಠ ಸ್ವಸ್ಥಾನ ಬಿಡಬೇಕಾದ ಪರಿಸ್ಥಿತಿ ಬಂದಿತ್ತು.

ರಂಗಣ್ಣ ಮತ್ತು ಸುಬ್ಬರಾಯರು ಕೂಡಿ ಇಡೀ ವ್ಯಾಸರಾಯರ ಮಠವನ್ನೇ ಗ್ರಾಮಕ್ಕೆ ಸ್ಥಳಾಂತರಗೊಳಿಸಿ, ತಮ್ಮ ನಿವಾಸವನ್ನು ತೆರವುಗೊಳಿಸಿ ಸ್ವಾಮಿಗಳಿಗೆ ಆಶ್ರಯ ನೀಡಿದವರು. ಸರಿಸುಮಾರು ಮೂರು ತಿಂಗಳುಗಳ ಕಾಲ ಮಠದ ಪರಿಪೂರ್ಣ ಕಾರ್ಯಕ್ರಮಗಳನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತರು. ಆ ಸಂದರ್ಭದಲ್ಲಿ ಸುಬ್ಬರಾಯರ ಪತ್ನಿ ಪುಟ್ಟಮ್ಮನವರು ಗರ್ಭಿಣಿಯಾಗಿದ್ದರು. ಆಕೆಗೆ ಅನುಕೂಲಕರವಾಗುವಂತೆ ಬೇರೆ ಕಡೆ ವಾಸದ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಶ್ರೀ ಸುಬ್ಬರಾಯರಿಗೆ ಎರಡು ಹೆಣ್ಣು ಮತ್ತು ನಾಲ್ಕು ಗಂಡು ಮಕ್ಕಳಲ್ಲಿ ಎರಡನೇ ಪುತ್ರರೇ ಶ್ಯಾನುಭೋಗ್ ಶ್ರೀ ಶಾಮರಾವ್‌ರವರು. ತಾತನಂತೆ ಬಹಳ ಧೈರ್ಯಶಾಲಿ.

ಸಂಪ್ರದಾಯ, ಪೂಜೆ, ಪುನಸ್ಕಾರ ಮತ್ತು ಕೃಷಿಯ ಜತೆಗೆ ಗ್ರಾಮದಲ್ಲಿ ಜಾತಿಭೇದವಿಲ್ಲದೇ ಸಮಾಜ ಸೇವೆಗೆ ಒತ್ತುಕೊಟ್ಟವರು. ಹೊಸಕೋಟೆ ಗ್ರಾಮವೂ ಸೇರಿದಂತೆ ಸುತ್ತ-ಮುತ್ತಲ ಹತ್ತು ಹಳ್ಳಿಗಳ ಸಮಸ್ತ ಜನರಿಗೆ ವ್ಯಾಜ್ಯಗಳಲ್ಲಿ ನ್ಯಾಯ ಹೇಳುತ್ತಿದ್ದರು. ಇವರ ಅಂತಿಮ ತೀರ್ಮಾನಕ್ಕೆ ಪ್ರತಿಯೊಬ್ಬರು ಬದ್ಧರಾಗಿರುತ್ತಿದ್ದರು. 1960ರಲ್ಲಿ ಕಪಿಲಾನದಿಯಲ್ಲಿ ಭೀಕರ ಪ್ರವಾಹ ಬಂದಿತ್ತು. ಆಗ ನದಿ ದಡದ ಸ್ವಲ್ಪ ಎತ್ತರದಲ್ಲಿ ಉಪ್ಪಲಿಗೆ ಶೆಟ್ಟರ ಮೇಳವೆಂಬ ಸ್ಥಳ ಪೂರ್ಣ ಮುಳುಗಿ ಇಡೀ ಪ್ರದೇಶವೇ ಜಲಾವೃತವಾದಾಗ ಅಲ್ಲಿನ ಜನರೆಲ್ಲರನ್ನೂ ಹೊಸಕೋಟೆ ಗ್ರಾಮದಲ್ಲಿನ ಸರಕಾರಿ ಶಾಲೆಯಲ್ಲಿ ಇರಿಸಿ ತಿಂಗಳಾನುಗಟ್ಟಲೇ ಪೋಷಿಸಿದರು. ಸರಕಾರದ ಜತೆ ತಮ್ಮ ವಿಶ್ವಾಸ, ಪ್ರಭಾವವನ್ನು ಬಳಸಿ ಈ ಜನರಿಗೆ ಶೀಘ್ರವಾಗಿ ಪುನರ್ವಸತಿ ಕಲ್ಪಿಸಿದರು. ಸುತ್ತೂರು-ಹೊಸಕೋಟೆ ಸೇತುವೆ ನಿರ್ಮಾಣವಾದಾಗ ಪಶ್ಚಿಮ ತುದಿಯ ತಮ್ಮ ಜಾಗವನ್ನು ಪುಕ್ಕಟೆಯಾಗಿ ಪರಿಹಾರ ತೆಗೆದುಕೊಳ್ಳದೇ ಕೊಟ್ಟು ಸಮಾಜಕ್ಕೆ ಒಳಿತನ್ನು ಬಯಸಿದರು.

ಶ್ರೀ ಶಾಮರಾವ್ ಮತ್ತು ಅವರ ಪತ್ನಿ ಶ್ರೀಮತಿ ಶಕುಂತಳರವರಿಗೆ ಆರು ಜನ ಮಕ್ಕಳು. ಮೂವರು ಗಂಡು ಮಕ್ಕಳಾದ ರಮೇಶ್, ಸುಬ್ಬಣ್ಣ ಮತ್ತು ರಾಘವೇಂದ್ರರಾವ್, ಮೂವರು ಹೆಣ್ಣುಮಕ್ಕಳಾದ ಸುಜಾತ, ಸುವರ್ಣ ಮತ್ತು ವಸಂತ. ಮೊದಲನೇ ಮಗ ರಮೇಶ್, ಆರಂಭಿಕ ಶಿಕ್ಷಣವನ್ನು ತಮ್ಮ ಹಳ್ಳಿಯಲ್ಲಿ ಪಡೆದು ಮುಂದೆ ಬಿಎಸ್‌ಸಿ, ಬಿಇ (ಸಿವಿಲ್ ಎಂಜಿಯರಿಂಗ್) ಪಿ.ಎಚ್‌ಡಿ (ಸಿವಿಲ್ ಎಂಜಿನಿಯರಿಂಗ್) ಪಡೆದು ಮೈಸೂರಿನಲ್ಲಿ ಪ್ರಖ್ಯಾತ ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎನ್‌ವಿರಾನ್‌ಮೆಂಟಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾಗಿದ್ದರು. ಇವರ ಶೈಕ್ಷಣಿಕ ಪರಿಣತಿಯ ಫಲವಾಗಿ ಶ್ರೀ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೆನೆಟ್ ಮೆಂಬರ್ ಆಗಿ ಸೇವೆ ಸಲ್ಲಿಸಿದರು. ಬಾಲ್ಯದಿಂದಲೂ ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡು ಕನ್ನಡ ಭಾಷೆಯಲ್ಲಿ ಎಂಜಿನಿಯರಿಂಗ್ ಪುಸ್ತಕಗಳನ್ನು ಬರೆದು ವಿಶ್ವವಿದ್ಯಾಲಯಗಳ ಪ್ರಸಾರಾಂಗದಲ್ಲಿ ಪ್ರಕಟಿಸಿದರು. ಇವರ ಪರಿಸರ ವಿಷಯ ಜ್ಞಾನಕ್ಕೆ ಪುರಸ್ಕಾರವೆಂಬಂತೆ ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಲ್ಲಿ ಮೂರು ವರ್ಷ ಅತ್ಯುನ್ನತ ಮಟ್ಟದ ಪರಿಸರ ಪರವಾನಗಿ ದಯಪಾಲಿಸುವ ತಜ್ಞರ ಸಮಿತಿಯಲ್ಲಿದ್ದರು. ಇದರ ಜತೆಗೆ ಕರ್ನಾಟಕ ಸರಕಾರದಲ್ಲಿ ಆರು ವರ್ಷಗಳ ಕಾಲ ಪರಿಸರ ಪ್ರಭಾವದ ಮೌಲ್ಯಮಾಪನ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಪೂರ್ವ ಮತ್ತು ಪಶ್ಚಿಮಗಳಲ್ಲಿರುವ ಪ್ರಖ್ಯಾತ ದೇಶಗಳಲ್ಲಿ ತಮ್ಮ ತಾಂತ್ರಿಕ ಸಂಶೋಧನಾ ಲೇಖನಗಳನ್ನು ಪ್ರಸ್ತುತಪಡಿಸಿದರು.

ಎರಡನೇ ಮಗ ಸುಬ್ಬಣ್ಣ

ಇವರು ಗ್ರಾಮೀಣ ಪರಿಸರದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪಡೆದರು. ತಂದೆಯಂತೆ ಕೃಷಿ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು. ಹಳ್ಳಿಯಲ್ಲೇ ಉಳಿದು ರೈತರಾದವರು. ಮೈಸೂರು ಜಿಲ್ಲೆಯಲ್ಲೇ 'ಅತ್ಯುತ್ತಮ ಬೆಳೆಗಾರ'ನೆಂಬ ಪ್ರಶಸ್ತಿಯನ್ನು ಪಡೆದವರು. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆಯನ್ನು ತಿಳಿಯಲು ಇಸ್ರೇಲ್ ದೇಶಕ್ಕೆ ಭೇಟಿ ನೀಡಿ, ಹಲವಾರು ಪ್ರಯೋಗಗಳನ್ನು ತಮ್ಮ ಹಳ್ಳಿಯಲ್ಲಿ ಮಾಡಿ ಸಹ ರೈತರಿಗೂ ಮಾರ್ಗದರ್ಶನ ಮಾಡಿದವರು. ತಂದೆಯಂತೆ ರೈತರಿಗೆ ಸರಕಾರಿ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ನಿರತರಾದವರು. ತನ್ನ ಹಳ್ಳಿಯಲ್ಲದೇ ಬೇರೆ ಊರಿನ ದೇವಸ್ಥಾನಗಳ ನಿರ್ಮಾಣ-ಪುನರ್‌ನಿರ್ಮಾಣಗಳಿಗೆ ಧನಸಹಾಯದ ಜತೆ ಸೂಕ್ತ ಸಲಹೆಗಳನ್ನು ನೀಡುತ್ತಿರುವವರು. ಇನ್ನೂ 2ನೇ ಮಗಳಾದ ಸುವರ್ಣ, ಬೆಂಗಳೂರಿನಲ್ಲಿ ದೂರದರ್ಶನ ಕೇಂದ್ರ ಆರಂಭ ಆಗಿದ್ದ ಹೊಸದರಲ್ಲಿ ಸುದ್ದಿವಾಚಕಿ (ನ್ಯೂಸ್ ರೀಡರ್) ಆಗಿ ಕೆಲಸ ಮಾಡಿದವರು.

ಮೂರನೇ ಮಗ ಡಾಕ್ಟರ್ ಎಚ್.ಎಸ್.ರಾಘವೇಂದ್ರರಾವ್. ಅವರು 1969ನೇ ಸಭೆಯಲ್ಲಿ ಹೊಸಕೋಟೆ ಗ್ರಾಮದಲ್ಲಿ ಜನಿಸಿ, ಹೊಸಕೋಟೆ ಸುತ್ತೂರು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು. 1989ರಲ್ಲಿ ತಾಂತ್ರಿಕ ವೃತ್ತಿಯನ್ನು ಆರಿಸಿಕೊಂಡು ಮಾರ್ಕೆಟಿಂಗ್ ಕಾರ್ಯತಂತ್ರ, ಪೂರೈಕೆ ನೀತಿ ಮತ್ತು ಆರ್ಥಿಕ ತಜ್ಞರಾಗಿ ಕಳೆದ ಮೂರು ದಶಕಗಳಲ್ಲಿ ಪೂರ್ಣ ಅನುಭವವನ್ನು ಪ್ರಮುಖವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ಯುನ್ಮಾನ ಉತ್ಪಾದನಾ ಕ್ಷೇತ್ರದಲ್ಲಿ ಹೆಸರು ಗಳಿಸಿಕೊಂಡವರು.

ಕಾರ್ಪೊರೇಟ್ ವಲಯದ ಅನೇಕ ಪ್ರಧಾನ ಕೈಗಾರಿಕಾ ನಿಯೋಜನೆ, ಆಡಳಿತಾತ್ಮಕ ಕಾರ್ಯತಂತ್ರ ಯೋಜನೆ, ವಿಪತ್ತು ನಿರ್ವಹಣೆ ಮತ್ತು ಯೋಜನಾ ಮೌಲ್ಯಮಾಪನಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡವರು. ಇದೆಲ್ಲವನ್ನು ಪರಿಗಣಿಸಿ ಲಂಡನ್ ನಗರದ ಹೌಸ್ ಆಫ್ ಕಾಮನ್ಸ್‌ನ ಕೈಗಾರಿಕಾ ಕ್ಷೇತ್ರದ ಮಹಾತ್ಮಗಾಂಧಿ ಸಮ್ಮಾನ್ ಪ್ರಶಸ್ತಿಗೆ ಭಾಜನರಾದರು. 2011ರಲ್ಲಿ ರಕ್ಷಣಾ ಮತ್ತು ಬ್ಯಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿತ **M/s DCX INDIA** ಎಂಬ ಕಂಪನಿಯನ್ನು ಸ್ಥಾಪಿಸಿ ಅದರ ಮೂಲಕ ಪ್ರಮುಖವಾಗಿ ರಕ್ಷಣಾ ವಿದ್ಯುನ್ಮಾನ ಉಪಕರಣಗಳ ಉತ್ಪಾದನೆ ಪ್ರಾರಂಭಿಸಿದರು. ಪ್ರಥಮ ಬಾರಿ ಈ ಬೃಹತ್ ಕ್ಷೇತ್ರಕ್ಕೆ ಉದ್ಯಮಿಯಾಗಿ ಧುಮುಕಿದ ಇವರು ಆರಂಭಿಕ ಹಂತದಲ್ಲಿ ಹಲವು ಏಳು-ಬೀಳುಗಳನ್ನು ಅನುಭವಿಸಿ ಈಗ ನಮ್ಮ ದೇಶದ ರಕ್ಷಣಾ ವಲಯ ಕ್ಷೇತ್ರದಲ್ಲಿ ಒಂದು ಅತ್ಯಂತ ಸದೃಢ, ಸ್ವಶಕ್ತಿಯ ಕಂಪನಿಯಾಗಿಸಿ ಸುಮಾರು ಮುನ್ನೂರು ಜನರಿಗೂ ಹೆಚ್ಚು ಉದ್ಯೋಗ ದಯಪಾಲಿಸಿದ್ದಾರೆ.

ಸಂಸ್ಥೆಯಲ್ಲಿ ಬಹುಪಾಲು ನೌಕರರು ಸ್ಥಳೀಯರು ಅದರಲ್ಲೂ ಗ್ರಾಮೀಣ ಪ್ರದೇಶದ ಯುವಕರೇ ಅವಕಾಶ ಪಡೆದಿರುವುದು ಪ್ರಶಂಶನೀಯವಾಗಿದೆ. ರಾಘವೇಂದ್ರ ಅವರ ಬೆಳವಣಿಗೆಯನ್ನು ಪರಿಗಣಿಸಿ ಜರ್ಮನಿಯ ಇಂಟರ್‌ನ್ಯಾಷನಲ್ ಪೀಸ್ ವಿಶ್ವವಿದ್ಯಾಲಯವು ವ್ಯವಹಾರ ನಿರ್ವಹಣೆಯಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸತ್ಕರಿಸಿದೆ. ಇದರೊಂದಿಗೆ ಹಲವು ಹನ್ನೆರಡು ಪ್ರಶಸ್ತಿಗಳನ್ನು ಗಳಿಸಿಕೊಂಡಿರುವುದು ಡಾ. ರಾಘವೇಂದ್ರರಾವ್ ಅವರ ನಾಯಕತ್ವ ಬಿಂಬಿಸುತ್ತದೆ. ತಾಂತ್ರಿಕ ಕೌಶಲ್ಯ ವಿನಿಮಯದಿಂದ ಅತ್ಯಂತ ಅತ್ಯುತ್ತಮ ಬ್ಯಾಹ್ಯಾಕಾಶ ಮತ್ತು ರಕ್ಷಣಾ ಉಪಕರಣಗಳನ್ನು ನಮ್ಮ ದೇಶದ ರಕ್ಷಣಾ ವಿಭಾಗಕ್ಕೆ ಕೊಡುಗೆ ನೀಡುವುದರೊಂದಿಗೆ ಅತ್ಯುತ್ತಮ ದೇಶಪ್ರೇಮಿಯಾಗಿ ಹೊರಹೊಮ್ಮಬೇಕೆಂಬುದು ರಾಘವೇಂದ್ರ ಅವರ ಮುಂದಿನ ಕನಸಾಗಿದೆ.

ತಮ್ಮ ವೈಯಕ್ತಿಕ ಸಂಪಾದನೆಯಲ್ಲಿ ಬಹಳಷ್ಟು ಪಾಲನ್ನು ಬಡವಿದ್ಯಾರ್ಥಿಗಳಿಗೆ ಸಹಾಯಧನ ನೀಡುವುದು, ದೇವಸ್ಥಾನಗಳ ನಿರ್ಮಾಣ, ಪುನರ್ ನಿರ್ಮಾಣಗಳಿಗೆ ಆರ್ಥಿಕ ಸೌಲಭ್ಯ ಮತ್ತು ಸಲಹೆ ನೀಡುವುದು. ಮಠಗಳು, ವಿದ್ಯಾರ್ಥಿ ನಿಲಯಗಳು, ದೇವಸ್ಥಾನಗಳು, ಅಶಕ್ತ ಸಂಘಗಳು, ವೃದ್ಧಾಶ್ರಮ, ಅಂಗವೈಕಲ್ಯ ಶಿಕ್ಷಣ ಸಂಸ್ಥೆಗಳು ಮುಂತಾದವುಗಳಿಗೆ ಆರ್ಥಿಕ ಬೆಂಬಲ ನೀಡುವಲ್ಲಿ ರಾಘವೇಂದ್ರ ಅವರು ಕೊಡುಗೈ ದಾನಿಯಾಗಿದ್ದಾರೆ. ರಾಘವೇಂದ್ರ ಅವರದ್ದು ಮೂಲ ಸಾಮಾಜಿಕ ಧರ್ಮವಾಗಿದೆ. ಸಮಾಜಮುಖಿ ಸೇವೆಗಳಲ್ಲಿ ಸದಾ ಮುಂದು. ಹಲವಾರು ಕೈಗಾರಿಕಾ ಪ್ರಾಮುಖ್ಯ ದೇಶಗಳನ್ನು ಸಂಚರಿಸುತ್ತ ತಮ್ಮ ಅನುಭವವನ್ನು ಹೆಚ್ಚು ಮಾಡಿಕೊಳ್ಳುತ್ತಾ, ಅವುಗಳನ್ನು ದೇಶದ ರಕ್ಷಣಾ ವ್ಯವಸ್ಥೆಗೆ ಪೂರಕವಾಗುವಂತೆ ತೊಡಗಿಸಿಕೊಳ್ಳುವುದರಲ್ಲಿ ಅವರು ಸದಾಕಾಲ ಅತ್ಯುತ್ಸಾಹಿ.

ರಾಘವೇಂದ್ರ ಅವರಿಗೆ ಸಂದ ಪ್ರಮುಖ ಸನ್ಮಾನಗಳು

- ಮಹಾತ್ಮಾ ಗಾಂಧಿ ಸನ್ಮಾನ್
- ಯಂಗ್ ಎಂಟರ್‌ಪ್ರೆನರ್ ಆಫ್ ದಿ ಇಯರ್ 2018
- ಇಂಡೋ ನೇಪಾಳ ರತ್ನ ಅವಾರ್ಡ್ 2028
- ಎಕ್ಸಲೆನ್ಸ್ ಇನ್ ಡಿಫೆನ್ಸ್ ಅಂಡ್ ಏರೋಸ್ಪೇಸ್ 2021
- ಇಂಡಿಯಾ ಗ್ರೇಟೆಸ್ಟ್ ಲೀಡರ್ಸ್ ಅವಾರ್ಡ್
- ಭಾರತೀಯ ಉದ್ಯೋಗ್ ಲೀಡರ್‌ಶಿಪ್ ಅವಾರ್ಡ್ 2023
- ಶ್ರೀ ಮಂತ್ರಾಲಯ ಪರಿಮಳ ಪ್ರಶಸ್ತಿ 2024
- ವೀರಕನ್ನಡಿಗ ಪ್ರಶಸ್ತಿ 2024
- ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ 2024
- ಎಕ್ಸ್‌ಪೋರ್ಟ್ ಎಕ್ಸಲೆನ್ಸ್ ಪ್ರಶಸ್ತಿ 2023 ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

ಹಲವು ಶ್ರೀಗಳ ಆಶೀರ್ವಾದ

ಡಾ. ಎಚ್.ಎಸ್.ರಾಘವೇಂದ್ರ ರಾವ್ ಅವರ ಸಮಾಜ ಮುಖಿ ಕಾರ್ಯಕ್ರಮಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವುದು ಸಹ ಸೇರಿದೆ. ನಮ್ಮ ಸುತ್ತಲಿನ ಪರಿಸರ ಉಳಿಸಲು ಮರಗಳನ್ನು ಬೆಳೆಸುವುದು ಅತಿ ಮುಖ್ಯವಾದುದು. ಇವರ ಸಂಸ್ಥೆಯು ಹೊಣೆ ಹೊತ್ತಿರುವ ಸಾಮಾಜಿಕ ಜವಾಬ್ದಾರಿ ಯೋಜನೆಯಲ್ಲಿ, ಹಲವು ಕಡೆ ಗಿಡಗಳನ್ನು ನೆಡುವುದರ ಮೂಲಕ, ನಮ್ಮ ಪರಿಸರ ರಕ್ಷಣೆಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ಹಲವು ಪ್ರದೇಶಗಳಲ್ಲಿ ಸ್ವತಃ ತಾವೇ ಗಿಡಗಳನ್ನು ನೆಟ್ಟು, ತಮ್ಮ ಸಹೋದ್ಯೋಗಿಗಳು ಮತ್ತು ಹಿತೈಷಿಗಳ ಜತೆ ಕಾರ್ಯಕ್ರಮವನ್ನು ಏರ್ಪಡಿಸುವುದು ಇವರ ನೆಚ್ಚಿನ ಹವ್ಯಾಸಗಳಲ್ಲಿ ಒಂದು. ಜತೆಗೆ, ಅಧ್ಯಾತ್ಮ ಕ್ಷೇತ್ರದಲ್ಲಿ ಕೊಡುಗೆ ನೀಡುತ್ತಿರುವ ಹಲವು ಅಧ್ಯಾತ್ಮಿಕ ಸಂಸ್ಥೆಗಳಿಗೆ ತಮ್ಮದೇ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಇವರ ಉದ್ಯಮ ಮತ್ತು ಪರಿಸರ ರಕ್ಷಣಾ ಕಾರ್ಯದಲ್ಲಿ ಮಂತ್ರಾಲಯ ಮಠ, ಸುತ್ತೂರು ಮಠ ಹಾಗೂ ವ್ಯಾಸರಾಜ ಮಠ ಮತ್ತು ಉಡುಪಿಯ ಅಷ್ಟಮಠಗಳ ಸ್ವಾಮೀಜಿಗಳ ಆಶೀರ್ವಾದ ಇರುವುದು ವಿಶೇಷ.

ಅಮೆರಿಕ-ಇಸ್ರೇಲ್ ರಕ್ಷಣಾ ವ್ಯವಸ್ಥೆಗೂ ಕೊಡುಗೆ

ಭಾರತ ಮಾತ್ರವಲ್ಲ ಅಮೆರಿಕ ಮತ್ತು ಇಸ್ರೇಲ್ ರಕ್ಷಣಾ ವ್ಯವಸ್ಥೆಗೂ ಇವರ ಕಂಪನಿ ತನ್ನದೇ ಆದ ಕೊಡುಗೆ ನೀಡುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿ ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ, ಇವರ ಸಂಸ್ಥೆ ಗಮನಾರ್ಹ ಕೆಲಸ ಮಾಡುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ಇದನ್ನು ಬಿಲಿಯರ್ ಡಾಲರ್ ಕಂಪನಿಯನ್ನಾಗಿ ರೂಪಿಸುವ ಕನಸು ಮತ್ತು ಗುರಿಯನ್ನು ಇವರು ಹೊಂದಿದ್ದಾರೆ. ಡಾ ಎಚ್ ಎಸ್ ರಾಘವೇಂದ್ರ ರಾವ್ ಅವರು ನಿಜಕ್ಕೂ ನಾಡಿನ ಹೆಮ್ಮೆ. ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೂ ಸಹ ಅವರು ಭಾಜನರಾಗಿ ಮಾಲ್ದೀವ್ಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ, ಗೌರವಕ್ಕೆ ಪಾತ್ರರಾದರು.